2021

JANUARY "TO" DECEMBER

ಇಂದಿನ ಆಮಂತ್ರಣ

ವಿಜಯ ಕರ್ನಾಟಕ VK
12 | ಶುಕ್ರವಾರ, 24 ಡಿಸೆಂಬರ್ 2021

ಗಾಂಧೀ ಶಾಂತಿ ಪ್ರತಿಷ್ಠಾನ: ಡಬ್ಲ್ಯು.ಎಚ್.ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ, ಸಂಪನ್ಮೂಲ ವ್ಯಕ್ತಿ: ಹಿರಿಯ ವಿದ್ವಾಂಸ ಡಾ. ಶ್ಯಾಮಸುಂದರ ಬಿದರಕುಂದಿ. ಉಪಸ್ಥಿತಿ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ಅಧ್ಯಕ್ಷತೆ: ಗಾಂಧೀ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಜೀರಿಗೆ ಲೋಕೇಶ್, ಸ್ಥಳ: ಬಾಪು ಸಭಾಂಗಣ, ಗಾಂಧೀ ಭವನ, ಕುಮಾರಪಾರ್ಕ್ ಪೂರ್ವ. 4.15

ಸಂಯುಕ್ತ ಕರ್ನಾಟಕ
24 ಡಿಸೆಂಬರ್ 2021 ಶುಕ್ರವಾರ

ಸಂಜೆ: ಗಾಂಧೀಶಾಂತಿಪ್ರತಿಷ್ಠಾನ, ಗಾಂಧೀವಾದಿ ಡಬ್ಲ್ಯು. ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ. ಉಪಸ್ಥಿತಿ: ಹಿರಿಯ ವಿದ್ವಾಂಸ ಡಾ. ಶ್ಯಾಮಸುಂದರ ಬಿದರಕುಂದಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ.ಕೃಷ್ಣ. ಅಧ್ಯಕ್ಷತೆ: ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಜೀರಿಗೆ ಲೋಕೇಶ್. ಸ್ಥಳ: ಕುಮಾರಪಾರ್ಕ್ ಪೂರ್ವ, ಗಾಂಧಿಭವನ. 4.15

ಉದಯವಾಣಿ
ಶುಕ್ರವಾರ, ಡಿಸೆಂಬರ್ 24, 2021

■ ಗಾಂಧಿ ಶಾಂತಿ ಪ್ರತಿಷ್ಠಾನ: ಡಬ್ಲ್ಯು. ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮ. ಮುಖ್ಯ ಅತಿಥಿಗಳು: ಹಿರಿಯ ವಿದ್ವಾಂಸ ಡಾ. ಶ್ಯಾಮಸುಂದರ ಬಿದರಕುಂದಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ.ಕೃಷ್ಣ. ಸ್ಥಳ: ಬಾಪು ಸಭಾಂಗಣ, ಗಾಂಧೀ ಭವನ. ಸಂಜೆ 4.15ಕ್ಕೆ.

ವಿಜಯವಾಣಿ
ಶುಕ್ರವಾರ 24 ಡಿಸೆಂಬರ್ 2021
24 DECEMBER 2021

» ಉಪನ್ಯಾಸ: ಗಾಂಧೀ ಶಾಂತಿ ಪ್ರತಿಷ್ಠಾನ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಆಯೋಜನೆ. ಡಬ್ಲ್ಯು ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ. ವಿಷಯ: 'ಗಾಂಧೀಜಿ ಮತ್ತು ಉದ್ಯಮಶೀಲತೆ'. ಸಂಪನ್ಮೂಲ ವ್ಯಕ್ತಿ: ಹಿರಿಯ ವಿದ್ವಾಂಸ ಡಾ.ಶ್ಯಾಮಸುಂದರ ಬಿದರಕುಂದಿ. ಉಪಸ್ಥಿತಿ: ನಾಡೋಜ ಡಾ.ವೊಡೇ ಪಿ.ಕೃಷ್ಣ. ಅಧ್ಯಕ್ಷತೆ: ಗಾಂಧೀ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಜೀರಿಗೆ ಲೋಕೇಶ್. ಸ್ಥಳ: ಗಾಂಧೀ ಭವನ, ಕುಮಾರಪಾರ್ಕ್ ಪೂರ್ವ. ಸಂಜೆ 4.15ಕ್ಕೆ.

DECCAN HERALD
Friday
December 24, 2021

Gandhi Peace Foundation: WH Hanumanthappa memorial endowment lecture on Gandhi and Entrepreneurship; Baapu Auditorium, Gandhi Bhavan, Kumarakrupa Road; 4:15 pm

ಪ್ರಜಾವಾಣಿ
ಶುಕ್ರವಾರ ಡಿಸೆಂಬರ್ 24, 2021

ಡಬ್ಲ್ಯು.ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ: ವಿಷಯ: 'ಗಾಂಧೀಜಿ ಮತ್ತು ಉದ್ಯಮಶೀಲತೆ', ಉಪನ್ಯಾಸಕರು: ಶ್ಯಾಮಸುಂದರ ಬಿದರಕುಂದಿ, ಉಪಸ್ಥಿತಿ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಜೀರಿಗೆ ಲೋಕೇಶ್, ಆಯೋಜನೆ: ಗಾಂಧಿ ಶಾಂತಿ ಪ್ರತಿಷ್ಠಾನ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4.15

ಜನದನಿಯ ಸಾರಥಿ
ವಾರ್ತಾ ಭಾರತಿ

Bengaluru Edition
Dec 30, 2021 Page No. 10

ಕುವೆಂಪು ಶ್ರೀರಾಮಾಯಣ ದರ್ಶನಂ 'ವಚನ ದೀಪಿಕೆ' ಲೋಕಾರ್ಪಣೆ



ಬೆಂಗಳೂರು, ಡಿ.29: ಜಿ. ಕೃಷ್ಣಪ್ಪನವರು ರಚಿಸಿರುವ 'ವಚನ ದೀಪಿಕೆ' ಕುವೆಂಪು ಕಾವ್ಯ ಸಹೃದಯರಿಗೆ ಆಪ್ತವಾಗುವ ಸರಳ, ಸುಂದರ ಶೈಲಿಯಲ್ಲಿದೆ. ಮೂಲಕಾವ್ಯವನ್ನು ಅಭ್ಯಾಸ ಮಾಡುವ ಆಸಕ್ತರಿಗೆ ಉಪಯುಕ್ತವಾಗಿದೆ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದ್ದಾರೆ.

ಗಾಂಧಿಭವನದಲ್ಲಿ ಇಂದು ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದರು. ನಾಡೋಜ ಡಾ. ಪ್ರೊದೇ.ಪಿ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು.

ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ ಗ್ರಂಥದ ಕುರಿತು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್ ಭಾಗವಹಿಸಿದ್ದರು.

ಶ್ರೀರಾಮಾಯಣ ದರ್ಶನಂ ಕಾವ್ಯ ವಾಚನವನ್ನು ವಿದ್ವಾನ್ ಖಾಸಿಂ ಮಲ್ಲಿಗೆ ಮಡುವು ನಡೆಸಿಕೊಟ್ಟರು.

ಸಂಯುಕ್ತ ಕರ್ನಾಟಕ

30 ಡಿಸೆಂಬರ್ 2021
ಗುರುವಾರ

ವಚನ ದೀಪಕೆ ಗ್ರಂಥ ಲೋಕಾರ್ಪಣೆ । ಕುವೆಂಪು ಶ್ರೀರಾಮಾಯಣ ದರ್ಶನಂ

ಆಧುನಿಕ ಕನ್ನಡ ಸಾಹಿತ್ಯದ ಮೇರುಕೃತಿ

ಬೆಂಗಳೂರು: ಕುವೆಂಪು ಅವರು 1949ರಲ್ಲಿ ರಚಿಸಿದ ಮಹಾಕಾವ್ಯ ಶ್ರೀರಾಮಾಯಣ ದರ್ಶನಂ, ಆಧುನಿಕ ಕನ್ನಡ ಸಾಹಿತ್ಯದ ಮೇರುಕೃತಿ ಎಂದು ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಬುಧವಾರ ನಡೆದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ರವರು ಕುವೆಂಪು ಜನ್ಮ ಸಂಭ್ರಮ–ಡಾ. ಜಿ ಕೃಷ್ಣಪ್ಪ ರವರ ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ (ಗದ್ಯಾನುವಾದ) ಗ್ರಂಥವನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು ಜಿ. ಕೃಷ್ಣಪ್ಪನವರು ಈ ಮಹಾಕಾವ್ಯದ ದರ್ಶನ ದೀಪ್ತಿಗೆ ಒಳಗಾಗಿ ಅದನ್ನು 'ವಚನ ದೀಪಿಕೆ'ಯಾಗಿ ನೀಡಿದ್ದಾರೆ. ಇದು ಕುವೆಂಪು ಕಾವ್ಯ ಸಹೃದಯರಿಗೆ ಆಪ್ತವಾಗುವ ಸರಳ, ಸುಂದರ ಶೈಲಿಯಲ್ಲಿದೆ. ಮೂಲ ಕಾವ್ಯವನ್ನು ಅಭ್ಯಾಸ ಮಾಡುವ ಆಸಕ್ತರಿಗೆ ಉಪಯುಕ್ತವಾಗುವ ''ಶ್ರೀ ರಾಮಾಯಣ ದರ್ಶನಂ ನಿಘಂಟು' ಇದರ ಜೊತೆಯಲ್ಲಿರುವುದು ಈ ಕೃತಿಯ ವಿಶೇಷ. ಬೇಂದ್ರೆ ಕೃಷ್ಣಪ್ಪನವರು ಮಹಾಕವಿ-ಕುವೆಂಪು ಅವರ ಕಾವ್ಯರಸಾಬ್ಧಿಯಲ್ಲಿ ಮಿಂದು ರಚಿಸಿರುವ ಈ ಕೃತಿ ಕನ್ನಡ ಸಾಹಿತ್ಯಕ್ಕೆ ನೀಡಿದ ಉತ್ತಮ ಕೊಡುಗೆಯಾಗಿದೆ ಎಂದು ಅಭಿಪ್ರಾಯಪಟ್ಟರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ರವರು ಕುವೆಂಪು ಜನ್ಮ ಸಂಭ್ರಮ–ಡಾ. ಜಿ ಕೃಷ್ಣಪ್ಪ ರವರ ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ (ಗದ್ಯಾನುವಾದ) ಗ್ರಂಥವನ್ನು ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಬಿಡುಗಡೆ ಮಾಡಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ. ವೂಡೇ.ಪಿ. ಕೃಷ್ಣ, ಬಿ.ಎಂ. ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ, ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್ ಪಾಲ್ಗೊಂಡಿದ್ದರು.

ಹಿರಿಯ ಶಿಕ್ಷಣ ತಜ್ಞ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌ. ಪ್ರಧಾನ ಕಾರ್ಯದರ್ಶಿ, ನಾಡೋಜ ಡಾ. ವೂಡೇ.ಪಿ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಬಿ.ಎಂ. ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ ಗ್ರಂಥದ ಕುರಿತು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್ ಭಾಗವಹಿಸಿದ್ದರು. ಶ್ರೀರಾಮಾಯಣ ದರ್ಶನಂ ಕಾವ್ಯ ವಾಚನವನ್ನು ವಿದ್ವಾನ್ ಖಾಸಿಂ ಮಲ್ಲಿಗೆಮಡುವು ನಡೆಸಿಕೊಟ್ಟರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಎನ್.ಎಸ್. ಸತೀಶ್ ಹಾಗೂ ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ನ ಸುರೇಶ್ ಬಿ.ಕೆ. ಉಪಸ್ಥಿತರಿದ್ದರು.

ಹೊಸದಿಗಂತ
ಗುರುವಾರ, 30 ಡಿಸೆಂಬರ್ 2021, ಬೆಂಗಳೂರು

ಸುಖ-ದುಃಖಗಳ ಸಮೀಕರಣವೇ ಸಾಹಿತ್ಯ



ಬೆಂಗಳೂರು: ಸುಖ ಹಾಗೂ ದುಃಖಗಳ ಸಮೀಕರಣವೇ ಸಾಹಿತ್ಯ. ಸಮಾಜ ಔನತ್ಯಕ್ಕೆ ಹೋಗಬೇಕಾದರೆ ಪ್ರತಿಯೊಬ್ಬರ ಆಂತರಿಕ ವಿಕಾಸ ಅಗತ್ಯ ಎಂದು ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ ವೆಂಕಟೇಶ್ ಅಭಿಪ್ರಾಯಪಟ್ಟರು.

ಬುಧವಾರ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ಅನ್ನಪೂರ್ಣ ಪಬ್ಲಿಷಿಂಗ್ ವತಿಯಿಂದ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಕುವೆಂಪು ಜನ್ಮ ಸಂಭ್ರಮ ಹಾಗೂ ಡಾ.ಜಿ.ಕೃಷ್ಣಪ್ಪ ಅವರ ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಂತರಂಗದ ವಿಕಾಸದತ್ತ ಗಮನಹರಿಸುವುದು ಇಂದಿನ ಅಗತ್ಯವಾಗಿದೆ. ಇದಕ್ಕೆ ಸಂಗೀತ, ಕಲೆ ಹಾಗೂ ಸಾಹಿತ್ಯದ ಓದು, ಬರವಣಿಗೆ ಪೂರಕವಾಗಲಿದೆ. ಜಡ ಹಾಗೂ ಚೈತನ್ಯದ ವ್ಯತ್ಯಾಸವನ್ನು ಅರಿತರೆ ಮಾತ್ರ ಅಂತರಂಗದ ಬೆಳವಣಿಗೆ ಸಾಧ್ಯ. ಜಡತ್ವವನ್ನು ದೂರ ಉಳಿಸಬೇಕು. ಜಡ ಎನ್ನುವುದನ್ನು ಕುವೆಂಪು ಸುಳ್ಳು ಎಂದಿದ್ದಾರೆ. ದೇಹ ಜಡ ಗೊಂಡರೂ ಮನಸ್ಸು ಜಡಗೊಳ್ಳುವುದಿಲ್ಲ. ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಕೃತಿಗೆ ಪ್ರವೇಶಿಕೆಯಂತಿರುವ ಸಾಹಿತಿ ಡಾ.ಜಿ. ಕೃಷ್ಣಪ್ಪ ಅವರ ವಚನ ದೀಪಿಕೆ ಕೃತಿಯು ತಿಳಿಗನ್ನಡ ಭಾಷೆಯ ಮೂಲಕ ಜನರ ಸಮೀಪಕ್ಕೆ ಬರಲಿದೆ ಎಂದರು. ಬಿಎಂಶ್ರೀ ಪ್ರತಿಷ್ಠಾನ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ ಮಾತನಾಡಿ, ಜಿ.ಕೃಷ್ಣಪ್ಪ ಅವರ ವಚನ ದೀಪಿಕೆ ಕೃತಿಯು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಓದಿದ ಮೇಲೆ ಉಂಟಾದ ರೋಮಾಂಚನ, ರಸಾನಂದದೆಡೆಗೆ ಓದುಗರನ್ನು ಕರೆದೊಯ್ಯುತ್ತದೆ. ಈ ಕೃತಿಯು ಹೊರ ಚೌಕಟ್ಟಿನಲ್ಲಿ ಮಾತ್ರವಲ್ಲದೆ, ಒಳಭಾಗದಲ್ಲೂ ಸಹ ಕುವೆಂಪು ಅವರ ಕೃತಿಯನ್ನು ಹೋಲುತ್ತದೆ ಎಂದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್ ಮತ್ತಿತರರಿದ್ದರು.

ಪ್ರಜಾವಾಣಿ

ಗುರುವಾರ ಡಿಸೆಂಬರ್ 30, 2021

‘ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ’ ಕೃತಿ ಬಿಡುಗಡೆ

‘ಆತ್ಮಾನಂದ ಇರುವುದು ಸಾಹಿತ್ಯದಲ್ಲಿ ಮಾತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂತರಂಗದ ವಿಕಾಸ ಆಗದೆ ಬಹಿರಂಗದ ವಿಕಾಸ ಆಗದು. ನೆಮ್ಮದಿ ಮತ್ತು ಆತ್ಮಾನಂದ ಇರುವುದು ಸಾಹಿತ್ಯದಲ್ಲಿ ಮಾತ್ರ’ ಎಂದು ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಅಭಿಪ್ರಾಯಪಟ್ಟರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಗಾಂಧಿ ಸಾಹಿತ್ಯ ಪ್ರತಿಷ್ಠಾನ, ಶೇಷಾದ್ರಿಪುರ ಸಂಜೆ ಪದವಿ ಕಾಲೇಜು, ಉದಯ ಪ್ರಕಾಶನದ ಸಹಯೋಗದಲ್ಲಿ ನಗರದಲ್ಲಿ ಬುಧವಾರ ಆಯೋಜಿಸಿದ್ದ ಕುವೆಂಪು ಜನ್ಮ ಸಂಭ್ರಮ ಕಾರ್ಯಕ್ರಮದಲ್ಲಿ ಡಾ.ಜಿ. ಕೃಷ್ಣಪ್ಪ ಅವರ ‘ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ’ ಗದ್ಯಾನುವಾದ ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಇತ್ತೀಚಿನ ದಿನಗಳಲ್ಲಿ ಬಹಿರಂಗದ ಕಡೆಗೆ ಇರುವ ತಹ ತಹ ಅಂತರಂಗದ ವಿಕಾಸದ ಕಡೆಗೆ ಇಲ್ಲವಾಗಿದೆ. ಅಂತರಂಗ ವಿಕಾಸ ಆಗದಿದ್ದರೆ ಅದು ಕೇವಲ ಒಣ ವ್ಯಾಪಾರ ಆಗಲಿದೆ. ಮನಸ್ಸಿಗೆ ನೆಮ್ಮದಿ, ಬುದ್ಧಿಗೆ ವಿಚಾರ ಮತ್ತು ಹೃದಯಕ್ಕೆ ಆತ್ಮಾನಂದ ಸಿಗುವುದು ಸಾಹಿತ್ಯದಲ್ಲಿ ಮಾತ್ರ. ಕುವೆಂಪು ರಾಮಾಯಣ ದರ್ಶನಂ ಓದಿದರೆ ಈ ಆತ್ಮಾನಂದ ಸಿಗಲಿದೆ’ ಎಂದು ಹೇಳಿದರು.

‘ಕುವೆಂಪು ರಾಮಾಯಣ ದರ್ಶನಂ ಬಳಿಕ ಎಷ್ಟೋ ಕಾವ್ಯಗಳು ಬಂದರೂ ಅದರ ಮಟ್ಟಕ್ಕೆ ಏರಲು ಆಗಿಲ್ಲ. ಅದನ್ನು ಓದಲು ಸಾಕಷ್ಟು ಪೂರ್ವ ತಯಾರಿ ಬೇಕಾಗುತ್ತದೆ. ಅದರ ಒಳ ಹೊಕ್ಕು ಅಧ್ಯಯನ ನಡೆಸಿರುವ ಜಿ. ಕೃಷ್ಣಪ್ಪ ಅವರು ಗದ್ಯ ರೂಪಕ್ಕೆ ತರುವ ಮೂಲಕ ಜನರಿಗೆ ಶ್ರೀ ರಾಮಾಯಣ ದರ್ಶನಂ ಅನ್ನು ಇನ್ನಷ್ಟು ಹತ್ತಿರವಾಗಿಸಿದ್ದಾರೆ’ ಎಂದು ಬಣ್ಣಿಸಿದರು.

‘ಈ ಕೃತಿ ರಚನೆ ಮಾಡಲು ಕೃಷ್ಣಪ್ಪನವರು ಹಲವು ವರ್ಷಗಳ ಕಾಲ ತಪಸ್ಸಿನಂತೆ ಕೆಲಸ ಮಾಡಿದ್ದಾರೆ. ರಾಮಾಯಣ ದರ್ಶನಂ ಅರ್ಥ ಮಾಡಿಕೊಳ್ಳಲು ಬೇಕಾದ ನಿಘಂಟನ್ನೂ ಅವರು ಈ ಪುಸ್ತಕದಲ್ಲಿ ನೀಡಿದ್ದಾರೆ. 750 ಪುಟಗಳ ಪುಸ್ತಕದಲ್ಲಿ ನಿಘಂಟಿಗಾಗಿಯೇ 100 ಪುಟಗಳನ್ನು ಮೀಸಲಿಟ್ಟಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಈ ಕೃತಿ ಮೈಲಿಗಲ್ಲಾಗಲಿದೆ’ ಎಂದು ಆಶಿಸಿದರು.

ಕೃತಿ ಪರಿಚಯಿಸಿದ ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ, ‘ಕುವೆಂಪು ರಾಮಾಯಣ ದರ್ಶನವನ್ನು ಹಲವರು ಗದ್ಯಾನುವಾದ ಮಾಡಿದ್ದಾರೆ. ಶ್ರೀ ರಾಮಾಯಣ ದರ್ಶನಂ ಓದಿದಷ್ಟೇ ರಸಾಸ್ವಾದವನ್ನು ಜಿ. ಕೃಷ್ಣಪ್ಪ ಅವರ ಗದ್ಯಾನುವಾದದ ಕೃತಿ ನೀಡುತ್ತಿದೆ. ಕುವೆಂಪು ಅವರು ಇಳಿದಷ್ಟೇ ಆಳಕ್ಕಿಳಿಯಲು ಮತ್ತು ಎತ್ತರಕ್ಕೇರಲು ಜಿ. ಕೃಷ್ಣಪ್ಪ ಪ್ರಯತ್ನಿಸಿದ್ದಾರೆ’ ಎಂದು ಹೇಳಿದರು.

ಬಿಡುಗಡೆಯಾದ ಪುಸ್ತಕವನ್ನು ಜಿ. ಕೃಷ್ಣಪ್ಪ ಅವರು ಮಲ್ಲೇಪುರಂ ಜಿ. ವೆಂಕಟೇಶ್ ಪತ್ನಿ ಭವಾನಿ ವೆಂಕಟೇಶ್ ಅವರಿಗೆ ಅರ್ಪಿಸಿದರು.



‘ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ’ ಕೃತಿಯನ್ನು ಮಲ್ಲೇಪುರಂ ಜಿ. ವೆಂಕಟೇಶ್ ಬಿಡುಗಡೆ ಮಾಡಿ ಕೃತಿಕಾರ ಜಿ. ಕೃಷ್ಣಪ್ಪ ಅವರಿಗೆ ನೀಡಿದರು. ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ನ ಸುರೇಶ್ ಬಿ.ಕೆ., ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಶೇಷಾದ್ರಿಪುರ ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಎನ್‌ಎಸ್‌ ಸತೀಶ್ ಇದ್ದರು –ಪ್ರಜಾವಾಣಿ ಚಿತ್ರ

ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ	
ಕೃತಿಕಾರ	ಡಾ. ಜಿ. ಕೃಷ್ಣಪ್ಪ
ಮುದ್ರಕರು	ಅನ್ನಪೂರ್ಣ ಪಬ್ಲಿಷಿಂಗ್ ಹೌಸ್
ಪುಸ್ತಕದ ದರ	₹800
ಪುಟ	750 ಪುಟಗಳು

VIJAYAVANI BENGALURU

ಗುರುವಾರ 30 ಡಿಸೆಂಬರ್ 2021
30 DECEMBER 2021
VIJAYAVANI » BENGALURU

ಮಾನವೀಯ ನೆಲೆಯ ಉದಾತ್ತ ಚಿಂತಕ ಕುವೆಂಪು



ಗಾಂಧಿಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಜಿ. ಕೃಷ್ಣಪ್ಪ ರಚಿಸಿದ 'ಕುವೆಂಪು ಶ್ರೀ ರಾಮಾಯಣದರ್ಶನಂ ವಚನ ದೀಪಿಕೆ' ಗದ್ಯಾನುವಾದ ಕೃತಿಯನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಬಿಡುಗಡೆ ಮಾಡಿದರು. ಡಾ. ವೂಡೇ ಪಿ. ಕೃಷ್ಣ, ಡಾ. ಬೈರಮಂಗಲ ರಾಮೇಗೌಡ ಇತರರಿದ್ದರು.

ಮಲ್ಲೇಶ್ವರ: 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯ ಆಧುನಿಕ ಕನ್ನಡ ಸಾಹಿತ್ಯದ ಮೇರುಕೃತಿ. ರಾಷ್ಟ್ರಕವಿ ಕುವೆಂಪು ಮಾನವೀಯ ನೆಲೆಯ ಉದಾತ್ತ ಚಿಂತಕರಾಗಿದ್ದರು ಎಂದು ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಹೇಳಿದ್ದಾರೆ.

ಗಾಂಧಿಭವನದ ಬಾಪು ಸಭಾಂಗಣದಲ್ಲಿ ಆಯೋಜಿಸಿದ್ದ ಕುವೆಂಪು ಜನ್ಮದಿನ ಸಂಭ್ರಮ ಹಾಗೂ ಡಾ. ಜಿ. ಕೃಷ್ಣಪ್ಪ ರಚಿಸಿದ 'ಕುವೆಂಪು ಶ್ರೀ ರಾಮಾಯಣ ದರ್ಶನಂ ವಚನ ದೀಪಿಕೆ' ಗದ್ಯಾನುವಾದ ಗ್ರಂಥ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದರು. ಮಂಥರೆ, ಕೈಕೇಯಿ, ವಾಲಿ, ಮಾರೀಚ, ರಾವಣ ಮುಂತಾದ ಪಾತ್ರಗಳನ್ನು ಕುವೆಂಪು ಅವರು ವಿಶಾಲ ಮನೋ ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ ಎಂದರು. ವಿದ್ವಾನ್ ಖಾಸಿಂ ಮಲ್ಲಿಗೆಮಡುವು 'ಶ್ರೀ ರಾಮಾಯಣದರ್ಶನಂ' ಕಾವ್ಯ ವಾಚನ ಪ್ರಸ್ತುತಪಡಿಸಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌ. ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಎನ್.ಎಸ್. ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

» ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅಭಿಮತ

ಬೆಂಗಳೂರು ಉದಯವಾಣಿ ಗುರುವಾರ, ಡಿಸೆಂಬರ್ 30, 2021

ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ ಲೋಕಾರ್ಪಣೆ



ಶೇಷಾದ್ರಿಪುರಂ ಸಂಜೆ ಕಾಲೇಜಿನಲ್ಲಿ ಡಾ. ಜಿ. ಕೃಷ್ಣಪ್ಪ ಅವರ ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ ಗ್ರಂಥ ಲೋಕಾರ್ಪಣೆ ಮಾಡಲಾಯಿತು.

ಬೆಂಗಳೂರು: ಮನುಷ್ಯ ವರ್ತಮಾನದ ಕಾಲಘಟ್ಟದಲ್ಲಿ ಬಹಿರಂಗದ ಆಡಂಬರದಲ್ಲಿ ಬದುಕು ಸಾಗಿಸುತ್ತಿದ್ದಾನೆ. ಆದರೆ, ಅಂತರಂಗದ ವಿಕಾಸವಾಗದೆ ಬಹಿರಂಗದ ವಿಕಾಸಗೊಳ್ಳಲು ಸಾಧ್ಯವಿಲ್ಲ ಎಂದು ಕರ್ನಾಟಕ ಸಂಸ್ಕೃತ ಕಾಲೇಜಿನ ವಿಶ್ರಾಂತ ಕುಲಸಚಿವ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ತಿಳಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್ ಸಹಯೋಗದಲ್ಲಿ ನಗರದ ಶೇಷಾದ್ರಿಪುರಂ ಸಂಜೆ ಕಾಲೇಜಿನಲ್ಲಿ ಹಮ್ಮಿಕೊಂಡ ಕುವೆಂಪು ಜನ್ಮ ಸಂಭ್ರಮ ಕಾರ್ಯಕ್ರಮದಲ್ಲಿ ಡಾ. ಜಿ. ಕೃಷ್ಣಪ್ಪ ಅವರ ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ ಗ್ರಂಥ ಲೋಕಾರ್ಪಣೆ ಗೊಳಿಸಿ ಮಾತನಾಡಿದರು. ಕಲೆ, ಸಾಹಿತ್ಯಗಳು ಅಂತರಂಗದ ವಿಕಾಸಕ್ಕೆ ಪೂರಕವಾಗಿದೆ. ಸಾಹಿತ್ಯ, ಸಂಗೀತ, ಕಲೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳದಿದ್ದರೆ, ಆ ವ್ಯಕ್ತಿ ಜೀವಂತವಾಗಿದ್ದರೂ, ಜಡಜೀವಿಯಾಗಿರುತ್ತಾನೆ ಎಂದು ಹೇಳಿದರು.

ಗ್ರಂಥದ ಕುರಿತು ಬಿಎಂ ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ ಮಾತನಾಡಿದರು. ಅಧ್ಯಕ್ಷತೆಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ವಹಿಸಿದ್ದರು. ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್, ವಿದ್ವಾನ್ ಖಾಸಿಂ ಮಲ್ಲಿಗೆಮಡುವು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಇಂದಿರಾ, ಶೇಷಾದ್ರಿಪುರ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಎನ್.ಎಸ್. ಸತೀಶ್, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್ ವ್ಯವಸ್ಥಾಪಕ ಸುರೇಶ್ ಬಿ.ಕೆ. ಉಪಸ್ಥಿತರಿದ್ದರು.

ಅಂತರಂಗದ ವಿಕಾಸಕ್ಕೆ ಸಂಗೀತ, ಸಾಹಿತ್ಯ ಪೂರಕ



ಕುವೆಂಪು ಜನ್ಮ ಸಂಭ್ರಮದ ಪ್ರಯುಕ್ತ ಡಾ. ಜಿ. ಕೃಷ್ಣಪ್ಪ ಅವರ ಕುವೆಂಪು ಶ್ರೀ ರಾಮಾಯಣ ದರ್ಶನಂ ವಚನ ದೀಪಿಕೆ ಗ್ರಂಥವನ್ನು ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಲೋಕಾರ್ಪಣೆ ಮಾಡಿದರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ, ನಾಡೋಜ ಡಾ. ವೂಡೇ ಪಿ. ಕೃಷ್ಣ, ಬಿ.ಎಂ. ಶ್ರೀ ಪ್ರತಿಷ್ಠಾನ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರು: ಬಹಿರಂಗದ ಆಡಂಬರದಲ್ಲಿ ಹೆಜ್ಜೆ ಹಾಕುತ್ತಿರುವ ಹೊತ್ತಿನಲ್ಲಿ ನಾವು ಅಂತರಂಗದ ವಿಕಾಸದತ್ತ ಗಮನಹರಿಸುವುದನ್ನು ಮರೆಯಬಾರದು. ಅಂತರಂಗದ ವಿಕಾಸಕ್ಕೆ ಸಂಗೀತ, ಕಲೆ ಹಾಗೂ ಸಾಹಿತ್ಯದ ಓದು, ಬರವಣಿಗೆ ಪೂರಕವಾಗಲಿದೆ ಎಂದು ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಬೆಂಗಳೂರಿನ ಉದಯ ಪ್ರಕಾಶನ ಸಹಯೋಗದಲ್ಲಿ ಕುವೆಂಪು ಜನ್ಮ ಸಂಭ್ರಮದ ಪ್ರಯುಕ್ತ ಡಾ.ಜಿ.ಕೃಷ್ಣಪ್ಪ ಅವರ ಕುವೆಂಪು ಶ್ರೀ ರಾಮಾಯಣ ದರ್ಶನಂ ವಚನ ದೀಪಿಕೆ ಗ್ರಂಥ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಸಾಹಿತ್ಯ, ಸಂಗೀತ, ಕಲೆಯನ್ನು ನಮ್ಮ ಹೃದಯಕ್ಕೆ ಬರಮಾಡಿಕೊಂಡರೆ ಜಡತ್ವದಿಂದ ದೂರ ಉಳಿಯಬಹುದು. ಜಡ ಹಾಗೂ ಚೈತನ್ಯದ ವ್ಯತ್ಯಾಸವನ್ನು ಅರಿತರೆ ಮಾತ್ರ ಅಂತರಂಗದ ಬೆಳವಣಿಗೆ ಸಾಧ್ಯವಾಗುತ್ತದೆ. ಜಡತ್ವವನ್ನು ದೂರ ಉಳಿಸಿ, ನಮ್ಮೊಳಗಿನ ಅಸುಖವನ್ನು ಸುಖವಾಗಿಸುವ ಇಂತಹ ಪುಸ್ತಕಗಳನ್ನು ನಮ್ಮ ಸಮೀಪಕ್ಕೆ ತೆಗೆದುಕೊಳ್ಳುವುದರಿಂದ, ಅಂತರಂಗದ ಕ್ರಿಯೆಗೆ ನೆರವಾಗಿ ಆ ಮೂಲಕ ನಮ್ಮ ಬಹಿರಂಗದ ಅಭಿವೃದ್ಧಿಗೆ ಕಾರಣವಾಗುತ್ತದೆ. ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಕೃತಿಗೆ ಪ್ರವೇಶಿಕೆಯಂತಿರುವ ಸಾಹಿತಿ ಡಾ. ಜಿ. ಕೃಷ್ಣಪ್ಪ ಅವರ ವಚನ ದೀಪಿಕೆ ಕೃತಿಯು ತಿಳಿಗನ್ನಡ ಭಾಷೆಯ ಮೂಲಕ ಜನರ ಸಮೀಪಕ್ಕೆ ಬರಲಿದೆ ಎಂದು ಹೇಳಿದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ, ನಾಡೋಜ ಡಾ. ವೂಡೇ ಪಿ.ಕೃಷ್ಣ ಮಾತನಾಡಿ, ವಿಶ್ವ ಮಾನವ ದಿನಚಾರಣೆಯ ಸಂಭ್ರಮದ ನಡುವೆ ವಚನ ದೀಪಿಕೆ ಬಿಡುಗಡೆ ಸಂಭ್ರಮ ತಂದಿದೆ. ಈ ಮೂಲಕ ಕುವೆಂಪು ಸ್ಮರಣೆಯಾದಂತಾಯಿತು. ಬದುಕು ಹಾಗೂ ಬರವಣಿಗೆಯನ್ನು ಒಂದೇ ಆಗಿ ತಿಳಿದಿರುವ ಡಾ. ಜಿ.ಕೃಷ್ಣಪ್ಪ ಅವರಂತಹ ಸಾಹಿತಿಗಳು ಈ ಮೂಲಕ ಕುವೆಂಪು ಅವರಿಗೆ ನುಡಿ ನಮನಗಳನ್ನು ಅರ್ಪಿದಂತಾಗಿದೆ ಎಂದರು.

ಮಹಾಕಾವ್ಯ ಓದಿದ ರೋಮಾಂಚನ: ಬಿ.ಎಂ.ಶ್ರೀ ಪ್ರತಿಷ್ಠಾನ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ ಮಾತನಾಡಿ, ಜಿ.ಕೃಷ್ಣಪ್ಪ ಅವರ ವಚನ ದೀಪಿಕೆ ಪುಸ್ತಕ ಪರಿಚಯ ಮಾಡಿ ಗದ್ಯಾನುವಾದದ ವಿಶೇಷತೆಗಳುಳ್ಳ ಈ ಕೃತಿಯು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಓದಿದ ಮೇಲೆ ಉಂಟಾದ ರೋಮಾಂಚನ, ರಸಾನಂದದೆಡೆಗೆ ಓದುಗರನ್ನು ಕರೆದೊಯ್ಯುತ್ತದೆ. ಈ ಕೃತಿಯು ಹೊರ ಚೌಕಟ್ಟಿನಲ್ಲಿ ಮಾತ್ರವಲ್ಲದೆ, ಒಳಭಾಗದಲ್ಲೂ ಸಹ ಕುವೆಂಪು ಅವರ ಕೃತಿಯನ್ನು ಹೋಲುತ್ತದೆ ಎಂದರು.


ಈ ಸಂಜೆ
ಬುಧವಾರ 29 ಡಿಸೆಂಬರ್ 2021



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಗಾಂಧಿಭವನದಲ್ಲಿಂದು ಹಮ್ಮಿಕೊಂಡಿದ್ದ ಕುವೆಂಪು ಜನ್ಮ ಸಂಭ್ರಮ ಕಾರ್ಯಕ್ರಮದಲ್ಲಿ ಡಾ.ಜಿ.ಕೃಷ್ಣಪ್ಪ ಅವರ ಕುವೆಂಪು ಶ್ರೀ ರಾಮಾಯಣ ದರ್ಶನಂ ವಚನ ದೀಪಿಕೆ ಗದ್ಯಾನುವಾದ ಕೃತಿಯನ್ನು ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ.ಬೈರಮಂಗಲ ರಾಮೇಗೌಡ ಮುಂತಾದವರು ಉಪಸ್ಥಿತರಿದ್ದರು.

ಸುದಿನ

ಸೋಮವಾರ
27 ಡಿಸೆಂಬರ್ 2021
27 DECEMBER 2021



ಗಾಂಧಿಭವನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ 'ಗಾಂಧೀಜಿ ಮತ್ತು ಉದ್ಯಮಶೀಲತೆ' ಕುರಿತು ಉಪನ್ಯಾಸ ನೀಡಿದ ವಿದ್ವಾಂಸ ಡಾ.ಶ್ಯಾಮಸುಂದರ ಬಿದರಕುಂದಿ ಅವರನ್ನು ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಸನ್ಮಾನಿಸಿದರು. ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಸತ್ಯಮಂಗಲ ಮಹಾದೇವ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

VIJAYAVANI » BENGALURU
ಸೋಮವಾರ 27 ಡಿಸೆಂಬರ್ 2021
27 DECEMBER 2021



ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಭಾನುವಾರ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ವೇಣುಗೋಪಾಲ್ ಗುರಿಕಾರ್, ಕಮಲಾ ರಾಜೇಶ್, ನೃತ್ಯಗಾರ್ತಿ ಕೆ. ಸೋನಾ ಅವರಿಗೆ ಅನಿಕೇತನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಿಕ್ಷಣತಜ್ಞ ಡಾ. ವೂಡೇ ಪಿ. ಕೃಷ್ಣ, ಗ್ರಾಮಾಂತರ ಜಿಲ್ಲಾ ಕಸಾಪ ಅಧ್ಯಕ್ಷ ಪ್ರೊ. ಬಿ.ಎನ್. ಕೃಷ್ಣಪ್ಪ, ಟ್ರಸ್ಟ್ ಅಧ್ಯಕ್ಷ ಡಾ.ಎಸ್. ರಾಮಲಿಂಗೇಶ್ವರ ಮತ್ತಿತರರು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ
25 ಡಿಸೆಂಬರ್ 2021 ಶನಿವಾರ
ಬೆಂಗಳೂರು (BENGALURU)

ಗುಡಿ ಕೈಗಾರಿಕೆಗೆ ಆದ್ಯತೆ । ಗಾಂಧಿ ಕಲ್ಪನೆಯ ಉದ್ಯಮಶೀಲತೆಗೆ ಹಿನ್ನಡೆ

ಮನುಷ್ಯ ಲೋಕದ ಶಕ್ತಿ ಗಾಂಧಿ

ಸಂ.ಕ.ಸಮಾಚಾರ, ಬೆಂಗಳೂರು

ದೇಶದ ಆರ್ಥಿಕತೆಗೆ ಗುಡಿ ಕೈಗಾರಿಕೆಗಳಿಂದಲೇ ಭವಿಷ್ಯ ಎಂದು ಮಹಾತ್ಮಗಾಂಧಿ ನಂಬಿದ್ದರು. ಆದರೆ, ಯಂತ್ರೋಪಕರಣಗಳಿಂದ ಗುಡಿ ಕೈಗಾರಿಕೆಗಳು ನಶಿಸಿವೆ ಎಂದು ಧಾರವಾಡದ ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನಿಕಟಪೂರ್ವ ಅಧ್ಯಕ್ಷ ಡಾ.ಶ್ಯಾಮಸುಂದರ ಬಿದರಕುಂದಿ ಅಭಿಪ್ರಾಯಪಟ್ಟರು.

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಸಹಯೋಗದಲ್ಲಿ ಹಿರಿಯ ಗಾಂಧಿವಾದಿ ಡಬ್ಲ್ಯೂ.ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ 'ಗಾಂಧೀಜಿ ಮತ್ತು ಉದ್ಯಮಶೀಲತೆ' ವಿಷಯದ ಕುರಿತು ಉಪನ್ಯಾಸ ನೀಡಿದ ಅವರು, ಗಾಂಧೀಜಿ ಮನುಷ್ಯ ಲೋಕದ ಅದ್ಭುತ ಶಕ್ತಿ, ಅವರ ಜೀವನವೇ ಒಂದು ಸಂದೇಶ. ದೇಶದ ಆರ್ಥಿಕತೆಗೆ ಸ್ವದೇಶಿ ಉದ್ಯಮದಿಂದಲೇ ಭವಿಷ್ಯವಿದೆ ಎಂದು ನಂಬಿದ್ದರು ಎಂದರು. ಗಾಂಧೀಜಿಯವರು ಗುಡಿಕೈಗಾರಿಕೆಗೆ ಒತ್ತು ನೀಡಿ ಎಲ್ಲಾ ಜನರು ಯಂತ್ರಗಳ ಮೇಲೆ ಅವಲಂಬಿಸದೆ ಸ್ವತಃ ದುಡಿಮೆ ಮಾಡಿ ಜೀವನ ನಡೆಸಬೇಕೆಂದು ಆಶಿಸಿದ್ದರು. ಆದರೆ, ಬದಲಾದ ಕಾಲಘಟ್ಟದಲ್ಲಿ ಇಂದು ಆಧುನಿಕ ಯಂತ್ರೋಪಕರಣಗಳು ಆಗಮಿಸಿ ಗಾಂಧಿ ಕಲ್ಪನೆಯ ಉದ್ಯಮಶೀಲತೆಗೆ ಹಿನ್ನಡೆ ಉಂಟಾಗಿದೆ ಎಂದು ಹೇಳಿದರು.

ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ.ಪಿ. ಕೃಷ್ಣ, ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಗಾಂಧಿ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಸತ್ಯಮಂಗಲ ಮಹಾದೇವ ಹಾಗೂ ಶೇಷಾದ್ರಿಪುರ ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಎನ್.ಎಸ್.ಸತೀಶ್, ವೂಡೇ ಪ್ರತಿಷ್ಠಾನದ ಪ್ರತಿನಿಧಿ ಡಬ್ಲ್ಯೂ.ಡಿ.ಅಶೋಕ್ ಉಪಸ್ಥಿತರಿದ್ದರು.



ಗಾಂಧಿಭವನದಲ್ಲಿ ಏರ್ಪಡಿಸಿದ್ದ ಗಾಂಧಿವಾದಿ ಡಬ್ಲ್ಯೂ.ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಶ್ಯಾಮಸುಂದರ ಬಿದರಕುಂದಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ದತ್ತಿ ಉಪನ್ಯಾಸ

ಬೆಂಗಳೂರು: ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಸಹಯೋಗದಲ್ಲಿ ಬ್ರಹ್ಮ ಸಮಾಜದ ಮುಖಂಡ ಮತ್ತು ಹಿರಿಯ ಗಾಂಧಿವಾದಿ ಡಬ್ಲ್ಯು. ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸವನ್ನು ನಗರದ ಗಾಂಧಿಭವನದ ಬಾಪು ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಹಿರಿಯ ವಿದ್ವಾಂಸರು ಹಾಗೂ ಧಾರವಾಡದ ಡಾ.ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ನಿಕಟಪೂರ್ವ ಅಧ್ಯಕ್ಷರಾದ ಡಾ.ಶ್ಯಾಮಸುಂದರ ಬಿದರಕುಂದಿ 'ಗಾಂಧೀಜಿ ಮತ್ತು ಉದ್ಯಮಶೀಲತೆ' ವಿಷಯದ ಕುರಿತು ದತ್ತಿ ಉಪನ್ಯಾಸವನ್ನು ನೀಡಿ ಮಾತನಾಡುತ್ತ, ಗಾಂಧೀಜಿ ಮನುಷ್ಯ ಲೋಕದ ಒಂದು ಅದ್ಭುತ ಶಕ್ತಿ, ಅವರ ಜೀವನವೇ ಒಂದು ಸಂದೇಶ. ಬದಲಾದ ಕಾಲಘಟ್ಟದಲ್ಲಿ ಇಂದು ಆಧುನಿಕ ಯಂತ್ರೋಪಕರಣ ಗಳು ಆಗಮಿಸಿ ಗಾಂಧಿ ಕಲ್ಪನೆಯ ಉದ್ಯಮಶೀಲತೆಗೆ ಹಿನ್ನಡೆ ಉಂಟಾಗಿದೆ ಎಂದು ಅಭಿಪ್ರಾಯ ಪಟ್ಟರು. ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಶಿಕ್ಷಣ ತಜ್ಞ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ-ಡಾ. ವೂಡೇ.ಪಿ. ಕೃಷ್ಣ, ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಗಾಂಧಿ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಸತ್ಯಮಂಗಲ ಮಹಾದೇವ ಹಾಗೂ ಶೇಷಾದ್ರಿಪುರ ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಎನ್.ಎಸ್.ಸತೀಶ್, ವೂಡೇ ಪ್ರತಿಷ್ಠಾನದ ಪ್ರತಿನಿಧಿ ಡಬ್ಲ್ಯು.ಡಿ.ಅಶೋಕ್ ಉಪಸ್ಥಿತರಿದ್ದರು.

ಬೆಂಗಳೂರು ಉದಯವಾಣಿ
ಶನಿವಾರ, ಡಿಸೆಂಬರ್ 25, 2021

ಕೈಗಾರಿಕೆಗಳಿಂದ ಗಾಂಧಿ ಆಶಯಕ್ಕೆ ಧಕ್ಕೆ

ಬೆಂಗಳೂರು: ಯಂತ್ರಗಳ ಆಧಾರಿತ ಕೈಗಾರಿಕೆಗಳಿಂದ ಗುಡಿ ಕೈಗಾರಿಕೆಗಳು ನಶಿಸಿಹೋಗುತ್ತಿರುವ ಜೊತೆಗೆ ಹಳ್ಳಿಗಳು ಸ್ವಾವಲಂಬಿಯಾಗಬೇಕು ಮತ್ತು ಭಾರತದ ಭವಿಷ್ಯ ಹಳ್ಳಿಗಳಲ್ಲಿ ಅಡಗಿದೆ ಎಂಬ ಗಾಂಧಿ ಆಶಯಕ್ಕೂ ಹೊಡೆತ ಬಿದ್ದಿದೆ ಎಂದು ಧಾರವಾಡದ ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ನಿಕಟಪೂರ್ವ ಅಧ್ಯಕ್ಷರಾದ ಡಾ. ಶ್ಯಾಮಸುಂದರ ಬಿದರಕುಂದಿ ಅಭಿಪ್ರಾಯ ವ್ಯಕ್ತಪಡಿಸಿದರು. ಕುಮಾರಕೃಪಾ ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಶುಕ್ರವಾರ ಹಿರಿಯ ಗಾಂಧಿವಾದಿ ಡಬ್ಲ್ಯು. ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಗಾಂಧೀಜಿ ಮತ್ತು ಉದ್ಯಮಶೀಲತೆ' ವಿಷಯದ ಕುರಿತು ಉಪನ್ಯಾಸ ನೀಡಿದರು. ಗಾಂಧೀಜಿಯವರು ಗುಡಿಕೈಗಾರಿಕೆಗೆ ಒತ್ತು ನೀಡಿ ಎಲ್ಲಾ ಜನರು ಯಂತ್ರಗಳ ಮೇಲೆ ಅವಲಂಬಿಸದೆ ಸ್ವತಃ ದುಡಿಮೆ ಮಾಡಿ ಜೀವನ ನಡೆಸಬೇಕೆಂದು ಆಶಿಸಿದ್ದರು. ಆದರೆ ಬದಲಾದ ಕಾಲಘಟ್ಟದಲ್ಲಿ ಆಧುನಿಕ ಯಂತ್ರೋಪಕರಣಗಳು ಆಗಮಿಸಿ ಗಾಂಧಿ ಕಲ್ಪನೆಯ ಉದ್ಯಮಶೀಲತೆಗೆ ಹಿನ್ನಡೆ ಉಂಟಾಗಿದೆ ಎಂದು ಹೇಳಿದರು. ಗಾಂಧೀಜಿ ಮನುಷ್ಯ ಲೋಕದ ಒಂದು ಅದ್ಭುತ ಶಕ್ತಿ, ಅವರ ಜೀವನವೇ ಒಂದು ಸಂದೇಶ. ದೇಶದ ಆರ್ಥಿಕತೆಗೆ ಸ್ವದೇಶಿ ಉದ್ಯಮದಿಂದಲೇ ಭವಿಷ್ಯವಿದೆ ಎಂದು ನಂಬಿದ್ದರು ಎಂದು ಪುನರುಚ್ಚರಿಸಿದರು. ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್ ಇತರರು ಇದ್ದರು.

ವಿಶ್ವವಾಣಿ 3
24.12.2021 ಶುಕ್ರವಾರ
vishwavani.news

ಕಂಗಳ ಬೆಳಗು ಲೋಕಾರ್ಪಣೆ



ಗಾಂಧಿಭವನದಲ್ಲಿ ಕಂಗಳ ಬೆಳಗು ಸಂಶೋಧನಾ ಕೃತಿಯ ಲೋಕಾರ್ಪಣೆ ಕಾರ್ಯಕ್ರಮ ನೆರವೇರಿತು.

ಬೆಂಗಳೂರು: ಬೇಂದ್ರೆ ಮತ್ತು ಮಧುರಚೆನ್ನರ ಕಾವ್ಯಗಳಲ್ಲಿ ಅನುಭಾವ: ತೌಲನಿಕ ಅಧ್ಯಯನ ಕುರಿತು ಡಾ. ಸತ್ಯಮಂಗಲ ಮಹಾದೇವ ಬರೆದಿರುವ ಕಂಗಳ ಬೆಳಗು ಸಂಶೋಧನಾ ಕೃತಿಯ ಲೋಕಾರ್ಪಣೆ ನಗರದ ಗಾಂಧಿಭವನದಲ್ಲಿ ಗುರುವಾರ ಸಂಜೆ ನೆರವೇರಿತು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು, ಸುವರ್ಣ ಮಹೋತ್ಸವ ವರ್ಷಾಚರಣೆ ಕನ್ನಡ ಸಾಹಿತ್ಯ ವೇದಿಕೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಧಾರವಾಡದ ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ನಿಕಟ ಪೂರ್ವ ಅಧ್ಯಕ್ಷ ಡಾ. ಶ್ಯಾಮಸುಂದರ ಬಿದರಕುಂದಿ ಕೃತಿ ಲೋಕಾರ್ಪಣೆ ಮಾಡಿದರು. ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ. ಕೃಷ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದು, ವಿಮರ್ಶಕ ಡಾ.ಟಿ.ಎನ್. ವಾಸುದೇವಮೂರ್ತಿ ಕೃತಿ ಕುರಿತು ಮಾತನಾಡಿದರು. ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್, ಲೇಖಕ ಡಾ. ಸತ್ಯಮಂಗಲ ಮಹಾದೇವ, ಕಾಲೇಜು ಪ್ರಾಂಶುಪಾಲ ಪ್ರೊ.ಎನ್.ಎಸ್. ಸತೀಶ್, ಪಬ್ಲಿಷಿಂಗ್ ಹೌಸ್ ವ್ಯವಸ್ಥಾಪಕ ಬಿ.ಕೆ. ಸುರೇಶ್ ಉಪಸ್ಥಿತರಿದ್ದರು.

ಕನ್ನಡಪ್ರಭ

ಶುಕ್ರವಾರ 24.12.2021

‘ಕಂಗಳ ಬೆಳಗು’ ಕೃತಿ ಲೋಕಾರ್ಪಣೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಖ್ಯಾತ ಕವಿಗಳಾದ ದ.ರಾ.ಬೇಂದ್ರೆ ಮತ್ತು ಮಧುರ ಚೆನ್ನರು ಬದುಕಿನಲ್ಲಿ ಅನುಭವಿಸಿದ ಗೆಳೆತನದ ಪ್ರೀತಿಯನ್ನು ತಮ್ಮ ಸಾಹಿತ್ಯದಲ್ಲೂ ಮುಂದುವರಿಸಿದವರು ಎಂದು ಹಿರಿಯ ವಿದ್ವಾಂಸ ಡಾ। ಶ್ಯಾಮಸುಂದರ ಹೇಳಿದರು.

ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಗಾಂಧೀ ಶಾಂತಿ ಪ್ರತಿಷ್ಠಾನ ಹಾಗೂ ಅನ್ನಪೂರ್ಣ ಪಬ್ಲಿಷಿಂಗ್ ಹೌಸ್ ವತಿಯಿಂದ ಗಾಂಧಿ ಭವನದಲ್ಲಿ ಗುರುವಾರ ನಡೆದ ‘ಕಂಗಳ ಬೆಳಗು’ ಸಂಶೋಧನಾ ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದರು. ವಿಮರ್ಶಕ ಡಾ। ಟಿ.ಎನ್.ವಾಸುದೇವಮೂರ್ತಿ, ‘ಕಂಗಳ ಬೆಳಗು’ ವರ್ಣನಾತ್ಮಕ ಸಂಶೋಧನಾ ಕೃತಿ. ಇದರಲ್ಲಿ ಅಪರೂಪದ ಜೋಡಿ ಕವಿಗಳ ಬಗ್ಗೆ, ಆಧ್ಯಾತ್ಮ, ಅನುಭಾವ ಕುರಿತು ವಿವರಿಸಲಾಗಿದೆ ಎಂದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ। ವೂಡೇ.ಪಿ.ಕೃಷ್ಣ, ಗಾಂಧೀ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಜೇರಿಗೆ ಲೋಕೇಶ್, ಕೃತಿ ಲೇಖಕ ಡಾ। ಸತ್ಯಮಂಗಲ ಮಹಾದೇವ, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಎನ್.ಎಸ್.ಸತೀಶ್, ಪ್ರಕಾಶಕ ಬಿ.ಕೆ.ಸುರೇಶ್ ಇದ್ದರು.



ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸ ಡಾ। ಶ್ಯಾಮಸುಂದರ ಅವರು ಲೇಖಕ ಡಾ। ಸತ್ಯಮಂಗಲ ಮಹಾದೇವ ವಿರಚಿತ ‘ಕಂಗಳ ಬೆಳಗು’ ಸಂಶೋಧನಾ ಕೃತಿ ಬಿಡುಗಡೆಗೊಳಿಸಿದರು. ಡಾ। ಟಿ.ಎನ್.ವಾಸುದೇವಮೂರ್ತಿ, ಡಾ। ವೂಡೇ.ಪಿ.ಕೃಷ್ಣ, ಜೇರಿಗೆ ಲೋಕೇಶ್ ಇತರರಿದ್ದರು.

ಸಂಶೋಧನಾ ಕೃತಿ ಬಿಡುಗಡೆ

ಇಂದು ಸಂಜೆ
ಸೋಮವಾರ
20 ಡಿಸೆಂಬರ್ 2021

ಶ್ರೀ ಗುರು ಸಮರ್ಥ ಸಂಗೀತ ವಿದ್ಯಾಲಯದಿಂದ 19ನೇ ಸಂಗೀತೋತ್ಸವ


ಬೆಂಗಳೂರು: ಇಲ್ಲಿನ ಶ್ರೀ ಗುರು ಸಮರ್ಥ ಸಂಗೀತ ವಿದ್ಯಾಲಯ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಎರಡು ದಶಕಗಳಿಂದ ಪೋಷಿಸುತ್ತಾ ಬಂದಿದೆ. ನಮ್ಮ ಸಂಸ್ಥೆಯು ದಿನಾಂಕ: 19-12-2021- ಭಾನುವಾರದಂದು ನಗರದ ಎನ್.ಆರ್. ಕಾಲನಿಯಲ್ಲಿರುವ ಪತ್ರಿ ಸಭಾಂಗಣದಲ್ಲಿ '19 ನೇ ಸಂಗೀತೋತ್ಸವ ಹಾಗು ಗೌರವ ಸಮರ್ಪಣೆ' ಕಾರ್ಯಕ್ರಮವನ್ನು ಆಯೋಜಿಸಿತ್ತು.



ಈ ಸುಂದರ ಕಾರ್ಯಕ್ರಮದಲ್ಲಿ ಅಂತರಾಷ್ಟ್ರೀಯ ಖ್ಯಾತ ಹಿಂದುಸ್ತಾನಿ ಗಾಯಕರಾದ ಡಾ. ಪಂಡಿತ್ ಮೃತ್ಯುಂಜಯ ಶೆಟ್ಟರ್ ರವರಿಗೆ ನಿವೃತ್ತ ನ್ಯಾಯಮೂರ್ತಿಗಳಾದ ಸಂತೋಷ್ ಹಗಡೆ ರವರು 'ಸಂಗೀತ ಸಾಧಕ' ಪ್ರಶಸ್ತಿಯನನ್ನು ನೀಡಿ ಗೌರವಿಸಿದರು. ಇಂತಹ ಶ್ರೀಮಂತ ವೇದಿಕೆಯ ಉಧ್ಘಾಟನೆಯನ್ನು ಖ್ಯಾತ ಶಿಕ್ಷಣ ತಜ್ಞರಾದ ಡಾ. ವೋಡೆ ಪಿ ಕೃಷ್ಣ ರವರು ವಹಿಸದ್ದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಂತರಾಷ್ಟ್ರೀಯ ಖ್ಯಾತ ತಬಲಾ ವಾದಕರಾದ ಪಂಡಿತ್ ಡಾ. ಸತೀಶ್ ಹಂಪಿಹೊಳಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಗೀತಾರಾಧಕರಾದ ಸುಮನಾ ಕಡೇಕರ್ ರವರು ಆಗಮಿಸಿದ್ದರು. ಸಂಸ್ಥೆಯ ಅಧ್ಯಕ್ಷರಾದ ಪಂಡಿತ್ ಅಮೃತೇಶ್ ಕುಲಕರ್ಣಿ ಹಾಗು ಸಂಸ್ಥಾಪಕರಾದ ಉಮಾ ಕುಲಕರ್ಣಿ ರವರೂ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಡಾ. ಪಂಡಿತ್ ಮೃತ್ಯುಂಜಯ ಶೆಟ್ಟರ್ ರವರ ಹಿಂದುಸ್ತಾನಿ ಗಾಯನ ಪ್ರಸ್ತುತಿಯನ್ನು ಏರ್ಪಡಿಸಲಾಗಿತ್ತು. ವಿದ್ಯಾಲಯದ ವಿದ್ಯಾರ್ಥಿಗಳಿಂದ ತಬಲಾ ಹಾಗು ಗಾಯನ ಕಾರ್ಯಕ್ರಮವೂ ಸಹ ಪ್ರಸ್ತುತಗೊಳಿಸಲಾಯಿತು.

ವಿಜಯ ಕರ್ನಾಟಕ ಸೋಮವಾರ,20 ಡಿಸೆಂಬರ್ 2021

ಪಂಡಿತ್ ಮೃತ್ಯುಂಜಯ ಶೆಟ್ಟರ್‌ಗೆ 'ಸಂಗೀತ ಸಾಧಕ' ಪ್ರಶಸ್ತಿ ಪ್ರದಾನ



ವಿಕ ಸುದ್ದಿಲೋಕ ಬೆಂಗಳೂರು

ಶ್ರೀ ಗುರು ಸಮರ್ಥ ಸಂಗೀತ ವಿದ್ಯಾಲಯವು ಭಾನುವಾರ ನಗರದ ಎನ್.ಆರ್.ಕಾಲೊನಿಯಲ್ಲಿರುವ ಪತ್ತಿ ಸಭಾಂಗಣದಲ್ಲಿ 19ನೇ ಸಂಗೀತೋತ್ಸವ ಹಾಗೂ ಗೌರವ ಸಮರ್ಪಣೆ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಅಂತಾರಾಷ್ಟ್ರೀಯ ಖ್ಯಾತಿಯ ಹಿಂದುಸ್ತಾನಿ ಗಾಯಕ ಡಾ. ಪಂಡಿತ್ ಮೃತ್ಯುಂಜಯ ಶೆಟ್ಟರ್ ಅವರಿಗೆ 'ಸಂಗೀತ ಸಾಧಕ' ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಶಿಕ್ಷಣ ತಜ್ಞ ಡಾ. ವೂಡೆ ಪಿ.ಕೃಷ್ಣ ಅಂತಾರಾಷ್ಟ್ರೀಯ ಖ್ಯಾತಿಯ ತಬಲಾ ವಾದಕ ಪಂಡಿತ್ ಡಾ. ಸತೀಶ್ ಹಂಪಿಹೊಳಿ, ಸಂಗೀತಾರಾಧಕರಾದ ಸುಮನಾ ಕಡೇಕರ್, ಸಂಸ್ಥೆಯ ಅಧ್ಯಕ್ಷ ಪಂಡಿತ್ ಅಮೃತೇಶ್ ಕುಲಕರ್ಣಿ ಹಾಗೂ ಸಂಸ್ಥಾಪಕಿ ಉಮಾ ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು.


ಇದೇ ಸಂದರ್ಭದಲ್ಲಿ ಡಾ. ಪಂಡಿತ್ ಮೃತ್ಯುಂಜಯ ಶೆಟ್ಟರ್ ಅವರು ಹಿಂದುಸ್ತಾನಿ ಗಾಯನವನ್ನು ಪ್ರಸ್ತುತಪಡಿಸಿದರು.

ವಿದ್ಯಾಲಯದ ವಿದ್ಯಾರ್ಥಿಗಳಿಂದ ತಬಲಾ ಹಾಗೂ ಗಾಯನ ಕಛೇರಿಯೂ ನಡೆಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

VIJAYAVANI » BENGALURU
ಸೋಮವಾರ 20 ಡಿಸೆಂಬರ್ 2021
20 DECEMBER 2021

ವಿಜಯವಾಣಿ ಚಿತ್ರ



ಶ್ರೀಗುರು ಸಮರ್ಥ ಸಂಗೀತ ವಿದ್ಯಾಲಯ ವತಿಯಿಂದ ಎನ್. ಆರ್. ಕಾಲನಿಯ ಪತ್ತಿ ಸಭಾಂಗಣದಲ್ಲಿ ಕಾರ್ಯಕ್ರಮದಲ್ಲಿ ಹಿಂದುಸ್ತಾನಿ ಗಾಯಕರಾದ ಡಾ. ಪಂಡಿತ್ ಮೃತ್ಯುಂಜಯ ಶೆಟ್ಟರ್‌ಗೆ ಸಂಗೀತ ಸಾಧಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ, ಶಿಕ್ಷಣ ತಜ್ಞರಾದ ಡಾ. ವೂಡೆ ಪಿ. ಕೃಷ್ಣ ಮತ್ತಿತರರಿದ್ದರು.

ಸಂಯುಕ್ತ ಕರ್ನಾಟಕ
20 ಡಿಸೆಂಬರ್ 2021 ಸೋಮವಾರ
ಬೆಂಗಳೂರು (BENGALURU)

ಸಂಗೀತ ಸಾಧಕ ಪ್ರಶಸ್ತಿ ಪ್ರದಾನ

ಬೆಂಗಳೂರು: ಶ್ರೀ ಗುರು ಸಮರ್ಥ ಸಂಗೀತ ವಿದ್ಯಾಲಯ ಕಳೆದ ಎರಡು ದಶಕಗಳಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಪೋಷಿಸುತ್ತಾ ಬಂದಿರುವುದು ಶ್ಲಾಘನೀಯ ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗಡೆ ಹೇಳಿದರು. ನಗರದ ಎನ್.ಆರ್.ಕಾಲನಿಯಲ್ಲಿರುವ ಪತ್ತಿ ಸಭಾಂಗಣದಲ್ಲಿ 19ನೇ ಸಂಗೀತೋತ್ಸವ ಹಾಗು ಗೌರವ ಸಮರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಸಂಗೀತ ಸಾಧಕರನ್ನು ಗೌರವಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು.


ಕಾರ್ಯಕ್ರಮದಲ್ಲಿ ಅಂತರಾಷ್ಟ್ರೀಯ ಖ್ಯಾತ ಹಿಂದುಸ್ತಾನಿ ಗಾಯಕರಾದ ಡಾ. ಪಂಡಿತ್ ಮೃತ್ಯುಂಜಯ ಶೆಟ್ಟರ್‌ರವರಿಗೆ ನಿವೃತ್ತ ನ್ಯಾಯಮೂರ್ತಿ ಸಂತೋಶ್ ಹಗಡೆ ಅವರು ಸಂಗೀತ ಸಾಧಕ ಪ್ರಶಸ್ತಿ ನೀಡಿ ಗೌರವಿಸಿದರು.

ಶಿಕ್ಷಣ ತಜ್ಞರಾದ ಡಾ. ವೂಡೆ ಪಿ ಕೃಷ್ಣ ಕಾರ್ಯಕ್ರಮ ಉದ್ಘಾಟಿಸಿದರು. ಅಂತರಾಷ್ಟ್ರೀಯ ಖ್ಯಾತ ತಬಲಾ ವಾದಕರಾದ ಪಂಡಿತ್ ಡಾ. ಸತೀಶ್ ಹಂಪಿಹೊಳಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಗೀತಾರಾಧಕರಾದ ಶ್ರೀಮತಿ ಸುಮನಾ ಕಡೇಕರ್, ಸಂಸ್ಥೆಯ ಅಧ್ಯಕ್ಷರಾದ ಪಂಡಿತ್ ಅಮೃತೇಶ್ ಕುಲಕರ್ಣಿ ಹಾಗು ಸಂಸ್ಥಾಪಕರಾದ ಶ್ರೀಮತಿ ಉಮಾ ಕುಲಕರ್ಣಿ ಉಪಸ್ಥಿತರಿದ್ದರು. ಈಸಂದರ್ಭದಲ್ಲಿಡಾ. ಪಂಡಿತ್‌ಮೃತ್ಯುಂಜಯ ಶೆಟ್ಟರ್ ಅವರ ಹಿಂದುಸ್ತಾನಿ ಗಾಯನ ಪ್ರಸ್ತುತಿಯನ್ನು ಏರ್ಪಡಿಸಲಾಗಿತ್ತು. ವಿದ್ಯಾಲಯದ ವಿದ್ಯಾರ್ಥಿ ಗಳಿಂದ ತಬಲಾ ಹಾಗುಗಾಯನಕಾರ್ಯಕ್ರಮವೂಸಹಪ್ರಸ್ತುತಗೊಳಿಸಲಾಯಿತು.



ಶ್ರೀ ಗುರು ಸಮರ್ಥ ಸಂಗೀತ ವಿದ್ಯಾಲಯದ ವತಿಯಿಂದ ನಡೆದ ಸಮಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗಡೆ ಅವರು ಖ್ಯಾತ ಹಿಂದೂಸ್ತಾನಿ ಗಾಯಕ ಡಾ.ಪಂಡಿತ ಮೃತ್ಯುಂಜಯ ಶೆಟ್ಟರ್ ಅವರಿಗೆ ಸಂಗೀತ ಸಾಧಕ ಪ್ರಶಸ್ತಿ ನೀಡಿ ಗೌರವಿಸಿದರು.


ಪ್ರಜಾವಾಣಿ
ಮಂಗಳವಾರ ಡಿಸೆಂಬರ್ 14, 2021



ಬೆಂಗಳೂರಿನಲ್ಲಿ ಭಾನುವಾರ ನಡೆದ 'ಕನ್ನಡ ನುಡಿ ಸಮ್ಮೇಳನ'ದಲ್ಲಿ ಸುಮಾ ಪಾಲನೇತ್ರ ಮತ್ತು ಪಾಲನೇತ್ರ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಮಂಡ್ಯ ಜಿಲ್ಲೆ ಯುವ ಬರಹಗಾರರ ಬಳಗದ ಅಧ್ಯಕ್ಷ ಸತೀಶ್ ಜವರೇಗೌಡ, ಮಲ್ಲೇಪುರಂ ಜಿ. ವೆಂಕಟೇಶ್, ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಸುರೇಶ್ ಜೀವನ್ಮುಖಿ, ವಿ. ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ವಿ. ಸೋಮಣ್ಣ,ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಇದ್ದಾರೆ —ಪ್ರಜಾವಾಣಿ ಚಿತ್ರ

ಸಂಯುಕ್ತ ಕರ್ನಾಟಕ

11 ಡಿಸೆಂಬರ್ 2021 ಶನಿವಾರ
ಬೆಂಗಳೂರು (BENGALURU)



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಏರ್ಪಡಿಸಿದ್ದ ಬಾಪೂ ರಂಗ ಪ್ರಸ್ತುತಿ ಕಾರ್ಯಕ್ರಮವನ್ನು ಡಾ. ವೂಡೇ ಪಿ. ಕೃಷ್ಣ ಅವರು ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಉದ್ಘಾಟಿಸಿದರು.

ನಮ್ಮ ರಾಜ್ಯಪ್ರಗತಿ

ಡಿಸೆಂಬರ್ 10, 2021

ಅಗರ ಗ್ರಾಮದಲ್ಲೊಂದು ಸಂಭ್ರಮದ ಕನ್ನಡದ ಹಬ್ಬ :

ಕನ್ನಡ ಕಟ್ಟಾಳು ಸದಾಶಿವಯ್ಯ ಜರಗನಹಳ್ಳಿ ಅವರ ಬಗೆಗೆ ಸರ್ವತ್ರ ಮೆಚ್ಚುಗೆ



ಕವಿ–ಕಾವ್ಯ–ಮಂಜ : ಲೋಕಾರ್ಪಣೆ: ನಾಡೋಜ ಡಾ.ವೂಡೇ ಪಿ. ಕೃಷ್ಣ, ಡಾ. ಗೀತಾ ರಾಮಾನುಂಜಂ, ಜಗದೀಶ್‌ರೆಡ್ಡಿ ಸದಾಶಿವಯ್ಯ ಜರಗನಹಳ್ಳಿ, ಸುನಂದ ರು. ಬಸಪ್ಪ, ಮತ್ತಿತರರಿದ್ದಾರೆ.

ಆರು ವರ್ಷಗಳ ಹಿಂದೆ ತಾತಗುಣಿ ಬಳಿಯ ಅಗರ ಗ್ರಾಮದಲ್ಲಿ "ಸಾಹಿತ್ಯ ಸಂಸ್ಕೃತಿ ವೇದಿಕೆ" ಸ್ಥಾಪಿಸಿ, ಪ್ರತಿ ತಿಂಗಳೂ ಒಂದು ಹಬ್ಬದ ರೀತಿಯಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಉತ್ಸವವನ್ನು ಅತ್ಯಂತ ರಚನಾತ್ಮಕವಾಗಿ ನಡೆಸಿಕೊಂಡು ಬಂದು ನಿಜವಾದ ಕನ್ನಡ ಕಟ್ಟಾಳು ಎನಿಸಿಕೊಂಡಿರುವ ಆರ್.ಸದಾಶಿವಯ್ಯ ಜರಗನಹಳ್ಳಿ ಹಾಗೂ ಅವರ ಎಲ್ಲಾ ಕನ್ನಡ ಪರ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಿರುವ ಅವರ ಕುಟುಂಬ ವರ್ಗದವರು ಮತ್ತು ವೇದಿಕೆಯ ಆಡಳಿತ ಮಂಡಳಿಯವರು ಸರ್ವತ್ರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕರೋನಾ ಲಾಕ್‌ಡೌನ್ ಸಂದರ್ಭವನ್ನು ಹೊರತು ಪಡಿಸಿ, ಉಳಿದಂತೆ ಪ್ರತಿ ತಿಂಗಳು ತಪ್ಪದಂತೆ ವೇದಿಕೆಯ ಕಾರ್ಯಕ್ರಮಗಳು ನಡೆದುಕೊಂಡು ಬಂದಿವೆ.


28–11–2021ರಂದು ಬೆಳಗಿನಿಂದ ಸಂಜೆಯವರೆಗೆ ನಡೆದ ವೇದಿಕೆಯ 64ನೇ ಕಾರ್ಯಕ್ರಮವನ್ನು ಕನ್ನಡ, ರಾಜ್ಯೋತ್ಸವವನ್ನಾಗಿ ಆಚರಿಸಲಾಯಿತು. ಕನ್ನಡ ಕರ್ನಾಟಕದ ಹಿರಿಮೆಯನ್ನು ಪ್ರತಿಪಾದಿಸುವ ಹಿರಿಯ ಹಾಗೂ ಕಿರಿಯ ಕವಿಗಳ ಶ್ರೇಷ್ಠ ಕವನಗಳನ್ನು ಒಳಗೊಂಡಿರುವ "ಕವಿ–ಕಾವ್ಯ–ಮಂಜ" – ಸಂಕಲನವನ್ನು ಸಮಾರಂಭದಲ್ಲಿ ಲೋಕಾರ್ಪಣೆ ಮಾಡಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯ ಚಂದ್ರಶೇಖರ್ ನಿರೂಪಿಸಿದ ಕಾರ್ಯಕ್ರಮ ಹಂಸಗೀತ, ಲತಾ, ಶಿಲ್ಪ, ಉಷಾ ಮತ್ತು ವಿದುಷಿ ಅವರ ನಾಡಗೀತೆ ಗಾಯನದಿಂದ ಆರಂಭವಾಯಿತು. ಸಭಾ ಕಾರ್ಯಕ್ರಮಕ್ಕೂ ಮೊದಲು ಅಗರದ ವೃತ್ತದಲ್ಲಿ ಕನ್ನಡ ಧ್ವಜಾರೋಹಣ ಮಾಡಿ ವೇದಿಕೆಯ ಸದಸ್ಯರು ಆರ್. ಸದಾಶಿವಯ್ಯ ಜರಗನಹಳ್ಳಿ ಅವರ ಮುಂದಾಳತ್ವದಲ್ಲಿ ಕನ್ನಡ ಪರ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಭಾ ಮಂಟಪಕ್ಕೆ ಆಗಮಿಸಿದರು.



ಕು.ಪ್ರಜ್ಞಶ್ರೀ ಸ್ವಾಗತ ನೃತ್ಯದ ನಂತರ, ಕಾರ್ಯದರ್ಶಿ ಕೆ.ವಿ.ಸುರೇಶ್ ಸ್ವಾಗತ ಭಾಷಣ ಮಾಡಿದರು.

ಊರ ಹಬ್ಬದಂತೆ ಸಂಭ್ರಮದಿಂದ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿ, ಕವಿ–ಕಾವ್ಯ–ಪುಂಜ ಪುಸ್ತಕದ ಲೋಕಾರ್ಪಣೆ ಮಾಡಿದ ಶೇಷಾದ್ರಿಪುರಂ. ಶಿಕ್ಷಣದತ್ತಿಯ ಗೌ.ಪ್ರಧಾನ ಕಾರ್ಯದರ್ಶಿ, ನಾಡೋಜ ಡಾ.ವೂಡೇ ಪಿ. ಕೃಷ್ಣ

6ನೇ ಪುಟಕ್ಕೆ



ಸಾಹಿತ್ಯ ಸಂಸ್ಕೃತಿ ವೇದಿಕೆಯಲ್ಲಿ ಬೇಬಿ ಸಂವೃತ ಕಿಶೋರ್ ನೃತ್ಯ ಪ್ರದರ್ಶನ

ವಿದ್ಯಾ ವಿನಯ ಸಂಪನ್ನ – ಅಧ್ಯಯನಶೀಲತೆಗೊಂದು ಮಾದರಿ : ಮಲ್ಲೇಪುರಂ

–ಡಾ.ವೂಡೇ ಪಿ.ಕೃಷ್ಣ ಅಭಿಮತ



ಸಾರ್ಥಕ 70 ಸಂವತ್ಸರ ಕಂಡಿರುವ ಹಿರಿಯ ವಿದ್ವಾಂಸ ಪ್ರೊ.ಮಲ್ಲೇಪುರಂ ಜಿ ವೆಂಕಟೇಶ ಈ ನಾಡು ಕಂಡ ಬಹುಮುಖ ಪ್ರತಿಭಾಸಂಪನ್ನರು. ಕನ್ನಡ – ಸಂಸ್ಕೃತ ಎರಡರಲ್ಲೂ ಸಮತೋಲಿತ ಬರಹದ ಸಾಹಿತ್ಯಯಾತ್ರೆ 45 ವರ್ಷ ಕಂಡಿದೆ. ಹಲವಾರು ಪ್ರಕಾಶಕರು ಇವರ 90ಕ್ಕೂ ಅಧಿಕ ಗ್ರಂಥಗಳನ್ನು ಪ್ರಕಟಿಸಿರುವುದೇ ಇವರ ಅಜಾತಶತ್ರುತ್ವಕ್ಕೆ ದ್ಯೋತಕ ಎಂದು ನಯನ ಸಭಾಂಗಣದಲ್ಲಿ ಪ್ರೊ.ಮಲ್ಲೇಪುರಂ ಜಿ ವೆಂಕಟೇಶ 70 ಅಭಿನಂದನಾ ಸಮಿತಿ ಮತ್ತು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ವತಿಯಿಂದ ಆಯೋಜಿಸಿದ್ದ ಪ್ರೊ ಮಲ್ಲೇಪುರಂ ಗ್ರಂಥ ಪ್ರಕಟಣೆಯ ನಲ್ವತ್ತೈದು ವರ್ಷಗಳ ಯಾನದ ನೆನಪು ; ಪ್ರಕಾಶಕ– ಮುದ್ರಕರ ಸ್ನೇಹ ಸಮ್ಮಿಲನ ಮತ್ತು ಗೌರವಾರ್ಪಣೆಯ ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ.ವೂಡೇ ಪಿ.ಕೃಷ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ನಾಡೋಜ ಡಾ.ಮನು ಬಳಿಗಾರ್ ಕಾರ್ಯಕ್ರಮ ಉದ್ಘಾಟಿಸಿದರು. ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಮತ್ತು ತಂಡದವರು ಪ್ರೊ ಮಲ್ಲೇಪುರಂ ರವರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರಿನ ತ.ವೆಂ.ವೆಂ ಸ್ಮಾರಕ ಗ್ರಂಥಮಾಲೆಯ ಟಿ.ಎಸ್.ಛಾಯಾಪತಿ, ಇಸ್ಕಾನ್ ಟಚ್‌ಸ್ಟೋನ್ ಫೌಂಡೇಷನ್‌ನ ಕುಲಶೇಖರ ಚೈತನ್ಯ ದಾಸ್ ಮೊದಲಾದವರಿಗೆ ಗೌರವಾರ್ಪಣೆ ನಡೆಯಿತು. ರಾಜ್ಯ ಮುದ್ರಣಕಾರರ ಸಂಘದ ಅಧ್ಯಕ್ಷ, ಲಯನ್ ಬಿ.ಆರ್. ಅಶೋಕ ಕುಮಾರ್, ಅಭಿನಂದನಾ ಸಮಿತಿಯ ಡಾ.ಕೆ.ಜಿ. ಲಕ್ಷ್ಮೀನಾರಾಯಣಪ್ಪ, ಡಾ.ಪ್ರಕಾಶ್ ಆರ್ ಪಾಗೋಜಿ, ಡಾ.ಸಂತೋಷ್ ಹಾನಗಲ್ ಉಪಸ್ಥಿತರಿದ್ದರು.

ನಮ್ಮ ರಾಜ್ಯಪ್ರಗತಿ

ನೊಬೆಲ್ ಪ್ರಶಸ್ತಿಗಿಂತಲೂ ಬಹಳ ದೊಡ್ಡವರು ಮಹಾತ್ಮಗಾಂಧೀಜಿ

–"ಸತ್ಯಾಗ್ರಹಿ ದಂಪತಿಗಳು" ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ನಾಡೋಜ ಡಾ.ವೂಡೇ ಪಿ.ಕೃಷ್ಣ




"ಜಗತ್ತಿನಲ್ಲಿ ಕೋಟ್ಯಾಂತರ ಜನ ಆಗಿ ಹೋಗಿದ್ದಾರೆ. ಆದರೆ, ಮಹಾತ್ಮ ಎಂಬ ಹೆಸರು ಗಳಿಸಿ ವಿಶ್ವಾದ ಮಹಾತ್ಮರಂತೆ ನಡೆದವರು ಗಾಂಧೀಜಿ ಒಬ್ಬರೇ. ಇಂತಹ ಮಹಾತ್ಮರಿಂದ ಸರದಾರ್ ಎಂದು ಕರೆಸಿಕೊಂಡ ವೆಂಕಟರಾಮಯ್ಯ ದಂಪತಿಗಳು ಎಂಬುದು ನಮಗೆಲ್ಲ ಹೆಮ್ಮೆಯ ವಿಷಯ. ಗಾಂಧೀಜಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಲಿಲ್ಲ ಎಂದು ಅವರ ಮಹಾನ್ ಅಭಿಮಾನಿಗಳು ದುಃಖಿಸುತ್ತಾರೆ. ನೊಬೆಲ್ ಸೇರಿದಂತೆ ಎಲ್ಲಾ ದೊಡ್ಡ ದೊಡ್ಡ ಪ್ರಶಸ್ತಿಗಳಿಗಿಂತ ದೊಡ್ಡವರು ಗಾಂಧೀಜಿ. ಗಾಂಧೀಜಿ ಎಂದರೆ ಸತ್ಯ ಸತ್ಯ ಎಂದರೆ ಗಾಂಧೀಜಿ ಎಂಬ ಮಾತು ಶತಶತಮಾನಗಳ ಕಾಲ ಚಾಲ್ತಿಯಲ್ಲಿರುತ್ತದೆ. ಅನ್ಯಾಯಗಳ ವಿರುದ್ಧ ಸಿಡಿದೇಳುವುದೇ ನಾವು ಗಾಂಧೀಜಿ ಅವರಿಗೆ ಸಲ್ಲಿಸುವ ಗೌರವ" ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ, ಶಿಕ್ಷಣ ತಜ್ಞ ನಾಡೋಜ ಡಾ.ವೂಡೇ ಪಿ.ಕೃಷ್ಣ ತಿಳಿಸಿದರು. ಗಾಂಧಿ ಭವನದಲ್ಲಿ 29-11-2021ರ ಸಂಜೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಚೇತನಾ ಪಬ್ಲಿಕೇಷನ್ ಸಂಸ್ಥೆ ಏರ್ಪಡಿಸಿದ್ದ ಸಮಾರಂಭದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಸರ್ದಾರ್ ವೆಂಕಟರಾಮಯ್ಯ ಮತ್ತು ಗೌರಮ್ಮ ದಂಪತಿಗಳ ಕುರಿತು ಹಿರಿಯ ಲೇಖಕಿ ಡಾ.ಪಿ.ಮಂಜುಳಾ ಶಿವಾನಂದ ರಚಿಸಿರುವ "ಸತ್ಯಾಗ್ರಹಿ ದಂಪತಿಗಳು" ಕುರಿತು ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಅವರು ಇಡೀ ಬದುಕನ್ನು ಸತ್ಯಾಗ್ರಹ ಕೇಂದ್ರಿತವನ್ನಾಗಿ ಮಾಡಿಕೊಂಡಿದ್ದ ಇಂತಹ ದಂಪತಿಗಳನ್ನು ಪಡೆದ ಕನ್ನಡನಾಡೇ ಧನ್ಯ. ಸ್ವಾತಂತ್ರ್ಯಾನಂತರ ಉನ್ನತ ಸ್ಥಾನಗಳು ಅವರನ್ನು ಹುಡುಕಿಕೊಂಡು ಬಂದರೂ ಅವರು ಯಾವ ಸ್ಥಾನಮಾನಕ್ಕೂ ಆಸೆ ಪಡಲಿಲ್ಲ ಎಂದು ಹೇಳಿದರು.

ಸಭಾ ಕಾರ್ಯಕ್ರಮಕ್ಕೆ ಮೊದಲು ದಂಪತಿಗಳನ್ನು ಕುರಿತು ಮಂಜುನಾಥ ಪಾಂಡವಪುರ ನಿರ್ದೇಶಿಸಿದ ಕಿರುಚಿತ್ರವನ್ನು ಪ್ರದರ್ಶಿಸಲಾಯಿತು. ಡಾ.ಎಸ್.ರಾಮಲಿಂಗೇಶ್ವರ (ಸಿಸಿರಾ) ನಿರೂಪಿಸಿದ ಸಭಾ ಕಾರ್ಯಕ್ರಮ ಖ್ಯಾತ ಗಾಯಕ ಭೀಮ್‌ಜಿ ನಾಡಗೀತೆ ಹಾಡುವುದರೊಂದಿಗೆ ಆರಂಭವಾಯಿತು. ಪ್ರಾಸ್ತಾವಿಕ ನುಡಿಗಳನ್ನಾಡಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌ.ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ "ಸ್ವಾತಂತ್ರ್ಯ ಅಮೃತ ಮಹೋತ್ಸವ ವರ್ಷದಲ್ಲಿ ಒಂದು ಮಹೋನ್ನತ ಕೃತಿ ಲೋಕಾರ್ಪಣೆಗೊಂಡಿರುವುದು ಅತ್ಯಂತ ಸಂತಸದ ಸಂಗತಿ" ಎಂದರು.

ಕೃತಿ ಕುರಿತು ಮಾತನಾಡಿದ ಭಾರತೀಯ ವಿದ್ಯಾಭವನದ ವೈಜ್ಞಾನಿಕ ಮತ್ತು ಮಾನವೀಯ ಮೌಲ್ಯಗಳ ಕೇಂದ್ರದ ಗೌ.ನಿರ್ದೇಶಕರಾದ ಪ್ರೊ.ಮೀನಾದೇಶಪಾಂಡೆ "ನಾನು ವೆಂಕಟರಾಮಯ್ಯ ದಂಪತಿಗಳ ಬಗೆಗೆ ಹೆಚ್ಚು ಓದಿರಲಿಲ್ಲ. ಮಂಜುಳಾ ಶಿವಾನಂದ ಈ ಪುಸ್ತಕ ಕೊಟ್ಟು ಮಹದುಪಕಾರ ಮಾಡಿದರು. ಪುಸ್ತಕವನ್ನು ನಾನು ಓದಿದೆ ಎನ್ನುವುದಕ್ಕಿಂತ ಅದೇ ಓದಿಸಿಕೊಂಡು ಹೋಯಿತು. ಪೋಲೀಸರಿಂದ ಏಟು ತಿನ್ನುವುದು ಸೇರಿದಂತೆ ನಾನಾ ರೀತಿಯ ಕಷ್ಟಗಳನ್ನೆದುರಿಸಿದ್ದರೂ ದಂಪತಿಗಳು ಎಂದೂ ಯಾರಲ್ಲೂ ಹೇಳಿಕೊಳ್ಳಲಿಲ್ಲ. ಪುಸ್ತಕದಲ್ಲಿನ ಅನೇಕ ಘಟನೆಗಳು ಓದುಗರ ಕಂಗಳಲ್ಲಿ ನೀರು ತರಿಸುತ್ತವೆ. ಸ್ವತಂತ್ರ್ಯ ಹೋರಾಟದಲ್ಲಿ ದಂಪತಿಗಳು ಒಟ್ಟಾಗಿ ಭಾಗ ವಹಿಸಿರುವುದು ಅಪರೂಪ, ಅಂತಹ ಅಪರೂಪದ ದಂಪತಿಗಳಲ್ಲಿ ಪ್ರಮುಖರು ವೆಂಕಟರಾಮಯ್ಯ ದಂಪತಿಗಳು. ದಂಪತಿಗಳ ಸವಿವರಾತ್ಮಕ ಮಾಹಿತಿಗಳನ್ನು ನೀಡಿರುವ ಡಾ.ಪಿ. ಮಂಜುಳಾ ಶಿವಾನಂದ ಕನ್ನಡ ಜನರಿಗೆ ಮಹದುಪಕಾರ ಮಾಡಿದ್ದಾರೆ" ಎಂದು ಹೇಳಿದರು.

ಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತರಾದ 92 ವರ್ಷದ ಚನ್ನಮ್ಮ ಹಳ್ಳಿಕೇರಿ "ಗಾಂಧೀಜಿ ಬಗೆಗೆ ಅತ್ಯಂತ ಶ್ರದ್ಧೆ ಇರಿಸಿಕೊಂಡಿದ್ದ ವೆಂಕಟರಾಮಯ್ಯನವರು ಅನೇಕ ಕಡೆ ಅದರಲ್ಲೂ ಸಣ್ಣ ಹಳ್ಳಿಗಳಲ್ಲಿ ಗಾಂಧಿ ಭವನಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಮೇಲ್ವಿಚಾರಣೆ ಇಲ್ಲದೆ ಅನೇಕ ಭವನಗಳು ಶಿಥಿಲವಾಗಿವೆ. ಗಾಂಧೀಜಿ ಚಿಂತನೆಗಳನ್ನು ಪ್ರಚುರ ಪಡಿಸುವಲ್ಲಿ ಪ್ರಾಮಾಣಿಕ ಪಾತ್ರ ವಹಿಸುತ್ತಿರುವ ಗಾಂಧಿಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ. ಪಿ .ಕೃಷ್ಣ ಮತ್ತು ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಈ ಬಗೆಗೆ ಗಮನ ಹರಿಸಬೇಕು" ಎಂದು ಮನವಿ ಮಾಡಿದರು.

ಯು.ಎಸ್.ಎ. ಇಂಟೆಲ್ ಕಾರ್ಪೊರೇಷನ್ ವಿಶ್ರಾಂತ ಉಪಾಧ್ಯಕ್ಷ ಹಾಗೂ ಸರ್ದಾರ್ ವೆಂಕಟರಾಮಯ್ಯ-ಗೌರಮ್ಮ ದಂಪತಿಗಳ ಮೊಮ್ಮಗ ಡಾ. ಅರವಿಂದ ಹಾರವಳ್ಳಿ ಅಸ್ಪೃಶ್ಯತೆ ಎಂಬ ವಿರುದ್ಧ ದೊಡ್ಡ ಹೋರಾಟ ಮಾಡಿದ್ದ, ಮುದ್ದಿಯುದ್ಧ ಗಾಂಧಿ [illegible] ಪಡೆದ "ಸರ್ದಾರ್ ವೆಂಕಟರಾಮಯ್ಯ" ದಂಪತಿಗಳ ಬಗೆಗೆ ಉತ್ತಮ ಸಂಶೋಧನಾತ್ಮಕ ಕೃತಿ ರಚಿಸಿರುವ ಮಂಜುಳಾ ಶಿವಾನಂದ ಅವರನ್ನು ಅಭಿನಂದಿಸಿದರು.



ಪತ್ರಕರ್ತೆ ನಂ.ನಾಗಲಕ್ಷ್ಮಿ ಮತ್ತು ಸ್ವಾತಂತ್ರ್ಯ ಹೋರಾಟಗಾರ ಸುರೇಶ್ ಕಲ್ಪಟಗಿ ಅವರೂ ನುಡಿ ಕಾಣಿಕೆ ಸಲ್ಲಿಸಿದರು. ಲೇಖಕಿ ಡಾ.ಪಿ. ಮಂಜುಳಾ ಶಿವಾನಂದ ಮಾತನಾಡಿ, ರಾಷ್ಟ್ರದ ಮಹಾನ್ ತ್ಯಾಗಜೀವಿ ದಂಪತಿಗಳ ಬಗೆಗೆ ನಾವು ಒಂದು ಐತಿಹಾಸಿಕ ಕೃತಿ ಪ್ರಕಟಿಸಲು ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಕೃತಜ್ಞತೆ ಸಲ್ಲಿಸಿದರು. ತಮ್ಮ ಪ್ರಯತ್ನವನ್ನು ಶ್ಲಾಘಿಸಿ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ. ವೀರೇಂದ್ರ ಹೆಗ್ಗಡೆ ಬರೆದಿರುವ ಪತ್ರವನ್ನು ವಾಚಿಸಿದರು. ತಮ್ಮ ಎಲ್ಲಾ ಸಾಹಿತ್ಯ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿರುವ ಪತಿ ಎಸ್.ಸಿ.ಶಿವಾನಂದ ಅವರಿಗೂ ಧನ್ಯವಾದ ಸಮರ್ಪಿಸಿದರು. ಸರದಾರ ವೆಂಕಟರಾಮಯ್ಯ ಮತ್ತು ಗೌರಮ್ಮ ಕುಟುಂಬದ ಅನೇಕರು ಉಪಸ್ಥಿತರಿದ್ದರು.

ಮಂಚನಬಲೆ

ಶ್ರೀ ವೀರಭದ್ರ ಸ್ವಾಮಿಯವರ ಅಷ್ಟೋತ್ತರ ಮತ್ತು ದೇವತಾಸ್ತೋತ್ರಗಳ ಪುಸ್ತಕ ಬಿಡುಗಡೆ





ಚಿಕ್ಕಬಳ್ಳಾಪುರ ತಾಲ್ಲೂಕಿನ ಮಂಚನಬೆಲೆ ಗ್ರಾಮದಲ್ಲಿರುವ ಶ್ರೀ ವೀರಭದ್ರಸ್ವಾಮಿ ದೇವಾಲಯದ ಆವರಣದಲ್ಲಿ 23-11-2021ರಂದು ನಡೆದ ಶ್ರೀ ವೀರಭದ್ರ ಸ್ವಾಮಿ ಭಕ್ತ ಮಂಡಳಿಯ 44ನೇ ವಾರ್ಷಿಕ ಮಹಾಸಭೆಯಲ್ಲಿ ಶ್ರೀ ವೀರಭದ್ರಸ್ವಾಮಿಯ ಮಹಾನ್ ಭಕ್ತ ಆರ್.ಪ್ರಭು ಅವರು ಸಮಸ್ತ ಭಕ್ತರ ಉಪಯೋಗಕ್ಕಾಗಿ ಹೊರತಂದಿರುವ "ಶ್ರೀ ವೀರಭದ್ರ ಸ್ವಾಮಿಯವರ ಅಷ್ಟೋತ್ತರ ಶತನಾಮಾವಳಿ ಮತ್ತು ದೇವತಾ ಸ್ತೋತ್ರಗಳು" ಪುಸ್ತಕವನ್ನು ಅತಿಥಿ ಗಣ್ಯರು ಬಿಡುಗಡೆ ಮಾಡಿದರು.

ಮಂಚನಬೆಲೆ ಶ್ರೀ ವೀರಭದ್ರಸ್ವಾಮಿ ದೇವಾಲಯದ ಅಭಿವೃದ್ಧಿಯ ರೂವಾರಿ ಎನಿಸಿಕೊಂಡಿದ್ದ ಬೆಂಗಳೂರಿನ ಮಾಜಿ ಮೇಯರ್, ಎಫ್.ಕೆ.ಸಿ.ಸಿ.ಐ. ಮಾಜಿ ಅಧ್ಯಕ್ಷ ಕೆ.ಎಂ.ನಂಜಪ್ಪನವರು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ದತ್ತಿಯ ಗೌ.ಪ್ರಧಾನ ಕಾರ್ಯದರ್ಶಿಯಾಗಿದ್ದ ನಾಡೋಜ ಡಾ.ವೂಡೇ ಪಿ.ಕೃಷ್ಣ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಅವರು ಮಾತನಾಡಿ, "ಪ್ರಾಮಾಣಿಕ ಸಮಾಜ ಸೇವಕ, ದಕ್ಷ ಆಡಳಿತಗಾರ ಕೆ.ಎಂ.ನಂಜಪ್ಪನವರ ಸಹಯೋಗ ಹಾಗೂ ಮಾರ್ಗದರ್ಶನದಿಂದ ನನಗೆ ಸಾಕಷ್ಟು ಸಹಾಯವಾಗಿದೆ. ಅವರು ಹಿಂದೆ ಅಲಂಕರಿಸಿದ್ದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಲು ಅವಕಾಶ ದೊರೆತಿರುವುದು ನನಗೆ ಅತ್ಯಂತ ಸಂತಸವಾಗಿದೆ" ಎಂದು ಹೇಳಿದರು.

ಶ್ರೀವೀರಭದ್ರಸ್ವಾಮಿ ದೇವಾಲಯದ ಆಡಳಿತ ಮಂಡಳಿಯವರು ಭಕ್ತರ ಅನುಕೂಲಕ್ಕಾಗಿ ಅನೇಕ ಅಭಿವೃದ್ಧಿ ಯೋಜನೆಗಳನ್ನು ಪಾರದರ್ಶಕವಾಗಿ ಕಾರ್ಯಗತಗೊಳಿಸುತ್ತಿರುವುದು ಪ್ರಶಂಸನೀಯ ಎಂದು ಅಭಿಪ್ರಾಯಪಟ್ಟ ಡಾ.ವೂಡೇ. ಪಿ.ಕೃಷ್ಣ "ಮುಂದಿನ ಪೀಳಿಗೆಗೆ ಅತ್ಯಂತ ಉಪಯುಕ್ತವಾದ ಶ್ರೀ ವೀರಭದ್ರ ಸ್ವಾಮಿ ಚರಿತ್ರೆ ಅಷ್ಟೋತ್ತರ ಮತ್ತು ದೇವತಾ ಸ್ತೋತ್ರಗಳನ್ನೊಳಗೊಂಡ ಪುಸ್ತಕವನ್ನು ಪ್ರಕಟಿಸಿರುವ ಹಿರಿಯ ಚಿಂತಕ ಆರ್.ಪ್ರಭು ಭಕ್ತದಿಗಳಿಗೆಲ್ಲಾ ಮಾದರಿಯಾಗಿದ್ದಾರೆ. ಶ್ರೀ ವೀರಭದ್ರಸ್ವಾಮಿ ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಸರ್ವಯಶಸ್ಸನ್ನು ಕರುಣಿಸಲಿ" ಎಂದು ಪ್ರಾರ್ಥಿಸಿದರು.



ಪುಸ್ತಕ ಪ್ರಕಟಣೆಯ ದಾಸೋಹಿಗಳಾದ ಆರ್. ಪ್ರಭು ಮತ್ತು ಗಿರಿಜಮ್ಮ ದಂಪತಿಗಳಿಗೆ ಆತ್ಮೀಯ ಸನ್ಮಾನ. ಮಂಡಳಿಯ ಅಧ್ಯಕ್ಷ ಬಿ.ವಿ. ಬಸವರಾಜು, ನಾಡೋಜ ಡಾ. ವೂಡೇ ಪಿ. ಕೃಷ್ಣ ಮತ್ತಿತರರಿದ್ದಾರೆ.

ಪುಸ್ತಕದ ಬಗೆಗೆ ಮಾತನಾಡಿದ ಆರ್.ಪ್ರಭು "ಈ ಭಗವದುದ್ದೇಶಿತ ಕಾರ್ಯಕ್ಕೆ ಶ್ರೀ ವೀರಭದ್ರ ಸ್ವಾಮಿಯ ಪ್ರೇರಣೆ ಮುಖ್ಯ ಕಾರಣ. ಸುಧೀಂದ್ರ ಗಾರ್ಗೇಶ್, ಹಿರಿಯ ಲೇಖಕಿಯರಾದ ಇಂದಿರಾ ಶಿವಣ್ಣ ಮತ್ತು ಸುನಂದ ರು.ಬಸಪ್ಪ, ಸುಂದರವಾಗಿ ಪುಟಗಳ ವಿನ್ಯಾಸ ಮಾಡಿದ ಟಿ.ಎಲ್.ಸುಚಿತ್ರಾ ರಾಜು, ನನ್ನ ಕುಟುಂಬದ ಎಲ್ಲಾ ಸದಸ್ಯರು ಸಂಪೂರ್ಣ ಸಹಕಾರ ನೀಡಿದ್ದಾರೆ" ಎಂದರಲ್ಲದೆ, ಪುಸ್ತಕ ಪ್ರಕಟಿಸಲು ಅನುಮತಿ ನೀಡಿದ ಆಡಳಿತ ಮಂಡಳಿಯವರಿಗೆ ಮತ್ತು ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆಯೂ ಪುಸ್ತಕ ಬಿಡುಗಡೆ ಮಾಡಲು ಸಂತೋಷದಿಂದ ದಯಮಾಡಿಸಿದ ಡಾ.ವೂಡೇ ಪಿ.ಕೃಷ್ಣ ಅವರಿಗೆ ಧನ್ಯವಾದಗಳನ್ನರ್ಪಿಸಿದರು. ಪುಸ್ತಕದಲ್ಲಿನ ಕೆಲವು ಶ್ಲೋಕಗಳನ್ನು ವಾಚಿಸಿ ಅವುಗಳ ಭಾವಾರ್ಥವನ್ನು ತಿಳಿಸಿದ ಹಿರಿಯ ಚಿಂತಕ ಎಸ್.ವೀರಭದ್ರಯ್ಯ ಅವರು ಶ್ರೀ ವೀರಭದ್ರಸ್ವಾಮಿಗೆ ಒಪ್ಪಿಗೆಯಾಗುವಂತಹ ಕೆಲಸ ಮಾಡಿರುವ ಆರ್. ಪ್ರಭು ಮತ್ತವರ ಕುಟುಂಬ ವರ್ಗದವರನ್ನು ಅಭಿನಂದಿಸಿದರು.

ಮಂಜುನಾಥ್ ಅವರು ಅಚ್ಚುಕಟ್ಟಾಗಿ ನಿರ್ವಹಿಸಿದ ಕಾರ್ಯಕ್ರಮ ಮಂಜುಳಾ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಮಂಡಳಿಯ ಕಾರ್ಯದರ್ಶಿ ವಿ.ಸಿ.ಸಿದ್ದರಾಜು ಮಂಡಳಿಯ ವಾರ್ಷಿಕ ವರದಿ ಮಂಡಿಸಿ ಸಭೆಯ ಅನುಮೋದನೆ ಪಡೆದರು. ಅಧ್ಯಕ್ಷತೆ ವಹಿಸಿದ್ದ ಮಂಡಳಿಯ ಅಧ್ಯಕ್ಷ ಬಿ.ವಿ.ಬಸವರಾಜು ಅವರು ನಾಡೋಜ ಡಾ.ವೂಡೇ. ಪಿ.ಕೃಷ್ಣ ಅವರು ವಿಶೇಷ ಅತಿಥಿಯಾಗಿ ಆಗಮಿಸಿರು ವುದಕ್ಕೆ ಅಪಾರ ಸಂತಸ ವ್ಯಕ್ತ ಪಡಿಸಿದರು. ದೇವಾಲ ಯದ ಅಭಿವೃದ್ಧಿ ಕಾರ್ಯಗಳನ್ನು ಅತಿಥಿಗಳ ಮತ್ತು ಮಹಾಸಭೆಯ ಗಮನಕ್ಕೆ ತಂದು "ದೇವಸ್ಥಾನದ ಒಕ್ಕಲಿನ ಯುವ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಪೂರ್ಣ ಮನಸ್ಸಿನಿಂದ ಆಗಮಿಸಿ ಸಹಕಾರ ನೀಡಬೇಕು" ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಅಷ್ಟೋತ್ತರ ಮತ್ತು ದೇವತಾಸ್ತೋತ್ರಗಳ ಬಗೆಗೆ ಕಿರುಹೊತ್ತಿಗೆ ಪ್ರಕಟಿಸಿದ ಆರ್.ಪ್ರಭು ಅವರನ್ನು ಆಡಳಿತ ಮಂಡಳಿಯವರು ಆತ್ಮೀಯವಾಗಿ ಸನ್ಮಾನಿಸಿದರು.

ದೇವಾಲಯದ ಪ್ರಧಾನ ಅರ್ಚಕ ಶಿವಕುಮಾರ ಆರಾಧ್ಯ ಎಲ್ಲ ದೇವರುಗಳಿಗೆ ಆಕರ್ಷಕ ಅಲಂಕಾರ ಮಾಡಿದ್ದುದು ಭಕ್ತಾದಿಗಳ ಹೃನ್ಮನ ಸೂರೆಗೊಂಡಿತು. ಅಭಿಷೇಕ, ಪೂಜೆ, ಮಹಾಮಂಗಳಾರತಿ ನಂತರ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಭಕ್ತಾದಿಗಳೆಲ್ಲರಿಗೆ ಪುಸ್ತಕದ ಪ್ರತಿಗಳನ್ನು ಉಚಿತವಾಗಿ ವಿತರಿಸಲಾಯಿತು.

-ವರದಿ: ಆರ್.ಪ್ರಭು

ಹೊಸ ದಿಗಂತ
ಸೋಮವಾರ, 13 ಡಿಸೆಂಬರ್ 2021, ಬೆಂಗಳೂರು


ಕನ್ನಡ ನುಡಿ ನಮನ ಸಮ್ಮೇಳನಾಧ್ಯಕ್ಷ ಪಾಲನೇತ್ರ ಆಗ್ರಹ

ಕುವೆಂಪು ಹೆಸರಿನಲ್ಲಿ ರಾಷ್ಟ್ರೀಯ ಉತ್ಸವ ಕೈಗೊಳ್ಳಿ

ಬೆಂಗಳೂರು: ರಾಷ್ಟ್ರಕವಿ ಕುವೆಂಪು ಅವರ ಚಿಂತನೆ ಮತ್ತು ಸಮಗ್ರ ಸಾಹಿತ್ಯವನ್ನು ಒಳಗೊಂಡ ವಿಚಾರ ಸಂಕೀರ್ಣ ಅಥವಾ ಕುವೆಂಪು ಹೆಸರಿನಲ್ಲಿ ರಾಷ್ಟ್ರೀಯ ಉತ್ಸವ ಏರ್ಪಡಿಸಬೇಕು ಎಂದು ಕನ್ನಡಪರ ಚಿಂತಕ ಮತ್ತು ಹೋರಾಟಗಾರ ಪಾಲನೇತ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡರು.

ಅಖಿಲ ಕರ್ನಾಟಕ ಕುವೆಂಪು ಸಂಸ್ಕೃತಿ ವೇದಿಕೆ ವತಿಯಿಂದ ನಯನ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಕನ್ನಡ ನುಡಿ ನಮನ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕನ್ನಡ ಸಾಮ್ರಾಜ್ಯವನ್ನು ಕಟ್ಟುವಲ್ಲಿ ಚಕ್ರವರ್ತಿ ಇಮ್ಮಡಿ ಪುಲಕೇಶಿ ಪಾತ್ರ ಮಹತ್ವದ್ದು. ಹಾಗಾಗಿ ಅವರ ಪ್ರತಿಮೆಯನ್ನು ನಗರದಲ್ಲಿ ಸ್ಥಾಪಿಸಬೇಕು. ಹಾಗೇಯೇ ಮಾಜಿ ಸಿಎಂ ಕೆಂಗಲ್ ಹನುಮಂತಯ್ಯ ಮತ್ತು ಎಸ್. ನಿಜಲಿಂಗಪ್ಪ ಅವರ ಹೆಸರಿನಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ಮತ್ತು ಅಧ್ಯಯನ ಪೀಠವನ್ನು ಸ್ಥಾಪಿಸಿ ಕನ್ನಡದ ಹಿರಿಯಗೆ ಶ್ರಮಿಸಿರುವ ಇವರಿಗೆ ಈ ಮೂಲಕ ಗೌರವ ಸಲ್ಲಿಸ ಕುರುತು ಸರ್ಕಾರ ಚಿಂತನೆ ನಡೆಸಬೇಕಿದೆ ಎಂದು ಮನವಿ ಮಾಡಿದರು.

ಮನೆಗಳಲ್ಲಿ ಕನ್ನಡ ಭಾಷೆ ಬಳಕೆ ಇರಲಿ:



ಕದಂಬ ರತ್ನ ಪ್ರಶಸ್ತಿ ಪ್ರದಾನಿಸಿ ಮಾತನಾಡಿದ ಶೈಲಜ ವಿ.ಸೋಮಣ್ಣ, ಕನ್ನಡ ಮತ್ತು ಕನ್ನಡಿಗರು ಉಳಿಯಬೇಕೆಂದರೆ ಪ್ರತಿಯೊಬ್ಬರು ಮನೆಗಳಲ್ಲಿ ಕನ್ನಡ ಭಾಷೆ ಬಳಸಬೇಕು. ಆಡಳಿತ ವ್ಯವಹಾರದಲ್ಲಿ ಸಹ ಸಂಪೂರ್ಣ ಕನ್ನಡ ಬಳಸಬೇಕು. ಆಗ ಮಾತ್ರ ಮಾತೃ ಭಾಷೆ ಉಳಿಯಲು ಸಾಧ್ಯ. ಇಂದಿನ ಯುವಕರು ವಿದೇಶಿ ಭಾಷೆಗೆ ಅತಿಯಾದ ವ್ಯಾಮೋಹ ಬೆಳಸಿಕೊಳ್ಳದೆ ಮಾತೃ ಭಾಷೆಯನ್ನು ಹೆಚ್ಚು ಗೌರವಿಸಬೇಕು ಎಂದರು.

ಡಾ. ಮಲ್ಲೇಪುರಂ ಜಿ. ವೆಂಕಟೇಶ್, ನಾಡೋಜ ಡಾ. ವೂಡೇ ಪಿ. ಕೃಷ್ಣ, ಟಿ. ಸತೀಶ್ ಜವರೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಕದಂಬ ಪ್ರಶಸ್ತಿ ಪುರಸ್ಕೃತರು: ಕದಂಬ ಪ್ರಶಸ್ತಿ ಪುರಸ್ಕಾರವನ್ನು ಚಲನಚಿತ್ರ ನಿರ್ಮಾಪಕ ಬಿ. ಸುರೇಶ್, ಕೆಎಎಸ್ ಅಧಿಕಾರಿ ಶಿವರಾಮು, ಶಿಕ್ಷಣ ತಜ್ಞ ದೊಡ್ಡರಸಿನಕೆರೆ ಮಾಯಪ್ಪ , ಸಾಹಿತಿ ಎಚ್. ಆರ್. ಸುಜಾತ , ಎಂ.ಆರ್. ಶೋಭಾ, ಎ.ಬಿ. ಗೀತಾ, ಶಿವಕುಮಾರ್ ಬೆಳ್ಳಿತಟ್ಟೆ , ಕೆ.ಪಿ. ಸತ್ಯನಾರಾಯಣ, ಬಿ. ಮೋಹನ್‌ಕುಮಾರ್, ವಿ. ರಾಮಾಂಜಿನಿಗೆ ವಿತರಿಸಲಾಯಿತು.

ಭಾಷೆ ವೃದ್ಧಿಯಾಗಬೇಕೆಂದರೆ ಸಂವರ್ಧನೆ ಮತ್ತು ವಿಸ್ತರಣೆ ಆ ಭಾಷೆಯಲ್ಲಿ ಆಗುತ್ತಿರಬೇಕು. ಭಾಷೆಯನ್ನು ಸಂಭ್ರಮಿಸುವುದು ಒಳ್ಳೆಯದು. ಆದರೆ, ಎಂದು ಅದು ಅಷ್ಟಕ್ಕೆ ಸೀಮಿತವಾಗದೆ ಕಾಲಕ್ಕೆ ತಕ್ಕಂತೆ ಬೆಳೆಯುತ್ತ ಹೋದರೆ ಮಾತ್ರ ಶಾಶ್ವತವಾಗಿ ಆ ಭಾಷೆ ಉಳಿಯಲು ಸಾಧ್ಯ . ಇದನ್ನು ಪ್ರತಿಯೊಬ್ಬ ಕನ್ನಡಿಗನೂ ಅರಿತು ಕನ್ನಡದಲ್ಲಿಯೇ ಸಂವಾದಿಸಬೇಕು.

□ ಡಾ. ಮಲ್ಲೇಪುರಂ ಜಿ. ವೆಂಕಟೇಶ್, ವಿಶ್ರಾಂತ ಕುಲಪತಿ

ವಿಶ್ವವಾಣಿ 3
13.12.2021 ಸೋಮವಾರ
vishwavani.news



ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ನುಡಿ ಸಮ್ಮೇಳನದಲ್ಲಿ ವಿಶ್ವವಾಣಿ ಸುದ್ದಿ ಸಂಪಾದಕ ಶಿವಕುಮಾರ್ ಬೆಳ್ಳಿತಟ್ಟೆ ಅವರನ್ನು ಸನ್ಮಾನಿಸಲಾಯಿತು. ಸಾಹಿತಿ ಮಲ್ಲೇಪುರಂ ಜಿ.ವೆಂಕಟೇಶ್, ಕನ್ನಡ ಹೋರಾಟಗಾರ ಫಾಲನೇತ್ರ, ಚಿತ್ರ ನಿರ್ದೇಶಕ ಬಿ. ಸುರೇಶ್, ವೂಡೆ.ಪಿ. ಕೃಷ್ಣ, ಜೀವನ್ಮುಖಿ ಸುರೇಶ್, ಸತೀಶ್, ಶೈಲಜಾ ಸೋಮಣ್ಣ ಇದ್ದರು.

ಸಂಯುಕ್ತ ಕರ್ನಾಟಕ
13 ಡಿಸೆಂಬರ್ 2021 ಸೋಮವಾರ

ಕನ್ನಡ ಉಳಿವಿಗೆ ಹೋರಾಟ

ಬೆಂಗಳೂರು: ಕನ್ನಡ ಭಾಷೆಯ ಸಂವರ್ಧನೆ ವಿಸ್ತರಣೆಯಾದರೆ ಮಾತ್ರ ಭಾಷೆ ಉಳಿಯ ಬಲ್ಲದು ಎಂದು ಸಂಸ್ಕೃತ ವಿವಿ. ವಿಶ್ರಾಂತ ಕುಲಪತಿ ಡಾ: ಮಲ್ಲೇಪುರಂ ಜಿ. ವೆಂಕಟೇಶ್ ಅಭಿಪ್ರಾಯಪಟ್ಟರು.

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ವತಿಯಿಂದ ನಯನ ಸಭಾಂಗಣದಲ್ಲಿ ನಡೆದ ಕನ್ನಡ ನುಡಿ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು 21ನೇ ಶತಮಾನದಲ್ಲಿ ಕನ್ನಡ ಭಾಷೆ ಉಳುವಿಗಾಗಿ ಆಂಗ್ಲ ಮತ್ತು ಅನ್ಯ ಭಾಷೆಗಳ ನಡುವೆ ಹೋರಾಟ ಮಾಡಬೇಕಾದ ಅಗತ್ಯವಿದೆ. ಕನ್ನಡದಲ್ಲಿ ಪಂಪನಿಂದ ಹಂಪನವರೆಗೆ ವೈವಿಧ್ಯಮಯ ಕನ್ನಡ ಭಾಷೆ ನೋಡಬಹುದಾಗಿದೆ ಎಂದರು.

ಸೋಮಣ್ಣ ಪ್ರತಿಷ್ಠಾನದ ಅಧ್ಯಕೆ ಶ್ರೀಮತಿ ಶೈಲಜಾ ಮಾತನಾಡಿ ಕನ್ನಡ ಉಳಿಯಬೇಕಾದರೆ ಪ್ರತಿಯೊಬ್ಬರು ಮನೆಗಳಲ್ಲಿ ಕನ್ನಡ ಭಾಷೆ ಬಳಸಬೇಕು. ಹಾಗೆಯೇ ಆಡಳಿತ ವ್ಯವಹಾರ ಕೂಡಾ ಸಂಪೂರ್ಣ ಕನ್ನಡ ಬಳಕೆಯಾಗಬೇಕು ಆಗ ಮಾತ್ರ ಮಾತೃಭಾಷೆ ಉಳಿಯಲು ಸಾಧ್ಯವೆಂದರು.

ಸಮ್ಮೇಳನಾಧ್ಯಕ್ಷ ಪಾಲನೇತ್ರ ಮಾತನಾಡಿ ಕನ್ನಡ ಶಾಲೆ ಉಳಿಸಬೇಕು ಹಾಗೂ ಕನ್ನಡಪರ ಹೋರಾಟಗಾರರ ಮೇಲೆ ಹಾಕಿರುವ ಪ್ರಕರಣವನ್ನು ಹಿಂಪಡೆಯಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಪಡಿಸಿದರು. ರಾಜ್ಯದಲ್ಲಿರುವ ಅನ್ಯಭಾಷಿಕರು ಕನ್ನಡ ಕಲಿಯಬೇಕು ಎಂದ ಅವರು ನಗರದಲ್ಲಿ ಪರಭಾಷಿಕರ ಹಾವಳಿ ಹೆಚ್ಚಾಗಿದೆ. ನಮ್ಮ ಸಂಸ್ಕೃತಿಗೆ ಧಕ್ಕೆಯಾಗುವ ಪರಿಸ್ಥಿತಿ ಬಂದಿದೆ ಎಂದು ಆತಂಕ ವ್ಯಕ್ತಪಡಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮಾತನಾಡಿದರು. ಸಮಾರಂಭದಲ್ಲಿ ಚಲನಚಿತ್ರ ನಿರ್ಮಾಪಕ ಸುರೇಶ್ ಸೇರಿದಂತೆ ಹಲವರನ್ನು ಸನ್ಮಾನಿಸಲಾಯಿತು.



ಕನ್ನಡ ನುಡಿ ಸಮ್ಮೇಳನಕ್ಕೆ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ: ಮಲ್ಲೇಪುರಂ ಜಿ. ವೆಂಕಟೇಶ್ ಚಾಲನೆ ನೀಡಿದರು. ಸಮ್ಮೇಳನಾಧ್ಯಕ್ಷ ಪಾಲನೇತ್ರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶ್ರೀಮತಿ ಶೈಲಜಾ ವಿ. ಸೋಮಣ್ಣ, ಸತೀಶ ಜವರೇಗೌಡ ಇನ್ನಿತರರು ಪಾಲ್ಗೊಂಡಿದ್ದರು.



ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ನಯನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕನ್ನಡ ನುಡಿ ಸಮ್ಮೇಳನದಲ್ಲಿ ಕನ್ನಡ ಪರ ಚಿಂತಕ ಹಾಗೂ ಹೋರಾಟಗಾರರಾದ ಪಾಲನೇತ್ರ ದಂಪತಿಯನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ಸಾಹಿತಿ ಡಾ.ಮಲ್ಲೇಪುರಂ ಜಿ.ವೆಂಕಟೇಶ್, ಎ.ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷರಾದ ಶೈಲಜಾ ಸೋಮಣ್ಣ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೆ.ಪಿ.ಕೃಷ್ಣ, ವೇದಿಕೆಯ ಅಧ್ಯಕ್ಷ ಸುರೇಶ್ ಜೀವನ್ಮುಖಿ, ಮಂಡ್ಯ ಜಿಲ್ಲಾ ಯುವ ಬರಹಗಾರರ ಸಂಘದ ಅಧ್ಯಕ್ಷ ಸತೀಶ್ ಜವರೇಗೌಡ ಮತ್ತಿತರರು ಹಾಜರಿದ್ದರು.

ಕನ್ನಡ ಪರ ಹೋರಾಟಗಾರರ ಮೇಲಿನ ಕೇಸ್ ಹಿಂಪಡೆಯಲು ಪಾಲನೇತ್ರ ಒತ್ತಾಯ

ಬೆಂಗಳೂರು, ಡಿ.12- ಕನ್ನಡ ಶಾಲೆ ಉಳಿಸಬೇಕು ಮತ್ತು ಕನ್ನಡಪರ ಹೋರಾಟಗಾರರ ಮೇಲೆ ಹಾಕಿರುವ ಕೇಸ್‌ಗಳನ್ನು ಹಿಂಪಡೆಯಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಸಮ್ಮೇಳನಾಧ್ಯಕ್ಷ ಪಾಲನೇತ್ರ ಆಗ್ರಹಿಸಿದರು.

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ವತಿಯಿಂದ ನಯನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕನ್ನಡ ನುಡಿ ಸಮ್ಮೇಳನದಲ್ಲಿ ಮಾತನಾಡಿಧರು.

ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡಿಗನಾಗಿರು ಎಂಬ ಕುವೆಂಪು ಅವರ ನುಡಿಗಳನ್ನು ಸ್ಮರಿಸಿದ ಅವರು, ಕನ್ನಡ ಭಾಷೆ ಕನ್ನಡ ಚಳುವಳಿ ಸಾಹಿತಿಗಳು, ಹೋರಾಟಗಾರರ ಶ್ರಮದಿಂದ ಉಳಿದಿದೆ. ಅಲ್ಲದೆ, ನಮ್ಮ ಹಿರಿಯರು ಅಕ್ಷರ ಜ್ಞಾನವಿಲ್ಲದೇ ಇದ್ದರು, ಕನ್ನಡ ಭಾಷೆಯನ್ನ ಸಾಂಸ್ಕೃತಿಕವಾಗಿ ಬೆಳಸಿದರು ಎಂದು ಹೇಳಿದರು.

ಕನ್ನಡ ಭಾಷೆಗೆ ಪ್ರಥಮ ಆದ್ಯತೆ ನೀಡಬೇಕು. ರಾಜ್ಯದಲ್ಲಿರುವ ಅನ್ಯ ಭಾಷಿಕರು ಕನ್ನಡ ಭಾಷೆ ಕಲಿಯಬೇಕು ಎಂದ ಅವರು, ಕನ್ನಡ ಪರ ಹೋರಾಟಗಾರರ ಮೇಲೆ ಪೋಲಿಸ್‌ರು ಹಾಕಿರುವ ಕೇಸ್ ಗಳನ್ನು ಹಿಂಪಡೆಯಬೇಕು .

ಬೆಂಗಳೂರಿನಲ್ಲಿ ಪರಭಾಷಿಕರ ಹಾವಳಿ ಹೆಚ್ಚಾಗಿದೆ, ನಮ್ಮ ಸಂಸ್ಕೃತಿಗೆ ಧಕ್ಕೆಯಾಗುವ ಪರಿಸ್ಥಿತಿ ಬಂದಿದೆ ಎಂದು ಆತಂಕ ವ್ಯಕ್ತಪಡಿಸಿದ ಅವರು, ಕನ್ನಡ ಶಾಲೆ ಉಳಿಸಬೇಕು , ನಾಮಫಲಕಗಳಲ್ಲಿ ಕನ್ನಡ ಭಾಷೆಯಲ್ಲಿ ಇರಬೇಕು ರಾಜ್ಯ ಸರ್ಕಾರ ಕನ್ನಡಿಗರಿಗೆ ಉದ್ಯೋಗ , ಸರ್ಕಾರ ಸೌಲಭ್ಯಗಳಿಗೆ ಕನ್ನಡಿಗರಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ಬೆಂಗಳೂರಿನಲ್ಲಿ ಇಮ್ಮಡಿ ಪುಲಕೇಶಿ ಪ್ರತಿಮೆ ಸ್ಥಾಪನೆ, ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರ ಹೆಸರಿನಲ್ಲಿ ಅಧ್ಯಯನ ಪೀಠ, ರಾಷ್ಟಕವಿ ಕುವೆಂಪು ಸಮಗ್ರ ಸಾಹಿತ್ಯ,ಬದುಕು ರಾಷ್ಟೀಯ ಉತ್ಸವ ಎಂದು ಹೇಳಿದರು.

ಶೈಲಜ ಎ.ಸೋಮಣ್ಣರವರು ಮಾತನಾಡಿ, ಕನ್ನಡ , ಕನ್ನಡಿಗ ಉಳಿಯಬೇಕು ಎಂದರೆ ಪ್ರತಿಯೊಬ್ಬರು ಮನೆಗಳಲ್ಲಿ ಕನ್ನಡ ಭಾಷೆ ಬಳಸಬೇಕು ಮತ್ತು ಆಡಳಿತ ವ್ಯವಹಾರ ಸಹ ಸಂಪೂರ್ಣ ಕನ್ನಡ ಬಳಸಬೇಕು ಆಗ ಮಾತ್ರ ಮಾತೃ ಭಾಷೆ ಉಳಿಯಲು ಸಾಧ್ಯ ಎಂದರು.

ಇಂದಿನ ಯುವಕರು ವಿದೇಶಿ ಭಾಷೆಗೆ ಅತಿಯಾದ ವ್ಯಾಮೋಹ ಬೇಡ. ಮಾತೃ ಭಾಷೆಗೆ ಗೌರವಿಸಿ ಎಂದು ಹೇಳಿದರು.

ಮಲ್ಲೇಪುರಂ ಜಿ.ವೆಂಕಟೇಶ್ ಮಾತನಾಡಿ 21ಶತಮಾನದಲ್ಲಿ ಕನ್ನಡ ಭಾಷೆ ಉಳಿಸಲು ಆಂಗ್ಲ ಭಾಷೆ ಮತ್ತು ಅನ್ಯ ಭಾಷೆಗಳ ನಡುವೆ ಕನ್ನಡ ಭಾಷೆ ಉಳಿಸಲು ಹೋರಾಟ ಮಾಡಬೇಕಿದೆ. ಕನ್ನಡದಲ್ಲಿ ಪಂಪನಿಂದ ಹಂಪವರಗೆ ವೈವಿಧ್ಯಮಯ ಕನ್ನಡ ಭಾಷೆ ನೋಡಬಹುದು.ಕನ್ನಡ ಭಾಷೆ ಸಂವರ್ಧನೆ ,ವಿಸ್ತರಣೆಯಾದರೆ ಮಾತ್ರ ಭಾಷೆ ಉಳಿಯುತ್ತದೆ ಎಂಧು ಅಭಿಪ್ರಾಯ ಪಟ್ಟರು.

ಚಲನಚಿತ್ರ ನಿರ್ಮಾಪಕ ಸುರೇಶ್, ಶಿಕ್ಷಣ ತಜ್ಞ ದೊಡ್ಡರಸಿನಕೆರೆ ಮಾಯಪ್ಪ, ಸಾಹಿತಿ ಸುಜಾತ, ಆಡಳಿತ ಕ್ಷೇತ್ರ ಶೋಭಾ, ವಾಣಿಜ್ಯ ಕ್ಷೇತ್ರ ಗೀತಾ, ಮಾಧ್ಯಮ ಕ್ಷೇತ್ರ ಶಿವಕುಮಾರ್ ಬೆಳ್ಳಿ ತಟ್ಟೆ , ಪರಿಸರ ಕ್ಷೇತ್ರ ಸತ್ಯನಾರಾಯಣ, ಸಂಘಟನಾ ಕ್ಷೇತ್ರ ಮೋಹನ್ ಕುಮಾರ್, ಸಮಾಜ ಸೇವೆ ರಾಮಾಂಜಿನಿ ಮತ್ತಿತರರಿಗೆ ಕನ್ನಡ ನುಡಿ ಸಮ್ಮೇಳನದಲ್ಲಿ ಸನ್ಮಾನಿಸಲಾಯಿತು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ.ವೂಡೇ ಪಿ.ಕೃಷ್ಣ, ಅಧ್ಯಕ್ಷ ಸುರೇಶ್ ಜೀವನ್ಮುಖಿರವರು ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಕನ್ನಡ ನುಡಿ ಸಮ್ಮೇಳನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವಿಶ್ವ ವಾರಿಧಿ
ಕನ್ನಡ ದಿನಪತ್ರಿಕೆ
VISHWA VAARIDHI KANNADA DAILY
BANGALORE OFFICE
NO.04, CHIGURU BUILDING
GROUND FLOOR, 1st Cross,
VIDANASOUDHA LAYOUT
BANGALORE-560054
vishwavaaridhi@gmail.com
vishwaVaaridhi

ವಿದ್ಯಾ ವಿನಯ ಸಂಪನ್ನ- ಅಧ್ಯಯನಶೀಲತೆಗೊಂದು ಮಾದರಿ



ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ನಾಡೋಜ ಡಾ.ಮನು ಬಳಿಗಾರ್ ಕಾರ್ಯಕ್ರಮ ಉದ್ಘಾಟಿಸಿದರು. ಸಮಾರಂಭದಲ್ಲಿ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಲೆ ಪುಟ್ಟಸ್ವಾಮಯ್ಯ ಮತ್ತು ತಂಡದವರು ಪ್ರೋ .ಮಲ್ಲೇಪುರಂ ರವರನ್ನು ಅತ್ಮೀಯವಾಗಿ ಅಭಿನಂದಿಸಿದರು.

ಬೆಂಗಳೂರು

ಸಾರ್ಥಕ 70 ಸಂವತ್ಸರ ಕಂಡಿರುವ ಹಿರಿಯ ವಿದ್ವಾಂಸ ಪ್ರೊ.ಮಲ್ಲೇಪುರಂ ಜಿ ವೆಂಕಟೇಶ ಈ ನಾಡು ಕಂಡ ಬಹುಮುಖ ಪ್ರತಿಭಾಸಂಪನ್ನರು. ಕನ್ನಡ – ಸಂಸ್ಕೃತ ಎರಡರಲ್ಲೂ ಸಮತೋಲಿತ ಬರಹದ ಸಾಹಿತ್ಯಯಾತ್ರೆ 45 ವರ್ಷ ಕಂಡಿದೆ.

ಹಲವಾರು ಪ್ರಕಾಶಕರು ಇವರ ಪುಸ್ತಕಗಳನ್ನು ಹೆಮ್ಮೆಯಿಂದ 90ಕ್ಕೂ ಅಧಿಕ ಗ್ರಂಥಗಳನ್ನು ಪ್ರಕಟಿಸಿರುವುದೇ ಇವರ ಅಜಾತಶತ್ರುತ್ವಕ್ಕೆ ದ್ಯೋತಕ ಎಂದು ನಗರದ ನಯನ ಸಭಾಂಗಣದಲ್ಲಿ ಪ್ರೋ ಮಲ್ಲೇಪುರಂ ಜಿ ವೆಂಕಟೇಶ 70 ಅಭಿನಂದನಾ ಸಮಿತಿ ಮತ್ತು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ವತಿಯಿಂದ ಆಯೋಜಿಸಿದ್ದ ಪ್ರೋ ಮಲ್ಲೇಪುರಂ ಗ್ರಂಥ ಪ್ರಕಟಣೆಯ ನಲ್ವತ್ತೈದು ವರ್ಷಗಳ ಯಾನದ ನೆನಪು; ಪ್ರಕಾಶಕ– ಮುದ್ರಕರ ಸ್ನೇಹ ಸಮ್ಮಿಲನ ಮತ್ತು ಗೌರವಾರ್ಪಣೆಯ ಅಧ್ಯಕ್ಷತೆ ವಹಿಸಿದ್ದ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ನಾಡೋಜ ಡಾ.ಮನು ಬಳಿಗಾರ್ ಕಾರ್ಯಕ್ರಮ ಉದ್ಘಾಟಿಸಿದರು.

ಸಮಾರಂಭದಲ್ಲಿ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಲೆ ಪುಟ್ಟಸ್ವಾಮಯ್ಯ ಮತ್ತು ತಂಡದವರು ಪ್ರೋ .ಮಲ್ಲೇಪುರಂ ರವರನ್ನು ಅತ್ಮೀಯವಾಗಿ ಅಭಿನಂದಿಸಿದರು.

ಹಿರಿಯ ಪ್ರಕಾಶಕರಾದ ಮೈಸೂರಿನ ತ.ವೆಂ.ವೆಂ ಸ್ಮಾರಕ ಗ್ರಂಥಮಾಲೆಯ ಟಿ.ಎಸ್.ಛಾಯಾಪತಿ, ಇಸ್ಕಾನ್ ಟಚ್‌ಸ್ಟೋನ್ ಫೌಂಡೇಷನ್‌ನ ಕುಲಶೇಖರ ಚೈತನ್ಯ ದಾಸ್ ಮೊದಲಾದವರಿಗೆ ಗೌರವಾರ್ಪಣೆ ನಡೆಯಿತು.

ಕರ್ನಾಟಕ ರಾಜ್ಯ ಮುದ್ರಣಕಾರರ ಸಂಘದ ಅಧ್ಯಕ್ಷ, ಲಯನ್ ಬಿ.ಆರ್ .ಅಶೋಕ ಕುಮಾರ್, ಅಭಿನಂದನಾ ಸಮಿತಿಯ ಡಾ.ಕೆ.ಟಿ.ಲಕ್ಷ್ಮೀನಾರಾಯಣಪ್ಪ, ಡಾ.ಪ್ರಕಾಶ್ ಆರ್ ಪಾಗೋಜಿ, ಡಾ.ಸಂತೋಷ್. ಹಾನಗಲ್ ಉಪಸ್ಥಿತರಿದ್ದರು.

ವಿಶ್ವವಾಣಿ
02.12.2021 ಗುರುವಾರ
vishwavani.news



ನಯನ ಸಭಾಂಗಣದಲ್ಲಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ 70 ಅಭಿನಂದನಾ ಸಮಿತಿ ಮತ್ತು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ವತಿಯಿಂದ ಕಾರ್ಯಕ್ರಮದಲ್ಲಿ ಹಿರಿಯ ಪ್ರಕಾಶಕರಾದ ಮೈಸೂರಿನ ಟಿ.ಎಸ್.ಛಾಯಾಪತಿ , ಇಸ್ಕಾನ್ ಟಚ್‌ಸ್ಟೋನ್ ಫೌಂಡೇಷನ್‌ನ ಕುಲಶೇಖರ ಚೈತನ್ಯ ದಾಸ್ ಸೇರಿದಂತೆ ಮೊದಲಾದವರಿಗೆ ಗೌರವಾರ್ಪಣೆ ಮಾಡಲಾಯಿತು. ಈ ವೇಳೆ ಕರ್ನಾಟಕ ರಾಜ್ಯ ಮುದ್ರಣಕಾರರ ಸಂಘದ ಅಧ್ಯಕ್ಷ ಲಯನ್ ಬಿ.ಆರ್. ಅಶೋಕ ಕುಮಾರ್, ಅಭಿನಂದನಾ ಸಮಿತಿಯ ಡಾ.ಕೆ.ಜಿ.ಲಕ್ಷ್ಮೀನಾರಾಯಣಪ್ಪ, ಡಾ. ಪ್ರಕಾಶ್ ಆರ್.ಪಾಗೋಜಿ, ಡಾ. ಸಂತೋಷ್ ಹಾನಗಲ್, ಕಸಾಪ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಇದ್ದರು.

ಪ್ರಜಾವಾಣಿ
ಗುರುವಾರ • ಡಿಸೆಂಬರ್ 2, 2021



ಯಾನದ ನೆನಪು

ಮಲ್ಲೇಪುರಂ ಜಿ.ವೆಂಕಟೇಶ್–70 ಅಭಿನಂದನಾ ಸಮಿತಿ ಹಾಗೂ ಕರ್ನಾಟಕ ಕನ್ನಡ ಬರಹಗಾರರು ಮತ್ತು ಪ್ರಕಾಶಕರ ಸಂಘವು ನಯನ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 'ಮಲ್ಲೇಪುರಂ ಗ್ರಂಥ ಪ್ರಕಟಣೆಯ 45 ವರ್ಷಗಳ ಯಾನದ ನೆನಪು' ಕಾರ್ಯಕ್ರಮದಲ್ಲಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು. ಮನು ಬಳಿಗಾರ್, ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಕಾರ್ಯದರ್ಶಿ ದೊಡ್ಡೇಗೌಡ, ಸಿವಿಜಿ ಪ್ರಕಾಶನದ ಸಿವಿಜಿ ಚಂದ್ರು, ರಾಜ್ಯ ಮುದ್ರಣಕಾರರ ಸಂಘದ ಅಧ್ಯಕ್ಷ ಬಿ.ಆರ್.ಅಶೋಕ್ ಕುಮಾರ್, ಸಮಿತಿ ಅಧ್ಯಕ್ಷ ಕೆ.ಜಿ.ಲಕ್ಷ್ಮೀನಾರಾಯಣಪ್ಪ, ವೂಡೇ ಪಿ.ಕೃಷ್ಣ ಹಾಗೂ ಇತರರು ಇದ್ದರು –ಪ್ರಜಾವಾಣಿ ಚಿತ್ರ

ಬಾಗಲಕೋಟೆಯ ಮೇಘ ಮೈತ್ರಿ ಕನ್ನಡ ಮತ್ತು ಸಾಹಿತ್ಯ ವೇದಿಕೆಯ ವತಿಯಿಂದ ಕನ್ನಡ ರಾಜ್ಯೋತ್ಸವ, 'ಮೇಘಮೈತ್ರಿ ರಾಜ್ಯೋತ್ಸವ ಪುರಸ್ಕಾರ'

ಬೆಂಗಳೂರಿನ ಬಹುತೇಕ ವಾತಾವರಣದಲ್ಲಿ ಕನ್ನಡ ಮಾತನಾಡದಿರುವ ಸ್ಥಿತಿ ನಿರ್ಮಾಣವಾಗಿದೆ. ಬೆಂಗಳೂರಿನ ಕನ್ನಡ ಸಂಘ-ಸಂಸ್ಥೆಗಳು ಈ ರಾಜ್ಯೋತ್ಸವ ಆಚರಿಸುವುದರ ಜೊತೆಗೆ ಕನ್ನಡ ಹೇಳಿಕೊಡುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇಂತಹ ಕಾರ್ಯಗಳಲ್ಲಿ ಡಾ. ಸಿಸಿರಾ ಅವರ ಸಹಾಯ ಸಹಕಾರ ಪಡೆದುಕೊಳ್ಳಲಿ ಎಂದು ಖ್ಯಾತ ಶಿಕ್ಷಣ ತಜ್ಞರಾದ ಡಾ. ಗೀತಾ ರಾಮಾನುಜಂ ಸಲಹೆ ನೀಡಿದರು. ಅವರು ಬೆಂಗಳೂರಿನ ಗಾಂಧೀ ಭವನದಲ್ಲಿ ಬಾಗಲಕೋಟೆಯ ಮೇಘ ಮೈತ್ರಿ ಸಾಹಿತ್ಯ ವೇದಿಕೆಯು ಆಯೋಜಿಸಿದ್ದ ಸಾಧಕರಿಗೆ ಗೌರವಾಭಿನಂದನೆ ಮತ್ತು ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು. ಕವಿ ಪ್ರಾಧ್ಯಾಪಕ ಸಿಸಿರಾ ಅವರು ಪಿಹೆಚ್.ಡಿ ಪದವಿ ಪಡೆದ ಈ ಸಂದರ್ಭದಲ್ಲಿ ಅವರಿಗೆ ಮೇಘಮೈತ್ರಿ ಸಂಸ್ಥೆಯವರು ಸಿಸಿರಾ ಅವರ ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪರಿಚಾರಕೆಗಾಗಿ ೨೦೨೧ರ ಸಾಲಿನ ರಾಜ್ಯೋತ್ಸವ ಪುರಸ್ಕಾರ ನೀಡಿ ಗೌರವಿಸಿರುವುದು ಸಾರ್ಥಕವಾದ ಕಾರ್ಯ ಮಾಡಿ ಸಂಸ್ಥೆ ತನ್ನ ಗೌರವ ಹೆಚ್ಚಿಸಿಕೊಂಡಿದೆ ಜೊತೆಗೆ ಸಿಸಿರಾ ಯುವ ಸಮುದಾಯದ ಏಳಿಗೆಗಾಗಿ ಸದಾ ತಮ್ಮನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವುದಲ್ಲದೆ ಗಾಂಧೀ ಚಿಂತನೆಗಳನ್ನು ಯುವಜನರಲ್ಲಿ ಪಸರಿಸುವ ಕೆಲಸದಲ್ಲಿ ತೊಡಗಿಸಿಕೊಂಡು ಇಂದಿನ ಸಮುದಾಯಕ್ಕೆ ಮಾದರಿಯಾಗಿದ್ದಾರೆ ಎಂದರು. ಗಾಂಧೀ ಭವನದ ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಮಾತನಾಡಿ ಯಾರಿಂದಲೂ ಏನನ್ನೂ ಬಯಸದೆ ನಮ್ಮ ನಮ್ಮ ಕೆಲಸಗಳಲ್ಲಿ ತೊಡಗಿಕೊಂಡರೆ ಇಂದಲ್ಲ ನಾಳೆ ಈ ಸಮಾಜ ಗುರುತಿಸಿ ಗೌರವಿಸುತ್ತದೆ. ಇದಕ್ಕೆ ಉದಾಹರಣೆ ಡಾ. ಸಿಸಿರಾ ಎಂದರು. ರಾಜ್ಯೋತ್ಸವ ರಾಜ್ಯದ ಉತ್ಸವ ಆಗಬೇಕು, ಕನ್ನಡದ ಪ್ರಜ್ಞೆಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಹಿರಿಯರು ಇಂದಿನ ಪೀಳಿಗೆಗೆ ಮುಟ್ಟಿಸುವ ತುರ್ತು ಮತ್ತು ಅನಿವಾರ್ಯ ಆಗಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಈ ನಾಡಿನ, ತಾಯ ಋಣ ತೀರಿಸುವ ಜವಾಬ್ದಾರಿ ಹೊರಬೇಕು ಎಂದರು. ಸಮಾಜ ಸೇವಕರಾದ ಎಂ. ತಿಮ್ಮಯ್ಯನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸನ್ಮಾನ ಸ್ವೀಕರಿಸಿ ಡಾ. ಸಿಸಿರಾ ಈ ಸನ್ಮಾನ ಗೌರವವನ್ನು ತಮ್ಮ ತಂದೆ ತಾಯಿ ಹಾಗೂ ವಿದ್ಯೆ ಕಲಿಸಿದ ಗುರುಗಳಿಗೆ ಸಲ್ಲಬೇಕೆಂದರು.. ಸಾಹಿತ್ಯ ಸಂಘಟನೆ ಇವತ್ತು ಕಷ್ಟದ ಕೆಲಸ, ಅವರಿಗೆ ವೇದಿಕೆಯಲ್ಲಿ ಹೊಗಳಿಕೆಯೇ ಮಾನದಂಡವಾಗುತ್ತಿದೆ. ಅದರಲ್ಲಿ ಅವರ ಹೊಟ್ಟೆ ತುಂಬಲಾರದು. ಸಂಘಟನೆಯ ನೋವು ಸಂಕಟವನ್ನು ಸಮಾಜ, ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಇದೇ ಸಂದರ್ಭದಲ್ಲಿ ಡಾ. ರಮೇಶ್, ಡಾ. ಕೃಷ್ಣ ಹಾನ್ ಬಾಳ್, ಡಾ. ಲಲಿತಾ ಹೊಸಪ್ಯಾಟಿ, ಡಾ. ಕೆ.ಸಿ. ಮುನಿಯಪ್ಪ ಮುಂತಾದ ಸಾಧಕರಿಗೆ ಸನ್ಮಾನಿಸಲಾಯಿತು.



ಬಾಗಲಕೋಟೆಯ ಮೇಘ ಮೈತ್ರಿ ಕನ್ನಡ ಮತ್ತು ಸಾಹಿತ್ಯ ವೇದಿಕೆಯ ವತಿಯಿಂದ 'ಮೇಘಮೈತ್ರಿ ರಾಜ್ಯೋತ್ಸವ ಪುರಸ್ಕಾರ'ವನ್ನು ಖ್ಯಾತ ಶಿಕ್ಷಣ ತಜ್ಞರಾದ ಡಾ. ಗೀತಾ ರಾಮಾನುಜಂ ಅವರು ಕವಿ, ಪ್ರಾಧ್ಯಾಪಕ ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ) ಅವರಿಗೆ ಗಾಂಧೀ ಭವನದಲ್ಲಿ ಪ್ರದಾನ ಮಾಡಿದರು. ಗಾಂಧೀ ಭವನದ ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ. ಕೃಷ್ಣ, ಸಮಾಜ ಸೇವಕರಾದ ಎಂ. ತಿಮ್ಮಯ್ಯ ಮುಂತಾದವರು ಚಿತ್ರದಲ್ಲಿದ್ದಾರೆ.

ಕವಿಗೋಷ್ಠಿಯಲ್ಲಿ ಕೆ.ಎಂ. ರೇವಣ್ಣ, ಸುಜಾತ ಸತ್ಯನಾರಾಯಣ, ಮೌಲಾಲಿ ಬೋರಗಿ, ಎಂ.ಆರ್. ಉಪೇಂದ್ರ ಕುಮಾರ್, ಎಂ.ಎಸ್. ದಿವ್ಯಶ್ರೀ, ಅಂಬರೀಷ್ ಪಾಂಡವಪುರ, ಹೆಚ್.ಕೆ. ರಾಜೇಶ್ವರಿ ಸ್ವರಚಿತ ಕವಿತೆಗಳನ್ನು ವಾಚಿಸಿದರು.

ವೇದಿಕೆಯಲ್ಲಿ ಸಂಸ್ಥಾಪಕ ರಮೇಶ್ ಎಂ. ಕಮತಗಿ ಪ್ರಾಸ್ತಾವಿಕ ಮಾತುಗಳನ್ನಾಡಿ ಎಲ್ಲರನ್ನೂ ಸ್ವಾಗತಿಸಿದರು.

ಕನ್ನಡಪರ ಹೋರಾಟಗಾರರಾದ ಹನುಮಂತರಾಯ, ವಾಸುದೇವ್ ಹೊಸಳ್ಳಿ, ಡಾ. ಆರ್. ವಾದಿರಾಜು, ವಿಜಯಸಮರ್ಥ, ಗಾಯಕರಾದ ಭೀಮ್ ಜಿ, ಮಹದೇವಪ್ಪ ಮುಂತಾದವರಿದ್ದರು.

ಈ ಸಂಜೆ

ಸೋಮವಾರ
29 ನವೆಂಬರ್ 2021



ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಡಾ. ಕೆ.ಪಿ. ಪುತ್ತೂರಾಯರು ಉದ್ಘಾಟಿಸಿದರು. ಸಂಸ್ಥೆ ಅಧ್ಯಕ್ಷ ಎನ್. ಆರ್. ಪಂಡಿತಾರಾಧ್ಯ, ನಾಡೋಜ ವೂಡೇ ಪಿ.ಕೃಷ್ಣ, ಪಾರ್ಥಸಾರಥಿ, ನಾರಾಯಣ, ಪ್ರೊ. ಆರ್. ಮಹಾಲಕ್ಷ್ಮಿ, ಪರಮಶಿವಯ್ಯ ಉಪಸ್ಥಿತರಿದ್ದರು.

ನಗರ ವಾರ್ತೆಗಳು


28.11.2021 ಭಾನುವಾರ
vishwavani.news



ಪದ್ಮಶ್ರೀ ಕಲಾಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಂಗ ನಟ ಬಿ.ಎಸ್.ಚಂದ್ರಶೇಖರ್ ಅವರ ಕುಂಚಟಿಗರ ಬೆಳ್ಳೇನೋರ ವೀರ ರಂಗಪ್ಪ ಮತ್ತವರ ವಂಶವೃಕ್ಷ ಕುಂಚಟಿಗರ ಸಾಂಸ್ಕೃತಿಕ ಮಾಹಿತಿಗಳು ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು. ಗಾಂಧಿ ಭವನದ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ, ಕುವೆಂಪು ಕಲಾನಿಕೇತನದ ಅಧ್ಯಕ್ಷ ಕುವೆಂಪು ಪ್ರಕಾಶ್ ಇದ್ದರು.

ಉದಯವಾಣಿ ಬೆಂಗಳೂರು
ಭಾನುವಾರ, ನವೆಂಬರ್ 28, 2021

ಕೆಂಪೇಗೌಡರ ದೂರದೃಷ್ಟಿಯಿಂದ ನಗರ ಅಭಿವೃದ್ಧಿ



ಬೆಂಗಳೂರು: ನಾಡಪ್ರಭು ಕೆಂಪೇಗೌಡ ಅವರ ದೂರದೃಷ್ಟಿಯಿಂದ ಬೆಂಗಳೂರನ್ನು ಅಭಿವೃದ್ಧಿ ಪಡಿಸಿರುವುದರ ಜತೆಗೆ ಸುತ್ತಮುತ್ತಲು ಕರೆಗಳನ್ನು ನಿರ್ಮಿಸಿದ್ದರು. ಆದರೆ ಇಂದು ಆ ಕೆರೆಗಳನ್ನು ಒತ್ತುವರಿದಾರರು ಕಬಳಿಸಿದ್ದಾರೆ ಎಂದು ಬಸವನಗುಡಿ ಶಾಸಕ ರವಿ ಸುಬ್ರಹ್ಮಣ್ಯ ಎಲ್.ಎ. ಬೇಸರ ವ್ಯಕ್ತಪಡಿಸಿದರು.

ಶನಿವಾರ ನಯನ ಸಭಾಂಗಣದಲ್ಲಿ ಬಿ.ಎಸ್. ಚಂದ್ರಶೇಖರ್ ರಚಿಸಿದ ಕುಂಚಿಟಿಗರ ಬೆಳ್ಳೇನೋರ ವೀರ ರಂಗಪ್ಪ ಮತ್ತವರ ವಂಶವೃಕ್ಷ ಕುಂಚಿಟಿಗರ ಸಾಂಸ್ಕೃತಿಕ ಮಾಹಿತಿಗಳ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ವಿಶ್ವಕ್ಕೆ ತನ್ನದೇ ಆದ ಕೊಡುಗೆ ನೀಡುವ ಮೂಲಕ ಹೊಸ ಚಾಪು ಮೂಡಿಸಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಮ್ಮಯ್ಯ ಅವರನ್ನು ಗೌರವಿಸಲಾಯಿತು. ಬಿ.ಎಸ್. ಚಂದ್ರಶೇಖರ್ ರಚಿಸಿದ ಕುಂಚಿಟಿಗರ ಬೆಳ್ಳೇನೋರ ವೀರ ರಂಗಪ್ಪ ಮತ್ತವರ ವಂಶವೃಕ್ಷ ಕುಂಚಿಟಿರ ಸಾಂಸ್ಕೃತಿಕ ಮಾಹಿತಿಗಳ ಪುಸ್ತಕವನ್ನು ಕಸಾಪ ನಿಕಟ ಪೂರ್ವ ಅಧ್ಯಕ್ಷ ಸಿ.ಕೆ. ರಾಮೇಗೌಡ ಲೋಕಾರ್ಪಣೆಗೊಳಿಸಿದರು.

ಶನಿವಾರ
27 ನವೆಂಬರ್, 2021



ಪದ್ಮಶ್ರೀ ಕಲಾ ಸಂಘ ನಯನ ಸಭಾಂಗಣದಲ್ಲಿಂದು ಹಮ್ಮಿಕೊಂಡಿದ್ದ 4ನೆ ವರ್ಷದ ವಾರ್ಷಿಕೋತ್ಸವ ಹಾಗೂ ರಂಗ ನಟ, ನಿರ್ದೇಶಕ, ಬಿ.ಎಸ್. ಚಂದ್ರಶೇಖರ್ ರಚಿಸಿರುವ ಕುಂಚಿಟಿಗರ ಬೆಳ್ಳೇನೋರ ವೀರ ರಂಗಪ್ಪ ಮತ್ತವರ ವಂಶವೃಕ್ಷ ಕುಂಚಿಟಿಗರ ಸಾಂಸ್ಕೃತಿಕ ಮಾಹಿತಿಗಳನ್ನು ಒಳಗೊಂಡ ಕೃತಿಯನ್ನು ಶಾಸಕ ರವಿ ಸುಬ್ರಹ್ಮಣ್ಯ , ಗಾಂಧಿ ಭವನದ ಅಧ್ಯಕ್ಷ ಡಾ.ವೂಡೆ.ಪಿ.ಕೃಷ್ಣ , ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ಬಿಡುಗಡೆ ಮಾಡಿದರು. ರಾಜ್ಯ ಒಕ್ಕಲಿಗರ ಒಕ್ಕೂಟ ಟ್ರಸ್ಟ್‌ನ ರಾಜ್ಯಾಧ್ಯಕ್ಷ ಸಿ.ವಿ.ದೇವರಾಜ್, ರಂಗಕರ್ಮಿ ನಾಗೇಂದ್ರ ಪ್ರಸಾದ್ , ಬಿಬಿಎಂಪಿ ಮಾಜಿ ಸದಸ್ಯ ಎಸ್.ಅನಿಲ್‌ಕುಮಾರ್ ಮತ್ತಿತರರು ಹಾಜರಿದ್ದರು.

ಸಂಜೆವಾಣಿ


ಬೆಂಗಳೂರು

ಶನಿವಾರ 27 ನವೆಂಬರ್ 2021



ನಗರದ ನಯನ ಸಭಾಂಗಣದಲ್ಲಿ ಪದ್ಮಶ್ರೀ ಕಲಾಸಂಘ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕುಂಚಿಟಿಗರ ಬೆಳ್ಳೆನೋರ ವೀರ ರಂಗಪ್ಪ ಮತ್ತವರ ವಂಶವೃಕ್ಷ ಕುಂಚಿಟಿಗರ ಸಾಂಸ್ಕೃತಿಕ ಮಾಹಿತಿಗಳ ಪುಸ್ತಕವನ್ನು ಶಾಸಕ ಎಲ್.ಎ. ರವಿಸುಬ್ರಮಣ್ಯ ಲೋಕಾರ್ಪಣೆ ಮಾಡಿದರು. ಸಿ.ಕೆ. ರಾಮೇಗೌಡ, ನಾಡೋಜ ಡಾ. ವೂಡೆ ಪಿ. ಕೃಷ್ಣ, ಎಸ್. ಅನಿಲ್ ಕುಮಾರ್, ಸಿ.ವಿ. ದೇವರಾಜ್. ಕುವೆಂಪು ಪ್ರಕಾಶ್, ಬಿ.ಎಸ್. ಚಂದ್ರಶೇಖರ್ ಇದ್ದಾರೆ.

ಕನ್ನಡಪ್ರಭ
ಸೋಮವಾರ 15.11.2021



'ದಾರಿದೀಪ' ಕೃತಿ ಲೋಕಾರ್ಪಣೆ

'ಚಾರುಮತಿ ಪ್ರಕಾಶನ' ಸಂಸ್ಥೆ ವತಿಯಿಂದ ಭಾನುವಾರ ಕೆಂಗೇರಿಯಲ್ಲಿ ನಡೆದ ಸಮಾರಂಭದಲ್ಲಿ ಸಾಮಾಜಿಕ ಚಿಂತಕ ಮ.ವೆಂಕಟರಾಮು ಅವರು ಲೇಖಕ ಸುಬ್ರಹ್ಮಣ್ಯ ನಾಡಿಗೇರ್ ವಿರಚಿತ 'ದಾರಿದೀಪ' ಕೃತಿ ಬಿಡುಗಡೆಗೊಳಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ, ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ಪ್ರಕಾಶಕ ಬಿ.ಎಸ್. ವಿದ್ಯಾರಣ್ಯ, ಶ್ರೀಕೃಷ್ಣ ಗ್ರ್ಯಾಂಡ್ ಹೋಟೆಲ್ ಮಾಲೀಕ ಪ್ರತಾಪ್ ಶೆಟ್ಟಿ ಮತ್ತಿತರರು ಇದ್ದರು.



'ದಾರಿದೀಪ' ಕೃತಿ ಲೋಕಾರ್ಪಣೆ

'ಬಾಹುಮತಿ ಪ್ರಕಾಶನ' ಸಂಸ್ಥೆ ವತಿಯಿಂದ ಭಾನುವಾರ ಕೆಂಗೇರಿಯಲ್ಲಿ ನಡೆದ ಸಮಾರಂಭದಲ್ಲಿ ಸಾಮಾಜಿಕ ಚಿಂತಕ ಮ.ವೆಂಕಟರಾಮು ಅವರು ಲೇಖಕ ಸುಬ್ರಹ್ಮಣ್ಯ ನಾಡಿಗೇರ್ ವಿರಚಿತ 'ದಾರಿದೀಪ' ಕೃತಿ ಬಿಡುಗಡೆಗೊಳಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ, ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ಪ್ರಕಾಶಕ ಬಿ.ಎಸ್. ವಿದ್ಯಾರಣ್ಯ, ಶ್ರೀಕೃಷ್ಣ ಗ್ರ್ಯಾಂಡ್ ಹೋಟೆಲ್ ಮಾಲೀಕ ಪ್ರತಾಪ್ ಶೆಟ್ಟಿ ಮತ್ತಿತರರು ಇದ್ದರು.




ಲೋಕಾರ್ಪಣೆ...

ಕೆಂಗೇರಿ ಉಪನಗರದಲ್ಲಿ ಶ್ರೀ ಕೃಷ್ಣ ಗ್ರ್ಯಾಂಡ್ ಸಭಾಂಗಣದಲ್ಲಿ ಸುಬ್ರಮಣ್ಯ ನಾಡಿಗೇರ್ ಅವರು ಬರೆದಿರುವ ದಾರಿದೀಪ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಯು.ಬಿ.ವೆಂಕಟೇಶ್, ಲೇಖಕರಾದ ಸುಬ್ರಮಣ್ಯ ನಾಡಿಗೇರ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ ಕೃಷ್ಣ, ಹಿರಿಯ ಪತ್ರಕರ್ತ ಸುಧೀಂದ್ರ ರಾವ್, ಮುರಳಿ ಹಾಗೂ ಶ್ರೀ ಕೃಷ್ಣ ಗ್ರ್ಯಾಂಡ್ ಹೋಟೆಲ್ ಮಾಲೀಕರಾದ ಪ್ರತಾಪ್ ಶೆಟ್ಟಿ ಇದ್ದಾರೆ.

VIJAYAVANI · BENGALURU

ಸೋಮವಾರ 15 ನವೆಂಬರ್ 2021
15 NOVEMBER 2021



ವಿಜಯವಾಣಿ ಚಿತ್ರಗಳು

ಕೆಂಗೇರಿ ಉಪನಗರದ ಹೋಟೆಲ್‌ನಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುಬ್ರಹ್ಮಣ್ಯ ನಾಡಿಗೇರ್ ಅವರ 'ದಾರಿದೀಪ' ಪುಸ್ತಕವನ್ನು ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಲೋಕಾರ್ಪಣೆ ಮಾಡಿದರು. ವಿಧಾನ ಪರಿಷತ್ ಸದಸ್ಯ ಯು. ಬಿ. ವೆಂಕಟೇಶ್, ಪ್ರಕಾಶಕ ವಿದ್ಯಾರಣ್ಯ ಇದ್ದರು.

ಸೋಮವಾರ • ನವೆಂಬರ್ 15, 2021 ಪ್ರಜಾವಾಣಿ



'ಚಾರುಮತಿ ಪ್ರಕಾಶನ' ಹೊರತಂದಿರುವ ಲೇಖಕ ಸುಬ್ರಹ್ಮಣ್ಯ ನಾಡಿಗೇರ್ ಅವರ 'ದಾರಿದೀಪ' ಪುಸ್ತಕವನ್ನು ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಡಾ. ವೂಡೇ ಪಿ. ಕೃಷ್ಣ ನಗರದಲ್ಲಿ ಭಾನುವಾರ ಬಿಡುಗಡೆ ಮಾಡಿದರು. ವಿಧಾನ ಪರಿಷತ್ ಸದಸ್ಯ ಯು. ಬಿ. ವೆಂಕಟೇಶ್, ಚಿಂತಕ ಮಾ. ವೆಂಕಟರಾಮು, ಪ್ರಕಾಶಕ ಬಿ.ಎಸ್. ವಿದ್ಯಾರಣ್ಯ ಚಿತ್ರದಲ್ಲಿದ್ದಾರೆ —ಪ್ರಜಾವಾಣಿ ಚಿತ್ರಗಳು

ಉದಯಕಾಲ
ಸೋಮವಾರ, ನವೆಂಬರ್ 15, 2021



ಚಾರುಮತಿ ಪ್ರಕಾಶನ ಹೊರತಂದಿರುವ ದಾರಿದೀಪ ಪುಸ್ತಕವನ್ನು ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಲೋಕಾರ್ಪಣೆ ಮಾಡಿದರು. ಸಾಮಾಜಿಕ ಚಿಂತಕ ಮಾ. ವೆಂಕಟರಾಮು, ವಿಧಾನ ಪರಿಷತ್ ಸದಸ್ಯರಾದ ಯು. ಬಿ. ವೆಂಕಟೇಶ್, ಸಂಸ್ಕೃತ ವಿದ್ವಾನ್ ರಾಮಕೃಷ್ಣಮೂರ್ತಿ, ಲೇಖಕ ಸುಬ್ರಹ್ಮಣ್ಯ ನಾಡಿಗೇರ್, ಪ್ರಕಾಶಕ ವಿದ್ಯಾರಣ್ಯ, ಪ್ರತಾಪ್ ಶೆಟ್ಟಿ ಉಪಸ್ಥಿತರಿದ್ದರು.


ಪ್ರಜಾವಾಣಿ ಸೋಮವಾರ • ನವೆಂಬರ್ 15, 2021



'ಚಾರುಮತಿ ಪ್ರಕಾಶನ' ಹೊರತಂದಿರುವ ಲೇಖಕ ಸುಬ್ರಹ್ಮಣ್ಯ ನಾಡಿಗೇರ್ ಅವರ 'ದಾರಿದೀಪ' ಪುಸ್ತಕವನ್ನು ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಡಾ. ವೂಡೇ ಪಿ. ಕೃಷ್ಣ ನಗರದಲ್ಲಿ ಭಾನುವಾರ ಬಿಡುಗಡೆ ಮಾಡಿದರು. ವಿಧಾನ ಪರಿಷತ್ ಸದಸ್ಯ ಯು. ಬಿ. ವೆಂಕಟೇಶ್, ಚಿಂತಕ ಮಾ. ವೆಂಕಟರಾಮು, ಪ್ರಕಾಶಕ ಬಿ.ಎಸ್. ವಿದ್ಯಾರಣ್ಯ ಚಿತ್ರದಲ್ಲಿದ್ದಾರೆ —ಪ್ರಜಾವಾಣಿ ಚಿತ್ರಗಳು

ಸಂಯುಕ್ತ ಕರ್ನಾಟಕ 15 ನವೆಂಬರ್ 2021

ಕನ್ನಡದ ಲೇಖಕರಿಗೆ ಪ್ರೋತ್ಸಾಹ ಅಗತ್ಯ



ಕೆಂಗೇರಿ ಉಪನಗರದಲ್ಲಿ ಸುಬ್ರಮಣ್ಯ ನಾಡಿಗೇರ್ ಬರೆದಿರುವ ದಾರಿದೀಪ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ಲೇಖಕ ಸುಬ್ರಮಣ್ಯ ನಾಡಿಗೇರ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ ಕೃಷ್ಣ, ಪತ್ರಕರ್ತ ಸುಧೀಂದ್ರರಾವ್ ಮತ್ತಿತರರಿದ್ದರು.

ಕೆಂಗೇರಿ: ಕನ್ನಡ ಪುಸ್ತಕವನ್ನು ಓದಿ ಕನ್ನಡದ ಲೇಖಕರನ್ನು ಪ್ರೋತ್ಸಾಹಿಸುವುದು ಕನ್ನಡಿಗರ ಜವಾಬ್ದಾರಿ ಎಂದು ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಹೇಳಿದರು. ಕೆಂಗೇರಿ ಉಪನಗರದಲ್ಲಿ ಏರ್ಪಡಿಸಿದ್ದ ಸುಬ್ರಮಣ್ಯ ನಾಡಿಗೇರ್ ಅವರು ಬರದಿರುವ ದಾರಿದೀಪ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕನ್ನಡ ಪುಸ್ತಕಗಳನ್ನು ಕನ್ನಡಿಗರು ಕೊಂಡು ಓದುವ ಅಭ್ಯಾಸ ಹೆಚ್ಚಾಗಬೇಕು. ಕನ್ನಡ ಭಾಷೆ ನಿತ್ಯಬಳಸುವ ಹಾಗೂ ವ್ಯವಹಾರಿಕ ಭಾಷೆಯಾದಾಗ ಮಾತ್ರ ಕನ್ನಡ ಭಾಷೆಗೆ ತನ್ನದೇ ಆದ ಗೌರವ ದೊರೆಯುತ್ತದೆ ಎಂದರು.

ಲೇಖಕ ಸುಬ್ರಮಣ್ಯ ನಾಡಿಗೇರ್ ಮಾತನಾಡಿ, ಇಂದಿನ ಸಮಾಜಕ್ಕೆ ದಾರಿದೀಪ ಪುಸ್ತಕವು ದಾರಿದೀಪವಾಗಲಿಎಂಬುದು ನನ್ನ ಉದ್ದೇಶ, ಸಾಹಿತ್ಯ ಹಾಗೂ ಸಂಗೀತ ಮನಸ್ಸಿನ ಆರೋಗ್ಯವನ್ನು ಕಾಪಾಡುವುದು ಎಂದರು. ಈ ಸಂದರ್ಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ ಕೃಷ್ಣ ಅವರು ಕೃತಿ ಲೋಕಾರ್ಪಣೆ ಮಾಡಿದರು. ಪತ್ರಕರ್ತ ಸುಧೀಂದ್ರ ರಾವ್, ಮುರಳಿ ಹಾಗೂ ಶ್ರೀ ಕೃಷ್ಣ ಗ್ರ್ಯಾಂಡ್ ಹೋಟೆಲ್ ಮಾಲೀಕ ಪ್ರತಾಪ್ ಶೆಟ್ಟಿ ಉಪಸ್ಥಿತರಿದ್ದರು.

ನಂ.1 ವಿಜಯವಾಣಿ
VIJAYAVANI >> BENGALURU

2Bc ಸೋಮವಾರ 8 ನವೆಂಬರ್ 2021
8 NOVEMBER 2021



ಗಾಂಧಿಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಡಾ.ಎಸ್. ರಾಮಲಿಂಗೇಶ್ವರ (ಸಿಸಿರಾ) ಅವರಿಗೆ 'ಮೇಘಮೈತ್ರಿ ರಾಜ್ಯೋತ್ಸವ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಮೇಘಮೈತ್ರಿ ಕನ್ನಡ ಮತ್ತು ಸಾಹಿತ್ಯ ವೇದಿಕೆ ಅಧ್ಯಕ್ಷ ರಮೇಶ್ ಎಂ. ಕಮತಗಿ, ಎಂ. ತಿಮ್ಮಯ್ಯ, ಡಾ. ಗೀತಾ ರಾಮಾನುಜಂ ಇತರರಿದ್ದರು.

ಕನ್ನಡಪ್ರಭ
ಸೋಮವಾರ 8.11.2021

ಸಣ್ ಸುದ್ದಿ

ಅಹಂಕಾರ ತೊರೆದರೆ ಅವಕಾಶ: ವೂಡೇ ಪಿ.ಕೃಷ್ಣ

ಬೆಂಗಳೂರು: ಮನುಷ್ಯನಲ್ಲಿನ ಅಹಂಕಾರದ ಗುಣಗಳು ಕಡಿಮೆಯಾದರೆ ಸಾಧನೆಗೆ ಅವಕಾಶಗಳು ತೆರೆದುಕೊಳ್ಳಲು ಸಾಧ್ಯ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ವೂಡೇ ಪಿ.ಕೃಷ್ಣ ಅಭಿಪ್ರಾಯಪಟ್ಟರು. 'ಮೇಘಮೈತ್ರಿ ಕನ್ನಡ ಮತ್ತು ಸಾಹಿತ್ಯ ವೇದಿಕೆ' ಭಾನುವಾರ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಮತ್ತು ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದರು. ಪ್ರತಿಯೊಬ್ಬ ಮನುಷ್ಯನಲ್ಲಿ ಒಂದೊಂದು ರೀತಿಯ ಕೌಶಲವಿರುತ್ತದೆ. ಅವುಗಳನ್ನು ಬಳಸಿಕೊಳ್ಳುವುದಕ್ಕೆ ಸಾಕಷ್ಟು ಅವಕಾಶಗಳಿದ್ದರೂ ಅವನಲ್ಲಿನ ಅಹಂಕಾರ ಅದಕ್ಕೆ ಅವಕಾಶ ನೀಡುವುದಿಲ್ಲ. ಅಹಂಕಾರದ ಗುಣಗಳು ಕಡಿಮೆಯಾದಾಗ ಮಾತ್ರ ಸಾಧನೆಗೆ ಅವಕಾಶಗಳು ಬರುತ್ತವೆ ಎಂದು ತಿಳಿಸಿದರು. ಸಮಾಜದಲ್ಲಿ ಉತ್ತಮ ಸ್ಥಾನಮಾನ ಗಳಿಸಲು ಹಾಗೂ ಜನ ಸೇವೆ ಮಾಡುವುದಕ್ಕೂ ಅಧ್ಯಾತ್ಮವಿರಬೇಕು. ಸಮಾಜಕ್ಕೆ ಮಾಡುವ ಸೇವೆಯಿಂದ ವ್ಯಕ್ತಿ ಗುರುತಿಸಿಕೊಳ್ಳುವಂತಾಗಬೇಕೇ ಹೊರತು ಸ್ಥಾನವನ್ನು ನೋಡಿ ಗುರುತಿಸುವಂತಾಗಬಾರದು ಎಂದು ಹೇಳಿದರು. ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ ಮಾತನಾಡಿ, ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ಏರಿದವರಲ್ಲಿ ಮಾತು ಕಡಿಮೆ ಇರುತ್ತದೆ. ಆದರೆ, ಪ್ರಸ್ತುತ ಜನಪ್ರತಿನಿಧಿಗಳು ಆಡುತ್ತಿರುವ ಮಾತುಗಳು ಸಮಾಜದ ಮೇಲೆ ದುಷ್ಪರಿಣಾಮ ಬೀರುವಂತಿವೆ. ಈ ಬಗ್ಗೆ ರಾಜಕಾರಣಿಗಳು ಭಾಷೆ ಬದಲಾಗಬೇಕು ಎಂದರು. ಇದೇ ಸಂದರ್ಭದಲ್ಲಿ ಡಾ| ಎಸ್. ರಾಮಲಿಂಗೇಶ್ವರ (ಸಿಸಿರಾ) ಅವರಿಗೆ ಮೇಘಮೈತ್ರಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜಿ ಆರ್. ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರಾದ ಡಾ| ಗೀತಾ ರಾಮಾನುಜಂ ಉಪಸ್ಥಿತರಿದ್ದರು.

ಕನ್ನಡದ ಲೇಖಕರಿಗೆ ಪ್ರೋತ್ಸಾಹ ಅಗತ್ಯ



ಕೆಂಗೇರಿ ಉಪನಗರದಲ್ಲಿ ಸುಬ್ರಮಣ್ಯ ನಾಡಿಗೇರ್ ಬರೆದಿರುವ ದಾರಿದೀಪ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ಲೇಖಕ ಸುಬ್ರಮಣ್ಯ ನಾಡಿಗೇರ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ ಕೃಷ್ಣ, ಪತ್ರಕರ್ತ ಸುಧೀಂದ್ರರಾವ್ ಮತ್ತಿತರರಿದ್ದರು.

ಕೆಂಗೇರಿ: ಕನ್ನಡ ಪುಸ್ತಕವನ್ನು ಓದಿ ಕನ್ನಡದ ಲೇಖಕರನ್ನು ಪ್ರೋತ್ಸಾಹಿಸುವುದು ಕನ್ನಡಿಗರ ಜವಾಬ್ದಾರಿ ಎಂದು ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಹೇಳಿದರು. ಕೆಂಗೇರಿ ಉಪನಗರದಲ್ಲಿ ಏರ್ಪಡಿಸಿದ್ದ ಸುಬ್ರಮಣ್ಯ ನಾಡಿಗೇರ್ ಅವರು ಬರೆದಿರುವ ದಾರಿದೀಪ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕನ್ನಡ ಪುಸ್ತಕಗಳನ್ನು ಕನ್ನಡಿಗರು ಕೊಂಡು ಓದುವ ಅಭ್ಯಾಸ ಹೆಚ್ಚಾಗಬೇಕು. ಕನ್ನಡ ಭಾಷೆ ನಿತ್ಯ ಬಳಸುವ ಹಾಗೂ ವ್ಯವಹಾರಿಕ ಭಾಷೆಯಾದಾಗ ಮಾತ್ರ ಕನ್ನಡ ಭಾಷೆಗೆ ತನ್ನದೇ ಆದ ಗೌರವ ದೊರೆಯುತ್ತದೆ ಎಂದರು.


ಲೇಖಕ ಸುಬ್ರಮಣ್ಯ ನಾಡಿಗೇರ್ ಮಾತನಾಡಿ, ಇಂದಿನ ಸಮಾಜಕ್ಕೆ ದಾರಿದೀಪ ಪುಸ್ತಕವು ದಾರಿದೀಪವಾಗಲಿ ಎಂಬುದು ನನ್ನ ಉದ್ದೇಶ, ಸಾಹಿತ್ಯ ಹಾಗೂ ಸಂಗೀತ ಮನಸ್ಸಿನ ಆರೋಗ್ಯವನ್ನು ಕಾಪಾಡುವುದು ಎಂದರು. ಈ ಸಂದರ್ಭದಲ್ಲಿ ಶೇಷಾದ್ರಿ ಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ ಕೃಷ್ಣ ಅವರು ಕೃತಿ ಲೋಕಾರ್ಪಣೆ ಮಾಡಿದರು. ಪತ್ರಕರ್ತ ಸುಧೀಂದ್ರ ರಾವ್, ಮುರಳಿ ಹಾಗೂ ಶ್ರೀ ಕೃಷ್ಣ ಗ್ರ್ಯಾಂಡ್ ಹೋಟೆಲ್ ಮಾಲೀಕ ಪ್ರತಾಪ್ ಶೆಟ್ಟಿ ಉಪಸ್ಥಿತರಿದ್ದರು.

ಪ್ರಜಾವಾಣಿ
ಮಂಗಳವಾರ • ನವೆಂಬರ್ 2, 2021

ನಗರದಲ್ಲಿ ರಾಜ್ಯೋತ್ಸವ ಸಂಭ್ರಮ: ಪುನೀತ್‌ಗೆ ಶ್ರದ್ಧಾಂಜಲಿ ಸಲ್ಲಿಸಿದ ಅಭಿಮಾನಿಗಳು

ಮೊಳಗಿದ ಕನ್ನಡ ಡಿಂಡಿಮ: ನಾಡು ನುಡಿ ಗೀತೆಗಳ ಅನುರಣನ

ಪ್ರಜಾವಾಣಿ ವಾರ್ತೆ



ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಸೋಮವಾರ ಆಯೋಜಿಸಿದ್ದ ರಾಜ್ಯೋತ್ಸವ ಕಾರ್ಯಕ್ರಮವನ್ನು ಮಾಜಿ ಸಚಿವೆ ಲೀಲಾವತಿ ಆರ್‌. ಪ್ರಸಾದ್ ಉದ್ಘಾಟಿಸಿದರು. ಸಮಿತಿ ಅಧ್ಯಕ್ಷ ಗುರುದೇವ ನಾರಾಯಣಕುಮಾರ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ, ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್, ಗಾಂಧಿ ಸ್ಮಾರಕ ನಿಧಿ ಸಂಸ್ಥೆ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಕಾಂಗ್ರೆಸ್ ಮುಖಂಡ ಎಚ್‌.ಎಂ. ರೇವಣ್ಣ, ಕರ್ನಾಟಕ ವಿಚಾರ ವೇದಿಕೆ ಅಧ್ಯಕ್ಷ ಫಾಲನೇತ್ರ ಇದ್ದರು

ಪ್ರಜಾವಾಣಿ
ಗುರುವಾರ ಅಕ್ಟೋಬರ್ 28, 2021



ನಗರದಲ್ಲಿ ಬುಧವಾರ ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೊಸ ಪದವಿ ಕೋರ್ಸ್‌ಗಳನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಉದ್ಘಾಟಿಸಿದರು. ಶೇಷಾದ್ರಿಪುರ ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಪ್ರಾಂಶುಪಾಲ ಪ್ರೊ.ಎನ್.ಎಸ್. ಸತೀಶ್, ಪ್ರೊ. ಕೆ.ಎನ್. ಗೋದಾಮಣಿ ಇದ್ದರು

ಪ್ರಜಾವಾಣಿ ಚಿತ್ರ

ಉದಯವಾಣಿ ಗುರುವಾರ, ಅಕ್ಟೋಬರ್ 28, 2021

ಸ್ಪರ್ಧಾತ್ಮಕ ಜಗತ್ತಿನಲ್ಲಿ ಸಾಧನೆ, ಪ್ರತಿಭೆಗೆ ಮಾತ್ರ ಬೆಲೆ

ಬೆಂಗಳೂರು: ವಿದ್ಯಾರ್ಥಿಗಳು ಹೆಸರ ಮಾತ್ರಕ್ಕೆ ಪದವಿ ಪಡೆಯುವುದರಿಂದ ಯಾವ ಪ್ರಯೋಜನವೂ ಇಲ್ಲ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಸಾಧನೆ ಮತ್ತು ಪ್ರತಿಭೆಗೆ ಮಾತ್ರ ಬೆಲೆ ಸಿಗುತ್ತದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.




ಶೇಷಾದ್ರಿಪುರಂ ಸಂಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್ಇಪಿ-2020) ಕುರಿತ ವಿದ್ಯಾರ್ಥಿ ಸಂವಾದ ಹಾಗೂ ಹೊಸದಾಗಿ ಬಿಬಿಎ ಮತ್ತು ಬಿಸಿಎ ಕೋರ್ಸ್‌ಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಭಾರತವು 135 ಕೋಟಿ ಜನಸಂಖ್ಯೆಯ ದೊಡ್ಡ ರಾಷ್ಟ್ರವಾಗಿದ್ದು ಪ್ರತಿಯೊಬ್ಬರಿಗೂ ತಮ್ಮದೇ ಕನಸು ಮತ್ತು ಆಕಾಂಕ್ಷೆಗಳಿರುತ್ತವೆ. ಇವನ್ನು ಈಡೇರಿಸಿಕೊಳ್ಳಬೇಕಾದರೆ ಹಾಗೂ ಸಮಾಜದ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದರೆ ಗುಣಮಟ್ಟದ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದರು.

ಜನಸಾಮರ್ಥ್ಯವನ್ನೇ ಆಸ್ತಿಯನ್ನಾಗಿಸಲು ಎನ್‌ಇಪಿ ಪೂರಕವಾಗಿದೆ. ನಮ್ಮ ಯುವಕರು ಕೌಶಲಗಳನ್ನು ಬೆಳೆಸಿಕೊಂಡರೆ ಇಡೀ ಜಗತ್ತಿಗೆ ಸೇವೆ ಒದಗಿಸಬಹುದು. ಇದನ್ನು ಸಾಕಾರಗೊಳಿಸುವ ದಿಸೆಯಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಸ್ವಾಯತ್ತತೆ ಕೊಡಲಾಗುವುದು ಎಂದು ಹೇಳಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಪಂಡಿತ ಆರಾಧ್ಯ, ಗೌರವ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಇದ್ದರು.

ಕನ್ನಡಪ್ರಭ ಸೋಮವಾರ 25.10.2021

ಬಾಲ್ಯಾವಸ್ಥೆಯಲ್ಲಿ ಕೇಳುವ ಪ್ರತಿಯೊಂದು ಅಂಶ ಮನಸ್ಸಿಗೆ ನಾಟುತ್ತದೆ: ರಂಗಸ್ವಾಮಿ

'ಕಿಲಾರಿ ರಸ್ತೆ ಆಂಜನೇಯ', 'ಕೂನಿಕೆರೆ ಆಂಜನೇಯ' ಕೃತಿ ಲೋಕಾರ್ಪಣೆ



ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಬ್ಲ್ಯು ಎಚ್. ಪುಟ್ಟಯ್ಯ ಅವರ 'ಕಿಲಾರಿ ರಸ್ತೆ ಆಂಜನೇಯ', ಕಿಂಶು ಈಶ್ವರಿ ಪ್ರಸಾದ್ ಅವರ 'ಕೂನಿಕೆರೆ ಆಂಜನೇಯ' ಕೃತಿಗಳನ್ನು ಸಾಹಿತಿ ಪ್ರೊ.ಶಿವರಾಮಯ್ಯ ಲೋಕಾರ್ಪಣೆ ಮಾಡಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಕ್ಕಳಿಗೆ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಭಾಗವಹಿಸಲು ಅವಕಾಶ ನೀಡಬೇಕು. ಇದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ವೃದ್ಧಿಯಾಗಿ ಸಮಾಜದಲ್ಲಿ ಉನ್ನತ ಸ್ಥಾನಗಳಿಗೇರಲು ನೆರವಾಗುತ್ತದೆ ಎಂದು ಹಿರಿಯ ಲೇಖಕ ಪ್ರೊ.ಎಂ.ಜಿ.ರಂಗಸ್ವಾಮಿ ಹೇಳಿದರು.

ನಗರದ ಶೇಷಾದ್ರಿಪುರ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಡಬ್ಲ್ಯು.ಎಚ್. ಪುಟ್ಟಯ್ಯ ಅವರ 'ಕಿಲಾರಿ ರಸ್ತೆ ಆಂಜನೇಯ', ಕಿಂಶು ಈಶ್ವರಿ ಪ್ರಸಾದ್ ಅವರ 'ಕೂನಿಕೆರೆ ಆಂಜನೇಯ' ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಾಲ್ಯಾವಸ್ಥೆಯಲ್ಲಿ ಆಲೋಚನಾ ಶಕ್ತಿ ಹೆಚ್ಚಿರುತ್ತದೆ. ಕೇಳುವ ಪ್ರತಿಯೊಂದು ಅಂಶವು ಮನಸ್ಸಿಗೆ ನಾಟುತ್ತದೆ. ಆದ್ದರಿಂದ ಸಮಾಜವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಮಕ್ಕಳನ್ನು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರೇರೇಪಿಸಬೇಕು ಎಂದರು.


ಕೃತಿ ಲೋಕಾರ್ಪಣೆ ಮಾಡಿದ ಸಾಹಿತಿ ಪ್ರೊ.ಶಿವರಾಮಯ್ಯ, ಪ್ರಜ್ಞಾವಂತ ಸಮಾಜವಾಗಿರುವ ಕುಂಚಟಿಗರಿಗೆ ವೈಚಾರಿಕ ಮತ್ತು ವೈಜ್ಞಾನಿಕ ಪ್ರಜ್ಞೆ ಬೆಳೆಸಿದಲ್ಲಿ ಮತ್ತಷ್ಟು ಅಭಿವೃದ್ಧಿಗೆ ನೆರವಾಗಲಿದೆ. ಈ ಸಮುದಾಯದಲ್ಲಿ ಸಾಹಸಿ, ಬುದ್ಧಿವಂತ ಮಹಿಳೆಯರಿದ್ದು ಇದೊಂದು ಮಹಿಳಾ ಪ್ರಧಾನ ಸಮಾಜವಾಗಿದೆ ಎಂದರು.

ಉತ್ತರ ಭಾರತದಿಂದ ವಲಸೆ ಬಂದಿರುವ ಕುಂಚಟಿಗ ಸಮುದಾಯ ರಾಜ್ಯದ ವಿವಿಧ ಭಾಗಗಳಲ್ಲಿ ನೆಲೆಸಿದ್ದಾರೆ. ಆಂಜನೇಯ ಸ್ವಾಮಿ ದೇವರನ್ನು ಈ ಸಮುದಾಯದ ಆರಾಧ್ಯ ದೈವವನ್ನಾಗಿ ಆರಾಧಿಸುತ್ತಿದ್ದು, ದೇವಾಲಯಗಳ ಜೀರ್ಣೋದ್ಧಾರಕ್ಕೆ ಶ್ರಮಿಸುತ್ತಿದ್ದಾರೆ ಎಂದರು.

ಜಾನಪದ ವಿದ್ವಾಂಸ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಮಾತನಾಡಿ, ಲೋಕಾರ್ಪಣೆಗೊಂಡಿರುವ 'ಕಿಲಾರಿ ರಸ್ತೆ ಆಂಜನೇಯ ಮತ್ತು 'ಕೂನಿಕೆರೆ ಆಂಜನೇಯ' ಕೃತಿಗಳ ಅತ್ಯುತ್ತಮ ಸಾಕ್ಷ್ಯ ಚಿತ್ರಗಳಾಗಲಿವೆ ಎಂದರು.

ಶಿಕ್ಷಣ ತಜ್ಞ ನಾಡೋಜ ಡಾ.ವೂಡೇ ಪಿ. ಕೃಷ್ಣ, ವಿಮರ್ಶಕ ಪ್ರೊ.ಡಿ.ಆಂಜನಪ್ಪ ಚಳ್ಳಕೆರೆ, ಕೂನಿಕೆರೆ ಆಂಜನೇಯ ಕೃತಿಯ ಲೇಖಕರಾದ ಕಿಂಶುಖಿ ಈಶ್ವರಚಂದ್ರಪ್ರಸಾದ್, ರೇಖಾಚಿತ್ರ ಕಲಾವಿದೆ ಕು.ನಿಶ್ಚಿತಾ ಕೆ.ಕಾಂತರಾಜು ಮತ್ತಿತರರಿದ್ದರು.

ಸಂಜೆವಾಣಿ
6 ಬೆಂಗಳೂರು
ಭಾನುವಾರ 24 ಅಕ್ಟೋಬರ್ 2021



ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಡಬ್ಲ್ಯು.ಎಚ್. ಪುಟ್ಟಯ್ಯ ಬರೆದಿರುವ ಕಿಲಾರಿ ರಸ್ತೆ ಆಂಜನೇಯ ಹಾಗೂ ಕಿಂಶುಖ ಈಶ್ವರಿ ಪ್ರಸಾದ್ ಬರೆದಿರುವ ಕೂನಿಕೆರೆ ಆಂಜನೇಯ ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಯಿತು. ಜಾನಪದ ವಿದ್ವಾಂಸ ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಸಾಹಿತಿ ಪ್ರೊ. ಶಿವರಾಮಯ್ಯ, ನಾಡೋಜ ಡಾ. ವೂಡೆ ಪಿ. ಕೃಷ್ಣ ಹಾಗೂ ಪುಸ್ತಕ ಪ್ರಕಾಶಕ ಡಾ. ಸಿ.ವಿ. ಚಂದ್ರು ಇದ್ದಾರೆ.

ಹೊಸ ದಿಗಂತ

ಭಾನುವಾರ, 24 ಅಕ್ಟೋಬರ್ 2021, ಬೆಂಗಳೂರು



ಆಧ್ಯಾತ್ಮಿಕ ಬದುಕೇ ಶ್ರೀಮಂತಿಕೆ

ಬೆಂಗಳೂರು: ಆಧ್ಯಾತ್ಮಿಕ ಬದುಕೇ ಶ್ರೀಮಂತಿಕೆ ಎಂದು ನಾಡೋಜ ವೂಡೇ ಪಿ ಕೃಷ್ಣ ಹೇಳಿದರು.

ಶೇಷಾದ್ರಿಪುರ ಕಾಲೇಜಿನಲ್ಲಿ ಆಂಜನೇಯ ಕೃತಿ ಲೋಕಾರ್ಪಣೆಗೊಳಿಸಿಮಾತನಾಡಿದಅವರು, ವಿವೇಕಾನಂದರು ಆಂಜನೇಯನಿಂದ ಕಲಿತ 5 ಎಚ್‌ಗಳು, ಮಹತ್ಮಾಗಾಂಧಿಜಿಯವರ ರಾಮಸುತ್ತಿಯ ರಾಮರಾಜ್ಯ ಕನಸನ್ನು ತಿಳಿಸಿದ್ದಾರೆ ಎಂದರು. ಕಾರ್ಯಕ್ರಮ ದಲ್ಲಿ ಪ್ರೊ.ಶಿವರಾಮಯ್ಯ, ಆಂಜನಪ್ಪ, ರಂಗಸ್ವಾಮಿ, ಚಂದ್ರ ಮತ್ತಿತರರಿದ್ದರು.

ಭಾನುವಾರ
24 ಅಕ್ಟೋಬರ್, 2021

ಆಧ್ಯಾತ್ಮಿಕ ಬದುಕೇ ಶ್ರೀಮಂತಿಕೆ



ಬೆಂಗಳೂರು,ಅ.24- ಆಧ್ಯಾತ್ಮಿಕ ಬದುಕೇ ಶ್ರೀಮಂತಿಕೆಯ ಬದುಕು ಎಂದು ಶಿಕ್ಷಣ ತಜ್ಞ, ನಾಡೋಜ ಡಾ.ವೂಡೆ ಪಿ.ಕೃಷ್ಣ ತಿಳಿಸಿದರು.

ನಗರದ ಶೇಷಾದ್ರಿ ಪುರಂ ಕಾಲೇಜಿನಲ್ಲಿ ಡಬ್ಲ್ಯೂ. ಹೆಚ್. ಪುಟ್ಟಯ್ಯ ಅವರ ಕಿಲಾರಿ ರಸ್ತೆ ಆಂಜನೇಯ ಹಾಗೂ ಕೆ.ಈಶ್ವರಿ ಪ್ರಸಾದ ಅವರ ಕೂನಿಕೆರೆ ಆಂಜನೇಯ ಕೃತಿಗಳು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಮಹಾತ್ಮ ಗಾಂಧಿಜಿಯವರ ರಾಮಸ್ತುತಿ ಮತ್ತು ರಾಮರಾಜ್ಯದ ಕನಸು ಕಂಡ ಬಗ್ಗೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಾನಪದ ವಿದ್ವಾಂಸರಾದ ಡಾ.ಮೀರಾಸಾಬಿ ಹಳ್ಳಿಶಿವಣ್ಣ ವಹಿಸಿದ್ದರು. ಪುಸ್ತಕ ಬಿಡುಗಡೆಯನ್ನು ಸಾಹಿತಿ ಪ್ರೊ.ಶಿವರಾಮಯ್ಯ ನೇರವೇರಿಸಿದರು.

ಮುಖ್ಯ ಅತಿಥಿಗಳಾಗಿ ಪುಸ್ತಕ ಪ್ರಕಾಶಕರಾದ ಡಾ.ಸಿ.ವಿ.ಜಿ. ಚಂದ್ರು , ರೇಖಾಚಿತ್ರ ಕಲಾವಿದೆ ಕು.ನಿಶ್ಚಿತಾ ಕೆ.ಕಾಂತರಾಜು ಭಾಗವಹಿಸಿದ್ದರು.


ಪುಸ್ತಕ ಕುರಿತು ಪ್ರೊ.ಡಿ.ಆಂಜನಪ್ಪ ಚಳ್ಳಕೆರೆ, ಲೇಖಕ ಪ್ರೊ. ಎಂ.ಜಿ.ರಂಗಸ್ವಾಮಿ ಮಾತನಾಡಿದರು.

ಸಂಯುಕ್ತ [illegible] 24 ಅಕ್ಟೋಬರ್ 2021



ಶೇಷಾದ್ರಿಪುರ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ನಡೆದ ಪುಟ್ಟಯ್ಯ ಅವರ ಕಿಲಾರಿ ರಸ್ತೆ ಆಂಜನೇಯ ಮತ್ತು ಕಿಂಶುಖ ಈಶ್ವರಿಪ್ರಸಾದ್ ಅವರ ಕೂನಿಕೆರೆ ಆಂಜನೇಯ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ವಿದ್ವಾಂಸ ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಸಾಹಿತಿ ಪ್ರೊ. ಶಿವರಾಮಯ್ಯ, ಪುಸ್ತಕ ಪ್ರಕಾಶಕ ಡಾ. ಚಂದ್ರು, ಶಿಕ್ಷಣತಜ್ಞ ಡಾ. ಕೆ. ಪಿ. ಕೃಷ್ಣ ಪಾಲ್ಗೊಂಡಿದ್ದರು.

ಕರ್ನಾಟಕ ಭಾನುವಾರ, 24 ಅಕ್ಟೋಬರ್ 2021



ಪಟೇಲ್ ಪಬ್ಲಿಕೇಷನ್ಸ್ ಮತ್ತು ಸಿವಿಜಿ ಬುಕ್ಸ್ ಸಹಯೋಗದೊಂದಿಗೆ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಡಬ್ಲ್ಯು.ಎಚ್. ಪುಟ್ಟಯ್ಯ ಅವರ 'ಕಿಲಾರಿ ರಸ್ತೆ ಆಂಜನೇಯ' ಮತ್ತು ಕಿಂಶುಖ ಈಶ್ವರಿ ಪ್ರಸಾದ್ ಅವರ 'ಕೂನಿಕೆರೆ ಆಂಜನೇಯ' ಕೃತಿಗಳನ್ನು ಶಿಕ್ಷಣ ತಜ್ಞ ನಾಡೋಜ ಡಾ. ವೂಡೆ ಪಿ.ಕೃಷ್ಣ ಲೋಕಾರ್ಪಣೆಗೊಳಿಸಿದರು. ಜಾನಪದ ವಿದ್ವಾಂಸ ಡಾ. ಮೀರಾಸಾಬಿಹಳ್ಳಿ ಶಿವಣ್ಣ, ವಿಮರ್ಶಕ ಪ್ರೊ. ಡಿ.ಆಂಜನಪ್ಪ ಚಳ್ಳಕೆರೆ, ಲೇಖಕ ಪ್ರೊ. ಎಂ.ಜಿ.ರಂಗಸ್ವಾಮಿ ಮತ್ತಿತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ

VIJAYAVANI BENGALURU
ಮಂಗಳವಾರ 12 ಅಕ್ಟೋಬರ್ 2021
12 OCTOBER 2021

ಹೆಣ ಬಿದ್ರೂ ಖುರ್ಚಿ ಬಿಡದ ಜನ

ಕೃತಿ ಬಿಡುಗಡೆ ಸಮಾರಂಭದಲ್ಲಿ ಶಾಸಕ ರಮೇಶ್‌ಕುಮಾರ್ ವಿಷಾದ

ವಿಜಯವಾಣಿ ಸುದ್ದಿಜಾಲ ಕೋಲಾರ

ದೇಶಕ್ಕಾಗಿ ಹೋರಾಡಿದ ಮಹಾತ್ಮಗಾಂಧಿ, ಲಾಲ್ ಬಹುದ್ದೂರ್ ಶಾಸ್ತ್ರಿ, ಅಂಬೇಡ್ಕರ್ ಆದರ್ಶಗಳನ್ನು ಪಾಲಿಸದೆ ಸಿನಿಮಾ ನಟರನ್ನು ಅನುಕರಣೆ ಮಾಡುತ್ತಿರುವುದರಿಂದ ಮಹಾತ್ಮರ ಕುರಿತು ಸಕಾರಾತ್ಮಕವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗದಂತಾಗಿದೆ ಎಂದು ವಿಧಾನ ಸಭೆ ಸದಸ್ಯ ಕೆ.ಆರ್. ರಮೇಶ್‌ಕುಮಾರ್ ವಿಷಾದಿಸಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ, ಲೇಖಕ ಡಾ.ಆರ್.ಶಂಕರಪ್ಪ ರಚಿಸಿರುವ 'ಮರೆಯಲಾಗದ ಮಹಾನ್ ನಾಯಕರು' ಹಾಗೂ 'ಮುಕ್ತ ವ್ಯಾಪಾರ ಮತ್ತು ಭಾರತದ ವಿದೇಶಾಂಗ ನೀತಿ' ಕೃತಿಗಳನ್ನು ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಬಿಡುಗಡೆ ಮಾಡಿ ಮಾತನಾಡಿದರು.

ಗಾಂಧಿ ವಿಶ್ವ ಶಾಂತಿಗಾಗಿ ಅಹರ್ನಿಶಿ ಹೋರಾಡಿದರೇ ಹೊರತು ಕಾಂಗ್ರೆಸ್ ಸದಸ್ಯತ್ವ ಪಡೆದಿರಲಿಲ್ಲ, ಖುರ್ಚಿ ಬೇಕೆಂಬ ಆಸೆ ಇರಲಿಲ್ಲ, ಅಂಬೇಡ್ಕರ್‌ಗೆ ಖುರ್ಚಿ ಬೇಕಾಗಿತ್ತಾದರೂ ನಾವು ಕೊಡಲಿಲ್ಲ, ಶಾಸ್ತ್ರಿ ಅವರಿಗೆ ಖುರ್ಚಿ ಇತ್ತಾದರೂ ಕೂರಲು ಬಿಡಲಿಲ್ಲ, ಈಗ ಖುರ್ಚಿಗಾಗಿ, ಅಧಿಕಾರಕ್ಕಾಗಿ ಏನೇನೋ ನಡೆಯುತ್ತಿದೆ. ಹೆಣ ಬಿದ್ದರೂ ಖುರ್ಚಿ ಬಿಡಲು ಸಿದ್ಧರಿಲ್ಲದ ಜನರನ್ನು ಕಾಣುತ್ತಿದ್ದೇವೆ ಎಂದು ಅಸಮಾಧಾನ ಹೊರ ಹಾಕಿದರು.

ಮಠಾಧಿಪತಿಗಳ ನಡೆಗೆ ವ್ಯಂಗ್ಯ: ಬಸವಣ್ಣನವರು ಸಮಾಜದ ಅಂಕು-ಡೊಂಕು ತಿದ್ದಿ ಸಮ ಸಮಾಜ ನಿರ್ಮಾಣಕ್ಕೆ ಹೋರಾಡಿದವರು, ಆದರೆ ನಾವಿಂದು ಬಸವಣ್ಣನವರ ಹೆಸರಲ್ಲಿ ನೂರಾರು ಮಠ, ಮಠಾಧೀಶರನ್ನು ಕಾಣುವಂತಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಮಠಾಧೀಶರು ಮುಂದೊಂದು ದಿನ ಎಲೆಕ್ಷನ್‌ಗೆ ನಿಲ್ಲಬಹುದು ಎಂದು ಅನುಮಾನ ವ್ಯಕ್ತಪಡಿಸಿದರು.



ಚಿಂತಕ ಡಾ.ಆರ್.ಶಂಕರಪ್ಪ ರಚಿಸಿರುವ 'ಮರೆಯಲಾಗದ ಮಹಾನ್ ನಾಯಕರು' ಹಾಗೂ 'ಮುಕ್ತ ವ್ಯಾಪಾರ ಮತ್ತು ಭಾರತದ ವಿದೇಶಾಂಗ ನೀತಿ' ಕೃತಿಯನ್ನು ಕೋಲಾರ ಪತ್ರಕರ್ತರ ಭವನದಲ್ಲಿ ಶಾಸಕ ಕೆ.ಆರ್.ರಮೇಶ್‌ಕುಮಾರ್ ಬಿಡುಗಡೆಗೊಳಿಸಿದರು. ನಾಡೋಜ ಡಾ.ವೂಡೇ ಪಿ.ಕೃಷ್ಣ, ನಗರಸಭೆ ಅಧ್ಯಕ್ಷೆ ಶ್ವೇತಾ ಶಬರೀಶ್ ಇತರರಿದ್ದರು.

> ಗಾಂಧಿ ತತ್ವಗಳನ್ನು ಮೆಲುಕು ಹಾಕಿ ನಡೆದರೆ ಕಾಂಗ್ರೆಸ್‌ಗೆ ಒಳ್ಳೆಯದಾಗುತ್ತದೆ, ಗಾಂಧಿ ಮತ್ತಿತರ ಮಹಾನ್ ನಾಯಕರ ವಿಚಾರಧಾರೆಗಳಿಗೆ ಸಂಬಂಧಿಸಿದಂತೆ ಮತಭೇದ ಇದ್ದರೆ ನಿವಾರಿಸಿಕೊಳ್ಳಬಹುದು, ಮನಭೇದ ಅತ್ಯಂತ ಅಪಾಯಕಾರಿ.
>
> ಅಧ್ಯಕ್ಷ,
> ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು

ಘೋಷಣೆಗಳಿಂದ ದೇಶಾಭಿವೃದ್ಧಿ ಅಸಾಧ್ಯ: ಗ್ಯಾಟ್ ಇನ್ನಿತರ ಒಪ್ಪಂದಗಳು ಭಾರತಾಂಬೆಯನ್ನು ಒತ್ತೆ ಇಡುವ ಕಾರ್ಯಕ್ರಮವೆಂದರೆ ತಪ್ಪಾಗಲಾರದು. ಅದೇ ರೀತಿ ಕೇವಲ ಘೋಷಣೆಗಳಿಂದ ದೇಶವನ್ನು ಅಭಿವೃದ್ಧಿಪಡಿಸಬಹುದೆಂಬ ಭ್ರಮೆ ಸಲ್ಲ. ಭಾವೋದ್ವೇಗ, ಆತಂಕ ಸೃಷ್ಟಿ, ಉದ್ವೇಗದ ಮಾತುಗಳಿಂದ ದೇಶದ ಆರ್ಥಿಕತೆಯನ್ನು ಮರೆಮಾಚಲು ಸಾಧ್ಯವಿಲ್ಲ, ಚುನಾವಣೆಯಲ್ಲಿ ಗೆಲ್ಲುವುದಕ್ಕೆ ತಂತ್ರಗಾರಿಕೆ ಅನಿವಾರ್ಯ. ಹಾಗಂತ ಇದರಿಂದಲೇ ದೇಶ ಕಟ್ಟಬಹುದೆಂಬ ಭ್ರಮೆ ಅತ್ಯಂತ ಅಪಾಯಕಾರಿ ಎಂದು ಕೇಂದ್ರ ಸರ್ಕಾರದ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ನಗರಸಭೆ ಅಧ್ಯಕ್ಷೆ ಶ್ವೇತಾ ಶಬರೀಶ್, ಲೇಖಕ, ಚಿಂತಕ ಡಾ.ಆರ್.ಶಂಕರಪ್ಪ, ಪ್ರೊ.ಎ.ವಿ.ರೆಡ್ಡಿ, ಶ್ರೀನಿವಾಸಪುರದ ವೇಣು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಗೋಪಾಲಗೌಡ, ಜಿಲ್ಲಾ ಜಾನಪದ ಕಲಾ ಪರಿಷತ್ ಅಧ್ಯಕ್ಷ ಮುನಿವೆಂಕಟೇಗೌಡ, ಸರ್ಕಾರಿ ಪದವಿ ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥ ಡಾ.ಎಸ್.ಮುರಳೀಧರ್, ಶ್ರೀನಿವಾಸಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ದಿಂಬಾಲ ಅಶೋಕ್ ಇನ್ನಿತರರಿದ್ದರು.

ಕರ್ನಾಟಕ || ನಮ್ಮ

ಮಂಗಳವಾರ,12 ಅಕ್ಟೋಬರ್ 2021


ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಅನಿಸಿಕೆ

ಸಮಾಜದ ಸ್ವಾಸ್ಥ್ಯ ಕೆಡಿಸಿದರೆ ನಾಯಕರೆನಿಸಿಕೊಳ್ಳಲ್ಲ

ಕೋಲಾರ: ಘೋಷಣೆ, ಭಾವೋದ್ವೇಗ, ಸದಾಕಾಲ ಜನರನ್ನು ಆತಂಕಕ್ಕೆ ದೂಡಿ ಸಮಾಜದ ಸ್ವಾಸ್ಥ್ಯಕೆಡಿಸುವುದರಿಂದ ದೇಶದ ನಾಯಕರೆನಿಸಿಕೊಳ್ಳಲು ಸಾಧ್ಯವಿಲ್ಲ ಎಂದು ರಮೇಶ್ ಕುಮಾರ್ ಅಭಿಪ್ರಾಯಪಟ್ಟರು.

ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಅನುಜಯ ಪ್ರಕಾಶನ, ಎಸ್.ಎಲ್.ಎನ್ ಪಬ್ಲಿಕೇಷನ್ ಹಾಗೂ ಜಿಲ್ಲಾ ಜಾನಪದ ಪರಿಷತ್ತು ವತಿಯಿಂದ ಪ್ರಾಧ್ಯಾಪಕ ಡಾ.ಆರ್.ಶಂಕರಪ್ಪ ರಚಿಸಿರುವ ಮರೆಯ ಲಾಗದ ಮಹಾನ್ ನಾಯಕ ಹಾಗೂ ಮುಕ್ತ ವ್ಯಾಪಾರ ಮತ್ತು ಭಾರತದ ವಿದೇಶಾಂಗ ನೀತಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ದಿನಗಳಲ್ಲಿ ಈ ದೇಶದ ನಾಯಕರು ಸಾಮಾಜಿಕ ಮೌಲ್ಯಗಳು,ಅವುಗಳ ಚಲನೆಗೆ ಸ್ಪಂದಿಸಿ ಸಮಾಜ ಮತ್ತು ಸಾಂಸ್ಕೃತಿಕವಾಗಿ ಅವರು ಹೊಂದಿದ್ದ ದೃಷ್ಟಿಕೋನ ಪ್ರಜೆಗಳ ಮನಸ್ಸು ಮುಟ್ಟುವಂತಿತ್ತು ಆದರೆ, ಇಂದಿನ ಸ್ಥಿತಿ ಅದಕ್ಕೆ ತದ್ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿದೆ ಎಂದು ಬಣ್ಣಿಸಿದರು.



ಕೋಲಾರದ ಪತ್ರಕರ್ತರ ಭವನದಲ್ಲಿ ಸೋಮವಾರ ಪ್ರಾಧ್ಯಾಪಕ ಡಾ.ಆರ್.ಶಂಕರಪ್ಪ ರಚಿಸಿರುವ ಮರೆಯಲಾಗದ ಮಹಾನ್ ನಾಯಕ, ಮುಕ್ತ ವ್ಯಾಪಾರ ಮತ್ತು ಭಾರತದ ವಿದೇಶಾಂಗ ನೀತಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಿತು.

ದೇಶಕ್ಕಾಗಿ ಸ್ವಾತಂತ್ರ್ಯ ಹೋರಾಟ ಮಾಡಿದ ಮಹಾತ್ಮ ಗಾಂಧಿ, ವಲ್ಲಭಾಯಿ ಪಟೇಲ್, ಸಂವಿಧಾನ ಶಿಲ್ಪಿ ಅಂಬೇಡ್ಕರ್ ಹಾಗು ಕ್ರಾಂತಿ ಕಾರಿ ಬಸವಣ್ಣ ಅವರಲ್ಲಿ ಸಾಮಾಜಿಕ ಮೌಲ್ಯ ಗಳು ಎದ್ದು ಕಾಣುತ್ತಿ ದ್ದವು ಎಂದು ಅಭಿಪ್ರಾಯ ಪಟ್ಟರು.

ಮಹಾತ್ಮ ಗಾಂಧೀಜಿಯವರು ತೊಟ್ಟಿದ್ದ ಎರಡು ತುಂಡಿನ ಆ ಉಡುಗೆ ಅವರ ಜೀವನದ ಮೌಲ್ಯ ಮತ್ತು ಅವರಲ್ಲಿದ್ದ ಹೃದಯವಂತಿಕೆಗೆ ಸಾಕ್ಷಿ ಯಾಗಿದ್ದವು, ಅವರು ಹೋರಾಟದ ಮೂಲಕ ಒಂದು ಸುಸ್ಥಿರ ಸಮಾಜವನ್ನು ಸ್ಥಾಪಿಸಬೇಕೆಂಬ ಕನಸು ಕಂಡಿದ್ದರೆ ಹೊರತು ಧರ್ಮ ಸ್ಥಾಪಿಸುವ ನಾಯಕರಾಗಲಿಲ್ಲ ಎಂದು ಬಣ್ಣಿಸಿದರು. ಅಗರ್ಭ ಶ್ರೀಮಂತರಾಗಿದ್ದ ಮಾಜಿ ಪ್ರಧಾನಿ ಜವಾಹರಲಾಲ್ ನೆಹರು ಅವರಿಗೆ ಹಸಿವಿನ ನೋವು ತಿಳಿದಿದ್ದರು ಶೋಷಿತ ಸಮಾಜದ ಬದುಕಿನ ಆತಂಕ ಗಳನ್ನು ಅರಿತಿದ್ದರು ಅದರಿಂದಾಗಿಯೇ ಅವರು ದೇಶದ ಮಹಾನ್ ನಾಯಕರಲ್ಲಿ ಒಬ್ಬರೆನಿಸಿಕೊಂಡರು. ಅಂಬೇಡ್ಕರ್ ಅವರು ಮಹಾಮಾನ ವತಾ ವಾದವನ್ನು ಪ್ರತಿಪಾದಿಸಿ ಶ್ರೇಷ್ಠರೆನಿಸಿಕೊಂಡರು ಎಂದು ತಿಳಿಸಿದರು.

ಪುಸ್ತಕ ಬಿಡುಗಡೆ ಮಾಡಿ ಮಾತ ನಾಡಿದ ನಾಡೋಜ ಡಾ.ವೊಡೆ ಪಿ.ಕೃಷ್ಣ ಅಂಬೇಡ್ಕರ್ ಅವರನ್ನು ಮಹಿಳಾ ದಿನದಂದೇ ನೆನಪಿಸಿಕೊಳ್ಳಬೇಕು ಯಾಕೆಂದರೆ ಹೆಣ್ಣು ಮಕ್ಕಳಿಗೆ ಅಧಿಕಾರ ನೀಡಿದ್ದಾರೆ ಅಂಬೇಡ್ಕರ್ ಪ್ರತಿ ಭಾರತೀಯನಿಗೆ ಸೇರಿದದ್ದರೂ ದಲಿತ ವರ್ಗಕ್ಕೆ ಸೀಮಿತಗೊಳಿಸುವುದು ದುರ್ದೈವದ ಸಂಗತಿಯಾಗಿದೆ. ಗಾಂಧಿಜೀಯನ್ನು ಪಕ್ಷದ ದೃಷ್ಟಿಕೋನದಿಂದ ನೋಡದೇ ವ್ಯಕ್ತಿತ್ವ ಆದರ್ಶಗಳನ್ನು ನೋಡುವ ಮೂಲಕ ನಾವು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕೃತಿಯ ಲೇಖಕ ಡಾ.ಆರ್.ಶಂಕರಪ್ಪ ದೇಶೀಯ ಉತ್ಪನ್ನಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ತಮ್ಮ ಚಿಂತನೆಗಳನ್ನು ಪುಸ್ತಕ ರೂಪದಲ್ಲಿ ಇಳಿಸಿದ್ದೇನೆ. ಪುಸ್ತಕದಿಂದ ಸಿಗುವ ಹಣವನ್ನು ರೈತರ ಮಕ್ಕಳ ಹಾಗೂ ಸೈನಿಕರ ಮಕ್ಕಳ ಶೈಕ್ಷಣಕ್ಕೆ ಬಳಸುವುದಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷೆ ಶ್ವೇತಾ, ವೇಣು ವಿದ್ಯಾಸಂಸ್ಥೆ ಕಾರ್ಯ ದರ್ಶಿ ಎನ್.ಬಿ.ಗೋಪಾಲಗೌಡ, ಮಾತನಾಡಿದರು ನಿವೃತ್ತ ಪ್ರಾಂಶುಪಾಲ ಪ್ರೊ.ಎ.ವಿ.ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು

ಬೆಂಗಳೂರು ಉದಯವಾಣಿ
ಮಂಗಳವಾರ, ಅಕ್ಟೋಬರ್ 12, 2021

ವಚನಗಳಿಗೆ ಬೀಗ ಹಾಕಿ ಮಠಾಧಿಪತಿಗಳ ರಾಜಕೀಯ

ಮಹಾನ್ ನಾಯಕರು ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಟೀಕೆ

ಕೋಲಾರ: ಬಸವಣ್ಣ ಧರ್ಮವನ್ನು ಸ್ಥಾಪಿಸಲಿಲ್ಲ, ಅವರ ವಚನಗಳೇ ಹೋರಾಟವಾಗಿದ್ದವು, ಈಗ ಅದಕ್ಕೆ ಬೀಗ ಹಾಕಿ ಮಠ ಸ್ಥಾಪಿಸಿ ಪೀಠಾಧಿಪತಿಯಾದವರು ಚುನಾವಾಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿ ಚುನಾವಣೆಗೆ ನಿಲ್ಲುವುದೊಂದು ಬಾಕಿ ಇದೆ ಎಂದು ಮಾಜಿ ಸ್ಪೀಕರ್, ಶಾಸಕ ರಮೇಶ್ ಕುಮಾರ್ ಮಠಾಧಿಪತಿಗಳ ರಾಜಕೀಯವನ್ನು ಲೇವಡಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಅನುಜಯ ಪ್ರಕಾಶನ, ಎಸ್.ಎಲ್.ಎನ್ ಪಬ್ಲಿಕೇಷನ್ ಹಾಗೂ ಜಿಲ್ಲಾ ಜಾನಪದ ಪರಿಷತ್‌ನಿಂದ ಪ್ರಾಧ್ಯಾಪಕ ಡಾ.ಆರ್.ಶಂಕರಪ್ಪ ರಚಿಸಿರುವ ಮರೆಯಲಾಗದ ಮಹಾನ್ ನಾಯಕ, ಮುಕ್ತ ವ್ಯಾಪಾರ ಮತ್ತು ಭಾರತದ ವಿದೇಶಾಂಗ ನೀತಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಾಮಾಜಿಕ ಮೌಲ್ಯ ಮಾಯ: ಬರೀ ಘೋಷಣೆ, ಭಾವೋದ್ವೇಗ, ಸದಾಕಾಲ ಜನರನ್ನು ಆತಂಕಕ್ಕೆ ದೂಡಿ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವುದರಿಂದ ದೇಶದ ಉದ್ಧಾರವಾಗದು, ದೇಶಕ್ಕಾಗಿ ತ್ಯಾಗಬಲಿದಾನ ಮಾಡಿದ, ಸ್ವಾರ್ಥವನ್ನು ತೊರೆದಿದ್ದ ನಾಯಕರನ್ನು ಮಹಾನ್ ನಾಯರೆಂದು ಬಣ್ಣಿಸುತ್ತೇವೆ, ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ದಿನಗಳಲ್ಲಿ ಈ ದೇಶದ ನಾಯಕರ ಸಾಮಾಜಿಕ ಮೌಲ್ಯಗಳನ್ನು ಹೊಂದಿದ್ದರು. ಆದರೆ, ಈಗ ಅಧಿಕಾರಿ, ಜನಪ್ರತಿನಿಧಿಗಳ ಹೊಟ್ಟೆ ಹೃದಯ ಮತ್ತು ತಲೆಯಲ್ಲಿ ವ್ಯಾಪಾರವೇ ತುಂಬಿಕೊಂಡಿದೆ ಎಂದು ವ್ಯಂಗ್ಯವಾಡಿದರು.

ಅಂತಃಕರಣ ಒಂದೆ: ಮಹಾನ್ ನಾಯಕರ ಪುಸ್ತಕದಲ್ಲಿ ಬಣ್ಣಿಸಿರುವ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಅಂಬೇಡ್ಕರ್ ಅವರ ಮಾತುಗಳ ಪದಕೋಶ ಬೇರೆಯಾಗಿದ್ದರೂ, ಈ ನಾಯಕರ ಹಿನ್ನಲೆ ಬೇರೆಯಾಗಿದ್ದರೂ ಅಂತಃಕರಣ ಒಂದೇ ಆಗಿತ್ತು ಎಂದು ವಿವರಿಸಿದರು.

ಆಗರ್ಭ ಶ್ರೀಮಂತರಾಗಿದ್ದ ಮಾಜಿ ಪ್ರಧಾನಿ ಜವಾಹರಲಾಲ್ ನೆಹರು ಅವರಿಗೆ ಹಸಿವಿನ ನೋವು ತಿಳಿದಿದ್ದರೂ ಶೋಷಿತ ಸಮಾಜದ ಬದುಕಿನ ಆತಂಕಗಳನ್ನು ಅರಿತಿದ್ದರೂ ಅದರಿಂದಾಗಿಯೇ ಅವರು ದೇಶದ ಮಹಾನ್ ನಾಯಕರಲ್ಲಿ ಒಬ್ಬರೆನಿಸಿಕೊಂಡರು ಎಂದು ಹೇಳಿದರು.

ಸಾಲ ಮಾಡದಂತ ಸ್ವಾಭಿಮಾನಿ: ಗಾಂಧೀಜಿ ತನ್ನ ತತ್ವಗಳಿಗೆ ವಿರುದ್ಧವಾಗಿ ಬದುಕಿದ ಮಗನನ್ನೇ ದೂರವಿಟ್ಟಿದ್ದರು, ಅಂಬೇಡ್ಕರ್ ಮಗ ಸತ್ತಾಗ ಹೊದಿಸಲು ಬಟ್ಟೆ ಇರಲಿಲ್ಲ, ಶಾಸ್ತ್ರೀಜಿಯವರ ಮಗಳ ಚಿಕಿತ್ಸೆಗೆ ಹಣವಿರಲಿಲ್ಲವಾದರೂ ಸಾಲ ಮಾಡದಂತಹ ಸ್ವಾಭಿಮಾನಿಯಾಗಿದ್ದರೆಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ನಾಡೋಜ ಡಾ.ಪೂಡೆ ಪಿ.ಕೃಷ್ಣ ಅಂಬೇಡ್ಕರ್ ಅವರನ್ನು ಮಹಿಳಾ ದಿನದಂದೇ ನೆನಪಿಸಿಕೊಳ್ಳಬೇಕು, ಏಕೆಂದರೆ ಹೆಣ್ಣು ಮಕ್ಕಳಿಗೆ ಅಧಿಕಾರ ನೀಡಿದ್ದಾರೆ, ಅಂಬೇಡ್ಕರ್ ಪ್ರತಿ ಭಾರತೀಯನಿಗೆ ಸೇರಿದ್ದರೂ ದಲಿತ ವರ್ಗಕ್ಕೆ ಸೀಮಿತಗೊಳಿಸುವುದು ದುರ್ದೈವದ ಸಂಗತಿಯಾಗಿದೆ. ಗಾಂಧಿಜೀಯನ್ನು ಪಕ್ಷದ ದೃಷ್ಟಿಕೋನದಿಂದ ನೋಡದೇ, ವ್ಯಕ್ತಿತ್ವ ಆದರ್ಶ ನೋಡುವ ಮೂಲಕ ನಾವು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಒಂದು ಜಾತಿಗೆ ಕಟ್ಟಿ ಹಾಕಬೇಡಿ: ಮಹನೀಯರಾದ ಕುವೆಂಪು, ಬಸವಣ್ಣ ವಿಶ್ವಮಾನವರು. ಅವರನ್ನು ಒಂದು ಜಾತಿಗೆ ಕಟ್ಟಿಹಾಕುವ ಕೆಲಸ ಆಗುತ್ತಿದೆ. ಗಾಂಧಿಜೀ ಬಿಟ್ಟು ಭಾರತ ಇಲ್ಲ ಭಾರತ ಬಿಟ್ಟು ಗಾಂಧಿ ಇಲ್ಲ ಗಾಂಧೀಜಿ ವಿಷಯದಲ್ಲಿ ಸತ್ಯಕ್ಕಿಂತ ಸುಳ್ಳು ಹೇಳಿ ಒಂದೆರಡು ಚುನಾವಣೆ ಗೆಲ್ಲಬಹುದು. ಆದರೆ, ನಾಟಕ ಬಹುದಿನ ಉಳಿಯುವುದಿಲ್ಲ, ಜನ ಹಣದ ಹಿಂದೆ ಹೋಗುತ್ತಿಲ್ಲ, ಅಧಿಕಾರದ ಹಿಂದೆ ಹೋಗುತ್ತಿದ್ದಾರೆ. ಅಧಿಕಾರ ಬಂದರೆ ಹಣ ಬರುತ್ತದೆ, ಓಟಿನ ರಾಜಕಾರಣ ನಡೆಯುತ್ತಿದೆ. ಯಾವ ಸಂದರ್ಭದಲ್ಲಿ ಬೇಕಾದರೂ ಉತ್ತರ ನೀಡುವ ಶಕ್ತಿ ಜನರಿಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ. ಮಾತನಾಡಿದ ಕೃತಿಯ ಲೇಖಕ ಡಾ.ಆರ್.ಶಂಕರಪ್ಪ, ಸ್ಪರ್ಧಾತ್ಮಕ ಪುಸ್ತಕದ ಜತೆಗೆ ಆಧುನಿಕ ಯುಗದಲ್ಲಿ ಮರೆಯಲಾಗದ ನಾಯಕರನ್ನು ಪರಿಚಯಿಸುವ ಕೆಲಸ ಮಾಡುತ್ತಾ ಇದ್ದೇನೆ, ಗಾಂಧೀಜಿ, ಶಾಸ್ತ್ರಿ ಪಟೇಲ್, ಅಂಬೇಡ್ಕರ್, ತತ್ವ ಅಳವಡಿಸಿಕೊಂಡಾಗ ಪ್ರಜಾಪ್ರಭುತ್ವ ಸದೃಢಗೊಳಿಸಬಹುದು ಎಂದು ಹೇಳಿದರು.

ತತ್ವವನ್ನು ಸಮಾಜಕ್ಕೆ ತಿಳಿಸಿ ವರ್ಗಕ್ಕೆ ಸೀಮಿತಗೊಳಿಸಬಾರದು ಪ್ರಜ್ಞೆ ಮೂಡಿಸುವ, ದೇಶೀಯ ಉತ್ಪನ್ನಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ತಮ್ಮ ಚಿಂತನೆಗಳನ್ನು ಪುಸ್ತಕ ರೂಪದಲ್ಲಿ ಇಳಿಸಿದ್ದೇನೆ. ಪುಸ್ತಕದಿಂದ ಸಿಗುವ ಹಣವನ್ನು ರೈತರ ಮಕ್ಕಳ ಹಾಗೂ ಸೈನಿಕರ ಮಕ್ಕಳ ಶಿಕ್ಷಣಕ್ಕೆ ಬಳಸುವುದಾಗಿ ಘೋಷಿಸಿದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷೆ ಶ್ವೇತಾ ಶಬರೀಶ್, ವೇಣು ವಿದ್ಯಾಸಂಸ್ಥೆ ಕಾರ್ಯದರ್ಶಿ ಎನ್.ಬಿ.ಗೋಪಾಲಗೌಡ ಮಾತನಾಡಿದರು. ನಿವೃತ್ತ ಪ್ರಾಂಶುಪಾಲ ಪ್ರೊ.ಎ.ವಿ.ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿ ಭವಾನಿ ಪ್ರಾರ್ಥಿಸಿದರು. ಪ್ರಾಧ್ಯಾಪಕ ನರೇಂದ್ರ ಸ್ವಾಗತಿಸಿದರು.



ಕೋಲಾರ ಪತ್ರಕರ್ತರ ಭವನದಲ್ಲಿ ಸೋಮವಾರ ಪ್ರೊ.ಡಾ.ಆರ್.ಶಂಕರಪ್ಪ ಬರೆದಿರುವ ಎರಡು ಕೃತಿಗಳನ್ನು ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಇತರರು ಲೋಕಾರ್ಪಣೆ ಮಾಡಿದರು.

ಗಾಂಧಿಯಿಂದ ದೇಶ ವಿಭಜನೆ ಆಯ್ತು ಎಂಬುದು ಸುಳ್ಳು

ಗಾಂಧೀಜಿಯಿಂದ ದೇಶ ವಿಭಜನೆ ಆಯಿತು ಎಂಬುದು ಸುಳ್ಳು, ಇಂತಹ ಸುಳ್ಳು ಮಾಹಿತಿಯನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಡಲಾಗುತ್ತಿದೆ. ಗಾಂಧಿಯನ್ನು ಓದಿ ಪ್ರಶ್ನಿಸಿ, ಉತ್ತರಿಸಿ ಅದು ಬಿಟ್ಟು ಓದದೆ ಉತ್ತರ ನೀಡಲು ಹೋಗಬೇಡಿ ಎಂದು ಯುವಕರಲ್ಲಿ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಮನವಿ ಮಾಡಿದರು.

ಸಂವಿಧಾನ ರಚನೆ ಓದಿ: ಇವತ್ತು ಮತ ಭೇದ ಬಿಟ್ಟು ಮನ ಭೇದದ ವಿಷ ಕಾಡುತ್ತಿದೆ, ಗಾಂಧೀಜಿಯವರ ನಡೆ, ವಿವೇಕಾನಂದರ ನುಡಿ ನಮಗೆ ಸ್ಫೂರ್ತಿ. ಅಂಬೇಡ್ಕರ್ ಎಲ್ಲವನ್ನೂ ಧಾರೆ ಎರೆದು ದೇಶಕ್ಕೆ ಸಂವಿಧಾನ ನೀಡಿದ್ದಾರೆ. ಶಾಸನ ಸಭೆಗಳಿಗೆ, ಸಂಸತ್‌ಗೆ ಹೋಗುವವರು ಸಂವಿಧಾನ ರಚನೆ ಸಂದರ್ಭದಲ್ಲಿ ನಡೆದ ಚರ್ಚೆ ಬಗ್ಗೆ ಓದಿದರೆ ಉತ್ತಮವಾಗಿ ಕಾರ್ಯನಿರ್ವಹಿಸಬಹುದು ಎಂದು ವಿವರಿಸಿದರು.

ವಿಶ್ವನಾಥ್‌ಗೆ ತಲೆಕೆಟ್ಟಿದೆ, ಹುಚ್ಚ: ಮಾಜಿ ಸ್ಪೀಕರ್ ರಮೇಶ್‌ಕುಮಾರ್

ಕೋಲಾರ: ತಮ್ಮ ವಿರುದ್ಧ ಅರಣ್ಯ ಭೂಮಿ ಕಬಳಿಕೆ ಆರೋಪ ಮಾಡಿರುವ ಮಾಜಿ ಸಚಿವ, ಎಂಎಲ್ಸಿ ಎಚ್.ವಿಶ್ವನಾಥ್ ತಲೆ ಕೆಟ್ಟಿದೆ ಆತ, ಹುಚ್ಚ ಎಂದು ಕೋಲಾರದಲ್ಲಿ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಕೆಂಡಾಮಂಡಲವಾದರು. ಮೈಸೂರಿನಲ್ಲಿ ಎಚ್.ವಿಶ್ವನಾಥ್ ತಮ್ಮ ವಿರುದ್ಧ ಮಾಡಿರುವ ಅರಣ್ಯ ಭೂಮಿ ಕಬಳಿಕೆ ಆರೋಪಕ್ಕೆ ಪ್ರತಿಕ್ರಿಯಿಸಿ ಬಿಜೆಪಿ ಎಂಎಲ್‌ಸಿ ಎಚ್.ವಿಶ್ವನಾಥ್ ವಿರುದ್ಧ ಹರಿಹಾಯ್ದರು. ಅರಣ್ಯ ಭೂಮಿ ಒತ್ತುವರಿ ಪ್ರಕರಣ ಹೈಕೋರ್ಟ್‌ವರೆಗೂ ಹೋಗಿ ನ್ಯಾಯಾಲಯದಲ್ಲಿ ಇತ್ಯರ್ಥವಾಗಿದೆ. ಇಂತಹ ಸಂದರ್ಭದಲ್ಲಿ ಅವರಿಗೇನ್ ತಲೆ ಕೆಟ್ಟಿದ್ಯಾ. ಜ್ಞಾಪಕ ಶಕ್ತಿ ಇಲ್ಲದೆ ಮತ್ಸರದಿಂದ ಆತ ಸಾಯ್ತಾ ಇದ್ದರೆ ನಾನ್ ಏನ್ ಮಾಡ್ಲಿ, ಒಂದು ಪಕ್ಷದ ಅಧ್ಯಕ್ಷರಾಗಿದ್ದವರಿಗೆ ಬುದ್ಧಿ ಇಲ್ವಾ, ಕನಿಷ್ಠ ಜ್ಞಾನ ಇಲ್ಲವಾ, ಬುದ್ಧಿ ಹಾಳಾಗಿ, ಹೊಟ್ಟೆಗೆ ಏನ್ ತಿಂತಾ ಇದ್ದೇವೆ ಎಂದು ಗೊತ್ತಿಲ್ಲ ಅಂದ್ರೆ ಹೇಗೆ. ಕೋರ್ಟ್‌ನಲ್ಲಿ ಇತ್ಯರ್ಥವಾಗಿದೆ, ಆತನಿಗೇನ್ ಹೇಳ್ತಾನೆ ಹುಚ್ಚ ನಿಮಗೇನ್ ಬುದ್ಧಿ ಇಲ್ವಾ. ಬೇಕಾದ್ರೆ, ಸುಪ್ರೀಂ ಕೋರ್ಟ್‌ಗೆ ಬೇಕಾದ್ರೆ ಹೋಗಲಿ ಬಿಡಿ ಎಂದು ಮಾಧ್ಯಮಗಳ ವಿರುದ್ಧವೂ ಹರಿಹಾಯ್ದರು.

ಉದಯವಾಣಿ ಕೋಲಾರ
ಸೋಮವಾರ, ಅಕ್ಟೋಬರ್ 11, 2021

ಮರೆಯಲಾಗದ ಮಹಾನ್ ನಾಯಕರು ಪುಸ್ತಕ ಬಿಡುಗಡೆ

ಕೋಲಾರ: ಅನುಪಮ ಪ್ರಕಾಶನ, ಎಸ್‌ಎಲ್‌ಎನ್ ಪಬ್ಲಿಕೇಷನ್ ಮತ್ತು ಕೋಲಾರ ಜಾನಪದ ಪರಿಷತ್ತು ಸಂಯುಕ್ತ ಆಶ್ರಯದಲ್ಲಿ ಡಾ.ಆರ್.ಶಂಕರಪ್ಪ ರಚಿಸಿರುವ ಮರೆಯಲಾಗದ ಮಹಾನ್ ನಾಯಕರು ಹಾಗೂ ಮುಕ್ತ ವ್ಯಾಪಾರ ಮತ್ತು ಭಾರತದ ವಿದೇಶಾಂಗ ನೀತಿ ಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಸೋಮವಾರ ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಮಾಜಿ ಸ್ಪೀಕರ್ ಶ್ರೀನಿವಾಸಪುರ ಶಾಸಕ ಕೆ.ಆರ್.ರಮೇಶ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೆ ಪಿ.ಕೃಷ್ಣ ಗ್ರಂಥಗಳ ಬಿಡುಗಡೆ ಮಾಡುವರು. ನಗರಸಭೆ ಅಧ್ಯಕ್ಷೆ ಶ್ವೇತ ಶಬರೀಶ್ ಭಾಗವಹಿಸುವರು. ಅಧ್ಯಕ್ಷತೆಯನ್ನು ಸರಕಾರಿ ಪ್ರಥಮ ದರ್ಜೆ ಕಾಲೇಜು ನಿವೃತ್ತ ಪ್ರಾಂಶುಪಾಲ ಪ್ರೊ.ಎ.ವಿ.ರೆಡ್ಡಿ ವಹಿಸುವರು. ಶ್ರೀವೇಣು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಎನ್.ಜಿ.ಗೋಪಾಲಗೌಡ, ಉಪಸ್ಥಿತಿ ಇರುವರು. ಪ್ರಾಸ್ತಾವಿಕವಾಗಿ ಲೇಖಕ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಡಾ.ಆರ್.ಶಂಕರಪ್ಪ ಮಾತನಾಡುವರು.

ರಾಜಾ ರಾಮಮೋಹನ ರಾಯರು ಅಂದು ಹಾಕಿದ ಬುನಾದಿಯೇ ಇಂದು ಅನೇಕ ಸುಧಾರಣೆಗಳಿಗೆ ನಾಂದಿಯಾಗಿದೆ

-ಡಾ॥ ಅಶೋಕ ಗುರುದಾಸ್

ಡಾ.ರಾಜಾ ರಾಮಮೋಹನರಾಯರು ಇಲ್ಲಿ ಜನಿಸದಿದ್ದರೆ ಇಂದು ನಮ್ಮ ಪರಿಸ್ಥಿತಿ ಅಧ್ವಾನವಾಗಿರುತ್ತಿತ್ತು. ಪುರಾತನ ಶಿಕ್ಷಣ ಪದ್ಧತಿಯ ಬದಲಾಗಿ ಆಧುನಿಕ ಶಿಕ್ಷಣ ಪದ್ಧತಿ, ಸೂಕ್ತ ಪಠ್ಯ ಪುಸ್ತಕಗಳು ಇವೆಲ್ಲವಕ್ಕೂ ಅವರು ಒತ್ತು ನೀಡಿದರು. ವಿಶ್ವದ ಅಗ್ರಗಣ್ಯ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಲು ಇಂಗ್ಲಿಷ್ ಭಾಷೆಯ ಅವಶ್ಯಕತೆ ಇದೆ ಎಂಬುದನ್ನು ನಮ್ಮ ಜನರಿಗೆ ಮನಗಾಣಿಸಿದರು. ಎಲ್ಲಕ್ಕಿಂತಲೂ ಮಿಗಿಲಾಗಿ ದೇವನೊಬ್ಬ ನಾಮ ಹಲವು ಎಂಬ ಮಾತಿನಲ್ಲಿ ನಂಬಿಕೆ ಇರಿಸಿದ್ದ ಅವರು ಏಕದೇವೋಪಾಸನೆ ತತ್ತ್ವವನ್ನು ಬಿತ್ತರಿಸಿದರು. ಇಡೀ ಮಾನವ ಕುಲದ ಉದ್ಧಾರದ ಕನಸು ಕಂಡಿದ್ದ ರಾಜಾ ರಾಮಮೋಹನ್ ರಾಯ್ ಅವರ ಆಶೋತ್ತರಗಳು ಇನ್ನೂ ಸಂಪೂರ್ಣವಾಗಿ ಕಾರ್ಯಗತವಾಗಿಲ್ಲದಿರುವುದು ವಿಷಾದನೀಯ" ಎಂದು ಬೆಂಗಳೂರು ಬ್ರಹ್ಮ ಸಮಾಜದ ಅಧ್ಯಕ್ಷ ಡಾ॥ ಅಶೋಕ ಗುರುದಾಸ್ ಅವರು ತಿಳಿಸಿದರು.

27-9-2021ರಂದು ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಬೆಂಗಳೂರು ಬ್ರಹ್ಮ ಸಮಾಜ ಮತ್ತು ಅ.ನ.ಕೃ ಕನ್ನಡ ಸಂಘಗಳ ಜಂಟಿ ಆಶ್ರಯದಲ್ಲಿ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಸಹಯೋಗದಲ್ಲಿ ಏರ್ಪಾಡಾಗಿದ್ದ "ಸತಿ ಸಹಗಮನ ಪದ್ಧತಿಯ ನಿರ್ಮೂಲನೆಗೆ ನಾಂದಿ ಹಾಡಿದ ಪತ್ರಿಕಾ ಸ್ವಾತಂತ್ರ್ಯದ ಹರಿಕಾರ ರಾಜಾ ರಾಮಮೋಹನ ರಾಯ್ ಅವರ 188ನೇ ವಾರ್ಷಿಕ ಪುಣ್ಯ ಸಂಸ್ಮರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಡಾ॥ ಅಶೋಕ ಗುರುದಾಸ್ ಮಾತನಾಡಿದರು.

ಖ್ಯಾತ ಕವಯತ್ರಿ ನಾಟಕ ಕರ್ತಿ, ನಿರ್ದೇಶಕಿ ಹಾಗೂ ಸಮಾಜ ಚಿಂತಕಿ ಸುಮಾ ಸತೀಶ್ ಅವರು ಸೊಗಸಾಗಿ ನಿರೂಪಿಸಿದ ಕಾರ್ಯಕ್ರಮ ಗಾಂಧಿ ನಗರ ಕ.ಸಾ.ಪ. ನಿಕಟ ಪೂರ್ವ ಅಧ್ಯಕ್ಷೆ ಹಾ.ವೀ. ಮಂಜುಳಾ ಶಿವಾನಂದ, ಮಾಲಾ ರಾಜ ಕುಮಾರ್ ಮತ್ತು ನಾಗರತ್ನ ಸುಶ್ರಾವ್ಯವಾಗಿ ಮಹಿಳಾ ಜಾಗೃತಿ ಗೀತೆಗಳನ್ನು ಹಾಡುವುದರೊಂದಿಗೆ ಆರಂಭವಾಯಿತು. ಸಂಜೆ ಪದವಿ ಕಾಲೇಜಿನ ವಿದ್ಯಾರ್ಥಿನಿ ಪ್ರೇರಣಾ ಸ್ವಾಗತಿಸಿದರು.

ರಾಜಾ ರಾಮಮೋಹನ ರಾಯ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಮಾಡಿ ಕಾರ್ಯಕ್ರಮ ಉದ್ಘಾಟಿಸಿದ ಶಿಕ್ಷಣ ತಜ್ಞ, ನಾಡೋಜ ಡಾ.ವೂಡೇ ಪಿ.ಕೃಷ್ಣ ಅವರು ಮಾತನಾಡಿ, "ನವ ಭಾರತದ ಪಿತ ಎನಿಸಿಕೊಂಡಿರುವ ರಾಜಾ ರಾಮಮೋಹನ ರಾಯ್ ಅವರಿಲ್ಲದಿದ್ದಿದ್ದರೆ ನಾವು ಭಾರತೀಯರು ತಲೆ ಎತ್ತಿ ನಿಲ್ಲುತ್ತಿರಲಿಲ್ಲ. ಬ್ರಿಟಿಷರ ದಾಸ್ಯದಲ್ಲಿದ್ದ, ಕಡು ಬಡತನ, ಧರ್ಮಾಂಧತೆಗಳಿದ್ದ ಕಾಲದ ಭಾರತದಲ್ಲಿ ಅವರು ಜನಿಸಿದರು. ಅನೇಕ ಭಾಷೆಗಳಲ್ಲಿ ಪರಿಣತಿ ಹೊಂದಿ, ಎಲ್ಲ ಧರ್ಮಗಳ ಸಾರವನ್ನು ಒಗ್ಗೂಡಿಸಿ, ಬ್ರಹ್ಮಸಮಾಜವನ್ನು ಸ್ಥಾಪಿಸಿದ್ದರು. ಶ್ರೀಸಾಮಾನ್ಯರ ಒಳಿತಿಗಾಗಿ ಅನೇಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದರು. ಬಾಲಕನಾಗಿದ್ದಾಗಲೇ ತಮ್ಮ ಪ್ರೀತಿಯ ಅತ್ತಿಗೆ ಸತಿಸಹ ಗಮನ ಪದ್ಧತಿಯಂತೆ, ಜೀವಂತ ದಹಿಸಿ ಹೋದುದನ್ನು ಕಂಡು ಮಮ್ಮಲ ಮರುಗಿದರು. ಈ ಹೇಯ ಪದ್ಧತಿಯನ್ನು



ತಪ್ಪಿಸಲೇ ಬೇಕೆಂದು ಸಂಕಲ್ಪ ಮಾಡಿ ಅನೇಕ ವರ್ಷಗಳ ಕಾಲ ಅಹರ್ನಿಶಿ ಹೋರಾಟ ಮಾಡಿ ಯಶಸ್ಸು ಗಳಿಸಿದರು. 200 ವರ್ಷಗಳ ಹಿಂದೆಯೇ ಜಾತ್ಯತೀತ ಭಾರತದ ಕಲ್ಪನೆ ನೀಡಿದ ಅವರು ನಿಜವಾಗಿಯೂ ಒಬ್ಬ ವಿಶ್ವ ಮಾನವ. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಹರಿಜನೋದ್ಧಾರಕ ಕುದ್ಮಲ್ ರಂಗರಾಯರು ಮಂಗಳೂರು ಬ್ರಹ್ಮ ಸಮಾಜದ ಅಧ್ಯಕ್ಷರಾಗಿದ್ದರು" ಎಂದರಲ್ಲದೆ, 1864ರಲ್ಲಿ ಆರಂಭವಾಗಿ ಇಲ್ಲಿಯವರೆಗೆ ಅತ್ಯಂತ ಕ್ರಿಯಾಶೀಲವಾಗಿರುವ ಬೆಂಗಳೂರು ಬ್ರಹ್ಮ ಸಮಾಜ ಚಟುವಟಿಕೆಗಳನ್ನು ವಿವರಿಸಿದರು. ಶೇಷಾದ್ರಿ ಪುರಂ ಶಿಕ್ಷಣ ಸಂಸ್ಥೆಯಲ್ಲಿ ಶೇ.60ರಷ್ಟು ಶಿಕ್ಷಕಿಯರು ಮತ್ತು ಶೇ. 60ರಷ್ಟು ವಿದ್ಯಾರ್ಥಿನಿಯರಿರುವುದು ನಮ್ಮ ಸಂಸ್ಥೆಗೆ ಹೆಮ್ಮೆಯ ವಿಷಯ ಎಂದು ಹೇಳಿದರು.

ಮುಖ್ಯ ಉಪನ್ಯಾಸಕರಾಗಿದ್ದ ಹಿರಿಯ ಲೇಖಕಿ, ಕನ್ನಡ ಪುಸ್ತಕ ಪ್ರಾಧಿಕಾರದ ನಿಕಟ ಪೂರ್ವ ಅಧ್ಯಕ್ಷೆ ಡಾ॥ ವಸುಂಧರಾ ಭೂಪತಿ ಅವರು " 1724ರ ಮೇ 22ರಂದು ರಮಾಕಾಂತರಾಯ ತಾರಿಣಿದೇವಿ ದಂಪತಿಗಳ ಪುತ್ರನಾಗಿ ಜನಿಸಿದ ರಾಜಾರಾಮ ಮೋಹನ ರಾಯರಿಗೆ ಬಾಲ್ಯದಿಂದಲೇ ಐಕ್ಯೂ ಲೆವೆಲ್ ಹೆಚ್ಚಾಗಿತ್ತು. ಮೂಢ ನಂಬಿಕೆಗಳನ್ನು ವಿರೋಧಿಸುತ್ತಿದ್ದ ಅವರು ವಿಗ್ರಹಾರಾಧನೆಯನ್ನು ವಿರೋಧಿಸುತ್ತಿದ್ದರು. ಇಂಗ್ಲಿಷ್ ಹಾಗೂ ವಿಜ್ಞಾನದ ವಿದ್ಯಾಭ್ಯಾಸ ಭಾರತದ ಎಲ್ಲಾ ಮಕ್ಕಳಿಗೂ ದೊರೆಯಬೇಕೆಂಬ ಆಶಯದಿಂದ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುತ್ತಾರೆ. 1818ರಲ್ಲಿ ಸತಿ ಸಹಗಮನ ಪದ್ಧತಿಯನ್ನು ಖಂಡಿಸಿ ಪತ್ರಿಕೆಗಳಲ್ಲಿ ಅಗ್ರಲೇಖನಗಳನ್ನು ಬರೆಯುತ್ತಾರೆ. ಈ ಅಮಾನವೀಯ ಪದ್ಧತಿಯನ್ನು ಬೆಂಬಲಿಸುತ್ತಿದ್ದ ಅನೇಕರು ರಾಜಾ ರಾಮರ ಉಪನ್ಯಾಸಗಳನ್ನು ಆಲಿಸಿ ಮನಃಪರಿವರ್ತನೆ ಮಾಡಿಕೊಳ್ಳುತ್ತಾರೆ. ಇಂದು ನಮ್ಮ ದೇಶದಲ್ಲಿ ಜಾರಿಗೆ ಬಂದಿರುವ ಅನೇಕ ಮಹಿಳಾ ಪರ ಕಾನೂನುಗಳಿಗೆ ಅಂದೇ ಬೀಜ ಬಿತ್ತಿದವರು ರಾಜಾ ರಾಮಮೋಹನರಾಯರು. ಪತಿವ್ರತೆ ಇದ್ದಂತೆ ಪತ್ನಿವ್ರತ ಏಕಿರಬಾರದು ಎಂದು ಅಂದೇ ಪ್ರಶ್ನಿಸಿದ್ದರು. ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಹಕ್ಕಿರಬೇಕೆಂದು ವಾದಿಸಿದ್ದರು. 1829ರಲ್ಲೇ ವಂಗದೂತ ಪತ್ರಿಕೆಯನ್ನು ನಾಲ್ಕು ಭಾಷೆಗಳಲ್ಲಿ ಪ್ರಕಟಿಸಿ ಜನ ಜಾಗೃತಿ ಉಂಟು ಮಾಡಿದ್ದರು. ಸುಮಾರು ಮೂರು ಶತಮಾನಗಳ ಹಿಂದೆಯೇ ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ದೊಡ್ಡ ಧ್ವನಿ ಎತ್ತಿದ್ದರು. ವಿಧವೆಯರ ಮರು ವಿವಾಹವೂ ಸೇರಿದಂತೆ ಅವರ ಕಲ್ಯಾಣಕ್ಕಾಗಿ ಅನೇಕ ರೀತಿಯಲ್ಲಿ ಶ್ರಮಿಸಿದರು. ರಾಷ್ಟ್ರಪಿತ ಮಹಾತ್ಮಗಾಂಧಿ, ವಿಶ್ವಕವಿ ರವೀಂದ್ರ ನಾಥ ಠಾಗೋರ್, ರಾಷ್ಟ್ರಕವಿ ಕುವೆಂಪು ಮೊದಲಾದ ನೂರಾರು ದಿಗ್ಗಜರ ಪ್ರಶಂಸೆಗೆ ಒಳಗಾಗಿರುವ ಈ ಮಹಾನ್ ಮಾನವೀಯತೆಯ ಹರಿಕಾರನನ್ನು ಸಂಸ್ಮರಿಸಿಕೊಳ್ಳುವುದೇ ಒಂದು ಪುಣ್ಯದ ಕೆಲಸ" ಎಂದು ಹೇಳಿದರು.

ವಿಶೇಷ ಆಹ್ವಾನಿತರಾಗಿದ್ದ ಸುಮಂಗಲಿ ಸೇವಾಶ್ರಮದ ಎಸ್.ಜಿ.ಸುಶೀಲಮ್ಮ ಮಾತನಾಡಿ, ಮಾನವ ಶ್ರೇಷ್ಠರಾದ ರಾಜಾರಾಮ ಮೋಹನರಾಯರ ಬಗೆಗೆ ಜನ ಸಾಮಾನ್ಯರಿಗೂ ಅರಿವುಂಟಾಗಲು ಒಂದು ಟಿ.ವಿ.ಧಾರಾವಾಹಿ ಮಾಡಿ ಎಂದು ಬೆಂಗಳೂರು ಬ್ರಹ್ಮ ಸಮಾಜದ ಪದಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡರು.

ಹಿರಿಯ ಕವಯತ್ರಿ ಡಾ.ರಾಣಿ ಗೋವಿಂದ ರಾಜು ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜಾರಾಜ ಮೋಹನ ರಾಯ್‌ರಿಗೆ ಕಾವ್ಯ ನಮನ ಕಾರ್ಯಕ್ರಮದಲ್ಲಿ ಕವಯತ್ರಿಯರಾದ ಡಾ.ಕೆ.ವಿ.ರಾಜೇಶ್ವರಿ, ಎಚ್.ಎನ್.ವಸಂತ ಕುಮಾರಿ, ಪ್ರೊ.ಎ.ಶ್ರೀಲತ, ಕೊಪ್ಪರಂ ಅನ್ನಪೂರ್ಣ ಸುಬ್ರಹ್ಮಣ್ಯಂ, ಶಾಂತಿ ವಾಸು, ಉಷಾ ಕಿರಣ್, ಡಾ.ಎಸ್.ಜಿ. ಮಾಲತಿ ಶೆಟ್ಟಿ, ಶಾಂತಲಾ ಸುರೇಶ್, ಆರ್.ಹಂಸಾ, ವಿಜಯ ಗುರುರಾಜ್, ಡಾ.ರಾಧಿಕಾ ರಂಜಿನಿ ಮತ್ತು ಸುಮಾ ಸತೀಶ್ ಕವನಗಳನ್ನು ವಾಚಿಸಿದರು. ಸಂಜೆ ಕಾಲೇಜಿನ ವಿದ್ಯಾರ್ಥಿನಿ ದೀಪಿಕ ಅವರ ವಂದನಾರ್ಪಣೆಯಿಂದ ಮುಕ್ತಾಯವಾದ ಕಾರ್ಯಕ್ರಮದಲ್ಲಿ ಸಂಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ನೋಟಕಾರ್ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

ಶ್ರೀರಾಜಾರಾಮ ಮೋಹನ ರಾಯ್


'ಬ್ರಹ್ಮ ಸಮಾಜದ' ಸಂಸ್ಥಾಪಕರಿವರು।
'ಸತಿ ಸಹಗಮನ' ಪದ್ಧತಿಯನ್ನೇ ಸುಟ್ಟು ಹಾಕಿದವರು।
ಕಾನೂನಿನಡಿಯಲ್ಲಿಯೂ ಹೋರಾಡಿ ಗೆದ್ದವರು।
ಆಂಗ್ಲರಿಗೆ 'ಹಿಂದೂಯಿಸಂ' ಪರಿಚಯಿಸಿದವರು।
ಭಾರತ ನವೋದಯ ಪಿತಾಮಹರು। ಪ್ರಾತಃ ಸ್ಮರಣೀಯರು।
ಬಂಗಾಲದ ಹೂಗ್ಲಿಯ ರಾಧಾನಗರಿಯಲ್ಲಿ ಜನಿಸಿದರು।
22-5-1772 ರಂದು ಧರೆಗಿಳಿದು ಬಂದ ಮಹಾತ್ಮರು।
ತಂದೆ ರಮಾಕಾಂತರು ವೈಷ್ಣವರು। ತಾಯಿ ತಾರಿಣೀದೇವಿ ಶೈವರು।
ರಾಮ ಮೋಹನರು 10 ವರ್ಷದೊಳಗೆ 3 ಮದುವೆಯಾದರು।
ರಾಧಾ ಪ್ರಸಾದ - ರಾಮಪ್ರಸಾದರಿಗೆ ತಂದೆಯಾದರು।
ಬಂಗಾಳಿ - ಸಂಸ್ಕೃತ - ಪರ್ಷಿಯನ್ - ಇಂಗ್ಲಿಷ್ ಕಲಿತರು।
ಬಾಲ್ಯವಿವಾಹ - ವರದಕ್ಷಿಣೆ ಸತಿ ಪದ್ಧತಿ - ಬಹುಪತ್ನಿತ್ವ - ಮೂರ್ತಿ ಪೂಜೆಗಳ ವಿರುದ್ಧ ಸತತ ಹೋರಾಡಿದರು।
ಬಹುದೇವತಾರಾಧನೆಯ ನಿರಾಕರಿಸಿದವರು।
ಏಕದೇವತಾರಾಧನೆಯ ಪುರಸ್ಕರಿಸಿದವರಿವರು।
ತಪ್ಪು ಕಲ್ಪನೆ - ತಪ್ಪು ಸಂಪ್ರದಾಯಗಳ ಅಳಿಸಿ ಹಾಕಿದರು।
ಸಾಗರ ದಾಟಿ - ವಿದೇಶಕ್ಕೆ ಹೋಗಿ ಸಂಪ್ರದಾಯ ಮುರಿದರು।
ಧರ್ಮದ ವಿರುದ್ಧ ಈಜಿ ಇಂಗ್ಲೆಂಡಿಗೂ ಪಯಣಿಸಿದರು।
ದೆಹಲಿಯ ಮುಘಲ್ ರಾಜ 2ನೇ ಅಕ್ಬರ್ ಆಗಿದ್ದನಂದು।
ಬ್ರಿಟಿಷರು ಮೊಟಕುಗೊಳಿಸಿದ್ದರು ರಾಜನ ಅನುದಾನದ ಹಣವನು।
ಹೆಚ್ಚು ಹಣ ಪಡೆದು ತರಲು ದೊರೆ-ರಾಯ್‌ರನ್ನು ಕಳುಹಿದನು।
ರಾಮ ಮೋಹನರಿಗೆ 'ರಾಜ' ಎಂಬ ಬಿರುದು ಕೊಟ್ಟು ಕಳುಹಿಸಿದನು।
ಅಂದಿನಿಂದ 'ರಾಜಾರಾಮ ಮೋಹನರಾಯ್' ಆದರು।
27-9-1833 ರಂದು ಈ ಲೋಕದಿಂದ ನಿರ್ಗಮಿಸಿದರು।
ಎಲ್ಲರ ಮನಮನದಲ್ಲಿ ಶಾಶ್ವತವಾಗಿ ಉಳಿದು ಹೋದರು॥
॥ಅಮರರಾದರು॥




-ಕೊಪ್ಪರಂ ಅನ್ನಪೂರ್ಣ ಸುಬ್ರಹ್ಮಣ್ಯಂ
ಬೆಂಗಳೂರು, ಮೊ. 9845847911

ರಾಂ.ಕೆ.ಹನುಮಂತಯ್ಯ ಅವರ ಯಶಸ್ಸಿನ ಶ್ರೇಯಸ್ಸು ಅವರ ಪತ್ನಿಗೇ ಸಲ್ಲತಕ್ಕದ್ದು

–ಡಾ. ಗುರುರಾಜ ಕರ್ಜಗಿ



ರಾಂಕೆಹ ಮತ್ತು ಸಿದ್ಧಗಂಗಮ್ಮ ದಂಪತಿಗಳಿಗೆ ಸನ್ಮಾನ ಡಾ.ಸಿಸಿರಾ. ಡಾ.ಗುರುರಾಜ ಕರ್ಜಗಿ, ಎಂ.ತಿಮ್ಮಯ್ಯ, ಡಾ॥ ಅಂಜನಪ್ಪ, ಶೃಂಗೇಶ್ವರ, ಡಾ.ವರದಾ ಶ್ರೀನಿವಾಸ, ಪದ್ಮಾವತಿ ಚಂದ್ರು ಮತ್ತು ಡಾ.ಡಿ.ಸಿ.ರಾಜಪ್ಪ ಇದ್ದಾರೆ.



ಸಮಾರಂಭ ಯಶಸ್ವಿಯಾಗಲು ಸಂಪೂರ್ಣ ಸಹಕಾರ ನೀಡಿದ ಅಭಿನಂದನಾ ಸಮಿತಿ ಗೌ. ಅಧ್ಯಕ್ಷ, ನಾಡೋಜ ಡಾ.ವೂಡೇ ಪಿ.ಕೃಷ್ಣ ಅವರನ್ನು ರಾಂ.ಕೆ.ಹನುಮಂತಯ್ಯ, ಡಾ.ಸಿಸಿರಾ. ರು.ಬಸಪ್ಪ ಮತ್ತು ಭಾಗ್ಯಲಕ್ಷ್ಮಿ ಮಗ್ಗೆ ಅವರು ಗೌರವಿಸಿದರು.

"ಕವಿಯಾಗಿ, ಪೊಲೀಸ್ ಅಧಿಕಾರಿಯಾಗಿ, ಕನ್ನಡ ಪರ ಹಿರಿಯ ಚಿಂತಕರಾಗಿ ರಾಂ.ಕೆ.ಹನುಮಂತಯ್ಯ ಅವರು ದೊಡ್ಡ ಯಶಸ್ಸುಗಳಿಸಿದ್ದಾರೆಂದರೆ, ಅದರ ಹಿಂದಿರುವ ಶಕ್ತಿ ಅವರ ಪತ್ನಿ ಸಿದ್ಧಗಂಗಮ್ಮ, Behind every success full man there is a exhausted women ಎಂಬ ಮಾತಿಗೆ ಸಾಕ್ಷಿಯಂತಿದ್ದಾರೆ ಸಿದ್ಧಗಂಗಮ್ಮ. ತಮ್ಮ 61 ವರ್ಷದ ಬದುಕಿನಲ್ಲಿ ರಾಂಕೆ ಮಾಡಬೇಕಾದುದಕ್ಕಿಂತ ಹೆಚ್ಚಿನ ಕೆಲಸ ಮಾಡಿ ಸಮಾಜದ ಋಣ ತೀರಿಸಿದ್ದಾರೆ" ಎಂದು ಹಿರಿಯ ಚಿಂತಕ, ಶಿಕ್ಷಕರ ಶಿಕ್ಷಕ ಎಂಬ ಖ್ಯಾತಿಗೆ ಗುರಿಯಾಗಿರುವ ಡಾ.ಗುರುರಾಜ ಕರ್ಜಗಿ ಹೇಳಿದರು.

25–9–2021ರಂದು ಬೆಳಗ್ಗೆ ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ರಾಂ.ಕೆ.ಹನುಮಂತಯ್ಯ ಅವರ ಅಭಿಮಾನಿಗಳು ಏರ್ಪಡಿಸಿದ್ದ ರಾಂಕೆಹ–61 ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ, ದಂಪತಿಗಳನ್ನು ಸನ್ಮಾನಿಸಿ, ಡಾ.ಕರ್ಜಗಿ ಮಾತನಾಡಿದರು. ಕನ್ನಡ ಪ್ರಾಧ್ಯಾಪಕ ಡಾ.ಬಿ.ಎಸ್.ಅಶೋಕ ಕುಮಾರ್ ಸೊಗಸಾಗಿ ನಿರೂಪಿಸಿದ ಕಾರ್ಯಕ್ರಮ ಡಾ.ಎ.ಶ್ರೀಲತಾ ಮತ್ತು ವಿದ್ಯಾ ಅಮಿತ್ ಕನ್ನಡ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವುದರೊಂದಿಗೆ ಆರಂಭವಾಯಿತು. ಪ್ರಾಸ್ತಾವಿಕ ನುಡಿಗಳನ್ನಾಡಿದ ಅಭಿನಂದನಾ ಸಮಿತಿ ಅಧ್ಯಕ್ಷ ಡಾ.ಎಸ್.ರಾಮಲಿಂಗೇಶ್ವರ (ಸಿಸಿರಾ) "ಕನ್ನಡಕ್ಕಾಗಿಯೇ ತಮ್ಮ ಬದುಕನ್ನು ಸಮರ್ಪಿಸಿಕೊಂಡಿರುವ ರಾಂಕೆಹನುಮಂತಯ್ಯ ಅವರನ್ನು ಇಂದು ಅಭಿನಂದಿಸಲು ನಮಗೆ ಅತ್ಯಂತ ಸಂತಸವಾಗಿದೆ ಎಂದರು. ರಾಂ.ಕೆ.ಹನುಮಂತಯ್ಯ ಅವರಿಗೆ ಸಮರ್ಪಿಸಲಾದ ಅಭಿನಂದನಾ ಪತ್ರವನ್ನು ಹನಿಗವನಗಳ ಸರದಾರಿಣಿ ಎಂದು ಖ್ಯಾತರಾಗಿರುವ ಪದ್ಮಾವತಿ ಚಂದ್ರು ವಾಚಿಸಿದರು.

"ಕರುನಾಡ ಸಾಹಿತ್ಯಾರಕ್ಷಕ ಅಭಿನಂದನಾ ಗ್ರಂಥ ಲೋಕಾರ್ಪಣೆ ಮಾಡಿದ ಹಿರಿಯ ಲೇಖಕಿ, ವಿಮರ್ಶಕಿ ಡಾ.ವರದಾ ಶ್ರೀನಿವಾಸ ಅವರು "ಸ್ವಾತಂತ್ರ್ಯ ಸೇನಾನಿ ಎಚ್.ಎಸ್.ದೊರೆಸ್ವಾಮಿ, ಡಾ.ಲೀಲಾದೇವಿ ಆರ್.ಪ್ರಸಾದ್, ಎಸ್.ಜಿ.ಸುಶೀಲಮ್ಮ – ಮೊದಲಾದ 160 ಮಂದಿ ಲೇಖನ, ಕವನಗಳ ಮೂಲಕ ರಾಂ.ಕೆ.ಹನುಮಂತಯ್ಯ ಅವರ ಸಮಗ್ರ ವ್ಯಕ್ತಿತ್ವ, ಹವ್ಯಾಸಗಳನ್ನು ಚಿತ್ರಿಸಿದ್ದಾರೆ. ಸಾಹಿತ್ಯದ ಗಂಧವೇ ಇಲ್ಲದ ಆರಕ್ಷಕ ಇಲಾಖೆಯಲ್ಲಿ ಸಾಹಿತ್ಯದ ಸಂವೇದನೆ ಉಂಟು ಮಾಡಿದ ರಾಂಕೆಹ ಸಾಹಿತ್ಯದ ನಿಜವಾದ ರಕ್ಷಕ ಮಾನವೀಯತೆಯ ಹರಿಕಾರರಾದ ಅವರು ಎಲ್ಲರೊಳಗೆ ಬೆಲ್ಲ ಸಕ್ಕರೆಯಾಗಿ ನೂರ್ಕಾಲ ಬಾಳಲಿ" ಎಂದು ಹಾರೈಸಿದರು.

ಆರಕ್ಷಕ ಲಹರಿ ಮಾಸ ಪತ್ರಿಕೆಯ ಸಂಪಾದಕ ಹಾಗೂ ವಿಶ್ರಾಂತ ಐ.ಪಿ.ಎಸ್.ಅಧಿಕಾರಿ ಡಾ.ಡಿ.ಸಿ.ರಾಜಪ್ಪ ಮಾತನಾಡಿ, "ಕನ್ನಡದಲ್ಲಿ ಕಾದಂಬರಿ ಪರಂಪರೆ ಆರಂಭಿಸಿದ್ದೇ. ಒಬ್ಬ ಪೊಲೀಸ್ ಅಧಿಕಾರಿ 100 ವರ್ಷಗಳಿಗಿಂತಲೂ ಹಿಂದೆ ವೆಂಕಟರಾವ್ ಗುಲ್ವಾಡಿ ಬರೆದ ಇಂದಿರಾಬಾಯಿ ಕನ್ನಡದಲ್ಲಿ ಮೊದಲನೇ ಕಾದಂಬರಿ. ಅಂದಿನಿಂದ ಇಂದಿನವರೆಗೆ ಪೊಲೀಸರ ಬಗೆಗೆ ಜನರಿಗಿದ್ದ ಕೀಳು ಭಾವನೆಯನ್ನು ಹೋಗಲಾಡಿಸಲು ಅನೇಕರು ಶ್ರಮಿಸಿದ್ದಾರೆ. ಇಂತಹವರಲ್ಲಿ ರಾಂ.ಕೆ. ಹನುಮಂತಯ್ಯ ಅವರೂ ಪ್ರಮುಖರು. ಅವರ ಕವನಗಳು ಲೇಖನಗಳು ಎಲ್ಲರ ಮೆಚ್ಚುಗೆಗಳಿಸಿವೆ" ಎಂದರಲ್ಲದೆ, ತಾವು ಕರ್ನಾಟಕ ಪೊಲೀಸರ ಸಾಹಿತ್ಯ ವೇದಿಕೆ ಸ್ಥಾಪಿಸಿರುವುದನ್ನು ಹಾಗೂ ಕಾಲೇಜ್ ವಿದ್ಯಾರ್ಥಿಯಾಗಿದ್ದಾಗ ಡಾ.ರಾಜಕುಮಾರ್ ಬಗೆಗೆ ಕವನ ಬರೆದುದನ್ನು ಹಾಗೂ ರಾಜ್‌ರಿಗೆ ಅದನ್ನು ತಲುಪಿಸಲು ಪಟ್ಟ ಪಡಿಪಾಟಲನ್ನು ವಿವರಿಸಿದರು.

ಮುಖ್ಯ ಅತಿಥಿಯಾಗಿದ್ದ ಖ್ಯಾತ ವೈದ್ಯ ಹಾಗೂ ಹಾಸ್ಯವಾಗ್ಮಿ ಡಾ.ಟಿ.ಎಚ್. ಆಂಜನಪ್ಪ "ನಾನು ಮತ್ತು ರಾಂ.ಕೆ. ಒಂದೇ ಕುಂಟೆಯಲ್ಲಿ ಈಜಿದವರು. ನಾವಿಬ್ಬರೂ ಕನ್ನಡ ಮಾಧ್ಯಮದಲ್ಲೇ ಓದಿದವರು. ಅವರಂತಹ ಸಜ್ಜನರನ್ನು ಅಭಿನಂದಿಸುವ ಇಂತಹ ಸಭೆಗಳಲ್ಲಿ ಭಾಗವಹಿಸಿದರೆ ಎರಡು ಗಂಟೆ ಆಯಸ್ಸು ಜಾಸ್ತಿ ಆಗುತ್ತೆ" ಎಂದರಲ್ಲದೆ, ಅನೇಕ ನಗೆ ಹನಿಗಳನ್ನು ಪ್ರಸ್ತುತ ಪಡಿಸಿ, ಸಭೆಯನ್ನು ನಗೆ ಗಡಲಲ್ಲಿ ತೇಲಿಸಿದರು. ತಾವು 40 ವರ್ಷಗಳಿಂದ 35000 ಶಸ್ತ್ರ ಚಿಕಿತ್ಸೆ ಮಾಡಿರುವುದಾಗಿ ತಿಳಿಸಿದರು. An Apple a day keeps doctor away ಎಂಬ ಮಾತು ರೂಢಿಯಲ್ಲಿದೆ, ಆದರೆ ಒಂದು ಸೀಬೆಹಣ್ಣು ಆರು ಸೇಬು ಹಣ್ಣುಗಳಿಗೆ ಸಮ ಎಂಬ ವಾಸ್ತವ ಸತ್ಯವನ್ನು ಮರೆಯಬಾರದು. ಎಂದರು.

ನೂರಾರು ಅಭಿಮಾನಿಗಳ ಸಮ್ಮುಖದಲ್ಲಿ ತಮ್ಮನ್ನು ಅಭಿನಂದಿಸಿದುದಕ್ಕೆ ಅತ್ಯಂತ ಸಂತಸದಿಂದ ಧನ್ಯವಾದ ಸಮರ್ಪಿಸಿದ ರಾಂ.ಕೆ.ಹನುಮಂತಯ್ಯ ಅವರು 160 ಜನ ಲೇಖಕರು ಸೇರಿ ಮಾಡುತ್ತಿರುವ ಈ ಸನ್ಮಾನ ನನಗೆ ನೆಮ್ಮದಿ ತಂದಿದೆ. ಪ್ರತಿ ನಡೆಯಲ್ಲಿ ನುಡಿಯಲ್ಲಿ ಮಾಡುವ ಸಣ್ಣ ಪುಟ್ಟ ಕೆಲಸಗಳ ಬಗೆಗೂ ತನಗೆ ತಾನೇ ಪ್ರಶ್ನೆ ಹಾಕಿಕೊಂಡು ತನ್ನ ಆತ್ಮ ಸಾಕ್ಷಿಗನುಗುಣವಾಗಿ ನಡೆದ ವ್ಯಕ್ತಿ ಯಶಸ್ವಿಯಾಗುತ್ತಾನೆ. ಉಪಾಧ್ಯಾಯ ವೃತ್ತಿಯಲ್ಲಿದ್ದ ದೊಡ್ಡಪ್ಪ ಬಾಲ್ಯದಲ್ಲಿ ನನ್ನನ್ನು ಬೆಳೆಸಿದರು. ಅವರಿಗಿದ್ದ ಜನ ಪ್ರಿಯತೆ ಕಂಡು ನಾನೂ ಮೇಷ್ಟ್ರಾಗ ಬೇಕೆಂದು ಕೊಂಡಿದ್ದೆ. ಆದರೆ, ಪೊಲೀಸ್ ವೃತ್ತಿಗೆ ಸೇರಬೇಕಾಯಿತು. ಪೊಲೀಸನಾದ ಮೇಲೂ ಬಿಡುವಿನ ವೇಳೆಯಲ್ಲಿ ಸಮೀಪದ ಶಾಲೆಗಳಿಗೆ ಹೋಗಿ ಪಾಠ ಮಾಡುತ್ತಿದ್ದೆ. ನನ್ನ ವೃತ್ತಿಯಲ್ಲಿ ಮತ್ತು ಕನ್ನಡ ಪರ ಚಟುವಟಿಕೆಗಳಲ್ಲಿ ಯಶಸ್ಸು ಕಂಡಿರುವುದು ನನ್ನ ಪತ್ನಿ, ಮಕ್ಕಳು ಮತ್ತು ಕುಟುಂಬದವರ ತ್ಯಾಗದಿಂದ. ನನ್ನ ಮೇಲಧಿಕಾರಿಗಳಾಗಿದ್ದ ಡಾ.ವೇಮಗಲ್ ನಾರಾಯಣಸ್ವಾಮಿ ಮತ್ತಿತರರು ನೀಡಿದ ಪ್ರೋತ್ಸಾಹ ಮತ್ತು ಸಹಕಾರವನ್ನು ಮರೆಯುವಂತಿಲ್ಲ" ಎಂದರಲ್ಲದೆ, ಸಮಾರಂಭವನ್ನು ಅಚ್ಚುಕಟ್ಟಾಗಿ ಆಯೋಜಿಸಿರುವ ಸಿಸಿರಾ ಮತ್ತು ತಂಡದವರನ್ನು ಅಭಿನಂದಿಸಿದರು.

ಅಧ್ಯಕ್ಷತೆ ವಹಿಸಿದ್ದ ಕ.ಕೈವಾ.ಕ.ಸಂ. ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯನವರು "ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುವವರು, ದೈಹಿಕವಾಗಿ, ಮಾನಸಿಕವಾಗಿ ಅತ್ಯಂತ ಆರೋಗ್ಯವಾಗಿರುತ್ತಾರೆ ಎನ್ನುವುದಕ್ಕೆ ರಾ.ಕೆ.ಹನುಮಂತಯ್ಯ ಅವರೇ ಸಾಕ್ಷಿ, ಅವರು ನೂರ್ಕಾಲ ಆರೋಗ್ಯವಂತರಾಗಿರಲಿ" ಎಂದು ಹಾರೈಸಿದರು. ಅಭಿನಂದನಾ ಸಮಿತಿಯ ಕೆ.ಈಶ್ವರ ಪ್ರಸಾದ್, ಮಾಯಣ್ಣ, ವ.ಚ.ಚನ್ನೇಗೌಡ, ಎಸ್.ಎಸ್.ಪಡಶೆಟ್ಟಿ, ಡಾ.ಎಸ್.ಜಿ.ಮಾಲತಿಶೆಟ್ಟಿ, ಕೋ.ಲ.ರಂಗನಾಥರಾವ್, ಡಾ.ರಾಣಿಗೋವಿಂದರಾಜು, ಎಂ.ಗೌರಮ್ಮ, ಕುವರ ಯಲ್ಲಪ್ಪ, ಶ್ರೀಧರ ರಾಯಸಂ, ಪತ್ತಂಗಿ ಎಸ್.ಮುರಳಿ, ಬಿ.ಶೃಂಗೇಶ್ವರ ಮತ್ತು ಭಾಗ್ಯಲಕ್ಷ್ಮೀ ಮಗ್ಗೆ ಮತ್ತಿತರರು ಉಪಸ್ಥಿತರಿದ್ದರು.

ಸತ್ಯ ಹರಿಶ್ಚಂದ್ರ ನಾಟಕದಿಂದ ಪ್ರಭಾವಿತರಾಗಿದ್ದ ಮಹಾತ್ಮಗಾಂಧಿ

-ಸಮರ್ಥ ಪ್ರತಿಷ್ಠಾನದ ಕಾರ್ಯಕ್ರಮದಲ್ಲಿ ನಾಡೋಜ ಡಾ.ವೂಡೇ ಪಿ.ಕೃಷ್ಣ



"ಗಾಂಧೀಜಿ ಎಂದರೆ ಭಾರತ, ಭಾರತ ಎಂದರೆ ಗಾಂಧೀಜಿ ಎಂಬ ಭಾವನೆ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಎಲ್ಲಾ ದೇಶ ಭಕ್ತರಲ್ಲೂ ಮೂಡಿತ್ತು. ನಾನು 20 ವರ್ಷಗಳ ಹಿಂದೆ ನಡೆದಾಡುವ ದೇವರು ಶ್ರೀಶ್ರೀಶಿವಕುಮಾರ ಸ್ವಾಮಿಗಳನ್ನು ಭೇಟಿ ಮಾಡಿದಾಗ, ಇಂದು ದೇಶದ ಅಭ್ಯುದಯಕ್ಕಾಗಿ ನಮಗೆ ಲಕ್ಷ ಲಕ್ಷ ಗಾಂಧೀಜಿಗಳ ಅಗತ್ಯವಿದೆ, ಬಿಲ್ ಗೇಟ್ಸ್ ಅಂತಹವರ ಅವಶ್ಯಕತೆಯಿಲ್ಲ ಎಂದು ತಮ್ಮ ಮನದಾಳದ ಮಾತುಗಳನ್ನು ತಿಳಿಸಿದ್ದರು. ದೈಹಿಕವಾಗಿ ಗಾಂಧೀಜಿ ಅವರು ಕಣ್ಮರೆಯಾಗಿ 73 ವರ್ಷಗಳಾದರೂ, ಉನ್ನತ ವಿಚಾರಗಳ ಮೂಲಕ ನಮ್ಮ ಮನಸ್ಸುಗಳಲ್ಲಿ ಬದುಕಿದ್ದಾರೆ. ಶೋಷಣೆ ಮುಕ್ತ ಹಾಗೂ ಸೋಂಬೇರಿ ಮುಕ್ತ ಸಮಾಜ ಅವರ ಇಚ್ಛೆಯಾಗಿತ್ತು. ಸತ್ಯ, ಅಹಿಂಸೆ, ಸತ್ಯಾಗ್ರಹ ಮತ್ತು ಸರ್ವೋದಯ ಇವು ಗಾಂಧೀಜಿ ನಮಗೆ ನೀಡಿರುವ ನಾಲ್ಕು ಸ್ತಂಭಗಳು ತಪಸ್ಸಿನ ರೀತಿಯಲ್ಲಿ ಸತ್ಯಾಗ್ರಹ ನಡೆಸುತ್ತಿದ್ದ ಅವರಿಗೆ ಸಮಾಜದ ಕಟ್ಟ ಕಡೆಯ ಮನುಷ್ಯನೂ ನೆಮ್ಮದಿಯ ಬದುಕು ನಡೆಸಬೇಕು ಎಂಬ ಇಚ್ಛೆಯಿತ್ತು. ಇಂದು ಜಗತ್ತನ್ನು ಕಾಡುತ್ತಿರುವ ಜಟಿಲ ಸಮಸ್ಯೆಗಳಿಗೆ ಗಾಂಧೀಜಿ ತತ್ತ್ವಗಳೇ ಪರಿಹಾರ ಎಂಬ ಸತ್ಯವನ್ನು ವಿಶ್ವದ ಅನೇಕ ನಾಯಕರು ನಂಬಿದ್ದಾರೆ. ಶಾಲಾ ವಿದ್ಯಾರ್ಥಿಯಾಗಿದ್ದ ಗಾಂಧೀ ಸತ್ಯ ಹರಿಶ್ಚಂದ್ರ ನಾಟಕ ನೋಡಿ ಪ್ರಭಾವಿತನಾಗಿ, ಅಂದಿನಿಂದ ಒಂದು ಸುಳ್ಳನ್ನೂ ಹೇಳಲಿಲ್ಲ. ಇಂತಹ ಉನ್ನತ ವ್ಯಕ್ತಿಯ ಬದುಕನ್ನು ಗೌರವಿಸಿ ಅವರ ತತ್ತ್ವಗಳನ್ನು ಬದುಕಿನಲ್ಲಳವಡಿಸಿ ಕೊಳ್ಳುವುದರ ಮೂಲಕ ಅವರನ್ನು ಸ್ಮರಿಸೋಣ" ಎಂದು ಕರೆ ನೀಡಿದ ಶಿಕ್ಷಣ ತಜ್ಞ, ನಾಡೋಜ ಡಾ.ವೂಡೇ ಪಿ.ಕೃಷ್ಣ "ಗಾಂಧೀಜಿ ನೆನಪು ಮರೆಯಾಗುತ್ತಿರುವ ಸಂದರ್ಭದಲ್ಲಿ ಅವರನ್ನು ಭಕ್ತಿಯಿಂದ ಸ್ಮರಿಸಿಕೊಳ್ಳುವ ಮತ್ತು ಅವರ ತತ್ತ್ವಗಳ ಆರಾಧಕರಿಗೆ ಗಾಂಧಿ ಪ್ರಿಯ ಪ್ರಶಸ್ತಿ ನೀಡುತ್ತಿರುವ ಶ್ರೀ.ರಾ.ವಿಜಯ ಸಮರ್ಥ ಮತ್ತು ತಂಡದವರನ್ನು ಹಾರ್ದಿಕವಾಗಿ ಅಭಿನಂದಿಸಿದರು.

ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ 3-10-2021ರಂದು ಶೇಷಾದ್ರಿಪುರಂ ಕಾಂಪೊಸಿಟ್ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ಗಾಂಧಿ ಜಯಂತಿ ಮತ್ತು ಗಾಂಧಿ ಪ್ರಿಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಮಾತನಾಡಿದರು.

ಸಿರಿ ಸಾಂಸ್ಕೃತಿಕ ಪ್ರತಿಷ್ಠಾನದ ಸದಸ್ಯೆಯರು ಸುಶ್ರಾವ್ಯವಾಗಿ ದೇಶಭಕ್ತಿ ಗೀತೆಗಳನ್ನು ಹಾಡುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕವಯತ್ರಿ, ನಾಟಕ ಕಾರ್ತಿ ಮತ್ತು ನಿರ್ದೇಶಕಿ ಸುಮಾ ಸತೀಶ್ ನಿರೂಪಿಸಿದ ಕಾರ್ಯಕ್ರಮದಲ್ಲಿ ಸಮಾಜ ಸೇವೆಗಾಗಿ ಹುಳಿಯಾರಿನ ಟಿ.ಎಸ್.ರಾಮನಾಥ್, ಮರಿಯಮ್ಮನ ಹಳ್ಳಿಯ ಡಿ.ರಾಘವೇಂದ್ರಶೆಟ್ಟಿ, ಹೊಳೆನರಸೀಪುರದ ಮುರಳೀಧರ ಗುಪ್ತ ಮತ್ತು ಗಿಣಿಗೇರದ ಎಂ.ಗೋವಿಂದರಾಜು, ಸಂಘಟನೆಗಾಗಿ ಚಿಕ್ಕಮಗಳೂರಿನ ಜಿ.ಎ.ದಿನೇಶ್ ಗುಪ್ತ ಮತ್ತು ಕೋಲಾರದ ಲಯನ್ ಜೆ.ಜಿ.ಶಿವಶೇಖರ್, ಶಿಕ್ಷಣ ಕ್ಷೇತ್ರದ ಸಾಧನೆಗಾಗಿ ಚನ್ನಗಿರಿ ತಾಲ್ಲೂಕು ನಲ್ಲೂರಿನ ಎಸ್.ಎಂ.ಹನುಮಂತರಾಜು ಹಾಗೂ ಕ್ರೀಡಾ ಕ್ಷೇತ್ರದ ಸಾಧನೆಗಾಗಿ ಕ್ರಿಕೆಟ್ ಕೋಚ್ ಶ್ರೀಧರ ಗುಪ್ತ (ಇವರ ಅನುಪಸ್ಥಿತಿಯಲ್ಲಿ ಪತ್ನಿ ಭಾಗ್ಯಲಕ್ಷ್ಮಿ) - ಇವರುಗಳಿಗೆ "ಗಾಂಧಿ ಪ್ರಿಯ" ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮವನ್ನು ಕಲಾವಿದೆ, ಕವಯತ್ರಿ, ಸಂಘಟಕಿ ಭಾರತಿ ಎಂ.ಪ್ರಕಾಶ್ ಮತ್ತು ನಾಗರತ್ನ ವೆಂಕಟೇಶ್ ನಡೆಸಿಕೊಟ್ಟರು.

ಆರಂಭದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಪ್ರತಿಷ್ಠಾನದ ಅಧ್ಯಕ್ಷ ಶ್ರೀ.ರಾ. ವಿಜಯ ಸಮರ್ಥ "ರಾಷ್ಟ್ರಪತಿ ಮತ್ತು ವೈಶ್ಯಪಿತನ ಹೆಸರಿನಲ್ಲಿ ಇದುವರೆಗೆ ಬೆಂಗಳೂರಿನವರಿಗೆ ಮಾತ್ರ ಪ್ರಶಸ್ತಿ ನೀಡುತ್ತಿದ್ದೆವು. ಈ ವರ್ಷದಿಂದ ರಾಜ್ಯದ ವಿವಿಧ ಭಾಗಗಳ ಸಾಧಕರಿಗೆ ಪ್ರಶಸ್ತಿ ನೀಡುತ್ತಿದ್ದೇವೆ. ಪ್ರಶಸ್ತಿಗಳಿಗೆ ಭಾಜನರಾಗುತ್ತಿರುವವರ ಮುಖಗಳನ್ನು ನಾನು ಇಂದೇ ನೋಡಿದ್ದು, ಇವರ್‍ಯಾರೂ ಪ್ರಶಸ್ತಿ ಕೊಡಿ ಎಂದು ಅರ್ಜಿ ಹಾಕಿರಲಿಲ್ಲ. ವಿವಿಧ ಮೂಲಗಳಿಂದ ಇವರ ಸಾಧನೆ ಬಗೆಗೆ ತಿಳಿದು ಫೋನ್ ಮೂಲಕವೋ, ಪತ್ರ ಬರೆದೋ ಇವರನ್ನು ಪ್ರಶಸ್ತಿ ಸ್ವೀಕರಿಸಲು ಆಹ್ವಾನಿಸಿದ್ದೇವೆ" ಎಂದು ಹೇಳಿದರು. ಗಾಂಧೀಜಿಯ ಚಿತಾಭಸ್ಮದ ಸ್ಮಾರಕ ಉದ್ಯಾನವಿರುವ ಅರಸೀಕೆರೆಯಲ್ಲಿ ಒಂದು ವರ್ಷ ಕಾರ್ಯಕ್ರಮ ನಡೆಸಿದುದನ್ನು ಸ್ಮರಿಸಿಕೊಂಡರು.

ವಿಶೇಷ ಆಹ್ವಾನಿತರಾಗಿದ್ದ ದಾಸ ಸಾಹಿತ್ಯ ವಿದ್ವಾಂಸ ಹ.ರಾ.ನಾಗರಾಜಾರ್ "ಹೆಜ್ಜೆ ಹೆಜ್ಜೆಯಲ್ಲೂ ಸರಳತೆ, ವಿನಮ್ರತೆ ರೂಡಿಸಿಕೊಳ್ಳುವುದೇ ನಾವು ಗಾಂಧೀಜಿಗೆ ನೀಡುವ ನಿಜವಾದ ಗೌರವ" ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿದ್ದ ಹಿರಿಯ ಸಮಾಜ ಸೇವಕ ಎ.ಎ.ಗುಪ್ತ ಅವರು ಗಾಂಧೀಜಿ ವಿಚಾರಗಳನ್ನು ಅದ್ಭುತವಾಗಿ ಪ್ರಸ್ತುತ ಪಡಿಸಿದ ನಾಡೋಜ ಡಾ.ವೂಡೇ ಪಿ.ಕೃಷ್ಣ ಮತ್ತು ಅದ್ಭುತವಾಗಿ ಕಾರ್ಯಕ್ರಮವನ್ನು ಆಯೋಜಿಸಿದ ಶ್ರೀ.ರಾ. ವಿಜಯ ಸಮರ್ಥ ಅವರನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಹೊಳೆನರಸೀಪುರದ ರವಿ ಕುಮಾರ್ ಮಾತನಾಡಿ, ಗಾಂಧೀಜಿ ನಿಧನರಾದ ದಿನ ವಿಶ್ವ ಸಂಸ್ಥೆಯಲ್ಲಿ ಎಲ್ಲಾ ದೇಶಗಳ ಬಾವುಟಗಳೂ ಅರ್ಧಕ್ಕೆ ಹಾರಿದುದನ್ನು ಪ್ರಸ್ತಾಪಿಸಿದರು.

ಅಧ್ಯಕ್ಷತೆ ವಹಿಸಿದ್ದ ಖ್ಯಾತ ಉದ್ಯಮಿ ಮತ್ತು ಚಿಂತಕ ಆರ್.ಎಲ್. ರಮೇಶ್ ಬಾಬು ಮಾತನಾಡಿ, ಸ್ವಾತಂತ್ರ್ಯ ಲಭಿಸದೆ ಹೋಗಿದ್ದರೆ, ನಾವೆಲ್ಲಾ ಇಂತಹ ಸಂಭ್ರಮದಲ್ಲಿ ಭಾಗಿಯಾಗಬಹುದಿತ್ತೇ? ಎಂದು ಪ್ರಶ್ನಿಸಿದರು. ಸ್ವಾತಂತ್ರ್ಯ ಗಳಿಸಿಕೊಟ್ಟ ಗಾಂಧೀಜಿ ಮತ್ತು ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರಿಗೆ ನಾವೆಲ್ಲರೂ ಕೃತಜ್ಞರಾಗಿರಬೇಕು ಎಂದರು. ಶ್ರೀ. ರಾ.ವಿಜಯ ಸಮರ್ಥ ಮತ್ತು ತಂಡದವರ ನಿರಂತರ ಕಾರ್ಯಕ್ರಮಗಳನ್ನು ಕಂಡು ಸಂತಸದಿಂದ ಪ್ರತಿಷ್ಠಾನಕ್ಕೆ 10000 ರೂ.ಗಳ ದೇಣಿಗೆ ನೀಡಿದರು.

ಹಿರಿಯ ಸಮಾಜ ಚಿಂತಕ, ಸ್ವಾತಂತ್ರ್ಯ ಹೋರಾಟಗಾರ ಎಂ.ಎಸ್.ಶರಭಣ್ಣ ಅವರ ಪುತ್ರ ಎಸ್.ವೀರಭದ್ರಯ್ಯ, ಕಿರುತೆರೆ ಕಲಾವಿದೆ ಕವಿತಾ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.



ಸಂಯುಕ್ತ ಕರ್ನಾಟಕ 09 ಅಕ್ಟೋಬರ್ 2021 ಶನಿವಾರ

ಕುಶಲಕರ್ಮಿಗಳ ತರಬೇತಿಗೆ ಬಳಕೆ


ಬೆಂಗಳೂರು: ಸರಳತೆಯ ಸೌಂದರ್ಯಶಾಸ್ತ್ರದ ಚಿತ್ರಕಲಾ ಪ್ರದರ್ಶನದಿಂದ ಬರುವಂತಹ ಆದಾಯವನ್ನು ಕುಶಲಕರ್ಮಿಗಳ ತರಬೇತಿಗೆ ಬಳಸಲಾಗುವುದೆಂದು ರಂಗಕರ್ಮಿ ಪ್ರಸನ್ನ ತಿಳಿಸಿದರು.

ಪ್ರದರ್ಶನದಿಂದ ಬರುವ ಆದಾಯ

ಪವಿತ್ರವಸ್ತ್ರ ಅಭಿಯಾನದ ಅಂಗವಾಗಿ ಚಿತ್ರಕಲಾ ಪರಿಷತ್‌ನಲ್ಲಿ ಕಲಾವಿದ ಪ್ರಸನ್ನ ಮತ್ತು ನಿರಂಜನ ಜಿ.ಎಂ ಅವರು ರಚಿಸಿರುವ ಚಿತ್ರಕಲೆಗಳ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಈ ಪ್ರದರ್ಶನ ಹಾಗೂ ಮಾರಾಟವು ಅ.10ರವರೆಗೆ ನಡೆಯಲಿದ್ದು ಮಾರಾಟದಿಂದ ಬರುವಂತಹ ಆದಾಯವನ್ನು ಕುಶಲಕರ್ಮಿಗಳಿಗೆ ತರಬೇತಿಗೆ ಸದ್ಬಳಕೆ ಮಾಡಲಾಗುವುದು ಎಂದರು.

ಕಲಾನಿರ್ದೇಶಕ ಎಂ.ಎಸ್.ಸತ್ಯು ಮಾತನಾಡಿ, ದೇಸಿ ಸಂಸ್ಥೆಯಲ್ಲಿ ಹೊಸ ವಿನ್ಯಾಸಗಳು ಬರಬೇಕೆಂದು ನಾವು ಹೇಳುತ್ತಿದ್ದೇವು, ಈ ಚಿತ್ರಕಲಾಪ್ರದರ್ಶನ ನಮ್ಮ ನಿರೀಕ್ಷೆಯನ್ನು ಮೀರಿದ ಸಾಧ್ಯತೆಯನ್ನು ತೋರಿಸಿದೆ. ಕಲೆ ಹಾಗೂ ಜವಳಿಯನ್ನು ಬೆರೆಸಿದ ಹೊಸ ವಿನ್ಯಾಸಗಳು ಕೈಮಗ್ಗದ ಬಟ್ಟೆಗಳಿಗೆ ಹೆಚ್ಚಿನ ಮೌಲ್ಯವನ್ನು ತರಲು ಸಾಧ್ಯ ಎಂದು ತಿಳಿಸಿದರು.

ಸಾಹಿತಿ ಕೆ.ಮರುಳಸಿದ್ದಪ್ಪ ಮಾತನಾಡಿ, ಯಾವುದೇ ಸಂಕಷ್ಟ ಕಾಲದಲ್ಲೂ ಸೃಜನಶೀಲತೆಯಿಂದ ಮಾತ್ರ ಒಬ್ಬ ವ್ಯಕ್ತಿ ಏನನ್ನಾದರೂ ಸಾಧಿಸಬಹುದು ಇದಕ್ಕೆ ದೊಡ್ಡ ಉದಾಹರಣೆ ಎಂದರೆ ಗಾಂಧೀಜಿ. ಇವರ ಹೋರಾಟದಲ್ಲಿ ಕೊನೆಯವರೆಗೂ ತಮ್ಮ ವಿಚಾರಗಳಲ್ಲಿ ಹೊಸತನದ ಹುಡುಕಾಟವನ್ನು ಮಾಡುತ್ತಿದ್ದರು. ಈ ಕಲಾಪ್ರದರ್ಶನ ಏರ್ಪಡಿಸುವ ಮೂಲಕ ಪ್ರಸನ್ನ ಹಾಗೂ ನಿರಂಜನ ಅವರು ಕ್ರಿಯಾಶೀಲತೆಗೆ ಮಹತ್ವ ತಂದು ಕೊಟ್ಟಿದ್ದಾರೆಂದು ನುಡಿದರು. ಗಾಂಧಿಭವನದ ಅಧ್ಯಕ್ಷ ವೂ.ಡೇ.ಪಿಕೃಷ್ಣ, ವಸ್ತ್ರವಿನ್ಯಾಸಕಿ ಜಯಂತಿ ಮರುಳಸಿದ್ದಪ್ಪ, ಚಿತ್ರಕಲಾವಿದ ಎಂ.ಎಸ್.ಮೂರ್ತಿ, ಸರ್ವೋದಯ ಸಂಘದ ಸದಸ್ಯರ ನರೇಂದ್ರ, ಚಿತ್ರಕಲಾವಿದ ಸಚ್ಚಿದಾನಂದ ಕೆ.ಜೆ ಇತರರು ಪ್ರದರ್ಶನವನ್ನು ವೀಕ್ಷಿಸಿದರು.



ಚಿತ್ರಕಲಾಪರಿಷತ್‌ನಲಿ ಕಲಾವಿದ ಪ್ರಸನ್ನ ಮತ್ತು ನಿರಂಜನ ಜಿ.ಎಂ ಅವರು ರಚಿಸಿರುವ ಚಿತ್ರಕಲೆಗಳ ಪ್ರದರ್ಶನದ ಉದ್ಘಾಟನಾ ಸಮಾರಂಭದಲಿ ಕಲಾನಿರ್ದೇಶಕ ಎಂ.ಎಸ್.ಸತ್ಯು, ರಂಗಕರ್ಮಿ ಪ್ರಸನ್ನ, ಸಾಹಿತಿ ಕೆ.ಮರುಳಸಿದ್ದಪ್ಪ ಮತ್ತಿತರರಿದ್ದರು.

09 ಅಕ್ಟೋಬರ್ 2021 ಶನಿವಾರ
ಬೆಂಗಳೂರು (BENGALURU)



ಶೇಷಾದ್ರಿಪುರ ಕಾಲೇಜಿನ ಎಸ್‌ಎಸ್‌ಎಸ್ ಘಟಕವು ಹಮ್ಮಿಕೊಂಡಿದ್ದ ಮೂರು ದಿನಗಳ ಕ್ಲೀನ್ ಇಂಡಿಯಾ ಸೈಕಲ್ ಜಾಥಾಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಆರ್.ವೆಂಕಟೇಶ್ ಕುಮಾರ್, ಶೇಷಾದ್ರಿಪುರ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೊಡೇ ಕೃಷ್ಣ ಚಾಲನೆ ನೀಡಿದರು.

[illegible] 2021




ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶೇಷಾದ್ರಿಪುರಂ ಕಾಲೇಜು ಹಾಗೂ ಬೆಂವಿವಿ ವತಿಯಿಂದ ಹಮ್ಮಿಕೊಂಡಿದ್ದ ಕ್ಲೀನ್ ಇಂಡಿಯಾ ಸೈಕಲ್ ಜಾಥಾಗೆ ಕ್ರೀಡಾ ಇಲಾಖೆಯ ಆಯುಕ್ತ ಡಾ. ವೆಂಕಟೇಶ್ ಕುಮಾರ್ ಚಾಲನೆ ನೀಡಿದರು. ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ , ಬೆಂಗಳೂರು ವಿವಿಯ ಡಾ. ಗೋವಿಂದೇಗೌಡ, ಕೆ.ವಿ ಖಾದ್ರಿ ನರಸಿಂಹಯ್ಯ , ನಾಡೋಜ ಡಾ.ವೂಡೆಪಿ ಕೃಷ್ಣ ಮತ್ತಿತರರಿದ್ದರು.

೨ ಹೊಸ ದಿಗಂತ
ಭಾನುವಾರ, 3 ಅಕ್ಟೋಬರ್ 2021, ಬೆಂಗಳೂರು

ಖಾದಿ ಗ್ರಾಮೋದ್ಯೋಗ ಅಭಿವೃದ್ಧಿಗೂ ಆದ್ಯತೆ: ಮುಖ್ಯಮಂತ್ರಿ

ಗಾಂಧಿ ಭವನ ಶೀಘ್ರ ಪೂರ್ಣ



ಬೆಂಗಳೂರು: ರಾಜ್ಯದ 12 ಜಿಲ್ಲೆಗಳಲ್ಲಿ ನಿರ್ಮಾಣದ ಹಂತದಲ್ಲಿರುವ ಗಾಂಧಿ ಭವನ ಕಟ್ಟಡಗಳ ಕಾಮಗಾರಿಯನ್ನು ಪೂರ್ಣಗೊಳಿಸಿ ಶೀಘ್ರವೇ ಲೋಕಾರ್ಪಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ತಿಳಿಸಿದರು.

ಶನಿವಾರ ಬೆಂಗಳೂರಿನ ಗಾಂಧಿ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಗಾಂಧಿ ಸ್ಮಾರಕ ನಿಧಿ ಜಂಟಿ ಸಹಯೋಗದಲ್ಲಿ ಗಾಂಧಿ ಜಯಂತಿ ಆಚರಣೆ ಹಾಗೂ ಗಾಂಧಿ ಸೇವಾ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ರಾಜ್ಯದಲ್ಲಿ 12 ಗಾಂಧಿ ಭವನ ನಿರ್ಮಾಣ ಆಗಬೇಕಿದೆ. ಈಗಾಗಲೇ ದಾವಣಗೆರೆಯಲ್ಲಿ ಉದ್ಘಾಟನೆ ಕಂಡಿದ್ದು, ಶಿವಮೊಗ್ಗ ಹಾಗೂ ಬಳ್ಳಾರಿಯಲ್ಲಿ ಭವನ ನಿರ್ಮಾಣಪೂರ್ಣಗೊಂಡುಉದ್ಘಾಟನೆಗೆ ಸಿದ್ಧವಾಗಿವೆ. ಈ ಭವನಗಳಲ್ಲಿ ಗಾಂಧೀಜಿ ಅವರ ಆದರ್ಶ ಯುವಕರಿಗೆ ಮನದಟ್ಟು ಮಾಡಿಕೊಡಲಾಗುವುದು ಎಂದರು.

ಗ್ರಾಮೋದ್ಯೋಗಅಭಿವೃದ್ಧಿಗೆಆದ್ಯತೆ: ರಾಜ್ಯದಲ್ಲಿಖಾದಿಮತ್ತುಗ್ರಾಮೋದ್ಯೋಗ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಇದಕ್ಕಾಗಿ ವಿಶೇಷ ಕಾರ್ಯಕ್ರಮವನ್ನು ರೂಪಿಸಲಾಗುವುದು. ಸಾಧಕನಿಗೆ ಸಾವು ಅಂತ್ಯವಲ್ಲ, ಸಾವಿನ ನಂತರವೂ ಬದುಕು ಇರುತ್ತದೆ ಎಂಬುದಕ್ಕೆ ಗಾಂಧೀಜಿ ಅವರು ಉತ್ತಮ ಉದಾಹರಣೆಯಾಗಿದೆ. ಸಿದ್ದಗಂಗಾ ಮಠಕ್ಕೆ ಗಾಂಧಿ ಸೇವಾ ಪ್ರಶಸ್ತಿ ನೀಡುತ್ತಿರುವುದು ಉತ್ತಮ ಕಾರ್ಯವಾಗಿದೆ. ಅಲ್ಲಿನ ಆಹಾರ ಮತ್ತು ಅಕ್ಷರ ದಾಸೋಹಕ್ಕೆ ಈ ಪ್ರಶಸ್ತಿ ಲಭಿಸಿರುವುದು ಸೂಕ್ತವಾಗಿದೆ. ಮೀರಾಬಾಯಿ ಕೊಪ್ಪಿಕರ್ ಅವರು ಹಿರಿಯ ಗಾಂಧಿವಾದಿ ಆಗಿದ್ದು ದಶಕಗಳಿಂದ ನಿರಂತರವಾಗಿ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ ಎಂದರು.

ಸಚಿವರಾದ ಗೋವಿಂದ ಕಾರಜೋಳ, ಹಾಲಪ್ಪ ಆಚಾರ್, ಸಂಸದ ಶಿವಕುಮಾರ್ ಉದಾಸಿ, ಡಾ.ಎಲ್.ಹನುಮಂತಯ್ಯ, ಶಾಸಕ ಎಚ್.ಕೆ.ಪಾಟೀಲ್, ಗಾಂಧಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಅಶೋಕ ಬಿ. ಹಂಚಗೇರಿ ಮತ್ತಿತರರಿದ್ದರು.

ಮದ್ಯಪಾನ ನಿಷೇಧಕ್ಕೆ ಮನವಿ

ರಾಜ್ಯದಲ್ಲಿ ಮದ್ಯಪಾನ ನಿಷೇಧ ಮಾಡಬೇಕು. ಗ್ರಾಮ ಸ್ವರಾಜ್ಯದ ಮೂಲಕ ಅಧಿಕಾರ ವಿಕೇಂದ್ರೀಕರಣ ಮಾಡಬೇಕು. ರಾಜ್ಯದಲ್ಲಿ ಹಲವು ಜಯಂತಿಗಳಿಗೆ ರಜೆ ನೀಡುತ್ತಿದ್ದು, ಇದರ ಬದಲು ಕಚೇರಿಯಲ್ಲೇ ಆಚರಣೆ ಮಾಡಿ ವಿಚಾರಗಳನ್ನು ಜನರಿಗೆ ತಲುಪಿಸಬೇಕು. ರಾಜ್ಯದಲ್ಲಿ 18 ಜಿಲ್ಲೆಗಳಲ್ಲಿ ಮಾತ್ರ ಗಾಂಧಿ ಭವನಗಳಿದ್ದು, ಉಳಿದ 12 ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಕಾರ್ಯ ಆದಷ್ಟು ಬೇಗ ಪೂರ್ಣಗೊಳಿಸಬೇಕು ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಸಿಎಂಗೆ ವಿನಂತಿಸಿದರು.

ಪ್ರಶಸ್ತಿ ಪ್ರದಾನ

ಗಾಂಧಿ ಸೇವಾ ಪುರಸ್ಕಾರ ಪ್ರಶಸ್ತಿಯನ್ನು ಹಿರಿಯ ಗಾಂಧಿವಾದಿ ಮೀರಾಬಾಯಿ ಕೊಪ್ಪಿಕರ್ ಹಾಗೂ ಸಿದ್ಧಗಂಗಾ ಮಠಕ್ಕೆ ಪ್ರದಾನಿಸಲಾಯಿತು. ಪುರಸ್ಕೃತರಿಗೆ ತಲಾ 5 ಲಕ್ಷ ರೂ. ಚೆಕ್, ಸ್ಮರಣಿಕೆ ನೀಡಿ ಗೌರವಿಸಲಾಯಿತು. ಕೊಪ್ಪಿಕರ್ ಪರವಾಗಿ ಸಚಿವ ಗೋವಿಂದ ಕಾರಜೋಳ ಹಾಗೂ ಮಠದ ಪರವಾಗಿ ಡಾ.ಶಿವಪ್ಪ ಅವರು ಪ್ರಶಸ್ತಿ ಸ್ವೀಕರಿಸಿದರು.

ಹೊಸದಿಗಂತ
ಭಾನುವಾರ, 3 ಅಕ್ಟೋಬರ್ 2021, ಬೆಂಗಳೂರು

ಬೆಂಗಳೂರು

ವಿಧಾನಸೌಧ ಆವರಣದಲ್ಲಿರುವ ಗಣ್ಯರ ಪ್ರತಿಮೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುಷ್ಪನಮನ

ಗಾಂಧೀಜಿ, ಶಾಸ್ತ್ರಿ ಚಿಂತನೆ ಇಂದಿಗೂ ಪ್ರಸ್ತುತ


ಬೆಂಗಳೂರು: ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಚಿಂತನೆ ಹಾಗೂ ಆದರ್ಶಗಳು ನಮಗೆ ಮಾದರಿಯಾಗಿದ್ದು, ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದಲ್ಲಿ ದೇಶ ಸುಭಿಕ್ಷವಾಗಲಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧ ಆವರಣದಲ್ಲಿರುವ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಗಾಂಧೀಜಿಯವರು ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸುವ ಮೂಲಕ ಕರ್ನಾಟಕದೊಂದಿಗೆ ಅತ್ಯಂತ ನಿಕಟ ಸಂಪರ್ಕವನ್ನು ಹೊಂದಿದ್ದರು ಎಂದರು.

ಸತ್ಯ, ಅಹಿಂಸೆ ಮೂಲಕ ದೇಶಕ್ಕೆ ಸ್ವಾತಂತ್ರ್ಯ ಕೊಟ್ಟು ಇಡೀ ವಿಶ್ವಕ್ಕೆ ಮಾದರಿಯಾದವರು ಮಹಾತ್ಮ ಗಾಂಧಿಯವರು. ಅವರು ನುಡಿದಂತೆ ನಡೆದು ಇತರರಿಗೂ ಪ್ರೇರಣೆಯಾದರು. ಬ್ರಿಟಿಷರ ವಿರುದ್ಧ ಹೋರಾಟ ನಡೆಸಲು ಅವರು ಕಂಡುಕೊಂಡಿದ್ದು ಅಹಿಂಸೆಯ ಮಾರ್ಗ. ಹೀಗಾಗಿಯೇ ವಿಶ್ವದೆಲ್ಲೆಡೆ ರಾಷ್ಟ್ರಪಿತನಿಗೆ ಅತ್ಯಂತ ಉನ್ನತ ಸ್ಥಾನಮಾನವಿದೆ ಎಂದು ಹೇಳಿದರು.

ಪ್ರಾಮಾಣಿಕತೆಗೆ ಮತ್ತೊಂದು ಹೆಸರೇ ಶಾಸ್ತ್ರಿ: ಮಹಾತ್ಮ ಗಾಂಧಿಯವರಂತೆ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಕೂಡ ದೇಶ ಕಂಡ ಸರಳ, ಸಜ್ಜನಿಕೆ ಮತ್ತು ಸೂಕ್ಷ್ಮತೆಯ ಅಪರೂಪದ ರಾಜಕಾರಣಿ. ಆದರ್ಶಗಳನ್ನು ಜೀವನದುದ್ದಕ್ಕೂ ಅಳವಡಿಸಿಕೊಂಡಿದ್ದ ಅವರು ರೈಲ್ವೆ ಸಚಿವರಾಗಿದ್ದ ವೇಳೆ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇಂತಹ ಸಜ್ಜನ ರಾಜಕಾರಣಿಯನ್ನು ಕಾಣುವುದೇ ಅಪರೂಪ ಎಂದರು.

ಸಚಿವರಾದ ಗೋವಿಂದ ಕಾರಜೋಳ, ಆಚಾರ್ ಹಾಲಪ್ಪ, ವಿ. ಸುನೀಲ್‌ಕುಮಾರ್, ಸಂಸದ ಶಿವಕುಮಾರ ಉದಾಸಿ ಮತ್ತಿತರರಿದ್ದರು.



ಖಾದಿ ಬಟ್ಟೆ ಖರೀದಿಸಿದ ಸಿಎಂ

ಗಾಂಧಿ ಭವನಕ್ಕೆ ಹೊಂದಿಕೊಂಡಿರುವ ಖಾದಿ ಎಂಪೋರಿಯಂಗೆ ಭೇಟಿ ನೀಡಿದ ಸಿಎಂ ಬಸವರಾಜ ಬೊಮ್ಮಾಯಿ, ತಮಗೆ ಜುಬ್ಬಾ ಹಾಗೂ ತಮ್ಮ ಪತ್ನಿಗೆ ಗುಲಾಬಿ ಬಣ್ಣದ ಕಾಟನ್ ಸಿಲ್ಕ್ ಸೀರೆ ಖರೀದಿಸಿದರು. ಸಿಎಂ ಬಸವರಾಜ ಬೊಮ್ಮಾಯಿ ಅವರು ಪತ್ನಿಗೆ ಕಾಟನ್ ಸಿಲ್ಕ್ ಸೀರೆ ಮತ್ತು ಜುಬ್ಬಾ ಸೇರಿ 16,031 ರೂ. ಮೊತ್ತದ ಉತ್ಪನ್ನಗಳ ಖರೀದಿ ಮಾಡಿದರು. ಸಿಎಂ ಬಸವರಾಜ ಬೊಮ್ಮಾಯಿ ಜತೆಗೆ ಸಚಿವ ಎಂಟಿಬಿ ನಾಗರಾಜು ಅವರು 3 ಸಾವಿರ ರೂ. ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು 4,300 ರೂ. ಮೊತ್ತದ ಬಟ್ಟೆ ಖರೀದಿ ಮಾಡಿದರು.

ಗ್ರಾಮಗಳು ಉದ್ಧಾರವಾದರೆ ಮಾತ್ರ ಭಾರತ ಅಭಿವೃದ್ಧಿಯಾಗಲಿದೆ. ದುಡಿಯುವ ಕೈಗಳಿಗೆ ಕೆಲಸ ಸಿಕ್ಕರೆ ಪ್ರತಿಯೊಬ್ಬರು ಸ್ವಾವಲಂಬಿಗಳಾಗುತ್ತಾರೆಂದು ಗಾಂಧೀಜೀ ಭಾವಿಸಿದ್ದರು. ಇದು ನಮ್ಮ ಸರ್ಕಾರದ ಧ್ಯೇಯವೂ ಆಗಿದೆ ಎಂದರು.

**□ ಬಸವರಾಜ ಬೊಮ್ಮಾಯಿ,
ಮುಖ್ಯಮಂತ್ರಿ**

ಕನ್ನಡಪ್ರಭ

ಭಾನುವಾರ 3.10.2021

ಅಧಿಕಾರಸ್ಥರಿಗೆ ಸತ್ಯ ಹೇಳೋದೇ ಸವಾಲ್: ಸಿಎಂ


ಸುಖಾಸುಮ್ಮನೆ ಸುಳ್ಳು ಹೇಳುತ್ತಾರೆ, ಸುಳ್ಳು ಹೇಳಿ ಕರುಣೆ ಗಿಟ್ಟಿಸಲು ಯತ್ನಿಸುತ್ತಾರೆ ಗಾಂಧಿ ಜಯಂತಿ ಅಂಗವಾಗಿ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಅಧಿಕಾರದಲ್ಲಿರುವ ಜನರಿಗೆ ಸತ್ಯದ ಜೊತೆಗಿನ ಸಂಬಂಧ ಕಡಿಮೆ ಇರುತ್ತದೆ. ಸುಖಾಸುಮ್ಮನೆ ಸುಳ್ಳು ಹೇಳುವವರೇ ಹೆಚ್ಚಾಗಿದ್ದಾರೆ. ಸುಳ್ಳು ಹೇಳಿ ಕರುಣೆ ಗಿಟ್ಟಿಸುವ ಪ್ರಯತ್ನ ಮಾಡುತ್ತಾರೆ. ಅಧಿಕಾರದಲ್ಲಿ ಇರುವವರಿಗೆ ಸತ್ಯ ಹೇಳುವುದೇ ದೊಡ್ಡ ಸವಾಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಾಖ್ಯಾನಿಸಿದ್ದಾರೆ.

ವಾರ್ತಾ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಿಂದ ಕುಮಾರಕೃಪ ರಸ್ತೆಯ ಗಾಂಧಿ ಭವನದಲ್ಲಿ ಶನಿವಾರ ಆಯೋಜಿಸಿದ್ದ ಮಹಾತ್ಮ ಗಾಂಧೀಜಿಯವರ ಜನ್ಮದಿನಾಚರಣೆ ಕಾರ್ಯಕ್ರಮದ ಉದ್ಘಾಟನೆ, 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಲಾಂಛನ ಲೋಕಾರ್ಪಣೆ ಹಾಗೂ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಅಧಿಕಾರ ರಾಜಕಾರಣ (ಪವರ್ ಪಾಲಿಟಿಕ್ಸ್) ಮಾಡುವವರಿಗೆ ಸತ್ಯದ ಜೊತೆಗಿನ ಒಡನಾಟ ಕಡಿಮೆ ಇರುತ್ತದೆ. ಸುಳ್ಳು ಹೇಳಿ ಕರುಣೆ ಗಿಟ್ಟಿಸಿಕೊಳ್ಳಲು



ತುಮಕೂರಿನ ಸಿದ್ಧಗಂಗಾ ಮಠದ ಪರವಾಗಿ ಡಾ। ಶಿವಪ್ಪ ಅವರಿಗೆ ಗಾಂಧಿ ಸೇವಾ ಪ್ರಶಸ್ತಿ ನೀಡಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗೌರವಿಸಿದರು. ಸಚಿವರಾದ ಹಾಲಪ್ಪ ಆಚಾರ್, ಗೋವಿಂದ ಕಾರಜೋಳ, ಮಾಜಿ ಸಚಿವ ಎಚ್.ಕೆ.ಪಾಟೀಲ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ.ಕೃಷ್ಣ ಹಾಜರಿದ್ದರು.

ನೋಡುತ್ತಾರೆ. ಸತ್ಯ ಹೇಳುವುದೇ ಸವಾಲಾಗುತ್ತದೆ. ಹಿಂದೆ ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡುತ್ತಿದ್ದರು. ಆದರೆ ಈಗ ಪ್ರಾಣ ಕೊಡುವುದು ಬೇಕಿಲ್ಲ. ದೇಶದ ಒಳಿತಿಗಾಗಿ ಬದುಕುವುದೇ ನಿಜವಾದ ದೇಶಭಕ್ತಿ ಎಂದು ತಿಳಿಸಿದರು.

ಗಾಂಧೀಜಿಯವರ ಹೋರಾಟಕ್ಕೆ ತಾತ್ವಿಕ, ಸೈದ್ಧಾಂತಿಕ ಹಾಗೂ ವೈಜ್ಞಾನಿಕ ಹಿನ್ನೆಲೆಯಿದೆ. ಜನರಿಂದ ಉತ್ಪಾದನಾ ಚಟುವಟಿಕೆಗಳು ನಡೆಯಬೇಕು ಎಂದು ಗಾಂಧೀಜಿ ಬಯಸಿದ್ದರು. ದುಡಿಮೆಯಲ್ಲಿ ಆರ್ಥಿಕತೆ ಯಿದೆ, ದುಡ್ಡಿನಲ್ಲಿ ಅಲ್ಲ. ಅದಕ್ಕಾಗಿಯೇ ಬಸವಣ್ಣನವರು ಕಾಯಕವೇ ಕೈಲಾಸ ಎಂದು ನುಡಿದರು. ಪೂಜೆಗಿಂತಲೂ ಮಿಗಿಲಾದದ್ದು ಕಾಯಕವಾಗಿದ್ದು, ಸ್ವರ್ಗ ಸಮಾನ ಎಂದು ನುಡಿದರು.

ಸಚಿವರಾದ ಗೋವಿಂದ ಕಾರಜೋಳ, ಹಾಲಪ್ಪ ಆಚಾರ್, ಸಂಸದರಾದ ಶಿವಕುಮಾರ್ ಉದಾಸಿ, ಡಾ। ಎಲ್.ಹನುಮಂತಯ್ಯ, ನಿವೃತ್ತ ನ್ಯಾಯಮೂರ್ತಿ ನ್ಯಾ. ಅಶೋಕ್ ಬಿ.ಹಿಂಚಗೇರಿ, ಮಾಜಿ ಸಚಿವ ಎಚ್.ಕೆ.ಪಾಟೀಲ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ.ಕೃಷ್ಣ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್, ವಾರ್ತಾ ಇಲಾಖೆ ಆಯುಕ್ತ ಡಿ.ಜಗದೀಶ್ ಮುಂತಾದವರು ಉಪಸ್ಥಿತರಿದ್ದರು.

ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಶೀಘ್ರ ಪೂರ್ಣ

ಹಿಂದೆ ಗಾಂಧಿ ಭವನದ ಕಾರ್ಯಕ್ರಮಗಳಿಗೆ ಆಗಮಿಸುತ್ತಿದ್ದ ಮುಖ್ಯಮಂತ್ರಿಗಳಿಗೆ ಗಟ್ಟಿಯಾಗಿ ಆಗ್ರಹಿಸುತ್ತಿದ್ದರು. ಗಟ್ಟಿಯಾಗಿ ಹೇಳಿದರೆ ಮಾತ್ರ ಕೆಲಸ ಮಾಡುವ ಮುಖ್ಯಮಂತ್ರಿಗಳು ಇದ್ದರು. ಆದರೆ ಈಗ ಸೂಕ್ಷ್ಮವಾಗಿ ಹೇಳಿದರೆ ಕೆಲಸವಾಗುತ್ತದೆ ಎಂದು ಗೊತ್ತಾಗಿ ನನ್ನ ಕಿವಿಯಲ್ಲಿ ಬೇಡಿಕೆ ಮಂಡಿಸಿದ್ದಾರೆ. ಅದರಂತೆ, ಜಿಲ್ಲೆಗಳಲ್ಲಿ ಬಾಕಿ ಇರುವ ಗಾಂಧಿ ಭವನ ನಿರ್ಮಾಣ ಕಾರ್ಯಗಳನ್ನು ಶೀಘ್ರ ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಮಾಡಲಾಗುತ್ತಿದೆ. ಈಗಾಗಲೇ 18 ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣವಾಗಿದ್ದು, ಉಳಿದ 12 ಜಿಲ್ಲೆಗಳಲ್ಲಿಯೂ ಕೂಡಲೇ ನಿರ್ಮಾಣ ಮಾಡಿ ಲೋಕಾರ್ಪಣೆ ಮಾಡಲು ಕ್ರಮಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಸಂಯುಕ್ತ ಕರ್ನಾಟಕ BENGALURU

03 ಅಕ್ಟೋಬರ್ 2021, ಭಾನುವಾರ

12 ಜಿಲ್ಲೆಗಳಲ್ಲಿ ಶೀಘ್ರ ಗಾಂಧಿ ಭವನ

ಸಂ.ಕ. ಸಮಾಚಾರ, ಬೆಂಗಳೂರು

ರಾಜ್ಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಅಭಿವೃದ್ಧಿಗೆ ಆದ್ಯತೆ ನೀಡಲು ವಿಶೇಷ ಕಾರ್ಯಕ್ರಮ ರೂಪಿಸಲಾಗುವುದು ಮತ್ತು 12 ಜಿಲ್ಲೆಗಳಲ್ಲಿ ಶೀಘ್ರವಾಗಿ ಗಾಂಧಿ ಭವನ ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಶನಿವಾರ ನಗರದ ಗಾಂಧಿ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಗಾಂಧಿ ಸ್ಮಾರಕ ನಿಧಿ ಮತ್ತು ಇತರ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಗಾಂಧಿ ಜಯಂತಿ ಆಚರಣೆ ಹಾಗೂ ಗಾಂಧಿ ಸೇವಾ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಗಾಂಧೀಜಿ ಒಬ್ಬ ವ್ಯಕ್ತಿಯಲ್ಲ. ಅವರು ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲ; ನೈತಿಕ ಭಾರತವನ್ನು ಕಟ್ಟುವ ಶಕ್ತಿ .ಇಂದು ದೇಶಕ್ಕಾಗಿ ಪ್ರಾಣ ಕೊಡಬೇಕಾಗಿಲ್ಲ. ದೇಶಕ್ಕಾಗಿ ದುಡಿದರೆ ಸಾಕು. ಕರ್ತವ್ಯ ಪ್ರಜ್ಞೆ ಮುಖ್ಯ. ಅದನ್ನು ಮಾಡಿದರೆ ಗಾಂಧೀಜಿಯವರಿಗೆ ಕೊಟ್ಟ ಗೌರವ. ದೇಶದ ನೈಸರ್ಗಿಕ ಮತ್ತಿ ಮಾನವ ಸಂಪತ್ತು ಸದುಪಯೋಗವಾಗಬೇಕು ಎಂದು ಹೇಳಿದರು.

ದೇಶಕ್ಕಾಗಿ ದುಡಿಯುವ ಮೂಲಕ ವಿಶ್ವದಲ್ಲಿ ಅಗ್ರಸ್ಥಾನ ಪಡೆಯಲು ಶ್ರಮಿಸಬೇಕು. ಇಂದಿನ ಸಮಾಜದಲ್ಲಿ ನಾವು ನಾಗರಿಕ ಜವಾಬ್ದಾರಿಯ ಕೊರತೆಯನ್ನು ಕಾಣಲಾಗುತ್ತಿದೆ. ಇದು ಹಿನ್ನಡೆ ಆಗಿದೆ. ಕರ್ತವ್ಯ ಪ್ರಜ್ಞೆ ಮೂಡಿಸಿಕೊಂಡು ಕೆಲಸ ಮಾಡಿದರೆ ಯಾವ ಸವಾಲೂ ದೊಡ್ಡದಲ್ಲ. ಸಮಸ್ಯೆಯು ಇರುವುದಿಲ್ಲ ವ್ಯಾಖ್ಯಾನಿಸಿದರು..

ಗಾಂಧೀಜಿಯವರು ಜನರಿಂದ ಉತ್ಪಾದನಾ ಚಟುವಟಿಕೆಗಳು ನಡೆಯಬೇಕು ಎಂದು ಬಯಸಿದ್ದರು. ದುಡಿಮೆಯಲ್ಲಿ ಆರ್ಥಿಕತೆ ಇದೆ. ದುಡ್ಡಿನಲ್ಲಿ ಅಲ್ಲ ಎಂದ ಮುಖ್ಯಮಂತ್ರಿಗಳು, ಆದಕ್ಕಾಗಿಯೇ ಬಸವಣ್ಣನವರು ಕಾಯಕವೇ ಕೈಲಾಸ ಎಂದು ಹೇಳಿದ್ದು. ಕಾಯಕ ಸ್ವರ್ಗ ಸಮಾನ ಎಂದು ಅಭಿಪ್ರಾಯಪಟ್ಟರು.

ಪರಿವರ್ತನೆ ಗಾಂಧೀಜಿಯವರ ದೊಡ್ಡ ಗುಣ. ನಾವು ಇಂದು ಸುಳ್ಳನ್ನು ಉಳಿತಾಯ ಮಾಡಿ, ಸತ್ಯವನ್ನು ಖರ್ಚು ಮಾಡಬೇಕಾಗಿದೆ. ಗಾಂಧೀಜಿಯವರ ಹೋರಾಟಕ್ಕೆ ತಾತ್ವಿಕ, ಸೈದ್ಧಾಂತಿಕ ಹಾಗೂ ವೈಜ್ಞಾನಿಕ ಹಿನ್ನಲೆಯಿದೆ. ಪ್ರತಿಯೊಬ್ಬರೂ ಬದ್ಧತೆಯೊಂದಿಗೆ ಕೆಲಸ ಮಾಡಿದಾಗ ಸಾರ್ಥಕತೆ ಮೂಡುತ್ತದೆ ಎಂದರು.

ಗಾಂಧಿ ಭವನ ನಿರ್ಮಾಣ

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಪ್ರಗತಿಯಲ್ಲಿದೆ. ಈಗಾಗಲೇ 18 ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಆಗಿದೆ. ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಉದ್ಘಾಟನೆಗೆ ಸಜ್ಜುಗೊಂಡಿವೆ. ಉಳಿದ ಜಿಲ್ಲೆಗಳ ಗಾಂಧಿ ಭವನಗಳೂ ಶೀಘ್ರವೇ ಸಿದ್ಧವಾಗಲಿವೆ ಎಂದು ತಿಳಿಸಿದರು..



ಗಾಂಧಿಭವನದಲ್ಲಿ ಆಯೋಜಿಸಲಾಗಿದ್ದ ಗಾಂಧಿಜಯಂತಿ ಕಾರ್ಯಕ್ರಮ ಹಾಗೂ ಗಾಂಧಿಸೇವಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಸಚಿವ ಗೋವಿಂದ ಕಾರಜೋಳ, ಮಾಜಿ ಸಚಿವ ಎಚ್.ಕೆ. ಪಾಟೀಲ ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಮುಂತಾದವರು ಉಪಸ್ಥಿತರಿದ್ದರು.

ಯಾವುದೇ ಜಯಂತಿಗೆ ರಜೆ ಬೇಡ: ಸಿಎಂಗೆ ಸಲಹೆ

ಗಾಂಧಿ ಜಯಂತಿ ಸೇರಿದಂತೆ ಯಾವುದೇ ಗಣ್ಯರ ಜಯಂತಿಗೆ ರಜೆ ಬೇಡ ಎಂದು ಕರ್ನಾಟಕ ಗಾಂಧಿ ಸ್ಮಾರಕ ಟ್ರಸ್ಟ್ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದಾರೆ. ಶನಿವಾರ ಗಾಂಧಿ ಭವನದಲ್ಲಿ ನಡೆದ ಗಾಂಧಿ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಾತ್ಮರ ಯಂತಿ ಅಂಗವಾಗಿ ನೀಡುವ ರಜೆಯಲ್ಲಿ ಮಹಾತ್ಮರ ನೆನಪು ಮಾಡಿಕೊಳ್ಳುವುದಿಲ್ಲ. ಆದ್ದರಿಂದ ರಜೆ ನೀಡುವುದು ಬೇಡ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ವೇದಿಕೆಯಲ್ಲಿ ಇದ್ದ ಮುಖ್ಯಮಂತ್ರಿಗಳಲ್ಲಿ ಕೋರಿದರು. ಆದಕ್ಕೆ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರತಿಕ್ರಿಯಿಸಲಿಲ್ಲ.

ಗಾಂಧೀಜಿಯವರ ಹೋರಾಟಕ್ಕೆ ತಾತ್ವಿಕ. ಸೈದ್ಧಾಂತಿಕ ಹಾಗೂ ವೈಜ್ಞಾನಿಕ ಹಿನ್ನಲೆಯಿದೆ. ಪ್ರತಿಯೊಬ್ಬರೂ ಬದ್ಧತೆಯೊಂದಿಗೆ ಕೆಲಸ ಮಾಡಿದಾಗ ಸಾರ್ಥಕತೆ ಮೂಡುತ್ತದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಪ್ರಗತಿಯಲ್ಲಿದೆ. ದಾವಣಗೆರೆಯ ಗಾಂಧೀ ಭವನ ಇತ್ತೀಚೆಗೆ ಉದ್ಘಾಟನೆಯಾಗಿದ್ದು, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಉದ್ಘಾಟನೆಗೆ ಸಜ್ಜುಗೊಂಡಿವೆ. ಉಳಿದ ಜಿಲ್ಲೆಗಳ ಗಾಂಧಿ ಭವನಗಳೂ ಶೀಘ್ರವೇ ಸಿದ್ಧವಾಗಲಿವೆ ಎಂದು ನುಡಿದರು.

ಪ್ರಶಸ್ತಿ ಪ್ರದಾನ

ರಾಜ್ಯ ಸರ್ಕಾರದ ಪ್ರತಿಷ್ಠಿತ ಗಾಂಧಿ ಸೇವಾ ಪ್ರಶಸ್ತಿಯನ್ನು ಶನಿವಾರ ಸಿದ್ಧಗಂಗಾ ಮಠದ ಶ್ರೀಗಳಿಗೆ ಮತ್ತು ಮುಧೋಳ ವಾತ್ಸಲ್ಯ ಧಾಮ ಆಶ್ರಯ ಟ್ರಸ್ಟ್‌ನ ಮೀರಾಬಾಯಿ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರದಾನ ಮಾಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಗಾಂಧಿ ಸ್ಮಾರಕ ನಿಧಿ, ವತಿಯಿಂದ ಏರ್ಪಡಿಸಲಾಗಿದ್ದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ 5 ಲಕ್ಷ ರು. ನಗದು ಮತ್ತು ನೆನಪಿನ ಕಾಣಿಕೆಯುಳ್ಳ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಗಾಂಧಿ ಸೇವಾ ಪ್ರಶಸ್ತಿಯನ್ನು ಸಿದ್ಧಗಂಗಾ ಮಠದ ಪರವಾಗಿ ಶ್ರೀ ಶಿವಕುಮಾರ ಸ್ವಾಮಿಗಳಿಗೆ ಸತತ 44 ವರ್ಷಗಳವರೆಗೆ ಚಿಕಿತ್ಸೆ ನೀಡಿದ ಡಾ. ಶಿವಪ್ಪ ಹಾಗೂ ಹಿರಿಯ ಗಾಂಧೀವಾದಿ ಶ್ರೀಮತಿ ಮೀರಾತಾಯಿ ಕೊಪ್ಪಿಕರ ಅವರ ಪರವಾಗಿ ಮುಧೋಳ ಶಾಸಕರೂ ಆಗಿರುವ ಜಲ ಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ ಅವರು ಪ್ರಶಸ್ತಿ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವ ಹಾಲಪ್ಪ ಆಚಾರ, ಸಂಸದರಾದ ಶಿವಕುಮಾರ್ ಉದಾಸಿ, ಡಾ. ಎಲ್. ಹನುಮಂತಯ್ಯ, ಹಿರಿಯ ರಾಜಕಾರಣಿ ಎಚ್.ಕೆ. ಪಾಟೀಲ್, ಹಿರಿಯ ರಂಗ ಕರ್ಮಿ ಪ್ರಸನ್ನ, ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಅಶೋಕ್ ಬಿ. ಹಿಂಚಗೇರಿ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಆಯುಕ್ತ ಜಿ. ಜಗದೀಶ್, ಗಾಂಧಿ ಸ್ಮಾರಕ ಟ್ರಸ್ಟ್ ಸದಸ್ಯ ಎನ್.ಆರ್. ವಿಶುಕುಮಾರ ಮತ್ತಿತರ ಗಣ್ಯರು ಇದ್ದರು. ಇದೇ ವೇಳೆ ಸ್ವಾತಂತ್ರ್ಯೋತ್ಸವದ 75 ನೇ ಅಮೃತ ಮಹೋತ್ಸವ ಲೋಗೋವನ್ನು ಮುಖ್ಯಮಂತ್ರಿಗಳು ಲೋಕಾರ್ಪಣೆ ಮಾಡಿದರು.

ನಂ. 1 ಕನ್ನಡ ದಿನಪತ್ರಿಕೆ

VIJAYAVANI BENGALURU
ಭಾನುವಾರ 3 ಅಕ್ಟೋಬರ್ 2021
3 OCTOBER 2021

ಸಿದ್ಧಗಂಗಾ ಮಠ, ಮೀರಾಬಾಯಿಗೆ ಪ್ರಶಸ್ತಿ ಪ್ರದಾನ

ಬೆಂಗಳೂರು: ರಾಜ್ಯದ 12 ಜಿಲ್ಲೆಗಳಲ್ಲಿ ಬಾಕಿಯಿರುವ ಗಾಂಧಿ ಭವನ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಗಾಂಧಿ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಗಾಂಧಿ ಸ್ಮಾರಕ ನಿಧಿ ಆಯೋಜಿಸಲಾಗಿದ್ದ ಗಾಂಧಿ ಜಯಂತಿ ಆಚರಣೆ ಹಾಗೂ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ರಾಜ್ಯದ 30 ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಿಸಿ ಅವರ ತತ್ವಾದರ್ಶ ಮತ್ತು ಸಮಾಜಮುಖಿ ಚಿಂತನೆಗಳನ್ನು ಯುವಕರಲ್ಲಿ ಬೆಳೆಸಬೇಕಿದೆ. ಈಗಾಗಲೆ 18 ಜಿಲ್ಲೆಗಳಲ್ಲಿ ಭವನ ಕಾರ್ಯನಿರ್ವಹಿಸುತ್ತಿವೆ. ಇತ್ತೀಚಿಗೆ ದಾವಣಗೆರೆಯಲ್ಲಿ ಚಾಲನೆ ನೀಡಲಾಗಿದೆ. ಬಾಕಿ 12 ಜಿಲ್ಲೆಗಳ ಪೈಕಿ ಬಳ್ಳಾರಿ ಮತ್ತು ಶಿವಮೊಗ್ಗದಲ್ಲಿನ ಭವನ ಉದ್ಘಾಟನೆಗೆ ಸಜ್ಜುಗೊಂಡಿವೆ. ಉಳಿದ ಜಿಲ್ಲೆಗಳಲ್ಲೂ ಶೀಘ್ರವೇ ಸಿದ್ಧವಾಗಲಿವೆ ಎಂದು ಮಾಹಿತಿ ನೀಡಿದರು.

₹1.21 ಕೋಟಿ ಉತ್ಪನ್ನ ಮಾರಾಟ

ರಾಜ್ಯಾದ್ಯಂತ ಶನಿವಾರ ಸಂಜೆ 5 ಗಂಟೆವರೆಗೆ ಒಟ್ಟು 1,21,71,204 ರೂ. ಖಾದಿ ಗ್ರಾಮೋದ್ಯೋಗ ಉತ್ಪನ್ನಗಳ ಮಾರಾಟವಾಗಿದೆ.

ಗಾಂಧಿ ಒಬ್ಬ ವ್ಯಕ್ತಿ ಅಥವಾ ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲ. ನೈತಿಕ ಭಾರತವನ್ನು ಕಟ್ಟುವ ಶಕ್ತಿಯಾಗಿದ್ದಾರೆ. ದೇಶದಲ್ಲಿ ಮಾನವ ಮತ್ತು ನೈಸರ್ಗಿಕ ಸಂಪನ್ಮೂಲ ಹೆಚ್ಚಾಗಿದ್ದು, ದುಡಿಯುವ ಕೈಗಳಿಗೆ ಕೆಲಸ ಕೊಡುವ ಮಹದಾಸೆ ಅವರದ್ದಾಗಿತ್ತು. ಎಲ್ಲರೂ ದುಡಿಮೆಯಲ್ಲಿ ಪಾಳ್ಗೊಳ್ಳುವ ಮೂಲಕ ದೇಶದ ಆರ್ಥಿಕತೆಯನ್ನು ವಿಶ್ವದಲ್ಲಿ ಅಗ್ರ ಸ್ಥಾನಕ್ಕೆ ತರಬೇಕು. ಆರ್ಥಿಕತೆ ಎಂದರೆ ಕೇವಲ ಹಣದಲ್ಲಿ ಮುಂದಿರುವುದು ಮಾತ್ರವಲ್ಲ, ದುಡಿಮೆಯೂ ಆಗಿದೆ. ನಾವು ಸುಳ್ಳನ್ನು ಉಳಿತಾಯ ಮಾಡಿ, ಸತ್ಯವನ್ನು ಹೆಚ್ಚಾಗಿ ಖರ್ಚು ಮಾಡಬೇಕಾಗಿದೆ. ಇದಕ್ಕಾಗಿ ಗಾಂಧಿ ಜೀವನಚರಿತ್ರೆ ಮೈ ಎಕ್ಸ್‌ಪೀರಿಮೆಂಟ್ ವಿಥ್ ಟ್ರೂಥ್ ಓದಬೇಕು ಎಂದು ಸಿಎಂ ಸಲಹೆ ನೀಡಿದರು.



ಸಿದ್ಧಗಂಗಾ ಮಠಕ್ಕೆ ಕೊಡಮಾಡಿದ ಗಾಂಧಿ ಸೇವಾ ಪ್ರಶಸ್ತಿಯನ್ನು ಶ್ರೀ ಸಿದ್ಧಗಂಗಾ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯ ಡಾ.ಬಿ.ಶಿವಪ್ಪ ಸ್ವೀಕರಿಸಿದರು.

ಐದು ಲಕ್ಷ ರೂ. ನಗದು, ಸ್ಮರಣಿಕೆ

2020ನೇ ಸಾಲಿನ ಗಾಂಧಿ ಸೇವಾ ಪ್ರಶಸ್ತಿಯನ್ನು ಮುಧೋಳದ ಮೀರಾಬಾಯಿ ಕೊಪ್ಪಿಕರ (ಸಚಿವ ಗೋವಿಂದ ಕಾರಜೋಳ ಸ್ವೀಕಾರ) ಅವರಿಗೆ, 2021ನೇ ಸಾಲಿನ ಪ್ರಶಸ್ತಿಯನ್ನು ಸಿದ್ಧಗಂಗಾ ಮಠಕ್ಕೆ (ಡಾ.ಶಿವಪ್ಪ ಸ್ವೀಕಾರ) ನೀಡಲಾಯಿತು. ಈ ಪ್ರಶಸ್ತಿಯು ತಲಾ 5 ಲಕ್ಷ ರೂ. ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ.

ರಾಜ್ಯದಲ್ಲಿ ಖಾದಿ ಉತ್ಪಾದನೆಯಲ್ಲಿ ಕಲಬೆರಕೆ ಹೆಚ್ಚಾಗುತ್ತಿದೆ. ಇದನ್ನು ತಡೆದು ಶುದ್ಧ ಖಾದಿ ಬಟ್ಟೆಗಳ ನೇಯ್ಗೆಗೆ ಪ್ರಶಸ್ತ್ಯ ನೀಡಬೇಕಿದೆ. ಹೀಗಾಗಿ ಖಾದಿ ಮತ್ತು ಗ್ರಾಮೋದ್ಯೋಗ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮ ರೂಪಿಸಲಾಗುವುದು.

ಮುಖ್ಯಮಂತ್ರಿ

ರಾಜ್ಯದಲ್ಲಿ ಗಾಂಧಿ ಸೇರಿ ಅನೇಕ ಮಹಾನಾಯಕರ ಜಯಂತಿಗೆ ರಜೆ ಕೊಡುವುದನ್ನು ನಿಷೇಧಿಸಬೇಕು. ಆ ಮೂಲಕ ಎಲ್ಲ ಕಚೇರಿಗಳಲ್ಲಿ ಗಾಂಧಿ ಜಯಂತಿಯಂದು ಅವರ ವಿಚಾರಗಳನ್ನು ಸಾರಲು ಅವಕಾಶ ಮಾಡಿಕೊಡಬೇಕು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ

ಭರವಸೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ । ಸಿದ್ದಗಂಗಾ ಮಠ, ಸ್ವಾತಂತ್ರ್ಯಯೋಧೆ ಮೀರಾಗೆ ಗಾಂಧಿ ಪುರಸ್ಕಾರ ಪ್ರದಾನ । ತಮಗೆ ಜುಬ್ಬಾ, ಪತ್ನಿಗೆ ಖಾದಿ ಸೀರೆ ಖರೀದಿಸಿದ ಸಿಎಂ

12 ಜಿಲ್ಲೆಗಳಲ್ಲಿ ಗಾಂಧಿ ಭವನ

■ ವಿಕ ಸುದ್ದಿಲೋಕ ಬೆಂಗಳೂರು


"ರಾಜ್ಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗವನ್ನು ಪುನಶ್ಚೇತನಗೊಳಿಸಲು ಸರಕಾರ ಬದ್ಧವಾಗಿದ್ದು, ರಾಜ್ಯದ 12 ಜಿಲ್ಲೆಗಳಲ್ಲಿ ಗಾಂಧಿಭವನಗಳ ನಿರ್ಮಾಣ ಮಾಡಲಾಗುವುದು," ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಗಾಂಧಿ ಸ್ಮಾರಕ ನಿಧಿ ಸಹಯೋಗದೊಂದಿಗೆ ಗಾಂಧಿ ಭವನದಲ್ಲಿ ಶನಿವಾರ ಗಾಂಧಿ ಜಯಂತಿ ಆಚರಣೆ ಹಾಗೂ ಗಾಂಧಿ ಸೇವಾ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಿ, "ದಾವಣಗೆರೆಯಲ್ಲಿ ಈಗಾಗಲೇ ಗಾಂಧಿ ಭವನ ಉದ್ಘಾಟನೆಯಾಗಿದ್ದು, ಶಿವಮೊಗ್ಗ, ಬಳ್ಳಾರಿಯಲ್ಲಿ ಸಿದ್ಧವಾಗಿವೆ. ಉಳಿದ ಜಿಲ್ಲೆಗಳಲ್ಲಿ ಕಾಮಗಾರಿ ನಡೆಯುತ್ತಿದೆ," ಎಂದರು.

"ಗಾಂಧೀಜಿ ಒಬ್ಬ ವ್ಯಕ್ತಿಯಲ್ಲ, ಅವರು ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲ; ನೈತಿಕ ಭಾರತವನ್ನು ಕಟ್ಟುವ ಶಕ್ತಿ. ಇಂದಿನ ಸಮಾಜದಲ್ಲಿ ನಾಗರಿಕ ಜವಾಬ್ದಾರಿಯ ಕೊರತೆಯನ್ನು ಕಾಣುತ್ತೇವೆ. ದೇಶಕ್ಕಾಗಿ ದುಡಿಯುವ ಮೂಲಕ ವಿಶ್ವದಲ್ಲಿ ಅಗ್ರ ಸ್ಥಾನ ಪಡೆಯಲು ಶ್ರಮಿಸುವ ಮೂಲಕ ಗಾಂಧಿಯ ಭಾರತವನ್ನು ಕಟ್ಟೋಣ," ಎಂದು ತಿಳಿಸಿದರು.

"ಸಿದ್ಧಗಂಗಾ ಮಠಕ್ಕೆ ಗಾಂಧಿ ಸೇವಾ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನಾರ್ಹ. ಸ್ವಾತಂತ್ರ್ಯ ಹೋರಾಟಗಾರರಾದ ಮೀರಾಬಾಯಿ ಕೊಪ್ಪಿಕರ್ ಅವರು ಗಾಂಧಿವಾದಿಯಾಗಿದ್ದು, ಅವರ ಪ್ರೇರಣೆಗೆ ಪ್ರಶಸ್ತಿ ನೀಡುತ್ತಿರುವುದು ಉತ್ತಮ ಕಾರ್ಯವಾಗಿದೆ," ಎಂದರು.





ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಗಾಂಧಿ ಸೇವಾ ಪುರಸ್ಕಾರವನ್ನು ಗೋವಿಂದ ಕಾರಜೋಳ (ಮೀರಾಬಾಯಿ ಕೊಪ್ಪಿಕರ್ ಪರವಾಗಿ), ಸಿದ್ಧಗಂಗಾ ಮಠದ ಪ್ರತಿನಿಧಿ ಡಾ. ಶಿವಪ್ಪ ಅವರಿಗೆ ಸಿಎಂ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು.

ಗಾಂಧಿ ಸೇವಾ ಪುರಸ್ಕಾರ

2020ನೇ ಸಾಲಿನ ಗಾಂಧಿ ಸೇವಾ ಪುರಸ್ಕಾರ ಪ್ರಶಸ್ತಿಯನ್ನು ಬಾಗಲಕೋಟೆ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಾದ ಮೀರಾಬಾಯಿ ಕೊಪ್ಪಿಕರ್ ಮತ್ತು 2021 ನೇ ಸಾಲಿನ ಪ್ರಶಸ್ತಿಯನ್ನು ಶ್ರೀ ಸಿದ್ಧಗಂಗಾ ಶಿಕ್ಷಣ ಸಂಸ್ಥೆ ಹಾಗೂ ಶ್ರೀ ಸಿದ್ಧಗಂಗಾ ಮಠಕ್ಕೆ ನೀಡಲಾಯಿತು. ಪ್ರಶಸ್ತಿಯು ತಲಾ ಐದು ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಮಠದ ಪರವಾಗಿ ಡಾ. ಶಿವಪ್ಪ ಹಾಗೂ ಮೀರಾಬಾಯಿ ಕೊಪ್ಪಿಕರ್ ಪರವಾಗಿ ಸಚಿವ ಗೋವಿಂದ ಕಾರಜೋಳ ಅವರು ಪ್ರಶಸ್ತಿ ಸ್ವೀಕರಿಸಿದರು.

16 ಸಾವಿರ ರೂ. ಮೌಲ್ಯದ ಖಾದಿ ಬಟ್ಟೆ ಖರೀದಿ

ಖಾದಿ ಎಂಪೋರಿಯಂನಲ್ಲಿ ತಮಗೆ ಜುಬ್ಬಾ ಹಾಗೂ ಪತ್ನಿಗೆ ಗುಲಾಬಿ ಬಣ್ಣದ ಕಾಟನ್ ಸಿಲ್ಕ್ ಸೀರೆಯನ್ನು 16,031 ರೂ. ನೀಡಿ ಸಿಎಂ ಬೊಮ್ಮಾಯಿ ಖರೀದಿಸಿ ಖಾದಿ ಬಟ್ಟೆಗೆ ಪ್ರೋತ್ಸಾಹಿಸಿದರು. ಜತೆಗೆ ಸಚಿವ ಎಂಟಿಬಿ ನಾಗರಾಜು ಅವರು 3 ಸಾವಿರ ರೂ. ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು 4,300 ರೂ. ಮೊತ್ತದ ಬಟ್ಟೆ ಖರೀದಿ ಮಾಡಿದರು. ಸಚಿವರಾದ ಗೋವಿಂದ ಕಾರಜೋಳ, ಸುನೀಲ್ ಕುಮಾರ್ ಕೂಡ ಖಾದಿ ಎಂಪೋರಿಯಂಗೆ ಭೇಟಿ ನೀಡಿದ್ದರು. ಈ ವೇಳೆ ರಂಗಕರ್ಮಿ ಪ್ರಸನ್ನ ಉಪಸ್ಥಿತರಿದ್ದರು.



ಸಚಿವರಾದ ಗೋವಿಂದ ಎಂ. ಕಾರಜೋಳ, ಹಾಲಪ್ಪ ಆಚಾರ್, ಮಾಜಿ ಸಚಿವ ಎಚ್.ಕೆ. ಪಾಟೀಲ್, ನ್ಯಾ. ಅಶೋಕ ಬಿ. ಹಿಂಚಗೇರಿ, ಸಂಸದರಾದ ಶಿವಕುಮಾರ್ ಉದಾಸಿ, ಹಿರಿಯ ಸಾಹಿತಿ ಡಾ. ಎಲ್. ಹನುಮಂತಯ್ಯ, ವಾರ್ತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಮಂಜುನಾಥ್ ಪ್ರಸಾದ್, ಆಯುಕ್ತ ಜಿ. ಜಗದೀಶ್ ಉಪಸ್ಥಿತರಿದ್ದರು. ಗಾಂಧಿ ಭವನದ ಕಾರ್ಯಕ್ರಮದ ವೇದಿಕೆಯಲ್ಲಿ ಕುಳಿತಿದ್ದ ಗಾಂಧಿತಾತನ ವೇಷಧಾರಿ ಮುಖ್ಯಮಂತ್ರಿಗಳ ಗಮನ ಸೆಳೆದು, ಪರಸ್ಪರ ಶುಭಾಶಯಗಳನ್ನು ಹೇಳಿದರು.

ಮದ್ಯಪಾನ ನಿಷೇಧಕ್ಕೆ ಮನವಿ

"ರಾಜ್ಯದಲ್ಲಿ ಮದ್ಯಪಾನ ನಿಷೇಧಿಸಬೇಕು. ಗ್ರಾಮ ಸ್ವರಾಜ್ಯದ ಮೂಲಕ ಅಧಿಕಾರ ವಿಕೇಂದ್ರೀಕರಣ ಮಾಡಬೇಕು. ನಾನಾ ಜಯಂತಿಗಳಿಗೆ ರಜೆಗಳನ್ನು ಕೊಡದೆ ಮಹನೀಯರ ದಿನಾಚರಣೆಯನ್ನು ಕಚೇರಿಯಲ್ಲೇ ಆಚರಿಸಿ, ಅವರ ವಿಚಾರಗಳನ್ನು ಸಮಾಜಕ್ಕೆ ತಲುಪುವಂತೆ ಮಾಡಬೇಕು," ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಿದರು.

ಪುಷ್ಪ ನಮನ: ಇದಕ್ಕೂ ಮೊದಲು ವಿಧಾನಸೌಧ ಆವರಣದಲ್ಲಿರುವ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಪ್ರತಿಮೆಗಳ ಬಳಿ ಭಾವ ಚಿತ್ರಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ಅವರು ಪುಷ್ಪ ನಮನ ಸಲ್ಲಿಸಿದರು.

ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಸಿಎಂ ಮಾತು | ಸುಳ್ಳು ಹೇಳಿ ಅನುಕಂಪ ಗಿಟ್ಟಿಸುವ ಕೆಲಸ | ಪವರ್ ಪಾಲಿಟಿಕ್ಸ್‌ನಲ್ಲಿ ಜನರೊಂದಿಗೆ ಸಂಪರ್ಕ ಕಡಿಮೆ | ದೇಶದ ಒಳಿತಿಗಾಗಿ ಬದುಕುವುದೇ ನಿಜವಾದ ದೇಶಭಕ್ತಿ

ಅಧಿಕಾರದಲ್ಲಿದ್ದಾಗ ಸತ್ಯ ಹೇಳುವುದು ದೊಡ್ಡ ಸವಾಲು: ಸಿಎಂ ಬೊಮ್ಮಾಯಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಂದಿನ ಸಮಾಜದಲ್ಲಿ, ಸಾರ್ವಜನಿಕರ ಜೀವನದಲ್ಲಿರುವವರು ಅಥವಾ ಅಧಿಕಾರದಲ್ಲಿರುವ ಪ್ರತಿಯೊಬ್ಬರಿಗೂ ಸತ್ಯ ಹೇಳುವುದು ಬಹುದೊಡ್ಡ ಸವಾಲು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮ ದಿನಾಚರಣೆ ಪ್ರಯುಕ್ತ ಗಾಂಧಿಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಗಾಂಧಿ ಸ್ಮಾರಕ ನಿಧಿ ಏರ್ಪಡಿಸಿದ್ದ ಗಾಂಧಿಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಧಿಕಾರದಲ್ಲಿದ್ದಾಗ ಪ್ರತಿಯೊಬ್ಬರಿಗೂ ಸತ್ಯ ಹೇಳುವುದು ದೊಡ್ಡ ಸವಾಲು. ಈಗಿನ ಸಂದರ್ಭದಲ್ಲಿ ಕೆಲವರು ಸುಖಾಸುಮ್ಮನೆ ಸುಳ್ಳು ಹೇಳಿಕೊಂಡು ಅನುಕಂಪ ಗಿಟ್ಟಿಸುವ ಕೆಲಸ ಮಾಡುತ್ತಾರೆ ಎಂದು ಹೇಳಿದರು.

ಈಗಿನ ಪವರ್ ಪಾಲಿಟಿಕ್ಸ್ ಮಾಡುವ ಜನರಿಗೆ ಸತ್ಯದ ಜತೆಗಿನ ಸಂಬಂಧ ಕಡಿಮೆ. ಸುಖಾಸುಮ್ಮನೆ ಸುಳ್ಳು ಹೇಳುವ ಜನರೇ ಹೆಚ್ಚು, ಸದಾ ಸುಳ್ಳು ಹೇಳಿಕೊಂಡು ಕರುಣೆ ಗಿಟ್ಟಿಸುವುದರಲ್ಲಿ ನಿರತರಾಗಿದ್ದಾರೆ ಎಂದು ಯಾರ ಹೆಸರನ್ನೂ ಹೇಳದೆ ಟೀಕಿಸಿದರು. ರಾಜಕಾರಣಿಗಳಿಗೆ ಯಾವತ್ತೂ ಸತ್ಯ ಹೇಳಿ ಅಭ್ಯಾಸವಿಲ್ಲ, ಏಕೆಂದರೆ ನನ್ನನ್ನೂ ಸೇರಿದಂತೆ ಪ್ರತಿಯೊಬ್ಬ ರಾಜಕಾರಣಿಗೂ ಸತ್ಯ ಹೇಳುವುದೆಂದರೆ ದೊಡ್ಡ ಸವಾಲು ಎಂದು ಅಭಿಪ್ರಾಯಪಟ್ಟರು.

ಒಳಿತಿಗಾಗಿ ಬದುಕಿ: ಈ ಹಿಂದೆ ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕರು ತಮ್ಮ ಪ್ರಾಣವನ್ನೇ ಕೊಟ್ಟಿದ್ದಾರೆ. ಆದರೀಗ ಪ್ರಾಣ ಕೊಡುವುದು ಬೇಕಿಲ್ಲ, ದೇಶದ ಒಳಿತಿಗಾಗಿ ಬದುಕುವುದೇ ನಿಜವಾದ ದೇಶಭಕ್ತಿ. ಇತರರಿಗಾಗಿ ಬದುಕುವುದೇ ಜೀವನದ ಆಶಯ. ದುಡಿಮೆಯಲ್ಲಿ ಆರ್ಥಿಕತೆ ಇದೆ, ದುಡ್ಡಿನಲ್ಲಿ ಆರ್ಥಿಕತೆ ಇಲ್ಲ. ಬಸವಣ್ಣ ಹೇಳಿದ್ದು, ಕಾಯಕವೇ ಕೈಲಾಸ ಆಗುತ್ತದೆ. ಆದರೆ, ಕಾಯಕ ಎಂದರೆ ಪೂಜೆ ಅಲ್ಲ, ಸ್ವರ್ಗ ಎಂದರು.

ಗಾಂಧೀಜಿಯವರಲ್ಲಿ ಪರಿವರ್ತನೆಯಾಗಿದ್ದೇ ಅತಿದೊಡ್ಡ ಗುಣ. ಅತ್ಯಂತ ಪ್ರಭಾವಶಾಲಿಯಾಗಿದ್ದ ಅವರು ಅಷ್ಟು ಸರಳವಾಗಿ ಪರಿವರ್ತನೆ ಯಾಗುವವರಲ್ಲ. ಅವರ ಈ ನಿರ್ಧಾರವೇ ದೇಶಕ್ಕೆ ಸ್ವಾತಂತ್ರ್ಯ ಸಿಗಲು ಸಾಧ್ಯವಾಯಿತು ಎಂದರು.

ಸೂಕ್ಷ್ಮವಾಗಿ ಹೇಳಿದರೆ ಕೆಲಸ: ಈ ಹಿಂದೆ ಇಲ್ಲಿಗೆ ಸಿಎಂ ಆದವರು ಬಂದಾಗ ಅತ್ಯಂತ ಗಟ್ಟಿ ದನಿಯಲ್ಲಿ ಆಗ್ರಹಿಸುತ್ತಿದ್ದರು. ಆಗ ಗಟ್ಟಿಯಾಗಿ ಹೇಳಿದರೆ ಮಾತ್ರ ಕೆಲಸ ಮಾಡುವ ಸಿಎಂಗಳಿದ್ದರು. ಈಗ ಸೂಕ್ಷ್ಮವಾಗಿ ಹೇಳಿದರೆ ಕೆಲಸವಾಗುತ್ತದೆ ಎಂದು ಗೊತ್ತಾದಂತೆ ಕಾಣುತ್ತದೆ ಎಂದರು. ಇದೇ ಸಂದರ್ಭದಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಅವರು ರಾಜ್ಯ ಸರಕಾರದ ಗಾಂಧಿ ಸೇವಾ ಪ್ರಶಸ್ತಿಯನ್ನು ಸಿದ್ದಗಂಗಾ ಮಠದ ಪರವಾಗಿ ನೀಡಿದರು.



ಗಾಂಧಿಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಗಾಂಧಿ ಸ್ಮಾರಕ ನಿಧಿ ಏರ್ಪಡಿಸಿದ್ದ ಗಾಂಧಿಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

> ನಾನು ಕೂಡ ಮುಂಬೈನಲ್ಲಿ ಕೆಲಸ ಮಾಡುತ್ತಿದ್ದಾಗ ಗಾಂಧೀಜಿಯವರ ಬಗ್ಗೆ ಓದಿದ್ದೆ. ಹೀಗಾಗಿ ನನಗೆ ಅವರ ಬಗ್ಗೆ ವಿಶೇಷವಾದ ಗೌರವ ಮತ್ತು ಅಭಿಮಾನವಿದೆ. ನೀವು ನನ್ನ ಕಿವಿಯಲ್ಲಿ ಸೂಕ್ಷ್ಮವಾಗಿ ಹೇಳಿದ್ದೀರಿ. ನನ್ನ ಅವಧಿಯಲ್ಲೇ 12 ಗಾಂಧಿ ಭವನ ಕಾರ್ಯ ಪೂರ್ಣಗೊಳಿಸುತ್ತೇನೆ.
>
> ಮುಖ್ಯಮಂತ್ರಿ

ಸಿಎಂ . ಅವರಿಂದ ಡಾ. ಶಿವಪ್ಪ ಹಾಗೂ ಹಿರಿಯ ಗಾಂಧಿವಾದಿ ಮೀರಾತಾಯಿ ಕೊಪ್ಪಿಕರ ಅವರ ಪರವಾಗಿ ಮುಧೋಳ ಶಾಸಕರೂ ಆಗಿರುವ ಜಲಸಂಪನ್ಮೂಲ ಸಚಿವ ಗೋವಿಂದ ಎಂ.ಕಾರಜೋಳ ಅವರು ಪ್ರಶಸ್ತಿ ಸ್ವೀಕರಿಸಿದರು. ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಗಣಿ ಮತ್ತು ಭೂ ವಿಜ್ಞಾನ ಸಚಿವ ಹಾಲಪ್ಪ ಆಚಾರ, ಸಂಸದರಾದ ಶಿವಕುಮಾರ್ ಉದಾಸಿ, ಡಾ. ಎಲ್.ಹನುಮಂತಯ್ಯ, ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಅಶೋಕ್ ಬಿ. ಹಿಂಚಗೇರಿ, ಗಾಂಧಿ ಸ್ಮಾರಕ ಅಧ್ಯಕ್ಷ ವೂಡೆ ಪಿ.ಕೃಷ್ಣ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಆಯುಕ್ತ ಜಿ.ಜಗದೀಶ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಪ್ರಜಾವಾಣಿ

‘ಮಹನೀಯರ ಜಯಂತಿಗೆ ಸರ್ಕಾರಿ ರಜೆ ರದ್ದಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾತ್ಮ ಗಾಂಧಿ ಜಯಂತಿಯ ರಜೆ ಸೇರಿದಂತೆ ಎಲ್ಲ ಮಹನೀಯರ ಜಯಂತಿಗಳಿಗೆ ನೀಡಲಾಗಿರುವ ಸರ್ಕಾರಿ ರಜೆಗಳನ್ನು ರದ್ದು ಮಾಡಬೇಕು’ ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಆಗ್ರಹಿಸಿದರು.

ಗಾಂಧಿ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ‘2020ನೇ ಸಾಲಿನ ಗಾಂಧಿ ಸೇವಾ ಪ್ರಶಸ್ತಿ’ ಪ್ರದಾನ ಸಮಾರಂಭದಲ್ಲಿ ಹಾಜರಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಅವರು ಈ ಕುರಿತು ಮನವಿ ಮಾಡಿದರು.

‘ಮಹನೀಯರ ಜಯಂತಿಗಳನ್ನು ಸರ್ಕಾರಿ ರಜೆಯ ಮೂಲಕ ಆಚರಿಸುವ ಬದಲಿಗೆ ಅಂದು ಶಾಲಾ-ಕಾಲೇಜು ಕಚೇರಿಗಳಲ್ಲಿ ಹಾಜರಿದ್ದು ಕೆಲಸ ಮಾಡಬೇಕು. ಈ ಮೂಲಕ ನಾಡಿಗೆ ಕೊಡುಗೆ ನೀಡಿದ ಹಿರಿಯರ ವಿಚಾರಗಳನ್ನು ಅಂತರ್ಗತ ಮಾಡಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಗಾಂಧಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಹೇಳಿಕೆ

ಖಾದಿ ಉತ್ತೇಜನಕ್ಕೆ ವಿಶೇಷ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾದಿ ಮತ್ತು ಗ್ರಾಮೋದ್ಯೋಗದ ಉತ್ಪನ್ನಗಳ ಉತ್ಪಾದನೆಯನ್ನು ಉತ್ತೇಜಿಸಲು ವಿಶೇಷ ಯೋಜನೆ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಗಾಂಧಿ ಸ್ಮಾರಕ ನಿಧಿ ಮತ್ತು ಇತರ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಶನಿವಾರ ನಡೆದ ಗಾಂಧಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಗಾಂಧಿ ಸೇವಾ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

‘ಗಾಂಧೀಜಿ ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಮಾತ್ರ ಅಲ್ಲ. ನೈತಿಕ ಭಾರತವನ್ನು ಕಟ್ಟಿದ ಶಕ್ತಿ. ಗಾಂಧೀಜಿಯವರು ಜನರಿಂದ ಉತ್ಪಾದನಾ ಚಟುವಟಿಕೆಗಳು ನಡೆಯಬೇಕು ಎಂದು ಬಯಸಿದ್ದರು. ದುಡಿಮೆಯಲ್ಲಿ ಆರ್ಥಿಕತೆ ಇದೆ. ದುಡ್ಡಿನಲ್ಲಿ ಅಲ್ಲ. ಬಸವಣ್ಣನವರು ಕಾಯಕವೇ ಕೈಲಾಸ ಎಂದು ನುಡಿದರು. ಕಾಯಕ ಪೂಜೆಗಿಂತಲೂ ಮಿಗಿಲಾದದ್ದು’ ಎಂದರು.

ಗಾಂಧೀಜಿಯವರ ಹೋರಾಟಕ್ಕೆ ತಾತ್ವಿಕ, ಸೈದ್ಧಾಂತಿಕ ಹಾಗೂ ವೈಜ್ಞಾನಿಕ ಹಿನ್ನೆಲೆಯಿದೆ. ಪ್ರತಿಯೊಬ್ಬರೂ ಬದ್ಧತೆಯೊಂದಿಗೆ ಕೆಲಸ ಮಾಡಿದಾಗ ಸಾರ್ಥಕತೆ ಮೂಡುತ್ತದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಪ್ರಗತಿಯಲ್ಲಿದೆ. ದಾವಣಗೆರೆಯ ಗಾಂಧಿ ಭವನ ಇತ್ತೀಚೆಗೆ ಉದ್ಘಾಟನೆಯಾಗಿದ್ದು, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಉದ್ಘಾಟನೆಗೆ ಸಜ್ಜುಗೊಂಡಿವೆ. ಉಳಿದ ಜಿಲ್ಲೆಗಳ ಗಾಂಧಿ ಭವನಗಳೂ ಶೀಘ್ರವೇ ಸಿದ್ಧವಾಗಲಿವೆ ಎಂದು ಅವರು ಹೇಳಿದರು.

ಶಾಸಕ ಎಚ್.ಕೆ. ಪಾಟೀಲ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಶೋಕ ಬಿ. ಹಿಂಚಗೇರಿ ಮಾತನಾಡಿದರು. ಸಚಿವರಾದ ಗೋವಿಂದ ಎಂ. ಕಾರಜೋಳ, ಹಾಲಪ್ಪ ಆಚಾರ್, ಸಂಸದರಾದ ಶಿವಕುಮಾರ್ ಉದಾಸಿ, ಡಾ.ಎಲ್. ಹನುಮಂತಯ್ಯ ಉಪಸ್ಥಿತರಿದ್ದರು.

ಸಿದ್ದಗಂಗಾ ಮಠದ ಪರವಾಗಿ ಡಾ. ಶಿವಪ್ಪ ಹಾಗೂ ಮೀರಾತಾಯಿ ಕೊಪ್ಪಿಕರ್ ಪರವಾಗಿ ಗೋವಿಂದ ಕಾರಜೋಳ ಅವರು ಪ್ರಶಸ್ತಿ ಸ್ವೀಕರಿಸಿದರು.



ಗಾಂಧಿ ಭವನದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠದ ಪರವಾಗಿ ಡಾ. ಶಿವಪ್ಪ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಮಾಡಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ, ಶಾಸಕ ಎಚ್‌.ಕೆ. ಪಾಟೀಲ ಮತ್ತು ಸಚಿವ ಗೋವಿಂದ ಕಾರಜೋಳ ಇದ್ದರು – ಪ್ರಜಾವಾಣಿ ಚಿತ್ರ

ಸಂಜೆವಾಣಿ

ಬೆಂಗಳೂರು

ಶನಿವಾರ 2 ಅಕ್ಟೋಬರ್ 2021

ಗಾಂಧಿ ಭವನ ನಿರ್ಮಾಣ ಶೀಘ್ರ ಪೂರ್ಣ : ಬೊಮ್ಮಾಯಿ

ಬೆಂಗಳೂರು,ಅ.2- ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಕಾರ್ಯವನ್ನು ಆದಷ್ಟು ಶೀಘ್ರ ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರಿನ ಗಾಂಧಿ ಭವನದಲ್ಲಿಂದು ಮಹಾತ್ಮಾಗಾಂಧೀಜಿರವರ ಜನ್ಮ ದಿನಾಚರಣೆ ಹಾಗೂ ಮಹಾತ್ಮ ಗಾಂಧೀಜಿ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯದ 12 ಕಡೆ ಗಾಂಧಿ ಭವನಗಳ ನಿರ್ಮಾಣ ನಡೆದಿದೆ. ದಾವಣಗೆರೆಯಲ್ಲಿ ಮೊನ್ನೆ ಗಾಂಧಿ ಭವನ ಉದ್ಘಾಟನೆಯಾಗಿದೆ. ಬಳ್ಳಾರಿ ಮತ್ತು ಶಿವಮೊಗ್ಗದಲ್ಲೂ ಗಾಂಧಿ ಭವನ ಉದ್ಘಾಟನೆಗೆ ಸಿದ್ಧವಾಗಿದೆ. ಉಳಿದೆಲ್ಲ ಕಡೆ ಆದಷ್ಟು ಬೇಗ ಉದ್ಘಾಟನೆ ಮಾಡುತ್ತೇವೆ ಎಂದರು.

ಹಿಂದೆ ಕಾರ್ಯಕ್ರಮಗಳಿಗೆ ಮುಖ್ಯಮಂತ್ರಿಗಳು ಬಂದಾಗ ಅತ್ಯಂತ ಗಟ್ಟಿಯಾಗಿ ಆಗ್ರಹಿಸುತ್ತಿದ್ದರು. ಗಟ್ಟಿಯಾಗಿ ಹೇಳಿದರೆ ಮಾತ್ರ ಕೆಲಸ ಮಾಡುವ ಮುಖ್ಯಮಂತ್ರಿಗಳು ಇದ್ದರು. ಈಗ ಸೂಕ್ಷ್ಮವಾಗಿ ಹೇಳಿದರೆ ಕೆಲಸವಾಗುತ್ತದೆ ಎಂದು ಗೊತ್ತಾದಂತೆ ಕಾಣುತ್ತದೆ. ಹೀಗಾಗಿ ನನ್ನ ಕಿವಿಯಲ್ಲಿ ಸೂಕ್ಷ್ಮವಾಗಿ ಹೇಳಿದ್ದಾರೆ. ನಾನು ಗಾಂಧಿ ಭವನದ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುತ್ತೇನೆ ಎಂದರು.

ಸತ್ಯ ಹೇಳುವುದೇ ಸವಾಲು

ಅಧಿಕಾರದಲ್ಲಿರುವವರಿಗೆ ಸತ್ಯ ಹೇಳುವುದೇ ದೊಡ್ಡ ಸವಾಲಾಗಿದೆ. ಅಧಿಕಾರ ರಾಜಕಾರಣ

ಗಾಂಧಿ ಭವನ ನಿರ್ಮಾಣ ಶೀಘ್ರ ಪೂರ್ಣ



(ಪವರ್ ಪಾಲಿಟಿಕ್ಸ್) ಮಾಡುವ ಜನರಿಗೆ ಸತ್ಯದ ಜತೆಗಿನ ಸಂಬಂಧ ಕಡಿಮೆ ಎಂದರು.

ಸುಖಾಸುಮ್ಮನೆ ಸುಳ್ಳು ಹೇಳುವ ಜನರೇ ಹೆಚ್ಚು. ಸುಳ್ಳು ಹೇಳಿ ಕರುಣೆ ಗಿಟ್ಟಿಸಿಕೊಳ್ಳುವ ಕೆಲಸ ಮಾಡುತ್ತಾರೆ ಎಂದರು. ಗಾಂಧೀಜಿ ಅವರಿಗೆ ಪರಿವರ್ತನೆ ಅತೀ ದೊಡ್ಡ ಗುಣ, ಎಕ್ಸ್‌ಪೆರಿಮೆಂಟ್ ವಿಥ್ ಟ್ರೂತ್ ಅತ್ಯಂತ ಪ್ರಭಾವಶಾಲಿ. ಮುಂಬೈನಲ್ಲಿ ಕೆಲಸ ಮಾಡುವಾಗ ನಾನೂ ಕೂಡ ಇದನ್ನು ಓದಿದ್ದೆ ಎಂದರು.

ದೇಶ ಭಕ್ತಿ

ಹಿಂದೆ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣ ಕೊಡುತ್ತಿದ್ದರು. ಆದರೀಗ ಪ್ರಾಣ ಕೊಡುವುದು ಬೇಕಿಲ್ಲ. ದೇಶದ ಒಳಿತಿಗಾಗಿ ಬದುಕುವುದೇ ನಿಜವಾದ ದೇಶಭಕ್ತಿ. ಇತರರಿಗಾಗಿ ಬದುಕುವುದೇ ಜೀವನದ ಆಶಯವಾಗಬೇಕು ಎಂದರು.

ದುಡಿಮೆಯಲ್ಲಿ ಆರ್ಥಿಕತೆ ಇದೆ. ದುಡ್ಡಿನಲ್ಲಿ ಆರ್ಥಿಕತೆ ಇಲ್ಲ. ಬಸವಣ್ಣ ಹೇಳಿದ್ದು ಕಾಯಕವೇ ಕೈಲಾಸ ಎಂದು ವರ್ಕ್ ಈಸ್ ವರ್‌ಶಿಪ್ ಎಂದರೆ ಪೂಜೆ ಆಗುತ್ತದೆ. ಆದರೆ, ಕಾಯಕ ಅಂದರೆ ಪೂಜೆ ಅಲ್ಲ ಸ್ವರ್ಗ ಎಂದು ವ್ಯಾಖ್ಯಾನಿಸಿದರು.

ಗಾಂಧೀಜಿ ಎಂದರೆ ಒಬ್ಬ ವ್ಯಕ್ತಿ ಅಲ್ಲ, ಭಾರತವನ್ನು ಕಟ್ಟಿದ ಬಹಳ ದೊಡ್ಡ ಶಕ್ತಿ. ನಾವು ಸ್ವತಂತ್ರ ಭಾರತದಲ್ಲಿದ್ದೇವೆ. ಸ್ವಾತಂತ್ರ ಬಂದಾಗ ಒಬ್ಬ ವಿದ್ಯಾರ್ಥಿ ಬ್ರಿಟೀಷ್ ಕಮೀಷನರ್ ಅವರಿಗೆ ದೇಶಕ್ಕಾಗಿ ಪ್ರಾಣ ಬೇಕಾದರು ಕೊಡುತ್ತೇನೆ ಎಂದಿದ್ದ. ಈ ನಿಟ್ಟಿನಲ್ಲಿ ಮಹಾತ್ಮಾ ಗಾಂಧೀಜಿ ಶಕ್ತಿಯಾಗಿದ್ದರು ಎಂದರು.

ಗಾಂಧೀಜಿ ಹೇಳಿದ ಹಲವಾರು ಮಾತುಗಳು ನಮಗೆ ದಾರಿ ದೀಪವಾಗಿವೆ. ನಮ್ಮ ಕರ್ತವ್ಯವನ್ನು ರೂಢಿಸಿಕೊಂಡರೆ ಗಾಂಧೀಜಿಗೆ ಗೌರವ ಕೊಟ್ಟಂತೆ. ಜನರಿಗೆ ಉದ್ಯೋಗ ಕೊಡುವಂತಹ ನಿಟ್ಟಿನಲ್ಲಿ ಕೆಲಸ ಮಾಡಬೇಕು. ದುಡಿಮೆಯಲ್ಲೇ ದೇವರಿದ್ದಾನೆ ಎಂದು ಅರಿತು ಕೆಲಸ ಮಾಡುವುದು ಸರಿಯಾದದ್ದು ಎಂದರು.

ಸುಳ್ಳನ್ನು ಉಳಿತಾಯ ಮಾಡಿ ಸತ್ಯವನ್ನು ಜಾಸ್ತಿ ಖರ್ಚು ಮಾಡಬೇಕು ಎಂದು ಹೇಳಿಕೊಟ್ಟವರು ಗಾಂಧಿ. ಗಾಂಧೀಜಿ ಅವರು ಹೇಳಿದಂತೆ ನಡೆದುಕೊಂಡರೆ ಅದೇ ಸಾರ್ಥಕತೆ ಎಂದರು.

ಪ್ರಶಸ್ತಿ ಪ್ರದಾನ

ಗಾಂಧಿತತ್ವಾದರ್ಶಗಳನ್ನಾಧರಿಸಿ ಕೊಂಡು ಸಮಾಜದಲ್ಲಿ ಗಣನೀಯ ಸೇವೆ ಮಾಡಿದವರಿಗೆ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರತಿ ವರ್ಷ ರಾಷ್ಟ್ರಪಿತ ಮಹಾತ್ಮಾಗಾಂಧಿ ಸೇವಾ ಪ್ರಶಸ್ತಿಯನ್ನು ನೀಡುತ್ತಿದ್ದು, 2020ಎ ಸಾಲಿನ ಪ್ರಶಸ್ತಿಯನ್ನು ಸ್ವಾತಂತ್ರ್ಯ ಹೋರಾಟಗಾರರಾದ ಮೀರಾಭಾಯಿ ಕೊಪ್ಪೀಕರ್ ಮತ್ತು 2021ನೇ ಸಾಲಿನ ಪ್ರಶಸ್ತಿಯನ್ನು ಸಿದ್ಧಗಂಗಾ ಶಿಕ್ಷಣ ಸಂಸ್ಥೆ ಹಾಗೂ ಸಿದ್ಧಗಂಗಾ ಮಠವನ್ನು ಆಯ್ಕೆ ಮಾಡಲಾಗಿದ್ದು, ಮೀರಾಭಾಯಿ ಕೊಪ್ಪೀಕರ್ ಅವರ ಪರವಾಗಿ ಸಚಿವ ಗೋವಿಂದ ಎಂ ಕಾರಜೋಳ, ಸಿದ್ದಗಂಗಾ ಮಠದ ಪರವಾಗಿ ಡಾ. ಶಿವಪ್ಪ ಪ್ರಶಸ್ತಿ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಸಚಿವರಾದ ಹಾಲಪ್ಪ ಆಚಾರ್, ಸಂಸದರಾದ ಶಿವಕುಮಾರ ಉದಾಸಿ, ಡಾ. ಎಲ್. ಹನುಮಂತಯ್ಯ, ನಿವೃತ್ತ ನ್ಯಾಯಮೂರ್ತಿ ಅಶೋಕ್ ಬಿ ಹಿಂಚಗೇರಿ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಜಿ. ಜಗದೀಶ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ರಾಜಕಾರಣಿಗಳಿಗೆ ಸತ್ಯ ಹೇಳುವುದೇ ಸವಾಲು



ಬೆಂಗಳೂರು, ಅ.2- ಅಧಿಕಾರದಲ್ಲಿದ್ದಾಗ ಪ್ರತಿಯೊಬ್ಬರಿಗೂ ಸತ್ಯ ಹೇಳುವುದು ದೊಡ್ಡ ಸವಾಲು. ಈಗಿನ ಸಂದರ್ಭದಲ್ಲಿ ಕೆಲವರು ಸುಖಾಸುಮ್ಮನೆ ಸುಳ್ಳು ಹೇಳಿಕೊಂಡು ಅನುಕಂಪ ಗಿಟ್ಟಿಸುವ ಕೆಲಸ ಮಾಡುತ್ತಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮ ದಿನಾಚರಣೆ ಪ್ರಯುಕ್ತ ಗಾಂಧಿಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಗಾಂಧಿ ಸ್ಮಾರಕ ನಿಧಿ ವತಿಯಿಂದ ಏರ್ಪಡಿಸಲಾಗಿದ್ದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈಗಿನ ಪವರ್ ಪಾಲಿಟಿಕ್ಸ್ ಮಾಡುವ ಜನರಿಗೆ ಸತ್ಯದ ಜೊತೆಗಿನ ಸಂಬಂಧ ಕಡಿಮೆ. ಸುಖಾಸುಮ್ಮನೆ ಸುಳ್ಳು ಹೇಳುವ ಜನರೇ ಹೆಚ್ಚು. ಸದಾ ಸುಳ್ಳು ಹೇಳಿಕೊಂಡು ಕರುಣೆ ಗಿಟ್ಟಿಸುವರಲ್ಲಿ ನಿರತರಾಗಿದ್ದಾರೆ ಎಂದು ಯಾರ ಹೆಸರನ್ನೂ ಹೇಳದೆ ಟೀಕಿಸಿದರು.

ರಾಜಕಾರಣಿಗಳಿಗೆ ಯಾವತ್ತೂ ಸತ್ಯ ಹೇಳಿ ಅಭ್ಯಾಸವಿಲ್ಲ. ಏಕೆಂದರೆ ನನ್ನನ್ನೂ ಸೇರಿದಂತೆ ಪ್ರತಿಯೊಬ ರಾಜಜಕಾರಣಿಗಳಿಗೂ ಸತ್ಯ ಹೇಳುವುದೆಂದರೆ ದೊಡ್ಡ ಸವಾಲು ಎಂದು ಅಭಿಪ್ರಾಯಪಟ್ಟರು.

ಈ ಹಿಂದೆ ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕರು ತಮ್ಮ ಪ್ರಾಣವನ್ನೇ ಕೊಟ್ಟಿದ್ದಾರೆ. ಆದರೀಗ ಪ್ರಾಣ ಕೊಡುವುದು ಬೇಕಿಲ್ಲ. ದೇಶದ ಒಳಿತಿಗಾಗಿ ಬದುಕುವುದೇ ನಿಜವಾದ ದೇಶಭಕ್ತಿ. ಇತರರಿಗಾಗಿ ಬದುಕುವುದೇ ಜೀವನದ ಆಶಯ ಎಂದು ಹೇಳಿದರು.

ದುಡಿಮೆಯಲ್ಲಿ ಆರ್ಥಿಕತೆ ಇದೆ, ದುಡ್ಡಿನಲ್ಲಿ ಆರ್ಥಿಕತೆ ಇಲ್ಲ. ಬಸವಣ್ಣ ಹೇಳಿದ್ದು ಕಾಯಕವೇ ಕೈಲಾಸ ಆಗುತ್ತದೆ. ಆದರೆ ಕಾಯಕ ಎಂದರೆ ಪೂಜೆ ಅಲ್ಲ ಸ್ವರ್ಗ ಎಂದು ವಿಶ್ಲೇಷಿಸಿದರು.

ಗಾಂಧೀಜಿಯವರಲ್ಲಿ ಪರಿವರ್ತನೆಯಾಗಿದ್ದೇ ಅತಿ ದೊಡ್ಡ ಗುಣ. ಅತ್ಯಂತ ಪ್ರಭಾವಶಾಲಿಯಾಗಿದ್ದ ಅವರು ಅಷ್ಟು ಸರಳವಾಗಿ ಪರಿವರ್ತನೆಯಾಗುವವರಲ್ಲ. ಅವರ ಈ ನಿರ್ಧಾರವೇ ದೇಶಕ್ಕೆ ಸ್ವಾತಂತ್ರ್ಯ ಸಿಗಲು ಸಾಧ್ಯವಾಯಿತು ಎಂದರು.

ನಾನು ಕೂಡ ಮುಂಬೈನಲ್ಲಿ ಕೆಲಸ ಮಾಡುತ್ತಿದ್ದಾಗ ಗಾಂಧೀಜಿಯವರ ಬಗ್ಗೆ ಓದಿದ್ದೆ. ಹೀಗಾಗಿ ನನಗೆ ಅವರ ಬಗ್ಗೆ ವಿಶೇಷವಾದ ಗೌರವ ಮತ್ತು ಅಭಿಮಾನವಿದೆ. ನೀವು ನನ್ನ ಕಿವಿಯಲ್ಲಿ ಸೂಕ್ಷ್ಮವಾಗಿ ಹೇಳಿದ್ದೀರಿ. ನನ ಅವಧಿಯಲ್ಲೇ 12 ಗಾಂಧಿ ಭವನ ಕಾರ್ಯ ಪೂರ್ಣಗೊಳಿಸುತ್ತೇನೆ ಎಂದು ವಾಗ್ದಾನ ಮಾಡಿದರು.

ಈ ಹಿಂದೆ ಇಲ್ಲಿಗೆ ಸಿಎಂ ಆದವರು ಬಂದಾಗ ಅತ್ಯಂತ ಗಟ್ಟಿ ದನಿಯಲ್ಲಿ ಆಗ್ರಹಿಸುತ್ತಿದ್ದರು. ಆಗ ಗಟ್ಟಿಯಾಗಿ ಹೇಳಿದರೆ ಮಾತ್ರ ಕೆಲಸ ಮಾಡುವ ಸಿಎಂಗಳಿದ್ದರು. ಈಗ ಸೂಕ್ಷ್ಮವಾಗಿ ಹೇಳಿದರೆ. ಕೆಲಸವಾಗುತ್ತದೆ ಎಂದು ಗೊತ್ತಾದಂತೆ ಕಾಣುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯ ಸರ್ಕಾರದ ಗಾಂಧಿ ಸೇವಾ ಪ್ರಶಸ್ತಿಯನ್ನು ಸಿದ್ದಗಂಗಾ ಮಠದ ಪರವಾಗಿ ನೀಡಿದರು.

ಸಿಎಂ ಅವರಿಂದ ಡಾ. ಶಿವಪ್ಪ ಹಾಗೂ ಹಿರಿಯ ಗಾಂಧೀವಾದಿ ಶ್ರೀಮತಿ ಮೀರಾತಾಯಿ ಕೊಪ್ಪಿಕರ ಅವರ ಪರವಾಗಿ ಮುಧೋಳ ಶಾಸಕರೂ ಆಗಿರುವ ಜಲಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ ಅವರು ಪ್ರಶಸ್ತಿ ಸ್ವೀಕರಿಸಿದರು.

ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಗಣಿ ಮತ್ತು ಭೂ-ವಿಜ್ಞಾನಸಚಿವ ಹಾಲಪ್ಪ ಆಚಾರ, ಸಂಸದರಾದ ಶಿವಕುಮಾರ್ ಉದಾಸಿ, ಡಾ.ಎಲ್.ಹನುಮಂತಯ್ಯ, ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಅಶೋಕ್.ಬಿ. ಹಿಂಚಗೇರಿ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಆಯುಕ್ತ ಜಿ.ಜಗದೀಶ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ವಿಜಯವಾಣಿ ಚಿತ್ರ

ನಗರದ ಶೇಷಾದ್ರಿಪುಂ ಕಾಲೇಜಿನಲ್ಲಿ ಬೆಂಗಳೂರು ಬಹ್ಮ ಸಮಾಜ ಹಾಗೂ ಅನಕ್ಕ ಕನ್ನಡ ಸಂಘ ಜಂಟಿಯಾಗಿ ಹಮ್ಮಿಕೊಂಡಿದ್ದ ರಾಜಾ ರಾಮಮೋಹನರಾಯ್ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಹಿರಿಯ ಲೇಖಕಿ ವಸುಂಧರಾ ಭೂಪತಿ, ನಾಡೋಜ ವೂಡೇ ಪಿ.ಕೃಷ್ಣ, ಡಾ. ಅಶೋಕ್ ಗುರುದಾಸ್, ರು.ಬಸಪ್ಪ ಇತರರು ಪಾಲ್ಗೊಂಡಿದ್ದರು.

ಕನ್ನಡಪ್ರಭ

ಸೋಮವಾರ 27.9.2021

ನೃಪತುಂಗ ಪ್ರಶಸ್ತಿ ಪುರಸ್ಕೃತ ಮಲ್ಲೇಪುರಂಗೆ ಅಭಿನಂದನೆ



ಬೆಂಗಳೂರು: ನಾನು ಹೈಸ್ಕೂಲು ಮೇಷ್ಟ್ರು ಆಗಿರುತ್ತಿದೆ. ಆದರೆ ಮಿತ್ರಬಲ, ಗುರುಬಲ ಮತ್ತು ದೈವಬಲದ ಕಾರಣದಿಂದ ರಾಷ್ಟ್ರಪತಿಗಳು ನೀಡುವ ಪ್ರಶಸ್ತಿಯ ಆಯ್ಕೆ ಮಂಡಳಿಯ ಹನ್ನೆರಡು ಸದಸ್ಯರಲ್ಲಿ ಒಬ್ಬರಾಗುವ ಅಪೂರ್ವ ಅವಕಾಶ ಸಿಕ್ಕಿತು ಎಂದು ಸಂಸ್ಕೃತ ವಿಶ್ವವಿದ್ಯಾಲಯದ ಪ್ರಥಮ ಕುಲಪತಿ, ಖ್ಯಾತ ಬರಹಗಾರ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಹೇಳಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ನೃಪತುಂಗ ಸಾಹಿತ್ಯ ಪ್ರಶಸ್ತಿ ಪುರಸ್ಕಾರಕ್ಕೆ ಭಾಜನರಾದ ಹಿನ್ನೆಲೆಯಲ್ಲಿ ಶೇಷಾದ್ರಿಪುರಂ ಕಾಲೇಜ್ ಸಭಾಂಗಣದಲ್ಲಿ ಕೊರಮ ಸಮಾಜದ ವತಿಯಿಂದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅಭಿನಂದನಾ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು. ನಾನು ಶಾಲೆಯೊಂದರಲ್ಲಿ ಶಿಕ್ಷಕನಾಗಿದ್ದೆ. ನನ್ನನ್ನು ಗುರುತಿಸಿ ಚಂದ್ರಶೇಖರ ಕಂಬಾರರು ಹಂಪಿ ಕನ್ನಡ ವಿವಿಗೆ ಕರೆದುಕೊಂಡು ಹೋದರು. ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣ ಅವರು ಪುಸ್ತಕ ಪ್ರಾಧಿಕಾರದ ಜವಾಬ್ದಾರಿ ನೀಡಿದರು. ರಾಜ್ಯಪಾಲರಾಗಿದ್ದ ರಾಮಜೋಯಿಸ್, ಹಂಸರಾಜ್ ಭಾರದ್ವಾಜ್ ಸೇರಿದಂತೆ ಸಿದ್ದಗಂಗಾ, ಸುತ್ತೂರು ಮತ್ತು ಪೇಜಾವರ ಸ್ವಾಮೀಜಿಗಳು ತಮ್ಮ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದರು ಎಂದು ಸ್ಮರಿಸಿದರು. ಮಾಜಿ ಶಾಸಕರಾದ ಜಿ. ಚಂದ್ರಣ್ಣ, ಎಂ.ಡಿ.ಲಕ್ಷ್ಮಿನಾರಾಯಣ, ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್, ಸಮಿತಿಯ ಗೌರವಾಧ್ಯಕ್ಷ ಜಿ.ವಿ. ಕೃಷ್ಣಪ್ರಸಾದ್ ಉಪಸ್ಥಿತರಿದ್ದರು.

ಸಾಹಿತಿ ಕೆ.ಜಿ. ಲಕ್ಷ್ಮೀನಾರಾಯಣಪ್ಪ ಬಣ್ಣನೆ, ಏಕಲವ್ಯನಂತೆ ಸಂಸ್ಕೃತ ಕಲಿತ ಸಾಧಕ

ಮಲ್ಲೇಪುರಂ ಸಾಧನೆ ಸಮಾಜಕ್ಕೆ ಮಾದರಿ

▫ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ದೇಶದಲ್ಲಿ ಸಂಸ್ಕೃತ ಬ್ರಾಹ್ಮಣರ ಸ್ವತ್ತು ಎಂಬ ಕಾಲಘಟ್ಟದಲ್ಲಿ ಶಾಲಾ ಕೊಠಡಿಯ ಹೊರಗೆ ನಿಂತು ಏಕಲವ್ಯನಂತೆ ಸಂಸ್ಕೃತ ಕಲಿತು ಪಾಂಡಿತ್ಯ ಪಡೆದ ಹಿಂದುಳಿದ ಸಮಾಜದ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಸಾಧನೆ ಸಮಾಜಕ್ಕೆ ಮಾದರಿಯಾಗಿದೆ ಎಂದು ಸಾಹಿತಿ ಡಾ. ಕೆ. ಜಿ. ಲಕ್ಷ್ಮೀನಾರಾಣಯಪ್ಪ ಬಣ್ಣಿಸಿದ್ದಾರೆ.

» **ಹಲವು ಗಣ್ಯರು ಭಾಗಿ**

ನಗರದಲ್ಲಿ ಭಾನುವಾರ ಕೊರಮ ಸಮಾಜ ಆಯೋಜಿಸಿದ್ದ 'ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಅಭಿನಂದನಾ ಸಮಾರಂಭ' ದಲ್ಲಿ ಮಾತನಾಡಿದರು. ಕೆಳವರ್ಗದ ಯಾವುದೇ ವ್ಯಕ್ತಿ ಸಂಸ್ಕೃತ ಆಲಿಸಲೂ ಶಕ್ತನಲ್ಲ ಎಂಬಂತಹ ಕಾಲಘಟ್ಟದಲ್ಲಿ ಸಂಸ್ಕೃತವನ್ನು ಕೇಳಿ, ಕಲಿತು, ಕರಗತ ಮಾಡಿಕೊಂಡ ವ್ಯಕ್ತಿ ವೆಂಕಟೇಶ್ ಆಗಿದ್ದಾರೆ. ಅವರ ಕ್ರಿಯಾಶೀಲತೆ ಗಮನಿಸಿ ನಾಡಿನ ಎಲ್ಲ ಧರ್ಮಗಳ ಆಚಾರ್ಯರು, ಮುಖಂಡರು, ಸ್ವಾಮೀಜಿಗಳು ಜಾತಿ- ಪಂಗಡ ಬದಿಗೊತ್ತಿ ವೆಂಕಟೇಶ್ ಅವರನ್ನು ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಕುಲಪತಿಯನ್ನಾಗಿ ನೇಮಕ ಮಾಡಲು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ಮನುಷ್ಯನನ್ನು ಕೇವಲ ಆಸ್ತಿ, ಅಂತಸ್ತುಗಳಿಂದ ಗೌರವ ಸಿಗುವುದಿಲ್ಲ, ವಿದ್ವತ್ತು ಕೂಡ ಗೌರವ ತಂದುಕೊಡುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದ್ದಾರೆ ಎಂದು ಹೇಳಿದರು.

ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್, ಮಾಜಿ ಶಾಸಕ ಜಿ. ಚಂದ್ರಣ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಡಿ. ಲಕ್ಷ್ಮೀನಾರಾಯಣ, ಶೇಷಾದ್ರಿಪುರ ಸಮೂಹ ವಿದ್ಯಾಸಂಸ್ಥೆ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ, ಮಲ್ಲೇಪುರಂ ವೆಂಕಟೇಶ್ ಅಭಿನಂದನಾ ಸಮಿತಿ ಗೌರವಾಧ್ಯಕ್ಷ ಜಿ.ವಿ. ಕೃಷ್ಣಪ್ರಸಾದ್, ಕಾರ್ಯದರ್ಶಿ ಎಚ್. ವೆಂಕಟೇಶ್, ಖಜಾಂಚಿ ಕೆ.ಟಿ. ನಾರಾಯಣಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.



ಕೊರಮ ಸಮಾಜ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ದಂಪತಿಯನ್ನು ಸನ್ಮಾನಿಸಲಾಯಿತು. ಸಾಹಿತಿ ಡಾ.ಕೆ.ಜಿ. ಲಕ್ಷ್ಮೀನಾರಾಯಣಪ್ಪ, ಅಭಿನಂದನಾ ಸಮಿತಿ ಗೌರವಾಧ್ಯಕ್ಷ ಜಿ.ವಿ. ಕೃಷ್ಣಪ್ರಸಾದ್ ಇತರರಿದ್ದರು.


ಕಾಲೇಜು ಭೂಮಿಗಾಗಿ ಹೋರಾಟ

ಶಿಕ್ಷಣ, ಶಕ್ತಿ, ಯುಕ್ತಿ ಹಾಗೂ ಬುದ್ಧಿಗೆ ಯಾವುದೇ ಜಾತಿ ಭೇದ-ಭಾವಗಳಿಲ್ಲ. ಹೀಗಾಗಿ, ಮಲ್ಲೇಪುರಂ ವೆಂಕಟೇಶ್ ಅವರಿಗೆ ಸಂಸ್ಕೃತ ಒಲಿದುಬಂದಿದೆ. ಹಲವು ಪ್ರಮುಖ ಸಮುದಾಯಗಳಿಗೆ ಸರ್ಕಾರ ಶಾಲೆ, ಕಾಲೇಜು, ಹಾಸ್ಟೆಲ್ ತೆರೆಯಲು ನೂರಾರು ಎಕರೆ ಭೂಮಿ ಕೊಟ್ಟಿದೆ. ಆದರೆ, ಸಂಸ್ಕೃತ ಕಾಲೇಜು ತೆರೆಯಲು ಸರ್ಕಾರ ಕನಿಷ್ಠ 50 ಎಕರೆ ಭೂಮಿ ಕೊಡುವಂತೆ ಆಗ್ರಹಿಸಿ ಹೋರಾಟ ಮಾಡಲಾಗುವುದು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಡಿ. ಲಕ್ಷ್ಮೀನಾರಾಯಣ ತಿಳಿಸಿದರು.

ಕನ್ನಡಪ್ರಭ

ಸೋಮವಾರ 20.9.2021


'ಉರಿವ ಕೆಂಡದ ಮೇಲೆ' ಕಾದಂಬರಿ ಲೋಕಾರ್ಪಣೆ



ಬೆಂಗಳೂರು: ಭ್ರಷ್ಟ ವ್ಯವಸ್ಥೆ ವಿರುದ್ಧ ಹೋರಾಟ ನಡೆಸಲು ಪಣ ತೊಡುವ ನಾಯಕ ಅದಕ್ಕಾಗಿ ಹಗಲುಗನಸು ಕಾಣುತ್ತಾನೆ. ಆದರೆ ಕೆಲವೊಮ್ಮೆ ಪರಿಸ್ಥಿತಿಯ ಕೈಗೊಂಬೆಯಾಗಿ ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳಬೇಕಾದ ವಿಷಯ ವಸ್ತು ಈ ಕಾದಂಬರಿಯಲ್ಲಿದೆ. ಬದುಕಿನ ವಾಸ್ತವ ಚಿತ್ರಣವನ್ನು ಸುಂದರವಾಗಿ ಕಟ್ಟಿಕೊಡಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ಮನು ಬಳಿಗಾರ್ ಅವರು ಅಭಿಪ್ರಾಯಪಟ್ಟರು. ಶೇಷಾದ್ರಿಪುರಂ ಶಿಕ್ಷಣ ಸಮೂಹ ಸಂಸ್ಥೆ ದತ್ತಿ ಸಭಾಂಗಣದಲ್ಲಿ ಕರ್ನಾಟಕ ವಿಕಾಸ ರಂಗ ಮತ್ತು ಧಾರವಾಡದ ಮನೋಹರ ಗ್ರಂಥಮಾಲಾ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಬಸವರಾಜ ಡೋಣೂರ ಅವರ 'ಉರಿವ ಕೆಂಡದ ಮೇಲೆ' ಕಾದಂಬರಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು. ವಿಮರ್ಶಕ ಬಸವರಾಜ ಕಲ್ಗುಡಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ವಿಮರ್ಶಕಿ ಡಾ.ಎಂ.ಎಸ್.ಆಶಾದೇವಿ, ಕಾದಂಬರಿಕಾರ ಪ್ರೊ.ಬಸವರಾಜ ಡೋಣೂರ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ

ಭಾನುವಾರ 19 ಸೆಪ್ಟೆಂಬರ್ 2021
19 SEPTEMBER 2021



ವಿಜಯವಾಣಿ ಚಿತ್ರ

ಡಾ. ಗುಣವಂತ ಮಂಜು ಅವರ 'ಕರುಣೆಯಿಲ್ಲದ ಕರೊನಾ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಕೊಳದ ಮಠದ ಡಾ. ಶಾಂತವೀರ ಸ್ವಾಮೀಜಿ, ಚಬನೂರು ಹಿರೇಮಠದ ಶ್ರೀ ರಾಮಲಿಂಗಯ್ಯ ಸ್ವಾಮೀಜಿ, ರಾಜ್ಯ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್, ರಾಜ್ಯ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ. ತಿಮ್ಮಯ್ಯ ಇತರರಿದ್ದರು.

ಶನಿವಾರ 18 ಸೆಪ್ಟೆಂಬರ್ 2021
18 SEPTEMBER 2021

ಕರೊನಾ ಕುರಿತ ಕೃತಿ ಇಂದು ಲೋಕಾರ್ಪಣೆ

ಬೆಂಗಳೂರು: ಸ್ನೇಹ ಬುಕ್ ಹೌಸ್ ಹಾಗೂ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಶನಿವಾರ (ಸೆ.18) ಮಧ್ಯಾಹ್ನ 3.15ಕ್ಕೆ ಗಾಂಧಿ ಭವನದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಡಾ.ಗುಣವಂತ ಮಂಜು ಅವರ 'ಕರುಣೆಯಿಲ್ಲದ ಕೊರೋನಾ' ಪುಸ್ತಕ ಬಿಡುಗಡೆ ಮಾಡಲಾಗುತ್ತದೆ.

ಡಾ. ಶಾಂತವೀರ ಸ್ವಾಮೀಜಿ, ಶ್ರೀ ರಾಮಲಿಂಗಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಡಾ. ವೂಡೇ ಪಿ. ಕೃಷ್ಣ ಪುಸ್ತಕ ಬಿಡುಗಡೆ ಮಾಡುವರು. ನಿವೃತ್ತ ಐಎಎಸ್ ಅಧಿಕಾರಿ ಡಾ. ಸಿ. ಸೋಮಶೇಖರ್ ಪುಸ್ತಕ ಪರಿಚಯ ಮಾಡಿಕೊಡಲಿದ್ದಾರೆ. ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ. ತಿಮ್ಮಯ್ಯ, ಅಧ್ಯಕ್ಷತೆ ವಹಿಸಲಿದ್ದಾರೆ. ಚಿತ್ರ ನಿರ್ಮಾಪಕ ಮತ್ತು ನಟ ಮಹೇಂದ್ರ ಮುನ್ನೋತ್, ಸಮಾಜಸೇವಕಿ ಮಮತಾ ದೇವರಾಜ್, ಇಂದಿರಾ ಕೃಷ್ಣಪ್ಪ ಮತ್ತಿತರರಿರುವರು.

ಕರ್ನಾಟಕ
ಶನಿವಾರ 18 ಸೆಪ್ಟೆಂಬರ್ 2021

ಬೋಧಿ ವೃಕ್ಷ

ಧರ್ಮ ವಿಚಾರ

ಸಂಕ್ಷಿಪ್ತ ಸುದ್ದಿ

ರಾಮಕೃಷ್ಣಸೇವಾಶ್ರಮಕ್ಕೆ ಬದರಿಕಾಶ್ರಮ ಹಸ್ತಾಂತರ



ತುರುವೇಕೆರೆ: ತಾಲ್ಲೂಕಿನ ಮಾದಿಹಳ್ಳಿ ಸಮೀಪದ ಓಂಕಾರಾನಂದಜಿ ಸ್ವಾಮೀಜಿ ನೇತೃತ್ವದ ಬದರಿಕಾಶ್ರಮವನ್ನು ಕೋಲ್ಕತ್ತಾ ಬೇಲೂರು ಮಠದ ರಾಮಕೃಷ್ಣಾಶ್ರಮಕ್ಕೆ ಹಸ್ತಾಂತರಿಸಲಾಗಿದೆ. ಬದರಿಕಾಶ್ರಮದ ಓಂಕಾರಾನಂದಜಿ ಸ್ವಾಮೀಜಿ, ಕೋಲ್ಕತ್ತಾ ಬೇಲೂರಿನ ರಾಮಕೃಷ್ಣ ಮಿಷನ್‌ನ ಟ್ರಸ್ಟಿ ಮುಕ್ತಿಧಾನಂದಜಿ ಮಹಾರಾಜ್, ಮಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷ ಜೀತಕಾಮಾನಂದಜಿ ಮಹಾರಾಜ್, ಬೆಂಗಳೂರಿನ ನಿತ್ಯಸ್ಥಾನಂದ ಜಿಮಹಾರಾಜ್ ಮತ್ತಿತರರು ಉಪಸ್ಥಿತರಿದ್ದರು.

ವಿಜಯವಾಣಿ

ಶುಕ್ರವಾರ
17 ಸೆಪ್ಟೆಂಬರ್ 2021




ಗಾಂಧಿ ಶಾಂತಿ ಪ್ರತಿಷ್ಠಾನ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೃಪತುಂಗ ಪ್ರಶಸ್ತಿ ಪುರಸ್ಕೃತ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ದೇವರಾಜ ಅರಸು ಪ್ರಶಸ್ತಿ ಪುರಸ್ಕೃತೆ ಎಸ್.ಜಿ. ಸುಶೀಲಮ್ಮ, ಎನ್ಎಸ್ಎಸ್ ಅಧಿಕಾರಿ ಪ್ರೊ. ಪ್ರತಾಪ್‌ಲಿಂಗಯ್ಯ ಅವರನ್ನು ಸನ್ಮಾನಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಇತರರಿದ್ದರು.

ಉದಯವಾಣಿ ಬೆಂಗಳೂರು
ಬುಧವಾರ, ಸೆಪ್ಟೆಂಬರ್ 15, 2021

ಹಿರಿಯ ಸಂಸ್ಕೃತ ವಿದ್ವಾಂಸ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅಭಿಮತ

ಕಿರಿಯ ಸಾಧಕರನ್ನೂ ಗೌರವಿಸಿ



ಶೇಷಾದ್ರಿಪುರಂನ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಹಿರಿಯ ಸಂಸ್ಕೃತ ವಿದ್ವಾಂಸ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅಭಿನಂದನೆ ಸ್ವೀಕರಿಸಿದರು. ಮಾಜಿ ಸಚಿವ ಎಚ್.ಎಂ. ರೇವಣ್ಣ ಇತರರು ಹಾಜರಿದ್ದರು.

ಬೆಂಗಳೂರು: ಹೊಸ ಚಿಗುರು ಹಳೆ ಬೇರು ಸೇರಿದರೆ ಮರ ಸೊಬಗು ಎನ್ನುವಯುಕ್ತಿಯಂತೆ ಕನ್ನಡ ಸಾಹಿತ್ಯ ಲೋಕ ಮತ್ತಷ್ಟು ಸಮೃದ್ಧಿಯಾಗಬೇಕಾದರೆ ಹಿರಿಯರ ಜತೆಗೆ ಕಿರಿಯರನ್ನು ಸನ್ಮಾನಿಸುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಹಿರಿಯ ಸಂಸ್ಕೃತ ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ಹೇಳಿದರು.

ಕರ್ನಾಟಕ ಪ್ರತಿಭಾ ಕೇಂದ್ರ ಬೆಂಗಳೂರು ಮಂಗಳವಾರ ಶೇಷಾದ್ರಿಪುರಂನ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದರು. ಕನ್ನಡ ಸಾಹಿತ್ಯ ಲೋಕದಲ್ಲಿ ಕಿರಿಯರು ಕೂಡ ಉತ್ತಮ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಅವರನ್ನು ಹಿರಿಯ ಜತೆಗೆ ಸನ್ಮಾನಿಸಿ, ಗೌರವಿಸುವ ಕೆಲಸ ಮುಂದಿನ ದಿನಗಳಲ್ಲಿ ಆಗಲಿ ಎಂದರು.

ತಂದೆ -ತಾಯಿ ಮತ್ತು ಗುರುಗಳ ಆಶೀರ್ವಾದದಿಂದ ನಾನು ಸಾಹಿತ್ಯ ಲೋಕದಲ್ಲಿ ಸಾಧನೆ ಮಾಡಲು ಕಾರಣವಾಗಿದೆ. ಹಲವರು ನನ್ನ ಏಳ್ಗೆಗಾಗಿ ಶ್ರಮಿಸಿದ್ದಾರೆ. ಅವರೆಲ್ಲರಿಗೂ ನಾನು ಸದಾ ಚಿರಋಣಿಯಾಗಿರುತ್ತೇನೆ. ಕಸಾಪ ನೀಡುವ ನೃಪತುಂಗ ಸಾಹಿತ್ಯ ಪ್ರಶಸ್ತಿ ಅದರದ್ದೇ ಆದ ತೂಕವಿದೆ. ಅಂತಹ ಪ್ರಶಸ್ತಿ ನನಗೆ ದೊರೆತಿರುವುದು ಖುಷಿ ನೀಡಿದೆ ಎಂದರು.

ಕರ್ನಾಟಕ ಪ್ರತಿಭಾ ಕೇಂದ್ರ ಸಾಧಕರನ್ನು ಗುರುತಿಸಿ ಗೌರವಿಸುತ್ತಿರುವುದು ಸಂತಸ ಪಡುವ ವಿಚಾರವಾಗಿದೆ. ಮಾಡಿಗ ಭಾಗದಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿ ಕ್ಷೇತ್ರದಲ್ಲಿ ಮೌಲಿಕ ಕೊಡುಗೆ ನೀಡಿರುವ ಡಾ.ಷಾನ್ನಂ ನಟರಾಜ್ ಅವರನ್ನು ಗೌರವಿಸುತ್ತಿರುವುದು ಹರ್ಷ ತಂದಿದೆ ಎಂದರು.

ಮಾಜಿ ಸಚಿವ ಎಚ್.ಎಂ. ರೇವಣ್ಣ ಮಾತನಾಡಿ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮಲ್ಲೇಪುರಂ ಅವರ ಕೊಡುಗೆ ಸ್ಮರಣೀಯವಾಗಿದೆ. ಕನ್ನಡದ ಜತೆಗೆ ಸಂಸ್ಕೃತ ಮತ್ತು ಪಾಲಿ ಭಾಷೆಗೂ ಕೂಡ ಅವರು ಅನುಪಮ ಕೊಡುಗೆ ನೀಡಿದ್ದಾರೆ.ಸಾಹಿತ್ಯ ಲೋಕದಲ್ಲಿ ಮಾದರಿ ವ್ಯಕ್ತಿಯಾಗಿದ್ದಾರೆ ಎಂದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮಾತನಾಡಿದರು. ಇದೇ ವೇಳೆ ಗೌರಿ [illegible] ಅವರಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು. ಡಾ.ಷಾನ್ನಂ ನಟರಾಜ್, ಡಾ.ಸತ್ಯಮಂಗಲ ಮಹಾದೇವ, ಡಾ.ಆರ್.ವಾದಿರಾಜ್, ಡಾ.ಎಸ್.ರಾಮಲಿಂಗೇಶ್ವರ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ

ಬುಧವಾರ 15 ಸೆಪ್ಟೆಂಬರ್ 2021
15 SEPTEMBER 2021



ಕರ್ನಾಟಕ ಪ್ರತಿಭಾ ಕೇಂದ್ರ ಶೇಷಾದ್ರಿಪುರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೃಪತುಂಗ ಪ್ರಶಸ್ತಿ ಪುರಸ್ಕೃತ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಸಮಾಜಸೇವಕ ಡಾ. ಪಾನ್ಯಂ ನಟರಾಜ್ ಅವರನ್ನು ಮಾಜಿ ಸಚಿವ ಎಚ್. ಎಂ. ರೇವಣ್ಣ ಸನ್ಮಾನಿಸಿದರು.

ಪ್ರಜಾವಾಣಿ

ಗುರುವಾರ ಸೆಪ್ಟೆಂಬರ್ 9, 2021

‘ಎನ್‌ಇಪಿ: ಜ್ಞಾನ, ಉದ್ಯೋಗ, ಕೌಶಲದ ಸಂಗಮ’



ಕಾರ್ಯಾಗಾರದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ರಾಮಚಂದ್ರಗೌಡ ಅವರನ್ನು ಸನ್ಮಾನಿಸಲಾಯಿತು

ಕೆಂಗೇರಿ: ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಜ್ಞಾನಾರ್ಜನೆಯೊಂದಿಗೆ, ಉದ್ಯೋಗಾವಕಾಶ ಮತ್ತು ಕೌಶಲ ನೀಡುವ ಶಕ್ತಿ ಹೊಂದಿದೆ’ ಎಂದು ಎಂದು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ. ರಾಮಚಂದ್ರಗೌಡ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ಯುನಿವರ್ಸಿಟಿ ಟೀಚರ್ಸ್ ಕೌನ್ಸಿಲ್ ಫಾರ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ (ಬಿಯುಟಿಸಿಸಿಎಮ್) ಸಹಯೋಗದಲ್ಲಿ ಇಲ್ಲಿನ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕಾಲೇಜು ಕೇಂದ್ರಿತವಾಗಿದ್ದ ಶಿಕ್ಷಣ ಕ್ರಮ ಹಾಗೂ ಅಧ್ಯಯನ ವಿಷಯಗಳು ನೂತನ ರಾಷ್ಟ್ರೀಯ ಶಿಕ್ಷಣಪಡಿ ವಿದ್ಯಾರ್ಥಿ ಕೇಂದ್ರಿತವಾಗಿ ಮಾರ್ಪಾಡಾಗಲಿವೆ. ವಿದ್ಯಾರ್ಥಿಗಳು ಸೂಚಿತ ವಿಷಯಗಳೊಂದಿಗೆ ತಮ್ಮಿಚ್ಛೆಯ ವಿಷಯಗಳನ್ನು ಒಂದೇ ಬಾರಿಗೆ 60:40 ರ ಅನುಪಾತದಲ್ಲಿ ಅಧ್ಯಯನ ಮಾಡಲು ಅವಕಾಶ ದೊರಕುತ್ತದೆ’ ಎಂದರು.

ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವೆ ಡಾ.ಅನಿತಾ ಎಚ್.ಎಸ್., ‘ನೂತನ ನೀತಿಗಳನ್ನು ಜಾರಿಗೆ ತರುವಾಗ ಅಡ್ಡಿಗಳು ಸಹಜ. ಉನ್ನತಿಯತ್ತ ಸಾಗಲು ಅಗತ್ಯ ಬದಲಾವಣೆಯನ್ನು ಅಪ್ಪಿಕೊಳ್ಳುವುದು ಅನಿವಾರ್ಯ. ಇದರಿಂದ ಶೈಕ್ಷಣಿಕ ರಂಗ ಮತ್ತಷ್ಟು ಅಭ್ಯುದಯ ಹೊಂದಲು ಸಾಧ್ಯವಾಗಲಿದೆ’ ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಮುಖ್ಯಸ್ಥೆ ನಿರ್ಮಲಾ, ಬಿಯುಟಿಸಿಸಿಎಂ ಸಮಿತಿಯ ಡಾ.ಕರುಣಾಕರ ರೆಡ್ಡಿ, ಡಾ.ಮೊಹಮ್ಮದ್ ಫಾರೂಕ್ ಪಾಷಾ, ಡಾ. ಚೇತನಾ ಎಂ., ಕಾಲೇಜು ಪ್ರಾಂಶುಪಾಲ ಪ್ರೊ.ಜಯರಾಮ್, ಸೌಮ್ಯಾ ಡಿ.ಎನ್. ಪಾಲ್ಗೊಂಡಿದ್ದರು.

ಉದಯವಾಣಿ ಗುರುವಾರ, ಸೆಪ್ಟೆಂಬರ್ 9, 2021

ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಡಾ.ರಾಮಚಂದ್ರಗೌಡ ಅಭಿಪ್ರಾಯ

ಹೆಚ್ಚಿನ ಜ್ಞಾನಾರ್ಜನೆಗೆ ರಾಷ್ಟ್ರೀಯ ಶಿಕ್ಷಣ ನೀತಿ ಪೂರಕ

ಕೆಂಗೇರಿ: ಶಿಕ್ಷಣದಲ್ಲಿ ಹೆಚ್ಚಿನ ಜ್ಞಾನರ್ಜನೆಗೆ ರಾಷ್ಟ್ರೀಯ ಶಿಕ್ಷಣ ನೀತಿ ಪೂರಕವಾಗಿದ್ದು ಮುಂದಿನ ದಿನಗಳಲ್ಲಿ ಪ್ರಾಧ್ಯಾಪಕರು, ವಿದ್ಯಾರ್ಥಿಗಳಿಗೆ ಸಹಕಾರಿಯಾಗಲಿದೆ ಎಂದು ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ರಾಮಚಂದ್ರಗೌಡ ಅಭಿಪ್ರಾಯಪಟ್ಟರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗೇರಿ ಉಪನಗರದ ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಕರ ಮಂಡಳಿ ವಾಣಿಜ್ಯ ಮತ್ತು ನಿರ್ವಹಣಾ ಸಮಿತಿ, ಶೇಷಾದ್ರಿಪುರಂ ಅಕಾಡೆಮಿ ಆಫ್ ಸ್ಟಡೀಸ್ ಅವರ ಸಹಯೋಗದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತು ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಸತತ 30 ವರ್ಷಗಳಿಂದ ಪ್ರಯತ್ನ ನಡೆಯುತ್ತಿತ್ತು. ಇದರ ಪ್ರತಿಫಲ ಇಂದು ನಮಗೆ ದೊರೆಯುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿಯಿಂದಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಹಕಾರಿಯಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಕೌಶಲ್ಯ ವೃದ್ಧಿಯಾಗುತ್ತದೆ. ಕೌಶಲ್ಯದಿಂದ ನಮ್ಮ ಕಲಿಕೆಯ ಅಡಿಪಾಯ ಗಟ್ಟಿಯಾಗುತ್ತದೆ. ಇದರಿಂದ 45 ವರ್ಷಗಳಿಗೆ ಪಿಎಚ್‌ಡಿ ಪಡೆಯುವ ವಿದ್ಯಾರ್ಥಿಗಳು 29-30 ವರ್ಷಗಳಿಗೆ ಪಿಎಚ್‌ಡಿ ಪಡೆದು ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಬಹುದು. ಅಂಥ ಅವಕಾಶ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ದೊರುಯುತ್ತದೆ ಎಂದರು.


ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಕಾರ್ಯದರ್ಶಿ ನಾಡೋಜ, ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಬದಲಾವಣೆಗೆ ಸದಾ ಸಿದ್ಧರಾಗಿರಬೇಕು ಇಡೀ ಸಮಾಜ ವೇಗವಾಗಿ ಓಡುತ್ತಿರುವ ಸಂದರ್ಭದಲ್ಲಿ ತಾಂತ್ರಿಕತೆಯ ವೇಗಕ್ಕೆ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕಾಗಿದೆ.



ಶಿಕ್ಷಣದಲ್ಲಿ ನೆನ್ನೆಯ ಬಗ್ಗೆ ಚಿಂತಿಸದೆ, ಮುಂದಿನದನ್ನು ಗಮನದಲ್ಲಿ ಇಟ್ಟುಕೊಂಡು ಮುನ್ನಡೆಯಬೇಕಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಬರುವ ಮೂಲಭೂತ ಬದಲಾವಣೆಗಳನ್ನು ಅಳವಡಿಸಿಕೊಂಡು ಸಮಯವನ್ನು ವ್ಯರ್ಥ ಮಾಡದೆ ಮುಂದುವರಿಯಬೇಕಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಬದಲಾವಣೆಗೆ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಸಹ ಸಹಕರಿಸಬೇಕಾಗಿದೆ ಎಂದರು.ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವೆ ಡಾ.ಅನಿತಾ ಎಚ್.ಎಸ್,ಬೆಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ.ನಿರ್ಮಲಾ.ಕೆ, ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಕರ ಮಂಡಳಿ ವಾಣಿಜ್ಯ ಮತ್ತು ನಿರ್ವಹಣಾ ಸಮಿತಿಯ ಅಧ್ಯಕ್ಷ ಡಾ.ಕರುಣಾಕರ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಮಹಮದ್ ಫಾರೂಕ್ ಪಾಷಾ, ಉಪಾಧ್ಯಕ್ಷೆ ಡಾ.ಚೇತನಾ ಎಂ.ಆರ್.ಶೇಷಾದ್ರಿಪುರಂ ಅಕಾಡೆಮಿ ಆಫ್ ಸ್ಟಡೀಸ್‌ನ ಪ್ರಾಂಶುಪಾಲ ಪ್ರೊ.ಜಯರಾಂ, ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಿ.ಎನ್.ಸೌಮ್ಯಾ ಇತರರು ಇದ್ದರು.

ಕನ್ನಡಪ್ರಭ

ಶುಕ್ರವಾರ 3.9.2021



ಕರ್ನಾಟಕ ಪಂಚಾಯತ್‌ರಾಜ್ ಪರಿಷತ್ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಡಾ.ಚಿಕ್ಕ ಕೊಮಾರಿ ಗೌಡ ದತ್ತಿ ಪ್ರಶಸ್ತಿ ಪುರಸ್ಕಾರ ಮತ್ತು ಉಪನ್ಯಾಸ ಕಾರ್ಯಕ್ರಮದಲ್ಲಿ ಗ್ರಾಮಗಳ ಅಭಿವೃದ್ಧಿಗೆ [illegible] ಶ್ರಮಿಸಿದ ಸಾಧಕರಿಗೆ ಆದಿಚುಂಚನಗಿರಿ ಮಹಾ ಸಂಸ್ಥಾನದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಿದರು. ಗಾಂಧಿ ಸ್ಮಾರಕ ನಿಧಿಯ ವೂಡೆ ಪಿ. ಕೃಷ್ಣ ಇದ್ದರು.

ಚಿಕ್ಕ ಕೊಮಾರಿ ದತ್ತಿ ಪ್ರಶಸ್ತಿ ಪ್ರದಾನ....

ಗ್ರಾಮ ಸಾಧಕರಿಗೆ ಪ್ರಶಸ್ತಿ ಪ್ರದಾನ

ಬೆಂಗಳೂರು: ನಮ್ಮ ಸಣ್ಣತನದಿಂದಾಗಿ [illegible] ಕುಟುಂಬ ಎಂದು ಭಾವಿಸಿದ್ದ ನಮ್ಮ [illegible] ಪರಂಪರೆಯನ್ನು ವಿದೇಶಿಯರು ತು[illegible] ಕಾಣುವ ಪ್ರವೃತ್ತಿಯೂ ಬೆಳೆಯಿತು. [illegible] ನಮ್ಮತನ, ಆತ್ಮಾಭಿಮಾನ ಕಳೆದುಕೊ[illegible] ಸೋಮಾರಿಗಳಾದರೆ ಏನಾಗಬಹುದು [illegible] ಇದು ಉದಾಹರಣೆ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ಗಾಂಧಿ ಭವನದಲ್ಲಿ ಕರ್ನಾಟಕ ಪಂಚಾಯತ್ ಪರಿಷತ್ ಆಯೋಜಿಸಿದ್ದ ಡಾ. ಚಿಕ್ಕಕೊಮಾರಿ ಗೌಡ ದತ್ತಿ ಪ್ರಶಸ್ತಿ ಪುರಸ್ಕಾರ ಮತ್ತು ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಡಾ.ಸಿ.ಕೆ. ಗೌಡ ಅವರು ಬರೆದಿರುವ 'ಬಾಳೊಂದು ನಾಟಕ ಮತ್ತು ಕರ್ನಾಟಕ ಪಂಚಾಯತ್ ಪರಿಷತ್ ಒಂದು ಅವಲೋಕನ' ಕೃತಿಯನ್ನು ಬಿಡುಗಡೆ ಮಾಡಲಾಯಿತು. ಸಾಧಕರಿಗೆ ಡಾ.ಸಿ.ಕೆ.ಗೌಡ ದತ್ತಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಗಾಂಧಿ ಸ್ಮಾರಕ ನಿಧಿಯ ವೂಡೆ ಪಿ. ಕೃಷ್ಣ ಇತರರಿದ್ದರು.

ವಿಜಯ ಕರ್ನಾಟಕ | ನಮ್ಮ ಬೆಂಗಳೂರು ಗುರುವಾರ,2 ಸೆಪ್ಟೆಂಬರ್ 2021

ಕೆಥೋಲಿಕ್ ಕ್ರೈಸ್ತರ ಕನ್ನಡ ಸಂಘದಿಂದ ಮಲ್ಲೇಪುರಂಗೆ ಸನ್ಮಾನ

ಕನ್ನಡದ ಜಾಗದಲ್ಲಿ ಇಂಗ್ಲಿಷ್ ಯಜಮಾನಿಕೆ ಅಪಾಯಕಾರಿ

■ ವಿಕ ಸುದ್ದಿಲೋಕ ಬೆಂಗಳೂರು



ಇಂಗ್ಲಿಷ್ ಕೇಂದ್ರಿತ ಶಿಕ್ಷಣದಿಂದ ಕನ್ನಡದ ಮಕ್ಕಳು ಇಂಗ್ಲಿಷ್ ಮೋಹದಲ್ಲಿ ಸಿಲುಕಿದ್ದಾರೆ. ಇದರಿಂದ ಕನ್ನಡಿಗರ ಮನೆಗಳಿಗೂ ಇಂಗ್ಲಿಷ್ ಪ್ರವೇಶಿಸಿದೆ. ಕನ್ನಡದ ಜಾಗದಲ್ಲಿ ಇಂಗ್ಲಿಷ್ ಯಜಮಾನಿಕೆ ನಡೆಸುತ್ತಿರುವುದು ಅಪಾಯದ ಸೂಚನೆ ಎಂದು ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಕಳವಳ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ಕೆಥೋಲಿಕ್ ಕ್ರೈಸ್ತರ ಕನ್ನಡ ಸಂಘವು ಫಾ. ಸ್ಟ್ಯಾನಿ ಬ್ಯಾಪ್ಟಿಸ್ಟ್ ಸ್ಮರಣಾರ್ಥ ನಗರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಂಗಳವಾರ ಅವರು ಮಾತನಾಡಿದರು.

''ಕನ್ನಡವನ್ನು ವ್ಯಾಪಕವಾಗಿ ಬಳಸಿದರೆ ಮಾತ್ರ ಕನ್ನಡ ಉಳಿಯುತ್ತದೆ. ಪರಭಾಷಿಕರು ಕನ್ನಡವನ್ನು ತಮ್ಮ ಬದುಕಿನ ಭಾಗವನ್ನಾಗಿಸಿಕೊಳ್ಳುವಂತೆ ಮಾಡಲು ಕನ್ನಡ ಸಂಘಟನೆಗಳು ಕಾರ್ಯಕ್ರಮ ರೂಪಿಸಬೇಕು,'' ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ನಾಡೋಜ ವೂಡೇ ಪಿ. ಕೃಷ್ಣ ಮಾತನಾಡಿ, ''ಮಾತೃಭಾಷೆಯು ಹೃದಯದ ಭಾಷೆ. ಆದರಲ್ಲಿ ನಮ್ಮ ಮಕ್ಕಳು ಕಲಿಯದೆ, ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತರೆ ಅವರು ಅನುವಾದಕರಾಗುತ್ತಾರೆಯೇ ಹೊರತು, ಸ್ವಂತಿಕೆಯ ಸೃಜನಶೀಲತೆ ರೂಢಿಸಿಕೊಳ್ಳಲಾಗುವುದಿಲ್ಲ, ಗಾಂಧೀಜಿ ಹೇಳಿದ್ದು ಇದನ್ನೇ. ನಾನು ಮಾತೃಭಾಷೆಯಲ್ಲಿ ಮಾಡುವ ಪ್ರಾರ್ಥನೆಯೂ ಭಗವಂತನ ಹೃದಯವನ್ನು ಮುಟ್ಟುತ್ತದೆ ಎಂಬುದನ್ನು ನಮ್ಮ ಹರಿದಾಸರು ತೋರಿಸಿಕೊಟ್ಟಿದ್ದಾರೆ. ಇಂದು ನಾವು ಎಲ್ಲೆಡೆ ಕನ್ನಡವನ್ನು ಕಡೆಗಣಿಸುತ್ತಿದ್ದೇವೆ. ಇದು ಭವಿಷ್ಯದ ದೃಷ್ಟಿಯಿಂದ ಒಳ್ಳೆಯದಲ್ಲ'' ಎಂದು ಹೇಳಿದರು.

ಮತ್ತೊಬ್ಬ ಸನ್ಮಾನಿತರಾದ ಕನ್ನಡ ಚಿಂತಕ ರಾ.ನಂ.ಚಂದ್ರಶೇಖರ ಮಾತನಾಡಿ, ''ಮೇಲ್ನೋಟಕ್ಕೆ ಕನ್ನಡ ಕ್ರೈಸ್ತರ ಹೋರಾಟ, ಪ್ರಾರ್ಥನೆಗೆ ಸಂಬಂಧಿಸಿದ್ದು ಎಂದು ಅನ್ನಿಸಿದರೂ ಅದು ಕ್ರೈಸ್ತ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ನಡೆಯುತ್ತಿರುವ ಹೋರಾಟ,'' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಕೆಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್, ಫಾ. ಎಲ್. ಅರುಳಪ್ಪ, ಕನ್ನಡ ಹೋರಾಟಗಾರ ವ. ಚ.ಚನ್ನೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ ಬುಧವಾರ • ಸೆಪ್ಟೆಂಬರ್ 1, 202 ಬೆಂಗಳೂರು

‘ಪರಭಾಷಿಕರಿಗೂ ಕನ್ನಡ ಕಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಸಂಘಟನೆಗಳು ಪರಭಾಷಿಕರಿಗೂ ಕನ್ನಡ ಕಲಿಸಲು ಮುಂದಾಗಬೇಕು. ರಾಜ್ಯದಲ್ಲಿ ಕನ್ನಡದ ಬಳಕೆ ವ್ಯಾಪಕಗೊಳಿಸಬೇಕು. ಹಾಗಾದಾಗ ಮಾತ್ರ ಭಾಷೆಯನ್ನು ಉಳಿಸಲು ಸಾಧ್ಯ’ ಎಂದು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ತಿಳಿಸಿದರು.

ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ ಆಯೋಜಿಸಿದ್ದ ಫಾದರ್ ಸ್ಟ್ಯಾನಿ ಬ್ಯಾಪ್ಟಿಸ್ಟ್ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

‘ಇಂಗ್ಲಿಷ್ ಕೇಂದ್ರಿತ ಶಿಕ್ಷಣ ವ್ಯವಸ್ಥೆಯಿಂದ ಅಪಾಯ ಹೆಚ್ಚು. ನಮ್ಮ ಮಕ್ಕಳು ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗುತ್ತಿದ್ದು, ಕನ್ನಡದ ಬದಲಿಗೆ ಇಂಗ್ಲಿಷ್ ಯಜಮಾನಿಕೆ ಬರುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ’ ಎಂದರು.

ಪ್ರೊ.ಡೇ ಪಿ.ಕೃಷ್ಣ, ‘ಮಕ್ಕಳು ಮಾತೃಭಾಷೆಯ ಬದಲು



ಪ್ರೊ.ಡೇ ಪಿ.ಕೃಷ್ಣ ಅವರು ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಹಾಗೂ ರಾ.ನಂ. ಚಂದ್ರಶೇಖರ್ ಅವರನ್ನು ಸನ್ಮಾನಿಸಿದರು. ಕನ್ನಡ ಸಾಹಿತ್ಯ ಪರಿಷತ್‌ನ ನಿಕಟಪೂರ್ವ ಗೌರವ ಕಾರ್ಯದರ್ಶಿ ವ.ಚ.ಚನ್ನೇಗೌಡ, ಫಾದರ್ ಸೈಮನ್ ಬರ್ತಲೋಮಿಯೋ, ಫಾದರ್ ಎಲ್‌ಆರುಳಪ್ಪ, ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್ ಇದ್ದರು.

ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತರೆ ಅನುವಾದಕರಾಗಿ ರೂಪುಗೊಳ್ಳುತ್ತಾರಷ್ಟೆ. ಹೃದಯಕ್ಕೆ ಆಪ್ತವಾದ ಭಾಷೆಯಲ್ಲಿ ಕಲಿತಾಗ ಮಾತ್ರ ಸ್ವಂತಿಕೆ ಸಿದ್ಧಿಸುತ್ತದೆ’ ಎಂದು ತಿಳಿಸಿದರು.

‘ಕರ್ನಾಟಕದಲ್ಲಿ ಸೃಷ್ಟಿಯಾಗುವ ಕೆಲಸಗಳನ್ನು ಕನ್ನಡಿಗರಿಗೇ ಮೀಸಲಿಡಬೇಕು. ಇದಕ್ಕಾಗಿ ಕನ್ನಡ ಕಾಯಕ ವರ್ಷದಲ್ಲಿ ವಿನೂತನ ಕಾರ್ಯಕ್ರಮ ರೂಪಿಸಬೇಕು’ ಎಂದು ಕನ್ನಡ ಚಿಂತಕ ರಾ.ನಂ.ಚಂದ್ರಶೇಖರ್ ಸಲಹೆ ನೀಡಿದರು.

ಸಂಜೆವಾಣಿ

ಬೆಂಗಳೂರು
ಮಂಗಳವಾರ 31 ಆಗಸ್ಟ್ 2021



ನಗರದ ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಕಥೋಲಿಕ್ ಕ್ರೈಸ್ತರ ಕನ್ನಡ ಸಂಘವು ಫಾದರ್ ಸ್ಟ್ಯಾನಿ ಬ್ಯಾಪ್ಟಿಸ್ಟ್ ಅವರ ಸ್ಮರಣಾರ್ಥ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಸ್ವಾತಂತ್ರ್ಯ ಸೇನಾನಿ ರಾಮಂ. ಚಂದ್ರಶೇಖರ್ ಅವರನ್ನು ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಸನ್ಮಾನಿಸಿದರು. ವ.ಚ. ಚನ್ನೇಗೌಡ, ಸ್ಟೀವನ್ ಡಿಸಾ, ಫಾದರ್ ಸೈಮನ್ ಬರ್ತಲೊಮಿಯೋ ಮತ್ತಿತರರು ಇದ್ದಾರೆ.

ಪ್ರಜಾವಾಣಿ

ಬಾಪೂಜಿ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಪದವಿ ಪ್ರದಾನ

‘ಜ್ಞಾನದೊಂದಿಗೆ ನಾಯಕತ್ವ ಗುಣ ಬೆಳೆಸಿಕೊಳ್ಳಿ’

ಪ್ರಜಾವಾಣಿ ವಾರ್ತೆ



ದಾವಣಗೆರೆಯ ಬಾಪೂಜಿ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಶನಿವಾರ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಗಣ್ಯರ ಜೊತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ದಾವಣಗೆರೆ: ಸ್ವಯಂ ನಿರ್ಧಾರ ತೆಗೆದುಕೊಳ್ಳಬಲ್ಲ ಸಾಮರ್ಥ್ಯ ಇರುವವರನ್ನೇ ವರ್ತಮಾನದ ಜಾಗತಿಕ ಮ್ಯಾನೇಜ್‌ಮೆಂಟ್ ಕ್ಷೇತ್ರವು ನಿರೀಕ್ಷಿಸುತ್ತಿದ್ದು, ಈ ಕ್ಷೇತ್ರದ ಪದವೀಧರರು ಸವಾಲು ಸ್ವೀಕರಿಸಲು ಜ್ಞಾನದೊಂದಿಗೆ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಸಲಹೆ ನೀಡಿದರು.

ಬಾಪೂಜಿ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಶನಿವಾರ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕ್ಷಣ ಕ್ಷಣಕ್ಕೂ ಕಲಿಯುವುದೇ ಶಿಕ್ಷಣ. ಗುಣಮಟ್ಟದ ಕಾರ್ಯಗಳೇ ನಾವು, ನೀವು ರಾಷ್ಟ್ರಕ್ಕೆ ಕೊಡಬಹುದಾದ ಕಾಣಿಕೆ. ವಿಶ್ವದ ಯಾವ ಕಡೆಯಲ್ಲಿ ಕೆಲಸ ಮಾಡಿದರೂ ಭಾರತದ ಪರಂಪರೆಯನ್ನು ಎತ್ತಿ ಹಿಡಿಯಬೇಕು. ವೈಯಕ್ತಿಕ ಬದುಕಿಗಾಗಿ ದುಡಿಯುತ್ತಿಲ್ಲ. ಸಮಾಜದ ಎಲ್ಲಾ ವರ್ಗದ ಜನರ ಏಳಿಗೆಗಾಗಿ ದುಡಿಯುತ್ತಿರುವೆ’ ಎಂಬ ಭಾವನೆ ಇರಬೇಕು’ ಎಂದು ಕಿವಿಮಾತು ಹೇಳಿದರು.

‘ವಿಶ್ವದ ವಸತಿಯೋಗ್ಯ ಪ್ರದೇಶದಲ್ಲಿ ಶೇ 2.4 ಮಾತ್ರ ಹೊಂದಿರುವ ಭಾರತ ವಿಶ್ವದ ಒಟ್ಟು ಜನಸಂಖ್ಯೆಯ ಶೇ 16ರಷ್ಟನ್ನು ಹೊಂದಿದ್ದು, ಇದರಲ್ಲಿ ಯುವ ಶಕ್ತಿಯೇ ಅಧಿಕವಾಗಿದೆ. ಒಳ್ಳೆಯ ಇತಿಹಾಸ ನಿರ್ಮಿಸುವ ಸಂಕಲ್ಪದೊಂದಿಗೆ ಕಾರ್ಯಗಳನ್ನು ಮಾಡಬೇಕು’ ಎಂದು ಹೇಳಿದರು.

‘ಸ್ವಾರ್ಥವಿಲ್ಲದ ಕರ್ಮವೇ ಯಜ್ಞ’ ಇಂತಹ ಕರ್ಮವು ಧರ್ಮಯುತವಾಗಿರಬೇಕು ಎಂಬ ನಮ್ಮ ಸನಾತನ ಮೌಲ್ಯಯುತ ಸಂದೇಶಗಳ ಪಾಲನೆಯಾಗಬೇಕು’ ಎಂದರು.


ಕಾಲೇಜಿನ ಅಧ್ಯಕ್ಷ ಅಥಣಿ ವೀರಣ್ಣ ಅಧ್ಯಕ್ಷೀಯ ನುಡಿಗಳನ್ನಾಡಿ, ‘ಬದಲಾಗುತ್ತಿರುವ ತಂತ್ರಜ್ಞಾನದ ತಿಳಿವಳಿಕೆಯೊಂದಿಗೆ ಅನುಭವಾಧಾರಿತ ಜ್ಞಾನವನ್ನು ಬಳಸಿದ್ದಲ್ಲಿ ಸವಾಲುಗಳನ್ನು ಎದುರಿಸುವುದು ಸುಲಭ’ ಎಂದರು.

ಕಾಲೇಜಿನ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾವನಾನಂದ, ಡಾ. ಸುಜಿತ್ ಕುಮಾರ್ ಸ್ವಾಗತಿಸಿದರು. ರ್‍ಯಾಂಕ್ ವಿಜೇತರನ್ನು ಪುರಸ್ಕರಿಸಲಾಯಿತು. ಡಾ. ನವೀನ್ ನಾಗರಾಜ್ ವಂದಿಸಿದರು.

ವಿಜಯ ಕರ್ನಾಟಕ ಶನಿವಾರ, 28 ಆಗಸ್ಟ್ 2021

ಪ್ರೊ. ಮಲ್ಲೇಪುರಂಗೆ ನೃಪತುಂಗ ಪ್ರಶಸ್ತಿ ಪ್ರದಾನ

ಅಧ್ಯಯನದ ತೀಕ್ಷ್ಣತೆ ಇದ್ದರೆ ಮಾತ್ರ ಸಂಶೋಧನೆಗೆ ಬಲ



ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೆ ನೃಪತುಂಗ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಕ ಸುದ್ದಿಲೋಕ ಬೆಂಗಳೂರು

ಅಧ್ಯಯನದ ತೀಕ್ಷ್ಣತೆ ಇದ್ದಾಗ ಮಾತ್ರ ಸಂಶೋಧನೆಗೆ ಬಲ ಬರುತ್ತದೆ ಎಂದು ಹಿರಿಯ ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ನುಡಿದರು.

ಕನ್ನಡ ಸಾಹಿತ್ಯ ಪರಿಷತ್ತು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಎಂಟಿಸಿ ಸ್ಥಾಪಿತ 2021ನೇ ಸಾಲಿನ 'ನೃಪತುಂಗ ಸಾಹಿತ್ಯ ಪ್ರಶಸ್ತಿ' (ಏಳು ಲಕ್ಷ ಒಂದು ರೂ. ನಗದು) ಸ್ವೀಕರಿಸಿ ಶುಕ್ರವಾರ ಅವರು ಮಾತನಾಡಿದರು.

''ಯಾವುದೇ ಸಂಶೋಧನೆಯಾಗಲಿ ಆಳ ಅಧ್ಯಯನ ಮತ್ತು ತೀಕ್ಷ್ಣತೆ ಇರಬೇಕು. ಆಗ ಮಾತ್ರ ಸಂಶೋಧನೆಗೆ ಹೆಚ್ಚಿನ ಮೌಲ್ಯ ಬರುತ್ತದೆ. ಸಂಸ್ಕೃತ-ಕನ್ನಡ ನಿಘಂಟುಗಳಿವೆ. ಆದರೆ, ಸಮೃದ್ಧಿಯ ದೃಷ್ಟಿಯಿಂದ ಮತ್ತಷ್ಟು ಕೆಲಸ ಆಗಬೇಕಾಗಿದೆ,'' ಎಂದು ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಮಾತನಾಡಿ, ''ಸಾಧಕ ವ್ಯಕ್ತಿಗೆ ಸೂಕ್ತ ಪ್ರಶಸ್ತಿ ಸಿಲುಕಿದೆ. ಕನ್ನಡ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಲ್ಲೇಪುರಂ ಅವರ ಸಾಧನೆ ಅಗಾಧವಾದುದು. ಪರಿಷತ್ತು ಯಾವತ್ತೂ ಪ್ರಶಸ್ತಿ ಆಯ್ಕೆ ಮಾಡುವಾಗ ಮಾನದಂಡಗಳನ್ನು ಕೇಂದ್ರೀಕರಿಸಿಯೇ ಸಾಧಕರನ್ನು ಆಯ್ಕೆ ಮಾಡುತ್ತದೆ,'' ಎಂದು ನುಡಿದರು.

ಇದೇ ವೇಳೆ 'ಮಯೂರ ವರ್ಮ ಸಾಹಿತ್ಯ ಪ್ರಶಸ್ತಿ'ಯನ್ನು ಜಗದೀಶ ಲಿಂಗನಾಯಕ, ಟಿ.ಜಿ. ಶ್ರೀನಿಧಿ, ಬಸವರಾಜ ಭಜಂತ್ರಿ, ಮಮತಾ ಅರಸೀಕೆರೆ, ದೀಪಾ ಹಿರೇಗುತ್ತಿ ಅವರಿಗೆ (ತಲಾ 25 ಸಾವಿರ ರೂ. ನಗದು) ಪ್ರದಾನ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ವ.ಚ. ಚನ್ನೇಗೌಡ, ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ

ಶನಿವಾರ 28.8.2021

ಮಲ್ಲೇಪುರಂ ವೆಂಕಟೇಶ್‌ಗೆ ನೃಪತುಂಗ ಪ್ರಶಸ್ತಿ ಪ್ರದಾನ


ವಿದ್ವತ್ ಸಂಪಾದನೆಗೆ ಪಾಲಿ, ಪ್ರಾಕೃತ, ಸಂಸ್ಕೃತಗಳ ಬಲವಾದ ತಿಳಿವಳಿಕೆ ಅಗತ್ಯ: ಹಿರಿಯ ವಿದ್ವಾಂಸ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಜ್ಞಾನದ ದೃಷ್ಟಿಯಿಂದ ಪಾಲಿ, ಸಂಸ್ಕೃತ, ಪ್ರಾಕೃತ ಭಾಷೆಗಳನ್ನು ಕನ್ನಡದ ಜೊತೆಗೆ ಸಮೀಕರಿಸಬೇಕಾದ ಅಗತ್ಯವಿದೆ ಎಂದು ಹಿರಿಯ ವಿದ್ವಾಂಸ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ಅಭಿಪ್ರಾಯಪಟ್ಟರು.

ಶುಕ್ರವಾರ ಕನ್ನಡ ಸಾಹಿತ್ಯ ಪರಿಷತ್ತು ರವೀಂದ್ರಕಲಾ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 2021ನೇ ಸಾಲಿನ ಪ್ರತಿಷ್ಠಿತ 'ನೃಪತುಂಗ ಸಾಹಿತ್ಯ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು. ಕನ್ನಡ ಭಾಷೆಗೆ ಬಂದಿದ್ದೆಲ್ಲವನ್ನೂ ತನ್ನದನ್ನಾಗಿ ಮಾಡಿಕೊಳ್ಳುವ ವಿಶಿಷ್ಟ ಗುಣವಿದೆ. ವಿದ್ವತ್ ಮೂಡಲು ಪಾಲಿ, ಪ್ರಾಕೃತ, ಸಂಸ್ಕೃತಗಳ ಬಲವಾದ ತಿಳುವಳಿಕೆ ಇರಬೇಕು. ಹಿಂದಿನ ನವೋದಯ ಕಾಲದ ವಿದ್ವಾಂಸರಿಗೆ ಈ ಮೂರು ಭಾಷೆಯ ತಿಳುವಳಿಕೆ ಇತ್ತು ಎಂದು ಹೇಳಿದರು.

ಪಾಲಿ ಭಾಷೆಯ ನಿಘಂಟು ಇದುವರೆಗೂ ಕನ್ನಡಕ್ಕೆ ಬಂದಿರಲಿಲ್ಲ. ಈಗ ಪಾಲಿ ಕನ್ನಡ ನಿಘಂಟು ಅನುವಾದಿಸುವ ಮೂಲಕ ಒಂದು ಸಾಂಸ್ಕೃತಿಕ ಸಂಪತ್ತನ್ನು ಕನ್ನಡಕ್ಕೆ ತರುವ ಯತ್ನವನ್ನು ಮಾಡಿದ್ದೇನೆ. ನಮ್ಮಲ್ಲಿ ಸಂಸ್ಕೃತ –ಕನ್ನಡ ನಿಘಂಟುಗಳಿವೆ. ಆದರೆ ಸಮೃದ್ಧಿಯ ದೃಷ್ಟಿಯಿಂದ ಮತ್ತಷ್ಟು ಕೆಲಸ ಆಗಬೇಕಾಗಿದೆ. ತರುಣ ವಿದ್ವಾಂಸರಲ್ಲಿ ಅಧ್ಯಯನದ ತೀಕ್ಷ್ಣತೆ ಇರಬೇಕು. ಆಗ ಮಾತ್ರ ಸಂಶೋಧನೆಗೆ ಬಲ ಬರುತ್ತದೆ ಎಂದು ತಿಳಿಸಿದರು.



ರವೀಂದ್ರ ಕಲಾಕ್ಷೇತ್ರದಲ್ಲಿ ಹಿರಿಯ ಸಂಸ್ಕೃತ ವಿದ್ವಾಂಸ, ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರಿಗೆ ನೃಪತುಂಗ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಮಾತನಾಡಿ, ಸಾಧಕ ವ್ಯಕ್ತಿಗೆ ಸೂಕ್ತ ಪ್ರಶಸ್ತಿ ಸಿಕ್ಕಿದೆ. ಕನ್ನಡ ಮತ್ತು ಸಂಸ್ಕೃತಿಕ ಕ್ಷೇತ್ರದಲ್ಲಿ ಮಲ್ಲೇಪುರಂ ಅವರ ಸಾಧನೆ ಅಪಾರ. ಮಲ್ಲೇಪುರಂ ಅವರ ಸಾಹಿತ್ಯ ಸಾಧನೆಗೆ ಮುಂದಿನ ದಿನಗಳಲ್ಲಿ ಜ್ಞಾನ ಪೀಠ ಪ್ರಶಸ್ತಿ ಬರಲಿ. ಕನ್ನಡ ಸಾಹಿತ್ಯ ಪರಿಷತ್ತು ಯಾವತ್ತೂ ಪ್ರಶಸ್ತಿ ಆಯ್ಕೆ ಮಾಡುವಾಗ ಮಾನದಂಡಗಳನ್ನು ಕೇಂದ್ರೀಕರಿಸಿಯೇ ಸಾಧಕರನ್ನು ಆಯ್ಕೆ ಮಾಡುತ್ತದೆ ಎಂದು ಹೇಳಿದರು.

ಮಯೂರವರ್ಮ ಸಾಹಿತ್ಯ ಪ್ರಶಸ್ತಿ: ಜಗದೀಶ ಲಿಂಗನಾಯಕ, ಟಿ.ಜಿ. ಶ್ರೀನಿಧಿ, ಬಸವರಾಜ ಭಜಂತ್ರಿ, ಮಮತಾ ಅರಸಿಕೆರೆ, ದೀಪಾ ಹಿರೇಗುತ್ತಿ ಅವರಿಗೆ ಮಯೂರವರ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ, ಬಿಎಂಟಿಸಿ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ವ.ಚ. ಚನ್ನೆಗೌಡ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಹಿರಿಯ ಅಧಿಕಾರಿ ಅಭಿದುಲ್ಲಾ, ನಾಡೋಜ ಡಾ. ವೂಡೇ ಪಿ. ಕೃಷ್ಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರು ಉದಯವಾಣಿ
ಗುರುವಾರ, ಆಗಸ್ಟ್ 26, 2021

ಕುವೆಂಪು ಕನ್ನಡದ ಮಹಾ ಚೇತನ

ಕೆಂಗೇರಿ: ಕುವೆಂಪು ಕನ್ನಡದ ಮಹಾ ಚೇತನ, ಸಾಮಾನ್ಯ ವ್ಯಕ್ತಿಗೆ ಸಮಾಜದಲ್ಲಿ ಗೌರವ ದೊರಕಿಸಿಕೊಡುವಲ್ಲಿ ಮಹತ್ತರವಾದ ಪಾತ್ರ ಹೊಂದಿದವರು ಕುವೆಂಪು ಅವರು ಎಂದು ಬೆಂಗಳೂರು ಗಾಂಧಿ ಭವನ ಅಧ್ಯಕ್ಷ ನಾಡೋಜ ವೂಡೆ ಪಿ.ಕೃಷ್ಣ ಅಭಿಪ್ರಾಯಪಟ್ಟರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗೇರಿ ಉಪನಗರದ ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘದ ವತಿಯಿಂದ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್, ಕೆಂಗೇರಿ ಉಪನಗರ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ಕಲ್ಪತರು ಸಾಂಸ್ಕೃತಿಕ, ಸಾಮಾಜಿಕ ಮತ್ತು ಕ್ರೀಡಾ ಟ್ರಸ್ಟ್‌ನ ಸಹಯೋಗದಲ್ಲಿ 5 ದಿನಗಳ ರಾಷ್ಟ್ರಕವಿ ಕುವೆಂಪು ನಾಟಕೋತ್ಸವ ಕಾರ್ಯಕ್ರಮದಲ್ಲಿ



ಮಾತನಾಡಿದರು.

ಶ್ರೀ ಸಾಮಾನ್ಯರನ್ನು ಬಹಳ ಎತ್ತರದಲ್ಲಿ ಕಂಡಂತಹ ವ್ಯಕ್ತಿತ್ವವನ್ನು ಹೊಂದಿದವರು ಕುವೆಂಪುರವರು, ಯಾರು ಮುಖ್ಯರಲ್ಲ, ಯಾರು ಅಮುಖ್ಯರಲ್ಲ ಎಲ್ಲರೂ ಸಮಾನರೂ. ಅಧಿಕಾರದಲ್ಲಿರುವವರು, ಸಂಪತ್ತನ್ನು ಹೊಂದಿರುವವರನ್ನು ಪೂಜಿಸುವುದು, ಆರಾಧಿಸುವುದು ಸಾಮಾನ್ಯವಾಗಿದ್ದಂತಹ ಕಾಲಘಟ್ಟದಲ್ಲಿ ಯಾವುದೇ ಪ್ರಚಾರಗಳನ್ನು ಬಯಸದೇ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಜೀವನವನ್ನು ಕಳೆದಂತಹವರು ಕುವೆಂಪುರವರು ಎಂದರು. ಕಾರ್ಯಕ್ರಮದಲ್ಲಿ ಯು. ಗೋವಿಂದೇಗೌಡ ನಿರ್ದೇಶನದ "ಕಾನೀನಾ" ಎಂಬ ಪೌರಾಣಿಕ ನಾಟಕವನ್ನು ಪ್ರದರ್ಶಿಸಲಾಯಿತು.

ಬಿಬಿಎಂಪಿ ಪಶ್ಚಿಮ ಹಣಕಾಸು ವಿಭಾಗದ ನೋಡೆಲ್ ಅಧಿಕಾರಿ ಲಿಂಗಣ್ಣ ಗುಂಡಳ್ಳಿ, ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್‌ನ ಪ್ರಾಂಶುಪಾಲ ಪ್ರೊ.ಜಯರಾಮ್, ಜರ್ನಲಿಸ್ಟ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ ಕಾರ್ಯಾಧ್ಯಕ್ಷ ನ.ಶ್ರೀ ಸುದೀಂದ್ರರಾವ್, ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘದ ಧನ್ವಂತರಿ, ಶಾಂತಲಾ ಸೇರಿದಂತೆ ಇತರರು ಇದ್ದರು.

ಪ್ರಜಾವಾಣಿ
ಭಾನುವಾರ • ಆಗಸ್ಟ್ 15, 2021

ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರ 'ಬ್ರಹ್ಮಯಾನ' ಪುಸ್ತಕ ಬಿಡುಗಡೆ


'ಕನ್ನಡ ಆಧ್ಯಾತ್ಮ ಸಾಹಿತ್ಯದ ಅಮೂಲ್ಯ ಕೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರ 'ಬ್ರಹ್ಮಯಾನ' ಪುಸ್ತಕವು ಕನ್ನಡ ಆಧ್ಯಾತ್ಮ ಸಾಹಿತ್ಯದ ಅಮೂಲ್ಯ ಕೃತಿ. ಇದು ಮಹಾಲಿಂಗರಂಗ ಕವಿಯ ಅನುಭವಾಮೃತ ಶಾಸ್ತ್ರ ಗ್ರಂಥ ಮಾತ್ರವಲ್ಲ, ಉತ್ತಮ ಕಾವ್ಯವೂ ಆಗಿದೆ' ಎಂದು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್ ತಿಳಿಸಿದರು.

ಪ್ರೊ. ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ ಮತ್ತು ಉದಯ ಪ್ರಕಾಶನ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

'ಲೇಖಕರು ಮಹಾಲಿಂಗರಂಗನೊಂದಿಗೆ ಮುಖಾಮುಖಿಯಾಗಿ, ಅವರ ರೂಪಕ ಭಾಷೆಯಲ್ಲೇ ಅನುಕ್ತವಾದ ಆತ್ಮಾನುಸಂಧಾನದ ಪರಿಯನ್ನು ಸರಳವಾಗಿ ದಾಟಿಸುವ ಪ್ರಯತ್ನದಂತೆ ಈ ಕೃತಿ ರಚಿತವಾಗಿದೆ' ಎಂದು ಹೇಳಿದರು.



ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು 'ಬ್ರಹ್ಮಯಾನ' ಕೃತಿ ಬಿಡುಗಡೆಗೊಳಿಸಿದರು. (ಎಡದಿಂದ) ಭಾರತೀಯ ವಿದ್ಯಾಭವನದ ಅಧ್ಯಕ್ಷ ಎಚ್.ಎನ್.ಸುರೇಶ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ.ವಸಂತಕುಮಾರ್, ಲೇಖಕ ಮಲ್ಲೇಪುರಂ ಜಿ.ವೆಂಕಟೇಶ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಕರ್ನಾಟಕ ಗಾಂಧೀಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಇದ್ದರು– ಪ್ರಜಾವಾಣಿ ಚಿತ್ರ

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, 'ವಿದ್ವತ್ತು, ವಿನಯ ಹಾಗೂ ವಿವೇಕಗಳ ಆಕೃತಿಯೇ ಈ ಕೃತಿಯಲ್ಲಿ ಗರ್ಭೀಕರಿಸಿಕೊಂಡಿದೆ. ಈಗ ಜನರು ಲೌಕಿಕ ಜಗತ್ತಿನಲ್ಲಿ ಜೀವಿಸುತ್ತಿದ್ದಾರೆ. ಅವರಿಗೆ ಲೌಕಿಕತೆ ಮತ್ತು ಆಧ್ಯಾತ್ಮವನ್ನು ಸಮನ್ವಯಿಕರಿಸಿಕೊಂಡು ಹೋಗುವುದು ಹೇಗೆ ಎಂಬುದನ್ನು ಈ ಕೃತಿ ತಿಳಿಸುತ್ತದೆ. ಈ ಹಾದಿಯಲ್ಲಿ ಸಾಗುವುದೇ ಜನರ ಜೀವನ ಕ್ರಮವಾಗಬೇಕು' ಎಂದು ಕಿವಿಮಾತು ಹೇಳಿದರು.

'ಅಂತರಂಗದ ಪ್ರಪಂಚ ತೆರೆದುಕೊಳ್ಳುವುದೇ ಆಧ್ಯಾತ್ಮ. ಆಧ್ಯಾತ್ಮದೆಡೆಗೆ ಸಾಗಲು ಅಗತ್ಯವಿರುವ ಶುದ್ಧೀಕರಣ ಪ್ರಕ್ರಿಯೆಯನ್ನು ಬ್ರಹ್ಮಯಾನ ಕೃತಿ ತಿಳಿಸಿಕೊಡುತ್ತದೆ. ವ್ಯವಹಾರಿಕ ಪ್ರಪಂಚ ಮನುಷ್ಯನನ್ನು ಸದಾ ಆಕರ್ಷಿಸುತ್ತಿರುತ್ತದೆ. ಅದರಿಂದ ಆಚೆ ಬಂದು ಪಾರಮಾರ್ಥಿಕದೆಡೆ ಸಾಗುವ ದಾರಿಯ ಬಗ್ಗೆ ಕವಿ ಮಹಾಲಿಂಗರಂಗ ಅವರು 11 ಅಧ್ಯಾಯಗಳಲ್ಲಿ ತಿಳಿಸಿದ್ದಾರೆ. ಅದನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ' ಎಂದು ಲೇಖಕ ಮಲ್ಲೇಪುರಂ ಜಿ.ವೆಂಕಟೇಶ ತಿಳಿಸಿದರು.

'ಜಗತ್ತು, ಜೀವ ಮತ್ತು ಈಶ್ವರ, ಈ ಮೂರರ ನಡುವಣ ಸಂಬಂಧ ಎಂತಹದ್ದು. ಈ ಜೀವ ಜಗತ್ತಿನಲ್ಲಿ ಎದುರಾಗುವ ಸಮಸ್ಯೆಗಳಿಂದ ಪಾರಾಗುವುದು ಹೇಗೆ? ಇಂತಹ ಅನೇಕ ಸ್ವಾರಸ್ಯಗಳನ್ನು ಕೃತಿ ಒಳಗೊಂಡಿದೆ' ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್ ಅವರಿಗೆ 'ಪ್ರೊ.ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಕನ್ನಡಪ್ರಭ

Reader connect initiative

ಶೇಷಾದ್ರಿಪುರಂ ಕಾಲೇಜೆಂಬ ಅಕ್ಷಯಪಾತ್ರೆ

'ಗುರಿಯೊಂದಿಗೆ ಬನ್ನಿ, ನಾವು ನೆರವಾಗುತ್ತೇವೆ'; ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಧ್ಯೇಯವಾಕ್ಯ

ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂಬ ಉಕ್ತಿಗೆ ಇಂಬು ನೀಡಿದಂತೆ ತಾಯಂದಿರಿಬ್ಬರು ಸೇರಿ ಕಟ್ಟಿದ ಕಿಂಡರ್‌ಗಾರ್ಟನ್ ಸಂಸ್ಥೆಯು 91 ವರ್ಷಗಳ ಸುದೀರ್ಘ ಇತಿಹಾಸದೊಂದಿಗೆ ಬೆಳೆದು ಇಂದು ಪಿಎಚ್.ಡಿ ಪದವೀಧರರ ಸೃಜನವರೆಗೆ ಬಂದು ತಲುಪಿರುವುದು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಕ್ರಾಂತಿಯೇ ಸರಿ.

ಬೆಂಗಳೂರಿನಲ್ಲಿ 1930ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಅವರ ಅಕ್ಕನ ಮಗಳಾದ ಸೀತಮ್ಮ ಮತ್ತು ಆನಂದಮ್ಮ ಸೇರಿ ಸ್ಥಾಪಿಸಿದ ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ಇಂದು ರಾಜ್ಯದಾದ್ಯಂತ 34 ಅಂಗ ಸಂಸ್ಥೆಗಳು, 22,000 ವಿದ್ಯಾರ್ಥಿಗಳು, 1,500ಕ್ಕೂ ಹೆಚ್ಚು ಬೋಧಕ-ಬೋಧಕೇತರ ಸಿಬ್ಬಂದಿಯನ್ನು ಹೊಂದಿದ್ದು, ಇದುವರೆಗೆ 250ಕ್ಕೂ ಹೆಚ್ಚು ಮಂದಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಹೆಸರುವಾಸಿಯಾಗಿದೆ. 2014ರಲ್ಲಿ ಮೈಸೂರಿಗೂ ತನ್ನ ವ್ಯಾಪ್ತಿ ವಿಸ್ತರಿಸಿಕೊಂಡ ಟ್ರಸ್ಟ್ ಹೆಬ್ಬಾಳ ರಿಂಗ್ ರಸ್ತೆಯ ಬಳಿ ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು ಮತ್ತು ಶೇಷಾದ್ರಿಪುರಂ ಪದವಿ ಕಾಲೇಜು ಸ್ಥಾಪಿಸಿತು.

ಪಿಯು ಕಾಲೇಜಿನಲ್ಲಿ ಆನ್‌ಲೈನ್ ತರಗತಿ ಆರಂಭ: ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಕೋವಿಡ್-19 ನಡುವೆ ಆರಂಭಿಸಿರುವ ಆನ್‌ಲೈನ್ ತರಗತಿಗೆ ಉತ್ತಮ ವೇದಿಕೆ ಕಲ್ಪಿಸಿಕೊಡಲಾಗಿದೆ. ನುರಿತ ಉಪನ್ಯಾಸಕರು ತರಗತಿಯಲ್ಲಿದ್ದುಕೊಂಡು ಲೈವ್ ಆನ್‌ಲೈನ್ ತರಗತಿ ನಡೆಸಿ ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಪಠ್ಯ- ಪ್ರವಚನ ಮುಗಿಸಿ ಕೊಡುತ್ತಿದ್ದಾರೆ. ಪ್ರತಿ ತಿಂಗಳು ವಿದ್ಯಾರ್ಥಿಗಳ ಆಪ್ತ ಸಮಾಲೋಚಕರನ್ನು ಕರೆಸಿ ಅವರಿಂದ ಮನೋ ಸಾಮರ್ಥ್ಯ ಸದೃಢತೆಗೆ ಬೇಕಾದ ಟಿಪ್ಸ್ ಕೊಡಿಸಲಾಗುತ್ತಿದೆ. ಕೋವಿಡ್ ಉಲ್ಬಣಿಸಿರುವ ಇಂತಹ ಸನ್ನಿವೇಶದಲ್ಲಿ ಮನೋಬಲ ಎಷ್ಟರ ಮಟ್ಟಿಗೆ ಸದೃಢವಾಗಿರಬೇಕು ಮತ್ತು ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕು, ಶೈಕ್ಷಣಿಕ ಪ್ರಗತಿಯನ್ನು ಹೇಗೆ ಸಾಧಿಸಬೇಕೆಂಬ ತಿಳಿವಳಿಕೆಯನ್ನು ನೀಡಲಾಗುತ್ತಿದೆ.

ಪಿಯು ಕೋರ್ಸ್‌ಗಳ ಪರಿಚಯ

ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ವಿಜ್ಞಾನ ಮತ್ತು ವಾಣಿಜ್ಯ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ವಿಜ್ಞಾನ ವಿಭಾಗದಲ್ಲಿ ಪಿಸಿಎಂಬಿ, ಪಿಸಿಎಂಸಿ ಮತ್ತು ವಾಣಿಜ್ಯ ವಿಭಾಗದಲ್ಲಿ ಇಬಿಎಸಿ, ಇಬಿಎಬಿ ಕೋರ್ಸ್‌ಗಳು ಲಭ್ಯವಿವೆ. ಅಲ್ಲದೆ ಸಿಇಟಿ ಕೋಚಿಂಗ್ ಸಹ ನೀಡಲಾಗುತ್ತಿದೆ. ನೀಟ್ ಪರೀಕ್ಷೆಗೂ ತಯಾರಿ ನಡೆಸಲು ಮೂಲ ಸೌಕರ್ಯ ಕಲ್ಪಿಸಿಕೊಡಲಾಗಿದೆ.

ನಮ್ಮ ಕಾಲೇಜಿನಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಸಿಇಟಿ ಮತ್ತು ನೀಟ್ ಮೂಲಕ ರ‍್ಯಾಂಕ್ ಪಡೆದು ವೃತ್ತಿಪರ ಕೋರ್ಸ್‌ಗಳಿಗೆ ಅವಕಾಶ ಪಡೆದುಕೊಂಡಿದ್ದಾರೆ.

ವೂಡೆಗೆ ಸಂದ ನಾಡೋಜ ಗೌರವ




ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಪ್ರೊ. ವೂಡೇ ಪಿ. ಕೃಷ್ಣ ಅವರಿಗೆ ಹಂಪಿ ಕನ್ನಡ ವಿಶ್ವ ವಿದ್ಯಾಲಯ ನೀಡುವ ನಾಡೋಜ ಗೌರವ ಸಂದಿದೆ. ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಕ್ರಾಂತಿಯನ್ನು ಗುರುತಿಸಿ ಈ ಗೌರವ ನೀಡಲಾಗಿದೆ.






ಶೇಷಾದ್ರಿಪುರಂ ಕಾಲೇಜು, ನನ್ನ ಕಾಲೇಜು ನನಗೆಲ್ಲವೂ ಆಗಿದೆ ಎಂದು ಹೇಳಿಕೊಳ್ಳಲು ಹೆಮ್ಮೆಯೆನಿಸುತ್ತಿದೆ. ಅದ್ಭುತವಾದ ತರಗತಿಗಳು, ದಿನದ ಎಲ್ಲಾ ಸಮಯದಲ್ಲಿಯೂ ನಮ್ಮ ಸಮಸ್ಯೆಗಳಿಗೆ ಉತ್ತರಿಸುವ ಉಪನ್ಯಾಸಕರುಗಳು ಮತ್ತು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಸಹಕರಿಸುವ ಪಠ್ಯೇತರ ಚಟುವಟಿಕೆಗಳು ನಮಗೆ ಸಹಕಾರಿಯಾಗಿವೆ.

\- ಶಿವಾನಿ.ವಿ



ಇಂತಹ ಒಂದು ಶಿಕ್ಷಣ ಸಂಸ್ಥೆಯು ಪ್ರತಿಯೊಬ್ಬ ವಿದ್ಯಾರ್ಥಿಗೂ ಉತ್ತಮವಾದ ಮಾರ್ಗದರ್ಶನದೊಂದಿಗೆ ಜ್ಞಾನಾರ್ಜನೆಯನ್ನು ನೀಡುತ್ತಿರುವುದು ಪ್ರಶಂಸನೀಯ. ಪ್ರತಿಯೊಬ್ಬ ಪ್ರಾಧ್ಯಾಪಕರ ಸಹಾಯದಿಂದ ನಾನು ಉತ್ತಮವಾದ ಅಂಕಗಳನ್ನು ಗಳಿಸಲು ಸಹಾಯವಾಯಿತು. ಇಂತಹ ಒಂದು ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣವನ್ನು ಪಡೆದಂಥ ನಾನು ಎಂದೆಂದಿಗೂ ಚಿರಋಣಿ.

\- ಹರ್ಷಿತಾ ನಗಾಡಿ



Reader connect initiative

ಶೇಷಾದ್ರಿಪುರಂ ಕಾಲೇಜೆಂಬ ಅಕ್ಷಯಪಾತ್ರೆ

'ಗುರಿಯೊಂದಿಗೆ ಬನ್ನಿ, ನಾವು ನೆರವಾಗುತ್ತೇವೆ'; ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಧ್ಯೇಯವಾಕ್ಯ

ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂಬ ಉಕ್ತಿಗೆ ಇಂಬು ನೀಡಿದಂತೆ ತಾಯಂದಿರಿಬ್ಬರು ಸೇರಿ ಕಟ್ಟಿದ ಕಿಂಡರ್‌ಗಾರ್ಟನ್ ಸಂಸ್ಥೆಯು 91 ವರ್ಷಗಳ ಸುದೀರ್ಘ ಇತಿಹಾಸದೊಂದಿಗೆ ಬೆಳೆದು ಇಂದು ಪಿಎಚ್.ಡಿ ಪದವೀಧರರ ಸೃಜನೆವರೆಗೆ ಬಂಧು ತಲುಪಿರುವುದು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಕ್ರಾಂತಿಯೇ ಸರಿ.

ಬೆಂಗಳೂರಿನಲ್ಲಿ 1930ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಅವರ ಅಕ್ಕನ ಮಗಳಾದ ಸೀತಮ್ಮ ಮತ್ತು ಆನಂದಮ್ಮ ಸೇರಿ ಸ್ಥಾಪಿಸಿದ ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ಇಂದು ರಾಜ್ಯದಾದ್ಯಂತ 34 ಅಂಗ ಸಂಸ್ಥೆಗಳು, 22,000 ವಿದ್ಯಾರ್ಥಿಗಳು, 1,500ಕ್ಕೂ ಹೆಚ್ಚು ಬೋಧಕ-ಬೋಧಕೇತರ ಸಿಬ್ಬಂದಿಯನ್ನು ಹೊಂದಿದ್ದು, ಇದುವರೆಗೆ 250ಕ್ಕೂ ಹೆಚ್ಚು ಮಂದಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಹೆಸರುವಾಸಿಯಾಗಿದೆ. 2014ರಲ್ಲಿ ಮೈಸೂರಿಗೂ ತನ್ನ ವ್ಯಾಪ್ತಿ ವಿಸ್ತರಿಸಿಕೊಂಡ ಟ್ರಸ್ಟ್ ಹೆಬ್ಬಾಳು ರಿಂಗ್ ರಸ್ತೆಯ ಬಳಿ ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು ಮತ್ತು ಶೇಷಾದ್ರಿಪುರಂ ಪದವಿ ಕಾಲೇಜು ಸ್ಥಾಪಿಸಿತು.

ಪಿಯು ಕಾಲೇಜಿನಲ್ಲಿ ಆನ್‌ಲೈನ್ ತರಗತಿ ಆರಂಭ: ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಕೋವಿಡ್-19 ನಡುವೆ ಆರಂಭಿಸಿರುವ ಆನ್‌ಲೈನ್ ತರಗತಿಗೆ ಉತ್ತಮ ವೇದಿಕೆ ಕಲ್ಪಿಸಿಕೊಡಲಾಗಿದೆ. ನುರಿತ ಉಪನ್ಯಾಸಕರು ತರಗತಿಯಲ್ಲಿದ್ದುಕೊಂಡು ಲೈವ್ ಆನ್‌ಲೈನ್ ತರಗತಿ ನಡೆಸಿ ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಪಠ್ಯ- ಪ್ರವಚನ ಮುಗಿಸಿ ಕೊಡುತ್ತಿದ್ದಾರೆ. ಪ್ರತಿ ತಿಂಗಳು ವಿದ್ಯಾರ್ಥಿಗಳ ಆಪ್ತ ಸಮಾಲೋಚಕರನ್ನು ಕರೆಸಿ ಅವರಿಂದ ಮನೋಸಾಮರ್ಥ್ಯ ಸದೃಢತೆಗೆ ಬೇಕಾದ ಟಿಪ್ಸ್ ಕೊಡಿಸಲಾಗುತ್ತಿದೆ. ಕೋವಿಡ್ ಉಲ್ಬಣಿಸಿರುವ ಇಂತಹ ಸನ್ನಿವೇಶನದಲ್ಲಿ ಮನೋಬಲ ಎಷ್ಟರ ಮಟ್ಟಿಗೆ ಸದೃಢವಾಗಿರಬೇಕು ಮತ್ತು ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕು, ಶೈಕ್ಷಣಿಕ ಪ್ರಗತಿಯನ್ನು ಹೇಗೆ ಸಾಧಿಸಬೇಕೆಂಬ ತಿಳುವಳಿಕೆಯನ್ನು ನೀಡಲಾಗುತ್ತಿದೆ.

ಪಿಯು ಕೋರ್ಸ್‌ಗಳ ಪರಿಚಯ

ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ವಿಜ್ಞಾನ ಮತ್ತು ವಾಣಿಜ್ಯ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ವಿಜ್ಞಾನ ವಿಭಾಗದಲ್ಲಿ ಪಿಸಿಎಂಬಿ, ಪಿಸಿಎಂಸಿ ಮತ್ತು ವಾಣಿಜ್ಯ ವಿಭಾಗದಲ್ಲಿ ಇಬಿಎಎಸ್, ಇಬಿಎಬಿ ಕೋರ್ಸ್‌ಗಳು ಲಭ್ಯವಿವೆ. ಅಲ್ಲದೆ ಸಿಇಟಿ ಕೋಚಿಂಗ್ ಸಹ ನೀಡಲಾಗುತ್ತಿದೆ. ನೀಟ್ ಪರೀಕ್ಷೆಗೂ ತಯಾರಿ ನಡೆಸಲು ಮೂಲ ಸೌಕರ್ಯ ಕಲ್ಪಿಸಿಕೊಡಲಾಗಿದೆ.

ನಮ್ಮ ಕಾಲೇಜಿನಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಸಿಇಟಿ ಮತ್ತು ನೀಟ್ ಮೂಲಕ ರ್‍ಯಾಂಕ್ ಪಡೆದು ವೃತ್ತಿಪರ ಕೋರ್ಸ್ ಗಳಿಗೆ ಅವಕಾಶ ಪಡೆದುಕೊಂಡಿದ್ದಾರೆ.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ



ಅವರಿಗೆ ಹಂಪಿ ಕನ್ನಡ ವಿಶ್ವ ವಿದ್ಯಾಲಯ ನೀಡುವ ನಾಡೋಜ ಗೌರವ ಸಂದಿದೆ. ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಕ್ರಾಂತಿಯನ್ನು ಗುರುತಿಸಿ ಈ ಗೌರವ ನೀಡಲಾಗಿದೆ.



ಶೇಷಾದ್ರಿಪುರಂ ಕಾಲೇಜು, ನನ್ನ ಕಾಲೇಜು ನನಗೆಲ್ಲವೂ ಆಗಿದೆ ಎಂದು ಹೇಳಿಕೊಳ್ಳಲು ಹೆಮ್ಮೆಯೆನಿಸುತ್ತಿದೆ. ಅದ್ಭುತವಾದ ತರಗತಿಗಳು,



ದಿನದ ಎಲ್ಲಾ ಸಮಯದಲ್ಲಿಯೂ ನಮ್ಮ ಸಮಸ್ಯೆಗಳಿಗೆ ಉತ್ತರಿಸುವ ಉಪನ್ಯಾಸಕರುಗಳು ಮತ್ತು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಸಹಕರಿಸುವ ಪಠ್ಯೇತರ ಚಟುವಟಿಕೆಗಳು ನಮಗೆ ಸಹಕಾರಿಯಾಗಿವೆ.

- ಶಿವಾನಿ. ಎ

ಇಂತಹ ಒಂದು ಶಿಕ್ಷಣ ಸಂಸ್ಥೆಯು ಪ್ರತಿಯೊಬ್ಬ ವಿದ್ಯಾರ್ಥಿಗೂ ಉತ್ತಮವಾದ ಮಾರ್ಗದರ್ಶನದೊಂದಿಗೆ ಜ್ಞಾನಾರ್ಜನೆಯನ್ನು ನೀಡುತ್ತಿರು




ವುದು ಪ್ರಶಂಸನೀಯ. ಪ್ರತಿಯೊಬ್ಬ ಪ್ರಾಧ್ಯಾಪಕರ ಸಹಾಯದಿಂದ ನಾನು ಉತ್ತಮವಾದ ಅಂಕಗಳನ್ನು ಗಳಿಸಲು ಸಹಾಯವಾಯಿತು. ಇಂತಹ ಒಂದು ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣವನ್ನು ಪಡೆದಂಥ ನಾನು ಎಂದೆಂದಿಗೂ ಚಿರಋಣಿ.

- ಹರ್ಷಿತಾ ನಗಾಡಿ




ಸಂಜೆವಾಣಿ

ಬೆಂಗಳೂರು
ಶನಿವಾರ 14 ಆಗಸ್ಟ್ 2021



ಸ್ವಾತಂತ್ರ್ಯ ಹೋರಾಟಗಾರ ಡಬ್ಲ್ಯು.ಎಚ್. ಹನುಮಂತಪ್ಪ ಅವರ ಮೊಮ್ಮಗ, ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣರವರನ್ನು ಸ್ವಾತಂತ್ರ್ಯೋತ್ಸವದ ಮುನ್ನಾದಿನ ಅವರ ಕಚೇರಿಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಜಿ.ಎ. ಬಾವಾ ಸನ್ಮಾನಿಸಿದರು. ಮಾಜಿ ಬಿಬಿಎಂಪಿ ಸದಸ್ಯ ಡಿ.ಜಿ. ರಮೇಶ್, ಸಾಹಿತಿ ಡಾ. ಸಿಸಿರಾ (ರಾಮಲಿಂಗೇಶ್ವರ) ಸಾಹಿತಿ, ಚಲನಚಿತ್ರ ನಿರ್ದೇಶಕ ಡಾ. ಗುಣವಂತ ಮಂಜು, ಚಾಮರಾಜಪೇಟೆ ಕಾಂಗ್ರೆಸ್ ಮುಖಂಡರುಗಳಾದ ರಮೇಶ್ ಬಾಬು, ಶಿವಾರೆಡ್ಡಿ, ಎಂ.ಪಿ. ನಟರಾಜ್ ಇದ್ದಾರೆ.

ಕನ್ನಡಪ್ರಭ ಸೋಮವಾರ 9.8.2021



ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ದಿವಂಗತ ಎಚ್.ಎಸ್.ದೊರೆಸ್ವಾಮಿ ಅವರ ಭಾವಚಿತ್ರಕ್ಕೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಪುಷ್ಪನಮನ ಸಲ್ಲಿಸಿದರು. ವೈಎಸ್‌ವಿ ದತ್ತಾ, ಕುರುಬೂರು ಶಾಂತಕುಮಾರ್, ವಸುಂಧರಾ ಭೂಪತಿ, ಎಂ.ಪಿ.ನಾಡಗೌಡ, ರಾಜು ದೊರೆಸ್ವಾಮಿ ಇದ್ದರು.

ದೊರೆಸ್ವಾಮಿಗೆ ಶ್ರದ್ಧಾಂಜಲಿ

ದೊರೆಸ್ವಾಮಿ ಸ್ವಾರ್ಥಕ್ಕೆ ಹೋರಾಡಲಿಲ್ಲ: ಸಿದ್ದು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರು ಎಂದೂ ಸ್ವಾರ್ಥಕ್ಕಾಗಿ, ಅಧಿಕಾರಕ್ಕಾಗಿ ಹೋರಾಟ ಮಾಡಿದವರಲ್ಲ. ಜನರಿಗೆ ಅನ್ಯಾಯವಾದಾಗಲೆಲ್ಲಾ ದನಿ ಎತ್ತುತ್ತಿದ್ದ ಅವರು ಜನಮಾನಸದಲ್ಲಿ ಉಳಿದುಹೋಗಿದ್ದಾರೆ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಸ್ಮರಿಸಿದರು.

ಭಾನುವಾರ ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ದಿವಂಗತ ಎಚ್.ಎಸ್.ದೊರೆಸ್ವಾಮಿ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವೆಲ್ಲ ಅಧಿಕಾರದಲ್ಲಿ ಇದ್ದವರು, ಮುಂದೆಯೂ ಮತ್ತೆ ಅಧಿಕಾರ ಬೇಕೆನ್ನುವವರು. ಆದರೆ, ದೊರೆಸ್ವಾಮಿ ಅವರು ಚುನಾವಣೆಗೆ ನಿಂತು ರಾಜಕಾರಣ ಎಂದೂ ಮಾಡಿಲ್ಲ. ತಾವು ಅಧಿಕಾರದಲ್ಲಿದ್ದಾಗ ಸ್ವಾರ್ಥಕ್ಕಾಗಿ ಎಂದೂ ಬಂದವರಲ್ಲ. ಜನರ ಸಮಸ್ಯೆಗಳು ಇದ್ದಾಗ ಮಾತ್ರ ಬಂದು ಮಾತನಾಡುತ್ತಿದ್ದರು ಎಂದು ಹೇಳಿದರು. ಮಾಜಿ ಶಾಸಕ ವೈಎಸ್‌ವಿ ದತ್ತಾ, ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಲೇಖಕಿ ಡಾ। ವಸುಂಧರಾ ಭೂಪತಿ, ಎಂ.ಪಿ.ನಾಡಗೌಡ, ದಿವಂಗತ ದೊರೆಸ್ವಾಮಿ ಮಗ ರಾಜು ದೊರೆಸ್ವಾಮಿ ಇದ್ದರು.

ಪ್ರಜಾವಾಣಿ
ಶನಿವಾರ • ಆಗಸ್ಟ್ 7, 2021

ಸಂಕ್ಷಿಪ್ತ ಸುದ್ದಿ

ಎಚ್.ಎಸ್. ದೊರೆಸ್ವಾಮಿ ಅವರಿಗೆ ನಾಳೆ ಶ್ರದ್ಧಾಂಜಲಿ


ಬೆಂಗಳೂರು: ಕರ್ನಾಟಕ ಪ್ರಜಾಧಿಕಾರ ಹೋರಾಟ ಸಮಿತಿ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಗಸ್ಟ್ 8ರಂದು ಬೆಳಿಗ್ಗೆ 11 ಗಂಟೆಗೆ ಗಾಂಧಿಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, 'ದೊರೆಸ್ವಾಮಿ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್, ಕೆಪಿಸಿಸಿ ಉಪಾಧ್ಯಕ್ಷ ಬಿ.ಎಲ್.ಶಂಕರ್, ಬಿ.ಆರ್.ಪಾಟೀಲ, ಜೆಡಿಎಸ್ ಮುಖಂಡ ವೈ.ಎಸ್.ವಿ.ದತ್ತ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ' ಎಂದರು.

SANJEPRABHA DAILY EVENING ಸಂಜೆಪ್ರಭ ಗುರುವಾ

"ಬಾಬಾ ಸಾಹೇಬರೆಡೆಗೆ" ಖರ್ಗೆಯವರ ಬದುಕಿನ ಸಮಗ್ರ ಮಾಹಿತಿಗಳನ್ನೊಳಗೊಂಡ ಪುಸ್ತಕ- ಡಾ.ವೂಡೇ ಪಿ.ಕೃಷ್ಣ

ಬೆಂಗಳೂರು: "ಬಾಬಾಸಾಹೇಬರೆಡೆಗೆ" ಖರ್ಗೆ ಜೀವನಕಥನ ಕೇವಲ ಮಲ್ಲಿಕಾರ್ಜುನ ಖರ್ಗೆಯವರ ಜೀವನ ಚರಿತ್ರೆ ಮಾತ್ರವಾಗಿರದೆ ಮಲ್ಲಿಕಾರ್ಜುನ ಖರ್ಗೆಯವರ ಬದುಕಿನ ಸಮಗ್ರ ಮಾಹಿತಿಗಳನ್ನೊಳಗೊಂಡ ಪುಸ್ತಕವಾಗಿದೆ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ. ಕೃಷ್ಣ ಹೇಳಿದರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಪಲ್ಲವ ಪ್ರಕಾಶನ, ಕಲಬುರಗಿ ಸಹಯೋಗದೊಂದಿಗೆ ನಗರದ ಕುಮಾರಪಾರ್ಕ್ ನ ಗಾಂಧಿ ಭವನದಲ್ಲಿ ಪ್ರೊ. ಎಚ್.ಟಿ.ಪೋತೆ ಅವರ "ಬಾಬಾ ಸಾಹೇಬರೆಡೆಗೆ" ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಕಥನ ಕೃತಿ ಬಿಡುಗಡೆ ಮತ್ತು ವಿಶೇಷೋಪನ್ಯಾಸ ಕಾರ್ಯಕ್ರಮದಲ್ಲಿ ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.


ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ವರವಟ್ಟಿಯಿಂದ ದೆಹಲಿಯವರೆಗೆ ಅವರು ನಡೆದ ಬಂದದ್ದನ್ನು ಈ ಚರಿತ್ರೆಯಲ್ಲಿ ಕಟ್ಟಿಕೊಟ್ಟಿದೆ. ಅವರ ಜೀವನದ ಎಲ್ಲಾ ಮಜಲುಗಳನ್ನು ಪರಿಚಯಿಸುವಲ್ಲಿ ಪುಸ್ತಕ ಯಶಸ್ವಿಯಾಗಿದೆ. ಪ್ರೊ. ಎಚ್.ಟಿ. ಪೋತೆಯವರು ಪುಸ್ತಕವನ್ನು ಸಮರ್ಥವಾಗಿ ನಿರೂಪಿಸಿದ್ದಾರೆ. ಖರ್ಗೆಯವರ ಬಾಲ್ಯದ ಆ ದಿನಗಳು, ಶಿಕ್ಷಣ, ವಕೀಲಿ-ಹೋರಾಟ, ರಾಜಕೀಯ, ಧಾರ್ಮಿಕ, ಸಾಮಾಜಿಕ ಚಿಂತನೆಗಳು, ಜನರ ಕಾಳಜಿ ಮತ್ತು ದಕ್ಷ ಕಾರ್ಯಕಾರಿ ದೆಹಲಿಯ ಲೋಕಸಭೆಯಲ್ಲಿ ಮಾಡಿದ ಚರ್ಚೆ/ಭಾಷಣಗಳು ಇವೆಲ್ಲವನ್ನು ಒಳಗೊಂಡಿದೆ ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ನಾಡೋಜ ಪ್ರೊ.ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮತ್ತು ಗಾಂಧಿ ಶಾಂತಿ ಪ್ರತಿಷ್ಠಾನದ ಉಪಾಧ್ಯಕ್ಷ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಭಾಗವಹಿಸಿದ್ದರು. ಕವಿ ಹಾಗೂ ಸಂಸ್ಕೃತಿ ಚಿಂತಕ ಡಾ.ಮೂಡ್ನಾಕೂಡು ಚಿನ್ನಸ್ವಾಮಿಯವರು "ಪ್ರಸ್ತುತ ಭಾರತ : ಗಾಂಧೀ ಮತ್ತು ಬಿ.ಆರ್.ಅಂಬೇಡ್ಕರ್" ವಿಷಯದ ಕುರಿತು ವಿಶೇಷೋಪನ್ಯಾಸವನ್ನು ನೀಡಿದರು. ಕೃತಿಯ ಲೇಖಕ ಗುಲಬರ್ಗಾ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ.ಪೋತೆ ಮತ್ತು ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಜೋಸೆಫ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗೌ.ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ , ರಾಹುಲ್ ಖರ್ಗೆ, ಡಾ.ಶಿವಾ ಉಪಸ್ಥಿತರಿದ್ದರು. ಗಾಂಧಿ ಶಾಂತಿ ಪ್ರತಿಷ್ಠಾನದ ಗೌ.ಕಾರ್ಯದರ್ಶಿ ಡಾ.ಸತ್ಯಮಂಗಲ ಮಹಾದೇವ ಕಾರ್ಯಕ್ರಮ ನಿರೂಪಿಸಿದರು.

ಸಂಯುಕ್ತ ಕರ್ನಾಟಕ ಗುರುವಾರ 22 ಜುಲೈ 2021

ಸಮಾನತೆ ಕನಸು ಕಂಡ ಖರ್ಗೆ



ಡಾ.ಎಚ್.ಟಿ. ಪೋತೆ ಅವರ 'ಬಾಬಾ ಸಾಹೇಬರೆಡೆಗೆ' (ಮಲ್ಲಿಕಾರ್ಜುನ ಖರ್ಗೆಜೀ ಅವರ ಜೀವನ ಕಥನ) ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಸಂ.ಕ.ಸಮಾಚಾರ ಬೆಂಗಳೂರು,

ಸಮಾನತೆಯ ಸಮಾಜದ ಕನಸು ಕಂಡ ಬಾಬಾ ಸಾಹೇಬರ ನಡೆ-ನುಡಿಯನ್ನು ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಬದುಕಿನಲ್ಲಿ ಬದ್ಧತೆ ತೋರಿದ್ದಾರೆಂದು ಕೇಂದ್ರ ಸಾಹಿತ್ಯ ಅಕಾಡಮಿ ನಿವೃತ್ತ ಪ್ರಾದೇಶಿಕ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ ಹೇಳಿದರು.

ಕಲಬುರಗಿಯ ಕುಟುಂಬ ಪ್ರಕಾಶನ ಪ್ರಕಟಿಸಿದ ಹಾಗೂ ಡಾ.ಎಚ್.ಟಿ. ಪೋತೆ ಅವರ 'ಬಾಬಾ ಸಾಹೇಬರೆಡೆಗೆ' (ಮಲ್ಲಿಕಾರ್ಜುನ ಖರ್ಗೆಜೀ ಅವರ ಜೀವನ ಕಥನ) ಕೃತಿಯನ್ನು ಅಂತರ್ಜಾಲತಾಣದ ಮೂಲಕ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಬಾಬಾ ಸಾಹೇಬರಿಗೂ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಅರ್ಧ ಶತಮಾನದ ಅಂತರವಿದೆ. ಆದರೆ, ಅವರ ನಡೆ-ನುಡಿಗಳಲ್ಲಿ ಸಾಕಷ್ಟು ಸಾಮ್ಯತೆ ಇದೆ. ಈ ಅಂಶವನ್ನು ಲೇಖಕರು 'ಬಾಬಾ ಸಾಹೇಬರೆಡೆಗೆ' ಕೃತಿಯಲ್ಲಿ ತೋರಿದ್ದಾರೆಂದು ಪ್ರಶಂಸಿಸಿದರು.

ಹಲವು ವರ್ಷಗಳಿಂದ ರಾಜಕಾರಣದಲ್ಲಿದ್ದರೂ ಪ್ರಚಾರಕ್ಕಾಗಿ ಹಂಬಲಿಸಿದವರಲ್ಲ. ಸದ್ದಿಲ್ಲದೆ ಜನಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಖರ್ಗೆ ರಾಜಕಾರಣಿಯಲ್ಲ; ಅವರೊಬ್ಬ ಮುತ್ಸದ್ದಿ. ದಲಿತ ನಾಯಕ ಬಿ ಶ್ಯಾಮಸುಂದರ್ ಅವರೊಂದಿಗೆ ಒಡನಾಟವಿದ್ದ ಖರ್ಗೆ ಅವರು ಬಾಬಾಸಾಹೇಬರ ವೈಚಾರಿಕತೆಯನ್ನು ಬದುಕಾಗಿಸಿಕೊಂಡ ಹಲವಾರು ಯುವಕರನ್ನು ಪ್ರೋತ್ಸಾಹಿಸಿದರು. ತಂದೆಯವರು ಅಧಿಕಾರದಲ್ಲಿದ್ದಾಗ ಮಕ್ಕಳು ಅಧಿಕಾರದ ದುರುಪಯೋಗ ನಡೆಯುತ್ತದೆ. ಆದರೆ, ಹೀಗಾಗದಂತೆ ಮಲ್ಲಿಕಾರ್ಜುನ ಖರ್ಗೆ ಅವರು ನೋಡಿಕೊಂಡಿದ್ದು ಪ್ರಶಂಸನೀಯ ಎಂದರು. ಕೃತಿಯ ಲೇಖಕ ಪ್ರೊ.ಎಚ್. ಟಿ. ಪೋತೆ ಮಾತನಾಡಿ, ಖರ್ಗೆ ಯಾವತ್ತೂ ಆಶ್ವಾಸನೆ ಕೊಟ್ಟವರಲ್ಲ, ಕೆಲಸ ಮಾಡಿ ತೋರಿಸಿದವರು. ಅಂಬೇಡ್ಕರ್ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರು ಬಾಲ್ಯದಲ್ಲೇ ತಾಯಿಯ ಪ್ರೇಮದಿಂದ ವಂಚಿತರು. ಆದರೆ, ಸಮಾಜದ ಅಭಿವೃದ್ಧಿಯಲ್ಲಿ ಹೆಚ್ಚು ಆಸಕ್ತರು ಎಂದು ಬಣ್ಣಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಮಲ್ಲೇಪುರಂ ಜಿ ವೆಂಕಟೇಶ, ನಾಡೋಜ ಹಂಪ ನಾಗರಾಜಯ್ಯ, ವೂಡೇ ಪಿ. ಕೃಷ್ಣ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

• VIJAYAVANI • BENGALURU
ಗುರುವಾರ 22 ಜುಲೈ 2021
22 JULY 2021

ಖರ್ಗೆ ಪಕ್ಷನಿಷ್ಠೆ, ಬದ್ಧತೆ ಅಚಲ

ನಾಡೋಜ ಪ್ರೊ. ಹಂಪನಾ ಅಭಿಮತ | ಬಾಬಾಸಾಹೇಬರೆಡೆಗೆ ಕೃತಿ ಬಿಡುಗಡೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಎರಡು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗುವ ಅವಕಾಶ ಕೈತಪ್ಪಿದ್ದರೂ ಕಾಂಗ್ರೆಸ್ ಪಕ್ಷದೆಡೆಗಿನ ಅವರ ನಿಷ್ಠೆ ಹಾಗೂ ಬದ್ಧತೆ ಅಚಲವಾದದ್ದು ಎಂದು ಹಿರಿಯ ಸಂಶೋಧಕ ಪ್ರೊ. ಹಂಪ ನಾಗರಾಜಯ್ಯ ಹೇಳಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕುಟುಂಬ ಪ್ರಕಾಶನ ಕಲಬುರಗಿ ಸಹಯೋಗದಲ್ಲಿ ನಗರದ ಗಾಂಧಿ ಭವನದಲ್ಲಿ ಬುಧವಾರ ಆಯೋಜಿಸಿದ್ದ ಪ್ರೊ. ಎಚ್.ಟಿ. ಪೋತೆ ಅವರ 'ಬಾಬಾಸಾಹೇಬರೆಡೆಗೆ' (ಮಲ್ಲಿಕಾರ್ಜುನ ಖರ್ಗೆ ಜೀವನಕಥನ) ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.


» ರಾಜ್ಯಸಭೆ ವಿರೋಧ ಪಕ್ಷದ ನಾಯಕನ ಜೀವನಕಥನ

ಅಪರೂಪದ ವ್ಯಕ್ತಿತ್ವ ಹೊಂದಿರುವ ಖರ್ಗೆ ಅವರು ತಾಯಿ ಕರುಳಿನವರು. ಇಂದಿನ ರಾಜಕಾರಣದಲ್ಲಿ ಅವರ ವ್ಯಕ್ತಿತ್ವಕ್ಕೆ ಸರಿಸಾಟಿಯಾದವರು ಯಾರೂ ಇಲ್ಲ. ರಾಡಿ ರಾಜಕಾರಣದಿಂದ ದೂರವಿರುವ ವ್ಯಕ್ತಿತ್ವದವರು. ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಗೃಹ ಸಚಿವರಾಗಿ ಅನೇಕ ಸವಾಲುಗಳನ್ನು ಎದುರಿಸಿದವರು ಎಂದರು.

ರಾಜ್ಯದ ರಾಜಕಾರಣದಲ್ಲಿ ಖರ್ಗೆ ಅದ್ಭುತ ಸಾಧಕ. ರಾಷ್ಟ್ರ ರಾಜಕಾರಣದಲ್ಲಿ ವಿಜೃಂಭಿಸುತ್ತಿರುವ ಅವರು, ಸಂಸತ್ತಿನಲ್ಲಿ ಮಾತನಾಡಲು ಪ್ರಾರಂಭಿಸಿದರೆ ಉಳಿದವರು ಸದ್ದಿಲ್ಲದೆ ಆಲಿಸುತ್ತಾರೆ. ಶೋಷಿತರ ಪರ ಗಟ್ಟಿ ಧ್ವನಿಯಾಗಿ ಖರ್ಗೆ ಮಾಡಿರುವ ಕಾರ್ಯ ಅದ್ಭುತ. ಅವರ ವ್ಯಕ್ತಿತ್ವ, ನಡೆದು ಬಂದ ಹಾದಿ ತಿಳಿಯಲು ಈ ಪುಸ್ತಕ ಓದಲೇಬೇಕು ಎಂದರು.

ಗುಲ್ಬರ್ಗಾ ವಿವಿ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಹಾಗೂ ಕೃತಿಕಾರ ಪ್ರೊ. ಎಚ್. ಟಿ. ಪೋತೆ ಮಾತನಾಡಿ, ಖರ್ಗೆ ಶಿಕ್ಷಣ, ಸಹಕಾರ, ಸಂಘಟನೆಗೆ ಹೆಚ್ಚು ಆದ್ಯತೆ ಕೊಟ್ಟ ವಿರಳ ನಾಯಕ. ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಮತ್ತು ಜನಸೇವೆಯನ್ನು ರೂಢಿಸಿಕೊಂಡಿದ್ದರು. ತಮ್ಮ ಆದರ್ಶಗಳನ್ನು ಸಾಕಾರಗೊಳಿಸಲು ಜೀವದ ಹಂಗು ತೊರೆದು ಹೋರಾಡಿದ್ದರು. ತಮಗೆ ಅಪಮಾನ, ಅವಮಾನ ಮಾಡಿದವರನ್ನೂ ಕೂಡ ಪ್ರೀತಿಸುವ ಸ್ವಭಾವ ಹೊಂದಿದವರು ಖರ್ಗೆ ಅವರದ್ದು. ಈ ಪುಸ್ತಕ ಬರೆಯುವ ಸಂದರ್ಭದಲ್ಲಿ ನನ್ನನ್ನು ಕರೆದು, 'ನೀವು ನನ್ನನ್ನು ಅಂಬೇಡ್ಕರ್ ಅವರ ಸಾಲಲ್ಲಿ ನಿಲ್ಲಿಸಬೇಡಿ. ನಾನು ಅವರ ಅನುಯಾಯಿ ಅಷ್ಟೆ' ಎಂದಿದ್ದನ್ನು ಸ್ಮರಿಸಿದರು.

'ಪ್ರಸ್ತುತ ಭಾರತ: ಗಾಂಧಿ ಮತ್ತು ಬಿ.ಆರ್. ಅಂಬೇಡ್ಕರ್' ವಿಷಯವಾಗಿ ಡಾ. ಮೂಡ್ನಕೂಡು ಚಿನ್ನಸ್ವಾಮಿ ಉಪನ್ಯಾಸ ನೀಡಿದರು. ಖರ್ಗೆ ಪುತ್ರ ರಾಹುಲ್ ಖರ್ಗೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್, ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.



ಗಾಂಧಿಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಬಾಬಾಸಾಹೇಬರೆಡೆಗೆ' ಕೃತಿಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಬಿಡುಗಡೆಗೊಳಿಸಿದರು. ಹಿರಿಯ ಸಂಶೋಧಕ ಪ್ರೊ. ಹಂಪ ನಾಗರಾಜಯ್ಯ, ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಕೃತಿಕಾರ ಪ್ರೊ. ಎಚ್.ಟಿ. ಪೋತೆ ಇತರರಿದ್ದರು.

ಸ್ವಾತಂತ್ರ್ಯಾನಂತರ ಈ ನಾಡು ಕಂಡ ಧೀಮಂತ ರಾಜಕಾರಣಿಗಳಲ್ಲಿ ಖರ್ಗೆ ಅವರಿಗೆ ಪ್ರಮುಖ ಸ್ಥಾನವಿದೆ. ರಾಜ್ಯ ರಾಜಕಾರಣದಿಂದ ರಾಷ್ಟ್ರ ರಾಜಕಾರಣಕ್ಕೆ ದಾಪುಗಾಲಿಟ್ಟು ಅಚ್ಚಳಿಯದ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿದ್ದಾರೆ. ಅಂಬೇಡ್ಕರ್ ಹಾದಿಯಲ್ಲಿ ಸಾಗುತ್ತಿರುವ ಖರ್ಗೆ ಅವರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ವ್ಯಕ್ತಿತ್ವದ ಆಯಾಮಗಳನ್ನು ತಿಳಿಯಲು ಸಹಕಾರಿಯಾಗಿದೆ.

| ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ವಿಶ್ರಾಂತ ಕುಲಪತಿ, ಕರ್ನಾಟಕ ಸಂಸ್ಕೃತ ವಿವಿ

ಪ್ರಜಾವಾಣಿ
ಗುರುವಾರ • ಜುಲೈ 22, 2021

ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಆಧಾರಿತ
‘ಬಾಬಾ ಸಾಹೇಬರೆಡೆಗೆ’ ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ



ಕೃತಿಯನ್ನು ಹಂಪ ನಾಗರಾಜಯ್ಯ ಬಿಡುಗಡೆ ಮಾಡಿದರು. ಮಲ್ಲೇಪುರಂ ಜಿ. ವೆಂಕಟೇಶ್, ರಾಹುಲ್ ಖರ್ಗೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ ಇದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಆಧಾರಿತ ‘ಬಾಬಾ ಸಾಹೇಬರೆಡೆಗೆ’ (ಲೇಖಕ ಪ್ರೊ.ಎಚ್.ಟಿ. ಪೋತೆ) ಕೃತಿಯನ್ನು ಗಾಂಧಿ ಭವನದಲ್ಲಿ ಗುರುವಾರ ಬಿಡುಗಡೆ ಮಾಡಲಾಯಿತು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕಲಬುರ್ಗಿಯ ಕುಟುಂಬ ಪ್ರಕಾಶನದ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕೃತಿ ಬಿಡುಗಡೆ ಮಾಡಿ ಮಾತನಾಡಿದ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ‘ಇದು ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಮಾತ್ರವಲ್ಲದೇ, ಅವರ ಬದುಕಿನ ಸಮಗ್ರ ಮಾಹಿತಿ ಒಳಗೊಂಡ ಪುಸ್ತಕವಾಗಿದೆ’ ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಪ್ರೊ.ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸಿದ್ದರು. ಗಾಂಧಿ ಶಾಂತಿ ಪ್ರತಿಷ್ಠಾನದ ಉಪಾಧ್ಯಕ್ಷ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಭಾಗವಹಿಸಿದ್ದರು.

ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ ಅವರು ‘ಪ್ರಸ್ತುತ ಭಾರತ: ಗಾಂಧೀ ಮತ್ತು ಬಿ.ಆರ್.ಅಂಬೇಡ್ಕರ್’ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕನ್ನಡಪ್ರಭ
ಗುರುವಾರ 22.7.2021

ಖರ್ಗೆ ಕಾಂಗ್ರೆಸ್ ನಿಷ್ಠೆ ಅಚಲ: ಡಾ। ಹಂಪನಾ

2 ಬಾರಿ ಸಿಎಂ ಆಗುವ ಅವಕಾಶ ತಪ್ಪಿಸಿಕೊಂಡರೂ ಬದ್ಧತೆ ಸ್ಥಿರ । ಖರ್ಗೆ ಜೀವನ ಕಥನ 'ಬಾಬಾಸಾಹೇಬರೆಡೆಗೆ' ಕೃತಿ ಬಿಡುಗಡೆ

• ಕನ್ನಡಪ್ರಭ ವಾರ್ತೆ ಬೆಂಗಳೂರು

ರಾಜ್ಯದ ಮುಖ್ಯಮಂತ್ರಿಯಾಗುವ ಅವಕಾಶ ಎರಡು ಬಾರಿ ತಪ್ಪಿದ್ದರೂ ಕೂಡ ಮಲ್ಲಿಕಾರ್ಜುನ ಖರ್ಗೆ ಅವರ ಪಕ್ಷ ನಿಷ್ಠೆ ಅಚಲವಾದದ್ದು. ದೇವರಾಜ ಅರಸು ಅವರ ಕಾಲದಿಂದಲೂ ಕಾಂಗ್ರೆಸ್ ಪಕ್ಷಕ್ಕೆ ಅವರಿಗೆ ಇರುವ ಬದ್ಧತೆ ಸ್ಥಿರ ಮತ್ತು ಘನವಾದದ್ದು ಎಂದು ಸಾಹಿತಿ ನಾಡೋಜ ಹಂ.ಪ.ನಾಗರಾಜಯ್ಯ ಶ್ಲಾಘಿಸಿದರು.

ಬುಧವಾರ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕುಟುಂಬ ಪ್ರಕಾಶನ ಕಲಬುರಗಿ ಸಹಯೋಗದಲ್ಲಿ ಪ್ರೊ. ಎಚ್.ಟಿ.ಪೋತೆ ಬರೆದಿರುವ ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಕಥನ 'ಬಾಬಾಸಾಹೇಬರೆಡೆಗೆ' ಕೃತಿ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡನಾಡು ಕಂಡ ಅತ್ಯಪರೂಪದ ವ್ಯಕ್ತಿತ್ವ ಹೊಂದಿದ ರಾಜಕಾರಣಿಯೆಂದರೆ ಮಲ್ಲಿಕಾರ್ಜುನ ಖರ್ಗೆ. ಸದ್ಯದ ರಾಜಕಾರಣದಲ್ಲಿ ಅವರ ವ್ಯಕ್ತಿತ್ವಕ್ಕೆ ಸರಿಸಾಟಿಯಾಗಿ ಮತ್ತೊಬ್ಬರಿಲ್ಲ. ಅವರದ್ದು ತಾಯಿ ಕರುಳಿನ ರಾಜಕಾರಣ. ಕೆಸರೆರಚಾಟ, ರಾಡಿ ಎಬ್ಬಿಸುವ ರಾಜಕಾರಣದಿಂದ ಖರ್ಗೆ ಸದಾ ದೂರ ನಿಂತವರು. ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಗೃಹ ಸಚಿವರಾಗಿ ಅನೇಕ ಸವಾಲುಗಳನ್ನು ಮೆಟ್ಟಿ ನಿಂತವರು, ಸಂಸತ್ತಿನಲ್ಲಿ ಖರ್ಗೆ ಅವರು ಶೋಷಿತರ ಪರ ಗಟ್ಟಿ ಧ್ವನಿಯಾಗಿದ್ದಾರೆ ಎಂದು ಹಂಪನಾ ಬಣ್ಣಿಸಿದರು.



ಪ್ರೊ. ಎಚ್.ಟಿ.ಪೋತೆ ಬರೆದಿರುವ ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಕಥನ 'ಬಾಬಾಸಾಹೇಬರೆಡೆಗೆ' ಕೃತಿಯನ್ನು ನಗರದ ಗಾಂಧಿ ಭವನದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ನಾಡೋಜ ಡಾ। ವೂಡೇ ಪಿ.ಕೃಷ್ಣ ಬಿಡುಗಡೆ ಮಾಡಿದರು. ನಾಡೋಜ ಹಂ.ಪ.ನಾಗರಾಜಯ್ಯ, ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ, ಖರ್ಗೆ ಅವರ ಪುತ್ರ ರಾಹುಲ್ ಖರ್ಗೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ವೂಡೇ ಪಿ.ಕೃಷ್ಣ, ಖರ್ಗೆ ಅವರು ರಾಷ್ಟ್ರ ನಾಯಕರು. ಅವರನ್ನು ಒಂದು ಸಮುದಾಯದ ನಾಯಕರನ್ನಾಗಿ ಸೀಮಿತಗೊಳಿಸಬಾರದು. ವಿರೋಧಿಗಳೂ ಪ್ರೀತಿಸುವ, ನಿಷ್ಕಳಂಕ ವ್ಯಕ್ತಿತ್ವ, ಜಾತ್ಯತೀತತೆ, ನಿಗರ್ವಿ, ದೂರದೃಷ್ಟಿ, ಮಾತಿನ ಮೇಲಿನ ಹಿಡಿತ ಇವುಗಳಿಂದಾಗಿ ಖರ್ಗೆ ಆದರ್ಶ ರಾಜಕಾರಣಿಯಾಗಿ ನಿಲ್ಲುತ್ತಾರೆ ಎಂದು ಹೇಳಿದರು.

ಬಿಎಸ್‌ವೈ ಸಿಎಂ ಆಗಿ ಮುಂದುವರಿಯಲಿ: ಹಂಪನಾ

ಕಾರ್ಯಕ್ರಮದಲ್ಲಿ ಮಾತನಾಡಿದ ಹಂಪ ನಾಗರಾಜಯ್ಯ ಅವರು, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಪದಚ್ಯುತಗೊಳಿಸಿ ಮತ್ತೊಬ್ಬರನ್ನು ಮುಖ್ಯಮಂತ್ರಿಯನ್ನಾಗಿಸುವ ವಿದ್ಯಮಾನವನ್ನು ಖಂಡಿಸಿದರು. ಯಡಿಯೂರಪ್ಪ ಅವರು ಉಳಿದಿರುವ ಅವಧಿಗೂ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಅವರನ್ನು ಅರ್ಧದಲ್ಲಿ ಅಧಿಕಾರದಿಂದ ಕೆಳಗಿಳಿಸುವುದು ಸರಿಯಲ್ಲ. ಕೊರೋನಾದಿಂದಾಗಿ ಜನ ಜೀವನ ವಿಷಣ್ಣವಾಗಿದೆ, ಈ ಸಂದರ್ಭದಲ್ಲಿ ಜನಪ್ರತಿನಿಧಿಗಳು ಜನರ ನೆರವಿಗೆ ಧಾವಿಸಬೇಕೇ ಹೊರತು ಅಧಿಕಾರ ಬದಲಾವಣೆ ಮಾಡುತ್ತ ಕೂರುವುದು ಸರಿಯಲ್ಲ. ಅದೇ ರೀತಿ ಮಠಾಧೀಶರು ತಮ್ಮ ಮಠ, ಜಾತಿಯ ಕಾರಣಕ್ಕೆ ಯಡಿಯೂರಪ್ಪ ಅವರನ್ನು ಸಮರ್ಥಿಸಿಕೊಳ್ಳುವುದು ಮತ್ತು ಮುಂದುವರಿಯಲಿ ಎಂದು ಆಗ್ರಹಿಸುವುದು ಸರಿಯಲ್ಲ ಎಂದು ಹಂಪನಾ ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಸ್ವಾತಂತ್ರ್ಯೋತ್ತರ ಕರ್ನಾಟಕ ಕಂಡ ಧೀಮಂತ ರಾಜಕಾರಣಿಗಳಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪ್ರಮುಖ ಸ್ಥಾನವಿದೆ. ರಾಜ್ಯ ರಾಜಕಾರಣದಿಂದ ರಾಷ್ಟ್ರ ರಾಜಕಾರಣಕ್ಕೆ ದಾಪುಗಾಲಿಟ್ಟು ಅಚ್ಚಳಿಯದ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿದ್ದಾರೆ ಎಂದು ಹೇಳಿದರು.

ಕೃತಿಕಾರ ಎಚ್.ಟಿ.ಪೋತೆ ಮಾತನಾಡಿ, ಅಂಬೇಡ್ಕರ್ ಅವರ ಆಶಯವನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿಯಾಗಿದ್ದಾರೆ. ಶಿಕ್ಷಣ, ಸಹಕಾರ, ಸಂಘಟನೆ ಈ ಮೂರು ವಿಭಾಗಕ್ಕೂ ಆದ್ಯತೆ ಕೊಟ್ಟ ವಿರಳ ನಾಯಕ ಖರ್ಗೆ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಡಾ। ಮೂಡ್ನಾಕೂಡು ಚಿನ್ನಸ್ವಾಮಿ 'ಪ್ರಸ್ತುತ ಭಾರತ: ಗಾಂಧೀ ಮತ್ತು ಬಿ.ಆರ್.ಅಂಬೇಡ್ಕರ್' ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಖರ್ಗೆ ಅವರ ಪುತ್ರ ರಾಹುಲ್ ಖರ್ಗೆ, ಗಾಂಧಿ ಶಾಂತಿ ಪ್ರತಿಷ್ಠಾನದ ಜೇರಿಗೆ ಲೋಕೇಶ್, ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ

VIJAYAVANI BENGALURU
ಗುರುವಾರ 22 ಜುಲೈ 2021
22 JULY 2021

ಖರ್ಗೆ ಪಕ್ಷನಿಷ್ಠೆ, ಬದ್ಧತೆ ಅಚಲ

ನಾಡೋಜ ಪ್ರೊ. ಹಂಪನಾ ಅಭಿಮತ । ಬಾಬಾಸಾಹೇಬರೆಡೆಗೆ ಕೃತಿ ಬಿಡುಗಡೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಎರಡು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗುವ ಅವಕಾಶ ಕೈತಪ್ಪಿದ್ದರೂ ಕಾಂಗ್ರೆಸ್ ಪಕ್ಷದೆಡೆಗಿನ ಅವರ ನಿಷ್ಠೆ ಹಾಗೂ ಬದ್ಧತೆ ಅಚಲವಾದದ್ದು ಎಂದು ಹಿರಿಯ ಸಂಶೋಧಕ ಪ್ರೊ. ಹಂಪ ನಾಗರಾಜಯ್ಯ ಹೇಳಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕುಟುಂಬ ಪ್ರಕಾಶನ ಕಲಬುರಗಿ ಸಹಯೋಗದಲ್ಲಿ ನಗರದ ಗಾಂಧಿ ಭವನದಲ್ಲಿ ಬುಧವಾರ ಆಯೋಜಿಸಿದ್ದ ಪ್ರೊ. ಎಚ್.ಟಿ. ಪೋತೆ ಅವರ 'ಬಾಬಾಸಾಹೇಬರೆಡೆಗೆ' (ಮಲ್ಲಿಕಾರ್ಜುನ ಖರ್ಗೆ ಜೀವನಕಥನ) ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕನ ಜೀವನಕಥನ

ಅಪರೂಪದ ವ್ಯಕ್ತಿತ್ವ ಹೊಂದಿರುವ ಖರ್ಗೆ ಅವರು ತಾಯಿ ಕರುಳಿನವರು. ಇಂದಿನ ರಾಜಕಾರಣದಲ್ಲಿ ಅವರ ವ್ಯಕ್ತಿತ್ವಕ್ಕೆ ಸರಿಸಾಟಿಯಾದವರು ಯಾರೂ ಇಲ್ಲ. ರಾಡಿ ರಾಜಕಾರಣದಿಂದ ದೂರವಿರುವ ವ್ಯಕ್ತಿತ್ವದವರು. ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಗೃಹ ಸಚಿವರಾಗಿ ಅನೇಕ ಸವಾಲುಗಳನ್ನು ಎದುರಿಸಿದವರು ಎಂದರು.

ರಾಜ್ಯದ ರಾಜಕಾರಣದಲ್ಲಿ ಖರ್ಗೆ ಅದ್ಭುತ ಸಾಧಕ. ರಾಷ್ಟ್ರ ರಾಜಕಾರಣದಲ್ಲಿ ವಿಜೃಂಭಿಸುತ್ತಿರುವ ಅವರು, ಸಂಸತ್ತಿನಲ್ಲಿ ಮಾತನಾಡಲು ಪ್ರಾರಂಭಿಸಿದರೆ ಉಳಿದವರು ಸದ್ದಿಲ್ಲದೆ ಆಲಿಸುತ್ತಾರೆ. ಶೋಷಿತರ ಪರ ಗಟ್ಟಿ ಧ್ವನಿಯಾಗಿ ಖರ್ಗೆ ಮಾಡಿರುವ ಕಾರ್ಯ ಅದ್ಭುತ. ಅವರ ವ್ಯಕ್ತಿತ್ವ, ನಡೆದು ಬಂದ ಹಾದಿ ತಿಳಿಯಲು ಈ ಪುಸ್ತಕ ಓದಲೇಬೇಕು ಎಂದರು.

ಗುಲ್ಬರ್ಗಾ ವಿವಿ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಹಾಗೂ ಕೃತಿಕಾರ ಪ್ರೊ. ಎಚ್. ಟಿ. ಪೋತೆ ಮಾತನಾಡಿ, ಖರ್ಗೆ ಶಿಕ್ಷಣ, ಸಹಕಾರ, ಸಂಘಟನೆಗೆ ಹೆಚ್ಚು ಆದ್ಯತೆ ಕೊಟ್ಟ ವಿರಳ ನಾಯಕ. ವಿದ್ಯಾರ್ಥಿ ದಸೆಯಿಂದಲೇ ನಾಯಕತ್ವ ಮತ್ತು ಜನಸೇವೆಯನ್ನು ರೂಢಿಸಿಕೊಂಡಿದ್ದರು. ತಮ್ಮ ಆದರ್ಶಗಳನ್ನು ಸಾಕಾರಗೊಳಿಸಲು ಜೀವದ ಹಂಗು ತೊರೆದು ಹೋರಾಡಿದ್ದರು. ತಮಗೆ ಅಪಮಾನ, ಅವಮಾನ ಮಾಡಿದವರನ್ನೂ ಕೂಡ ಪ್ರೀತಿಸುವ ಸ್ವಭಾವ ಹೊಂದಿದವರು ಖರ್ಗೆ ಅವರದ್ದು. ಈ ಪುಸ್ತಕ ಬರೆಯುವ ಸಂದರ್ಭದಲ್ಲಿ ನನ್ನನ್ನು ಕರೆದು, 'ನೀವು ನನ್ನನ್ನು ಅಂಬೇಡ್ಕರ್ ಅವರ ಸಾಲಲ್ಲಿ ನಿಲ್ಲಿಸಬೇಡಿ. ನಾನು ಅವರ ಅನುಯಾಯಿ ಅಷ್ಟೆ' ಎಂದಿದ್ದನ್ನು ಸ್ಮರಿಸಿದರು.

'ಪ್ರಸ್ತುತ ಭಾರತ: ಗಾಂಧಿ ಮತ್ತು ಬಿ.ಆರ್. ಅಂಬೇಡ್ಕರ್' ವಿಷಯವಾಗಿ ಡಾ. ಮೂಡ್ನಕೂಡು ಚಿನ್ನಸ್ವಾಮಿ ಉಪನ್ಯಾಸ ನೀಡಿದರು. ಖರ್ಗೆ ಪುತ್ರ ರಾಹುಲ್ ಖರ್ಗೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್, ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.



ಗಾಂಧಿಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಬಾಬಾಸಾಹೇಬರೆಡೆಗೆ' ಕೃತಿಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಬಿಡುಗಡೆಗೊಳಿಸಿದರು. ಹಿರಿಯ ಸಂಶೋಧಕ ಪ್ರೊ. ಹಂಪ ನಾಗರಾಜಯ್ಯ, ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಕೃತಿಕಾರ ಪ್ರೊ. ಎಚ್.ಟಿ. ಪೋತೆ ಇತರರಿದ್ದರು.

ಸ್ವಾತಂತ್ರ್ಯಾನಂತರ ಈ ನಾಡು ಕಂಡ ಧೀಮಂತ ರಾಜಕಾರಣಿಗಳಲ್ಲಿ ಖರ್ಗೆ ಅವರಿಗೆ ಪ್ರಮುಖ ಸ್ಥಾನವಿದೆ. ರಾಜ್ಯ ರಾಜಕಾರಣದಿಂದ ರಾಷ್ಟ್ರ ರಾಜಕಾರಣಕ್ಕೆ ದಾಪುಗಾಲಿಟ್ಟು ಅಚ್ಚಳಿಯದ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿದ್ದಾರೆ. ಅಂಬೇಡ್ಕರ್ ಹಾದಿಯಲ್ಲಿ ಸಾಗುತ್ತಿರುವ ಖರ್ಗೆ ಅವರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ವ್ಯಕ್ತಿತ್ವದ ಆಯಾಮಗಳನ್ನು ತಿಳಿಯಲು ಸಹಕಾರಿಯಾಗಿದೆ.

। ಪ್ರೊ. ಮಲ್ಲೇಪುರಂ ಜಿ. ವೆಂ[illegible]
ವಿಶ್ರಾಂತ ಕುಲಪತಿ, ಕರ್ನಾಟಕ ಸಂಸ್ಕೃತ ವಿವಿ

ಕನ್ನಡಪ್ರಭ ಗುರುವಾರ 22.7.2021

ಖರ್ಗೆ ಕಾಂಗ್ರೆಸ್ ನಿಷ್ಠೆ ಅಚಲ: ಡಾ| ಹಂಪನಾ


2 ಬಾರಿ ಸಿಎಂ ಆಗುವ ಅವಕಾಶ ತಪ್ಪಿಸಿಕೊಂಡರೂ ಬದ್ಧತೆ ಸ್ಥಿರ | ಖರ್ಗೆ ಜೀವನ ಕಥನ 'ಬಾಬಾಸಾಹೇಬರೆಡೆಗೆ' ಕೃತಿ ಬಿಡುಗಡೆ

• ಕನ್ನಡ ಪ್ರಭ ವಾರ್ತೆ ಬೆಂಗಳೂರು

ರಾಜ್ಯದ ಮುಖ್ಯಮಂತ್ರಿಯಾಗುವ ಅವಕಾಶ ಎರಡು ಬಾರಿ ತಪ್ಪಿದ್ದರೂ ಕೂಡ ಮಲ್ಲಿಕಾರ್ಜುನ ಖರ್ಗೆ ಅವರ ಪಕ್ಷ ನಿಷ್ಠೆ ಅಚಲವಾದದ್ದು. ದೇವರಾಜ ಅರಸು ಅವರ ಕಾಲದಿಂದಲೂ ಕಾಂಗ್ರೆಸ್ ಪಕ್ಷಕ್ಕೆ ಅವರಿಗೆ ಇರುವ ಬದ್ಧತೆ ಸ್ಥಿರ ಮತ್ತು ಘನವಾದದ್ದು ಎಂದು ಸಾಹಿತಿ ನಾಡೋಜ ಹಂ.ಪ.ನಾಗರಾಜಯ್ಯ ಶ್ಲಾಘಿಸಿದರು.

ಬುಧವಾರ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕುಟುಂಬ ಪ್ರಕಾಶನ ಕಲಬುರಗಿ ಸಹಯೋಗದಲ್ಲಿ ಪ್ರೊ. ಎಚ್.ಟಿ.ಪೋತೆ ಬರೆದಿರುವ ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಕಥನ 'ಬಾಬಾಸಾಹೇಬರೆಡೆಗೆ' ಕೃತಿ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡನಾಡು ಕಂಡ ಅತ್ಯಪರೂಪದ ವ್ಯಕ್ತಿತ್ವ ಹೊಂದಿದ ರಾಜಕಾರಣಿಯೆಂದರೆ ಮಲ್ಲಿಕಾರ್ಜುನ ಖರ್ಗೆ. ಸದ್ಯದ ರಾಜಕಾರಣದಲ್ಲಿ ಅವರ ವ್ಯಕ್ತಿತ್ವಕ್ಕೆ ಸರಿಸಾಟಿಯಾಗಿ ಮತ್ತೊಬ್ಬರಿಲ್ಲ. ಅವರದ್ದು ತಾಯಿ ಕರುಳಿನ ರಾಜಕಾರಣ. ಕೆಸರೆರಚಾಟ, ರಾಡಿ ಎಬ್ಬಿಸುವ ರಾಜಕಾರಣದಿಂದ ಖರ್ಗೆ ಸದಾ ದೂರ ನಿಂತವರು. ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಗೃಹ ಸಚಿವರಾಗಿ ಅನೇಕ ಸವಾಲುಗಳನ್ನು ಮೆಟ್ಟಿ ನಿಂತವರು, ಸಂಸತ್ತಿನಲ್ಲಿ ಖರ್ಗೆ ಅವರು ಶೋಷಿತರ ಪರ ಗಟ್ಟಿ ಧ್ವನಿಯಾಗಿದ್ದಾರೆ ಎಂದು ಹಂಪನಾ ಬಣ್ಣಿಸಿದರು.



ಪ್ರೊ. ಎಚ್.ಟಿ.ಪೋತೆ ಬರೆದಿರುವ ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಕಥನ 'ಬಾಬಾಸಾಹೇಬರೆಡೆಗೆ' ಕೃತಿಯನ್ನು ನಗರದ ಗಾಂಧಿ ಭವನದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ನಾಡೋಜ ಡಾ | ವೂಡೇ ಪಿ. ಕೃಷ್ಣ ಬಿಡುಗಡೆ ಮಾಡಿದರು. ನಾಡೋಜ ಹಂ.ಪ.ನಾಗರಾಜಯ್ಯ, ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ, ಖರ್ಗೆ ಅವರ ಪುತ್ರ ರಾಹುಲ್ ಖರ್ಗೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ವೂಡೇ ಪಿ.ಕೃಷ್ಣ, ಖರ್ಗೆ ಅವರು ರಾಷ್ಟ್ರ ನಾಯಕರು. ಅವರನ್ನು ಒಂದು ಸಮುದಾಯದ ನಾಯಕರನ್ನಾಗಿ ಸೀಮಿತಗೊಳಿಸಬಾರದು. ವಿರೋಧಿಗಳೂ ಪ್ರೀತಿಸುವ, ನಿಷ್ಕಳಂಕ ವ್ಯಕ್ತಿತ್ವ, ಜಾತ್ಯತೀತತೆ, ನಿಗರ್ವಿ, ದೂರದೃಷ್ಟಿ, ಮಾತಿನ ಮೇಲಿನ ಹಿಡಿತ ಇವುಗಳಿಂದಾಗಿ ಖರ್ಗೆ ಆದರ್ಶ ರಾಜಕಾರಣಿಯಾಗಿ ನಿಲ್ಲುತ್ತಾರೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಸ್ವಾತಂತ್ರ್ಯೋತ್ತರ ಕರ್ನಾಟಕ ಕಂಡ ಧೀಮಂತ ರಾಜಕಾರಣಿಗಳಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪ್ರಮುಖ ಸ್ಥಾನವಿದೆ. ರಾಜ್ಯ ರಾಜಕಾರಣದಿಂದ ರಾಷ್ಟ್ರ ರಾಜಕಾರಣಕ್ಕೆ ದಾಪುಗಾಲಿಟ್ಟು ಅಚ್ಚಳಿಯದ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿದ್ದಾರೆ ಎಂದು ಹೇಳಿದರು.

ಕೃತಿಕಾರ ಎಚ್.ಟಿ.ಪೋತೆ ಮಾತನಾಡಿ, ಅಂಬೇಡ್ಕರ್ ಅವರ ಆಶಯವನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿಯಾಗಿದ್ದಾರೆ. ಶಿಕ್ಷಣ, ಸಹಕಾರ, ಸಂಘಟನೆ ಈ ಮೂರು ವಿಭಾಗಕ್ಕೂ ಆದ್ಯತೆ ಕೊಟ್ಟ ವಿರಳ ನಾಯಕ ಖರ್ಗೆ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಡಾ | ಮೂಡ್ನಾಕೂಡು ಚಿನ್ನಸ್ವಾಮಿ 'ಪ್ರಸ್ತುತ ಭಾರತ: ಗಾಂಧೀ ಮತ್ತು ಬಿ. ಆರ್.ಅಂಬೇಡ್ಕರ್' ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಖರ್ಗೆ ಅವರ ಪುತ್ರ ರಾಹುಲ್ ಖರ್ಗೆ, ಗಾಂಧಿ ಶಾಂತಿ ಪ್ರತಿಷ್ಠಾನದ ಜೀರಿಗೆ ಲೋಕೇಶ್, ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಉಪಸ್ಥಿತರಿದ್ದರು.

ಬಿಎಸ್‌ವೈ ಸಿಎಂ ಆಗಿ ಮುಂದುವರಿಯಲಿ: ಹಂಪನಾ


ಕಾರ್ಯಕ್ರಮದಲ್ಲಿ ಮಾತನಾಡಿದ ಹಂಪ ನಾಗರಾಜಯ್ಯ ಅವರು, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಪದಚ್ಯುತಗೊಳಿಸಿ ಮತ್ತೊಬ್ಬರನ್ನು ಮುಖ್ಯಮಂತ್ರಿಯನ್ನಾಗಿಸುವ ವಿದ್ಯಮಾನವನ್ನು ಖಂಡಿಸಿದರು. ಯಡಿಯೂರಪ್ಪ ಅವರು ಉಳಿದಿರುವ ಅವಧಿಗೂ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಅವರನ್ನು ಅರ್ಧದಲ್ಲಿ ಅಧಿಕಾರದಿಂದ ಕೆಳಗಿಳಿಸುವುದು ಸರಿಯಲ್ಲ, ಕೊರೋನಾದಿಂದಾಗಿ ಜನ ಜೀವನ ವಿಷಣ್ಣವಾಗಿದೆ, ಈ ಸಂದರ್ಭದಲ್ಲಿ ಜನ ಪ್ರತಿನಿಧಿಗಳು ಜನರ ನೆರವಿಗೆ ಧಾವಿಸಬೇಕೆ ಹೊರತು ಅಧಿಕಾರ ಬದಲಾವಣೆ ಮಾಡುತ್ತ ಕೂರುವುದು ಸರಿಯಲ್ಲ, ಅದೇ ರೀತಿ ಮಠಾಧೀಶರು ತಮ್ಮ ಮಠ, ಜಾತಿಯ ಕಾರಣಕ್ಕೆ ಯಡಿಯೂರಪ್ಪ ಅವರನ್ನು ಸಮರ್ಥಿಸಿಕೊಳ್ಳುವುದು ಮತ್ತು ಮುಂದುವರಿಯಲಿ ಎಂದು ಆಗ್ರಹಿಸುವುದು ಸರಿಯಲ್ಲ ಎಂದು ಹಂಪನಾ ಹೇಳಿದರು.

ಪ್ರಜಾವಾಣಿ
ಗುರುವಾರ • ಜುಲೈ 22, 2021

ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಆಧಾರಿತ

'ಬಾಬಾ ಸಾಹೇಬರೆಡೆಗೆ' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ



ಕೃತಿಯನ್ನು ಹಂಪ ನಾಗರಾಜಯ್ಯ ಬಿಡುಗಡೆ ಮಾಡಿದರು. ಮಲ್ಲೇಪುರಂ ಜಿ. ವೆಂಕಟೇಶ್, ರಾಹುಲ್ ಖರ್ಗೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಆಧಾರಿತ 'ಬಾಬಾ ಸಾಹೇಬರೆಡೆಗೆ' (ಲೇಖಕ ಪ್ರೊ.ಎಚ್.ಟಿ. ಪೋತೆ) ಕೃತಿಯನ್ನು ಗಾಂಧಿ ಭವನದಲ್ಲಿ ಗುರುವಾರ ಬಿಡುಗಡೆ ಮಾಡಲಾಯಿತು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕಲಬುರ್ಗಿಯ ಕುಟುಂಬ ಪ್ರಕಾಶನದ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕೃತಿ ಬಿಡುಗಡೆ ಮಾಡಿ ಮಾತನಾಡಿದ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ 'ಇದು ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಮಾತ್ರವಲ್ಲದೇ, ಅವರ ಬದುಕಿನ ಸಮಗ್ರ ಮಾಹಿತಿ ಒಳಗೊಂಡ ಪುಸ್ತಕವಾಗಿದೆ' ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಪ್ರೊ.ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸಿದ್ದರು. ಗಾಂಧಿ ಶಾಂತಿ ಪ್ರತಿಷ್ಠಾನದ ಉಪಾಧ್ಯಕ್ಷ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಭಾಗವಹಿಸಿದ್ದರು.

ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ ಅವರು 'ಪ್ರಸ್ತುತ ಭಾರತ: ಗಾಂಧೀ-ಮತ್ತು ಬಿ.ಆರ್.ಅಂಬೇಡ್ಕರ್' ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.


ನಂ. 1 ಕನ್ನಡ ದಿನಪತ್ರಿಕೆ

3c

VIJAYAVANI BENGALURU
ಮಂಗಳವಾರ 20 ಜುಲೈ 2021
20 JULY 2021

ಬಾಬಾ ಸಾಹೇಬರೆಡೆಗೆ ಕೃತಿ ನಾಳೆ ಲೋಕಾರ್ಪಣೆ

ಬೆಂಗಳೂರು: ಗಾಂಧಿ ಭವನದಲ್ಲಿ ಬುಧವಾರ (ಜು. 21) ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಗುಲ್ಬರ್ಗಾ ವಿವಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ಎಚ್.ಟಿ.ಪೋತೆ ಅವರ 'ಬಾಬಾಸಾಹೇಬರೆಡೆಗೆ' ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಜೀವನಕಥನ ಕೃತಿ ಬಿಡುಗಡೆ ಮತ್ತು ವಿಶೇಷ ಉಪನ್ಯಾಸ ಆಯೋಜಿಸಲಾಗಿದೆ.



» ಮಲ್ಲಿಕಾರ್ಜುನ ಖರ್ಗೆ ಜೀವನಕಥನ

ಬೆಳಗ್ಗೆ 10.30ಕ್ಕೆ ನಡೆಯಲಿರುವ ಸಮಾರಂಭದಲ್ಲಿ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಕೃತಿ ಲೋಕಾರ್ಪಣೆ ಮಾಡುವರು. ಪ್ರೊ. ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸಲಿದ್ದು, ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್ ಭಾಗವಹಿಸಲಿದ್ದಾರೆ. ಕವಿ ಹಾಗೂ ಸಂಸ್ಕೃತಿ ಚಿಂತಕ ಡಾ.ಮೂಡ್ನಾಕೂಡು ಚಿನ್ನಸ್ವಾಮಿ 'ಪ್ರಸ್ತುತ ಭಾರತ : ಗಾಂಧೀ ಮತ್ತು ಬಿ.ಆರ್.ಅಂಬೇಡ್ಕರ್' ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡುವರು.


ಕೃತಿ ಪರಿಚಯ: 'ಬಾಬಾಸಾಹೇಬರೆಡೆಗೆ' ಕೃತಿ 18 ಅಧ್ಯಯನಗಳನ್ನು ಒಳಗೊಂಡಿದ್ದು, ಕಲಬುರಗಿಯ ಕುಟುಂಬ ಪ್ರಕಾಶನ ಪ್ರಕಟಿಸಿದೆ. ಖರ್ಗೆ ಅವರ ಬಾಲ್ಯ, ಶಿಕ್ಷಣ, ಚಳವಳಿ, ಹೋರಾಟ, ರಾಜಕೀಯ, ಧಾರ್ಮಿಕ, ಸಾಮಾಜಿಕ ಚಿಂತನೆಗಳು, ಜನಪರ ಕಾಳಜಿ, ರಾಜಕೀಯ ನಾಯಕನಾಗಿ ಮಾಡಿರುವ ಭಾಷಣಗಳು, ಚರ್ಚೆಗಳು ಸೇರಿ ಭಾಲ್ಕಿ ತಾಲೂಕಿನ ವರವಟ್ಟಿಯಿಂದ

ಪ್ರಜಾವಾಣಿ ಸೋಮವಾರ ● ಜುಲೈ 12, 2021



ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ 'ಕೋವಿಡ್ ಸಂಕಷ್ಟಿತರ ಜೊತೆ ನಾವಿದ್ದೇವೆ' ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ಅವರು ಕನ್ನಡ ಕೆಲಸದಲ್ಲಿ ನಿರತರಾಗಿರುವವರಿಗೆ ದಿನಸಿ ಕಿಟ್ ವಿತರಿಸಿದರು. ಕನ್ನಡ ಪರ ಹೋರಾಟಗಾರ ಪಾಲನೇತ್ರ, ಸಂಘದ ಅಧ್ಯಕ್ಷ ಎಂ. ತಿಮ್ಮಯ್ಯ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಇದ್ದರು — ಪ್ರಜಾವಾಣಿ ಚಿತ್ರ

ಸಂಜೆ ವಾಣಿ
ಬೆಂಗಳೂರು
ಭಾನುವಾರ 11 ಜುಲೈ 2021



ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ಆಯೋಜಿಸಿದ್ದ ಕೋವಿಡ್ ಸಂಕಷ್ಟಿತರ ಜೊತೆ ನಾವಿದ್ದೇವೆ ಅಭಿಯಾನ ಸಮಾರೋಪ ಜರುಗಿತು, ಗಡಿ ಪ್ರಧಿಕಾರ ಅಧ್ಯಕ್ಷ ಡಾ. ಸೋಮಶೇಖರ್ ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೂಡೆ ಪಿ. ಕೃಷ್ಣ ಇತರರು ಇದ್ದರು.

ಈ ಸಂಜೆ

ಭಾನುವಾರ
11-7-2021



ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಟನೆಗಳ ಒಕ್ಕೂಟ 'ಕೋವಿಡ್-19 ಸಂಕಷ್ಟಿತರ ಜೊತೆ ನಾವಿದ್ದೇವೆ' ಎಂಬ ಸಾರ್ವಜನಿಕ ಅಭಿಯಾನವನ್ನು ಹಮ್ಮಿಕೊಂಡಿದ್ದು ಸಾರ್ವಜನಿಕರಿಗೆ ಆಹಾರ ಕಿಟ್‌ಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ನಾಡೋಜ ವೂಡೇ.ಪಿ.ಕೃಷ್ಣ, ಡಾ.ಸಿ.ಸೋಮಶೇಖರ್, ಒಕ್ಕೂಟದ ಅಧ್ಯಕ್ಷ ಪಿ.ತಿಮ್ಮಯ್ಯ, ಹಿರಿಯ ಕನ್ನಡ ಹೋರಾಟಗಾರರು ಹಾಜರಿದ್ದರು.

ಆತ್ಮ ಸಂತೋಷಕ್ಕೋಸ್ಕರ ಕಾವ್ಯ ರಚಿಸಿದ ಜರಗನಹಳ್ಳಿ ಶಿವಶಂಕರ್



ಹತ್ತಾರು ವರುಷ
ನೆರಳಾಗಿ ನಿಂತ ಮರ
ತೊಲೆಯಾಗಿ ಉಳಿಯಿತು
ನೂರಾರು ವರುಷ
ನೂರು ವರುಷ
ಆಳಿದ ಅರಸ
ಹೆಣವಾಗಿ ಉಳಿಯಲಿಲ್ಲ
ಮೂರು ದಿವಸ. . .!

ಜರಗನಹಳ್ಳಿ ಶಿವಶಂಕರ್

ಚುಟುಕು ಚಕ್ರವರ್ತಿ ಜರಗನಹಳ್ಳಿ ಶಿವಶಂಕರ್ ಅವರು ನನಗೆ ಸುಮಾರು 20 ವರ್ಷಗಳಿಂದ ಪರಿಚಯ. 2001ರಲ್ಲಿ ನಾನು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿ ಜವಾಬ್ದಾರಿಯನ್ನು ವಹಿಸಿಕೊಂಡೆ. ಅಂದಿನಿಂದಲೂ ಕೂಡ ನನಗೆ ಅವರ ಅತ್ಯಂತ ನಿಕಟ ಒಡನಾಟ ಇತ್ತು. ಅವರು ಮೂಲತಃ ಬ್ಯಾಂಕ್‌ನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರು, ಶ್ರೀಮಂತ ಕುಟುಂಬದ ಹಿನ್ನೆಲೆ ಉಳ್ಳವರು. ಆದರೂ ಸಹ ತಮ್ಮ ಸಾಹಿತ್ಯಾಭಿರುಚಿಯನ್ನು ನಿರಂತರವಾಗಿ ಬೆಳೆಸಿಕೊಳ್ಳುತ್ತಾ ಬಂದವರು. ಪ್ರವೃತ್ತಿಯಿಂದ ಅವರೊಬ್ಬ ಕವಿ. ಅದರಲ್ಲೂ ಮುಖ್ಯವಾಗಿ 'ಚುಟುಕು ಸಾಹಿತ್ಯ' ಅವರ ನೆಚ್ಚಿನ ಸಾಹಿತ್ಯ ಪ್ರಾಕಾರ. ಚುಟುಕು ಸಾಹಿತ್ಯವನ್ನೇ ಗಂಭೀರವಾಗಿ ತೆಗೆದುಕೊಂಡು, ಅದರಲ್ಲೇ ಕೃಷಿ ಮಾಡಿ, ಚುಟುಕು ಚಕ್ರವರ್ತಿ ಎನ್ನುವಷ್ಟರ ಮಟ್ಟಿಗೆ ಬೆಳೆದರು. ಡುಂಡಿರಾಜ್, ದಿನಕರ ದೇಸಾಯಿ ಇಂತಹ ಚುಟುಕು ಸಾಹಿತಿಗಳ ಸಾಲಿನಲ್ಲಿ ಜರಗನಹಳ್ಳಿಯವರು ಸಹ ಸೇರುತ್ತಾರೆ ಎನ್ನುವುದು ನನ್ನ ಅಭಿಪ್ರಾಯ.

ಜರಗನಹಳ್ಳಿ ಶಿವಶಂಕರ್ ಅವರ ಅನೇಕ ಚುಟುಕಗಳನ್ನು ನಾನು ಓದಿದ್ದೇನೆ. ಆನಂದಕ್ಕೋಸ್ಕರ, ಆತ್ಮ ಸಂತೋಷಕ್ಕೋಸ್ಕರ ಕಾವ್ಯ ರಚಿಸಿದವರು ಅವರು. ಶಬ್ದಗಳ ಘನ್ನು-ಪಂಚು ಇದರಲ್ಲಿ ಬಹಳ ಪರಿಣಿತಿಯನ್ನು ಅವರ ಪಡೆದುಕೊಂಡಿದ್ದರು.

ಎಲ್ಲ ಕಾಳುಗಳಲ್ಲಿ
ಇರುವುದಿಲ್ಲ
ಎಣ್ಣೆ
ಎಲ್ಲ
ಹಾಲುಗಳಲ್ಲಿ
ಬರುವುದಿಲ್ಲ
ಬೆಣ್ಣೆ
ಹಾಗೆ
ಎಲ್ಲ ನೋಟಗಳ
ಹಿಂದೆ
ಇರುವುದಿಲ್ಲ
ಕರುಣೆ

ಅವರ ಹನಿಗವನಗಳಲ್ಲಿ ಅವರದೇ ಆದ ದೃಷ್ಟಿಕೋನ, ವೈಚಾರಿಕತೆ, ವಿಡಂಬನೆ, ಸರಳವಾದ ಭಾಷೆ, ಜಾತ್ಯಾತೀತ ಭಾವನೆ, ಪರಿಸರ ಪ್ರಜ್ಞೆ ಜೊತೆಗೆ ಸಾಮಾಜಿಕ ಕಳಕಳಿಗಳನ್ನು ಹೇರಳವಾಗಿ ಕಾಣಬಹುದಾಗಿತ್ತು.

ಕುಂಬಾರರು ಮಾಡಿದ ಹಣತೆಗೆ
ಗಾಣಿಗರ ಎಣ್ಣೆಯ ತುಂಬಿ
ಒಕ್ಕಲಿಗರು ಬೆಳೆದ ಹತ್ತಿಯ ಹೊಸೆದು
ಬತ್ತಿಯ ಮಾಡಿ ದೀಪವ ಹಚ್ಚಿದರೆ
ಹಲವು ಜಾತಿಗಳು ಕೂಡಿ
ಕುಲಗೆಟ್ಟ ಬೆಳಕು ನೋಡ!

ನನ್ನ ಹಾಗೂ ಅವರ ಒಡನಾಟಕ್ಕೆ ಸಂಬಂಧಿಸಿದ ಕೆಲವು ಮಾತುಗಳನ್ನು ನಾನು ಹಂಚಿಕೊಳ್ಳಲು ಬಯಸುತ್ತೇನೆ. 2005ರಲ್ಲಿ ನನಗೂ ಜರಗನಹಳ್ಳಿ ಶಿವಶಂಕರ್ ಅವರಿಗೂ ಒಟ್ಟಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿತ್ತು. ಆಗ ನಾವೆಲ್ಲರೂ ಕೂಡ ಭೇಟಿಯಾಗಿ ಚರ್ಚೆಗಳನ್ನು ನಡೆಸಿದ್ದು ನೆನಪಾಗುತ್ತಾ ಇದೆ. ನಮ್ಮ ಶಿಕ್ಷಣ ಸಂಸ್ಥೆಯ ಅನೇಕ ಸಾಹಿತ್ಯಕ ಕಾರ್ಯಕ್ರಮಗಳಲ್ಲಿ ಅವರು ಅತಿಥಿಗಳಾಗಿ ಭಾಗವಹಿಸಿ, ತಮ್ಮ ಮಾತುಗಳನ್ನು ಹಂಚಿಕೊಂಡಿರುವುದನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲು ಬಯಸುತ್ತೇನೆ. ಅನೇಕ ಸಾರ್ವಜನಿಕ ವೇದಿಕೆಗಳಲ್ಲಿ ಅವರ ಜೊತೆ ಭಾಗಿಯಾಗುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಭಾಗ್ಯ ಅಂತ ಭಾವಿಸುತ್ತೇನೆ. ನಾನು 2018ರಲ್ಲಿ ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಯೋಜಿಸಿದ್ದ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಆಗಿದ್ದೆ. ಆ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಜರಗನಹಳ್ಳಿ ಶಿವಶಂಕರ್ ಅವರು ಭಾಗವಹಿಸಿ, ಅತ್ಯಂತ ವಿದ್ವತ್‌ಪರ್ಣವಾದ ಮಾತುಗಳನ್ನು ಆಡಿದ್ದು ಇಂದಿಗೂ ನೆನಪಿದೆ:

"ಸುದೀರ್ಘ ಕಾಲ ಕಾವ್ಯ ಓದುವಷ್ಟು ಬಿಡುವು ಇವತ್ತು ಜನರಿಗಿಲ್ಲ. ಈಗಿನ ಅಧುನಿಕ ಧಾವಂತ ಬದುಕಿನಲ್ಲಿ ಕಾವ್ಯ ಕೇಳುವ ವ್ಯವಧಾನವೇ ಇಲ್ಲದಂತಾಗಿದೆ. ಹಾಗಾಗಿ ಈ ಕಾಲದಲ್ಲಿ ಚುಟುಕು ಸಾಹಿತಿಗಳಿಗೆ ಒಂದು ಚಿಕ್ಕ ಅವಕಾಶ ಸಿಕ್ಕಿದೆ. ಜನಗಳಲ್ಲಿ ಏಕಾಗ್ರತೆ ಕಡಿಮೆ ಆಗುತ್ತಿದೆ. ತಾಂತ್ರಿಕತೆಯ ಭರಾಟೆಯಲ್ಲಿ ಬಿಡುವಿಲ್ಲದಂತಹ ಸ್ಥಿತಿಯಲ್ಲಿ ಜೀವನವನ್ನು ಸಾಗಿಸುತ್ತಿದ್ದಾರೆ. ಆದರೂ ಸಾಹಿತ್ಯಾಭಿರುಚಿ ಇರುವ ಜನರಿಗೆ ಬಸ್ ಸ್ಟ್ಯಾಂಡಿನಲ್ಲೋ, ಕಾಫಿ ಕುಡಿಯುವಾಗಲೋ, ಪ್ರಯಾಣ ಮಾಡುವಾಗಲೋ, ಕಾವ್ಯ ಸ್ವಾದ ಮಾಡುವುದಕ್ಕೆ ಚುಟುಕುಗಳು ಸಹಕಾರಿ. ಅಷ್ಟೇ ಅಲ್ಲ, ಚುಟುಕು ತಕ್ಷಣಕ್ಕೆ ನಗುವನ್ನು ತರುವಂತದ್ದು, ತಕ್ಷಣಕ್ಕೆ ಮನಸ್ಸನ್ನು ವಿಚಾರಕ್ಕೆ ಹಚ್ಚಬಲ್ಲ ಶಕ್ತಿ ಚುಟುಕು ಸಾಹಿತ್ಯದಲ್ಲಿದೆ. ಸೂರ್ಯನಡಿ ಇರುವಂತಹ ಎಲ್ಲ ವಿಷಯಗಳ ಬಗ್ಗೆ ಚುಟುಕು ರಚಿಸಲು ಸಾಧ್ಯವಿದೆ" ಎನ್ನುವ ಮಾತುಗಳನ್ನು ಅಂದು ಅವರು ಹೇಳಿದ್ದರು.

ಜರಗನಹಳ್ಳಿ ಶಿವಶಂಕರ್ ಅವರ ಬಹಳ ದೊಡ್ಡ ಗುಣ ಎಂದರೆ ಹೊಸತಲೆಮಾರಿನ ಕವಿಗಳನ್ನು ಅವರು ಪ್ರೋತ್ಸಾಹಿಸುತ್ತಿದ್ದರು. ಉದಯೋನ್ಮುಖ ಕವಿಗಳಿಗಾಗಿ ತರಬೇತಿ ಶಿಬಿರಗಳನ್ನು ನಡೆಸಿಕೊಡುತ್ತಿದ್ದರು.

ಜರಗನಹಳ್ಳಿ ಶಿವಶಂಕರ್ ಅವರು ಅತ್ಯಂತ ವಿನಯ ಸಂಪನ್ನರು. ಸುಸಂಸ್ಕೃತ ವ್ಯಕ್ತಿತ್ವ ಉಳ್ಳವರು. ಅವರ ಎಲ್ಲ ಆಲೋಚನೆ, ಮಾತು ಹಾಗೂ ಬರಹಗಳಲ್ಲಿ ಕಂಡುಬರುವ ಒಂದು ಸಾಮಾನ್ಯ ವಿಷಯ ಎಂದರೆ ಸಮಾಜಮುಖಿ ಧೋರಣೆ. ಅವರೊಬ್ಬ ಸುಧಾರಕ ಜೀವಿ, ಸಾರ್ಥಕ ಜೀವಿ ಹಾಗೂ ತುಂಬು ಜೀವಿ. ಎಲ್ಲರೂ ಅವರನ್ನು ತುಂಬಾ ಇಷ್ಟ ಪಡುವುದಕ್ಕೆ ಮುಖ್ಯ ಕಾರಣ ಎಂದರೆ ಅವನ ವಿನಯತೆ. ಬಸವಣ್ಣನವರು ಹೇಳಿದ ಹಾಗೆ ಎನಗಿಂತ ಕಿರಿಯರಿಲ್ಲ ಎನ್ನುವ ರೀತಿಯ ನಿಗರ್ವಿ ಬದುಕು ಅವರದ್ದು.

ಕನ್ನಡದ ಪ್ರೀತಿಯ ಮೂರ್ತರೂಪ ಆಗಿದ್ದಂತಹ ಜರಗನಹಳ್ಳಿ ಶಿವಶಂಕರ್ ಅವರನ್ನು ಕೊರೋನಾ ಬಲಿಪಡೆದಿದ್ದು ಬಹಳ ಸಂಕಟದ ಸಂಗತಿ. ಅವರ ಆತ್ಮಕ್ಕೆ ಸದ್ಗತಿ ಸಿಗಲಿ ಅಂತ ನಾವೆಲ್ಲ ಭಗವಂತನಲ್ಲಿ ಪ್ರಾರ್ಥಿಸೋಣ. ಏಕೆಂದರೆ ಚಿರಶಾಂತಿ ಅನ್ನುವುದು ಭಾರತೀಯ ಪರಂಪರೆಯಲ್ಲಿ ಅಷ್ಟು ಸೂಕ್ತವಾದ ಶಬ್ದವಲ್ಲ. ನಮ್ಮ ಸಂಸ್ಕೃತಿಯ ನಂಬಿಕೆಯ ಪ್ರಕಾರ ಇಹಲೋಕ ಮುಗಿಸಿದ ನಂತರ ಮನುಷ್ಯ ಅನಂತ ಚೇತನದಲ್ಲಿ ಅಂದರೆ ಭಗವಂತನಲ್ಲಿ ಲೀನನಾಗುತ್ತಾನೆ. ಉಪನಿಷತ್ತಿನಲ್ಲಿ ಭಗವಂತನ ಬಗ್ಗೆ ಹೇಳುವ ಒಂದು ಮಾತಿದೆ:

ಓಂ ಸತ್ಯಂ ಜ್ಞಾನಮನಂತಂ ಬ್ರಹ್ಮ
ಆನಂದರೂಪ ಮೃತಂ ಯದ್ವಿಭಾತಿ
ಶಾಂತಂ ಶಿವಮದ್ವೈತಂ

ಭಗವಂತನೇ ಶಾಂತ ಸ್ವರೂಪ. ಮರಣ ಹೊಂದಿದ ವ್ಯಕ್ತಿಯ ಆತ್ಮ ಭಗವಂತನಲ್ಲಿ ಲೀನವಾದಾಗ ಮತ್ತೆ ಮತ್ತೆ ಆತ್ಮಕ್ಕೆ ಶಾಂತಿ ಕೊಡು ಎನ್ನುವುದರಲ್ಲಿ ಅರ್ಥವಿಲ್ಲ. ಜರಗನಹಳ್ಳಿ ಶಿವಶಂಕರ್ ಅವರ ಸಮುದಾಯದ ನಂಬಿಕೆಯ ಪ್ರಕಾರವೂ ಸಹ ಇಹಲೋಕ ತ್ಯಜಿಸಿದವರನ್ನು ಶಿವೈಕ್ಯರಾದರು ಎನ್ನುತ್ತಾರೆ. ಅಂದರೆ ಶಿವನಲ್ಲಿ ಐಕ್ಯವಾಗುವುದು, ಬ್ರಹ್ಮನಲ್ಲಿ ಲೀನವಾದ ಎನ್ನುವುದು ಒಂದೇ. ಶಿವೈಕ್ಯರಾದರು ಎನ್ನುವುದೂ ಒಂದೇ. ಜರಗನಹಳ್ಳಿ ಶಿವಶಂಕರ್ ಅವರು ತುಂಬು ಜೀವನ ನಡೆಸಿ ಅನಂತದಲ್ಲಿ ಲೀನನಾಗಿದ್ದಾರೆ, ಶಿವೈಕ್ಯರಾಗಿದ್ದಾರೆ. ಭಗವಂತ ಅವರಿಗೆ ಸದ್ಗತಿ ಕೊಡಲಿ. ಅವರ ಮುಂದಿನ ಪಯಣವೂ ಇಷ್ಟೇ ವೈಭವದಿಂದ ಕೂಡಿರಲಿ. ಅವರು ರಚಿಸಿದ ಇನ್ನೊಂದು ಚುಟುಕಿನ ಮೂಲಕ ನನ್ನ ಭಕ್ತಿ ಪೂರ್ವಕವಾದ ನಮನಗಳನ್ನು ಸಲ್ಲಿಸುತ್ತೇನೆ.

ದೊಡ್ಡ ದೊಡ್ಡ ಮರಗಳು
ನೀಡುವ ಹಣ್ಣುಗಳು
ಹಲಸು ಮಾವು ಉಳಿಯಲಾರವು
ಒಂದೆರಡು ವಾರಗಳು
ಸಣ್ಣ ಸಣ್ಣ ಪೈರುಗಳು
ನೀಡುವ ಕಾಳುಗಳು
ರಾಗಿ ಜೋಳ
ಧಾನ್ಯಗಳು
ಉಳಿಯುತ್ತವೆ
ಹತ್ತಾರು
ವರ್ಷಗಳು.




– ನಾಡೋಜ ಡಾ.ವೂಡೇ ಪಿ.ಕೃಷ್ಣ
ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಶೇ.65 ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಗಿದೆ: ಅಶ್ವತ್ಥನಾರಾಯಣ

ಬೆಂಗಳೂರು: ರಾಜ್ಯದಲ್ಲಿ ಈವರೆಗೂ ಶೇ.65ರಷ್ಟು ವಿದ್ಯಾರ್ಥಿಗಳಿಗೆ ಕೊರೊನಾ ಲಸಿಕೆ ನೀಡಲಾಗಿದ್ದು, ಗುರುವಾರದಿಂದ ಲಸಿಕೆ ಅಭಿಯಾನ ಇನ್ನಷ್ಟು ಚುರುಕಾಗಲಿದೆ ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ಡಾ. ಸಿ.ಎನ್.ಅಶ್ವತ್ಥನಾರಾಯಣ ಫೌಂಡೇಷನ್ ಹಾಗೂ ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್ ವತಿಯಿಂದ ಮತ್ತಿಕೆರೆಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣೆ ಮಾಡಿ ಮಾತನಾಡಿ, ಪದವಿ ವಿದ್ಯಾರ್ಥಿಗಳಿಗೆ ಲಸಿಕೆ ಹಾಕಿಸುವ ಅಭಿಯಾನ ರಾಜ್ಯಾದ್ಯಂತ ಚುರುಕುಗೊಳಿಸಲು ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕುಮಾರನಾಯಕ್ ಹಾಗೂ ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮಾ ಅವರು ಜಿಲ್ಲಾಧಿಕಾರಿಗಳ ಜತೆ ಮಾತುಕತೆ ನಡೆಸಿದ್ದಾರೆ. ಸರ್ಕಾರ ಈ ಬಗ್ಗೆ ವಿಶೇಷ ಒತ್ತು ನೀಡಿ ಆದ್ಯತಾ ಗುಂಪಿನಡಿಯಲ್ಲಿ ವಿದ್ಯಾರ್ಥಿಗಳು, ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಗೆ ಲಸಿಕೆ ನೀಡಲಾಗುತ್ತಿದೆ ಎಂದರು.

ಖಾಸಗಿ ಕಾಲೇಜುಗಳಲ್ಲಿ ಎಷ್ಟು ಪ್ರಮಾಣದಲ್ಲಿ ಲಸಿಕೆ ನೀಡಲಾಗಿದೆ ಎಂಬ ಬಗ್ಗೆ ಅಂಕಿ-ಅಂಶ



ಡಿಸಿಎಂ ಅಶ್ವತ್ಥನಾರಾಯಣ ಅವರು ಶಾಲಾ ಮಕ್ಕಳಿಗೆ ಉಚಿತ ಲ್ಯಾಪ್‌ಟಾಪ್ ವಿತರಿಸಿದರು.

ಪಡೆದುಕೊಳ್ಳುತ್ತಿದ್ದೇವೆ. ಆ ಮಾಹಿತಿ ಸಿಕ್ಕಿದ ಕೂಡಲೇ ಉಳಿದ ಎಷ್ಟು ವಿದ್ಯಾರ್ಥಿಗಳಿಗೆ ಇನ್ನೆಷ್ಟು ದಿನದಲ್ಲಿ ಲಸಿಕೆ ನೀಡಲಾಗುವುದು ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಲಾಗುವುದು. ರಾಜ್ಯದ ಆರು ಶೈಕ್ಷಣಿಕ ವಲಯಗಳ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ 4,90,799 ವಿದ್ಯಾರ್ಥಿಗಳಿದ್ದು ಈವರೆಗೆ 3,13,898 ವಿದ್ಯಾರ್ಥಿಗಳಿಗೆ ಲಸಿಕೆ ಕೊಡಲಾಗಿದ್ದು, ಶೇ.63.96 ಗುರಿ ತಲುಪಲಾಗಿದೆ. 29,241 ಸಿಬ್ಬಂದಿ ವರ್ಗದಲ್ಲಿ 24,875 ಸಿಬ್ಬಂದಿಗೆ ಲಸಿಕೆ ನೀಡಲಾಗಿದ್ದು, ಶೇ.85.07 ಗುರಿ ಸಾಧಿಸಲಾಗಿದೆ. ವಿದ್ಯಾರ್ಥಿಗಳು, ಸಿಬ್ಬಂದಿ ಸೇರಿ ಶೇ.65.14 ಗುರಿ ತಲುಪಲಾಗಿದೆ ಎಂದು ವಿವರ ನೀಡಿದರು.

BENGALURU ಸಂಯುಕ್ತ ಕರ್ನಾಟಕ

09 ಜುಲೈ 2021
ಶುಕ್ರವಾರ
ಬೆಂಗಳೂರು

03

ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್

ಬೆಂಗಳೂರು: ವಿದ್ಯಾರ್ಥಿಗಳ ಲಸಿಕೆ ನೀಡುವ ಕಾರ್ಯಕ್ಕೆ ಇಂದಿನಿಂದಲೇ ಮತ್ತಷ್ಟು ಚುರುಕುಗೊಳಿಸಲಾಗಿದೆ ಎಂದು ಡಿಸಿಎಂ ಅಶ್ವತ್ಥನಾರಾಯಣ ತಿಳಿಸಿದರು.

ಡಾ. ಸಿ.ಎನ್. ಅಶ್ವತ್ಥನಾರಾಯಣ ಫೌಂಡೇಷನ್ ಹಾಗೂ ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್ ವತಿಯಿಂದ ಮಲ್ಲೇಶ್ವರ ಕ್ಷೇತ್ರದ ಮತ್ತಿಕೆರೆಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇನ್ನು ಕೆಲ ದಿನಗಳಲ್ಲೇ ಎಲ್ಲ ವಿದ್ಯಾರ್ಥಿಗಳಿಗೂ ಲಸಿಕೆ ನೀಡಲಾಗುವುದಲ್ಲದೆ, ಇದುವರೆಗೂ ಸರ್ಕಾರಿ-ಅನುದಾನಿತ ಪದವಿ ಕಾಲೇಜುಗಳ ಶೇ.65.14ರಷ್ಟು ವಿದ್ಯಾರ್ಥಿ-ಸಿಬ್ಬಂದಿಗೆ ಲಸಿಕೆ ನೀಡಲಾಗಿದೆ ಎಂದರು.

ಪದವಿ ವಿದ್ಯಾರ್ಥಿಗಳಿಗೆ ಲಸಿಕೀಕರಣವನ್ನು ರಾಜ್ಯಾದ್ಯಂತ ಚುರುಕುಗೊಳಿಸಲು ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕುಮಾರನಾಯಕ್, ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮ ಅವರು ಎಲ್ಲ ಜಿಲ್ಲಾಧಿಕಾರಿಗಳ ಜತೆ ಮಾತುಕತೆ ನಡೆಸಿದ್ದಾರೆ. ಸರ್ಕಾರ ಈ ಬಗ್ಗೆ ವಿಶೇಷ ಒತ್ತು ನೀಡಿ ಆದ್ಯತಾ ಗುಂಪಿನಡಿಯಲ್ಲಿ ವಿದ್ಯಾರ್ಥಿಗಳು, ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಗೆ ಲಸಿಕೆ ಕೊಡುತ್ತಿದೆ ಎಂದು ಹೇಳಿದರು.

ರಾಜ್ಯದ ಆರು ಶೈಕ್ಷಣಿಕ ವಲಯಗಳ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ 4,90,799 ವಿದ್ಯಾರ್ಥಿಗಳಿದ್ದು ಈವರೆಗೆ 3,13,898 ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಗಿದ್ದು ಶೇ.63.96 ಗುರಿ ತಲುಪಲಾಗಿದೆ. ಅದೇ ರೀತಿ ಒಟ್ಟು 29,241 ಸಿಬ್ಬಂದಿ ಇದ್ದು ಈ ಪೈಕಿಗೆ 24,875 ಸಿಬ್ಬಂದಿಗೆ ಲಸಿಕೆ ನೀಡಲಾಗಿದ್ದು ಶೇ.85.07 ಗುರಿ ಸಾಧಿಸಲಾಗಿದೆ. ವಿದ್ಯಾರ್ಥಿಗಳು, ಸಿಬ್ಬಂದಿ ಸೇರಿ ಶೇ.65.14 ಗುರಿ ತಲುಪಲಾಗಿದೆ ಎಂದರು.



ಮತ್ತಿಕೆರೆಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಉಪಮುಖ್ಯಮಂತ್ರಿ ಡಾ. ಸಿ.ಎಸ್.ಅಶ್ವತ್ಥನಾರಾಯಣ ಲ್ಯಾಪ್‌ಟಾಪ್ ವಿತರಿಸಿದರು.

ಪ್ರಜಾವಾಣಿ ಶುಕ್ರವಾರ • ಜುಲೈ 9, 2021

‘ಶೇ 65ರಷ್ಟು ಕಾಲೇಜು ವಿದ್ಯಾರ್ಥಿ, ಸಿಬ್ಬಂದಿಗೆ ಲಸಿಕೆ’



ಬೆಂಗಳೂರು: ‘ರಾಜ್ಯದ ಆರು ಶೈಕ್ಷಣಿಕ ವಲಯಗಳ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ 4.90 ಲಕ್ಷ ವಿದ್ಯಾರ್ಥಿಗಳಿದ್ದು, ಈ ಪೈಕಿ ಈವರೆಗೆ 3.13 ಲಕ್ಷ ಮಂದಿಗೆ ಲಸಿಕೆ ನೀಡಲಾಗಿದೆ. 29,241 ಸಿಬ್ಬಂದಿ ಪೈಕಿ 24,875 ಜನ ಲಸಿಕೆ ಹಾಕಿಸಿಕೊಂಡಿದ್ದಾರೆ. ಈವರೆಗೆ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಸೇರಿ ಶೇ 65.14ರಷ್ಟು ಗುರಿ ತಲುಪಲಾಗಿದೆ’ ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ-ನಾರಾಯಣ ಹೇಳಿದರು.

ಡಾ.ಸಿ.ಎನ್.ಅಶ್ವತ್ಥನಾರಾಯಣ ಫೌಂಡೇಷನ್ ಹಾಗೂ ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್ ವತಿಯಿಂದ ಮಲ್ಲೇಶ್ವರದ ಮತ್ತಿಕೆರೆಯ 3ನೇ ಮುಖ್ಯರಸ್ತೆ-ಯಲ್ಲಿರುವ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಗುರುವಾರ ಲ್ಯಾಪ್‌ಟ್ಯಾಪ್ ಉಚಿತವಾಗಿ ವಿತರಿಸಿ ಮಾತನಾಡಿದರು.

‘ಖಾಸಗಿ ಕಾಲೇಜುಗಳಲ್ಲಿ ಎಷ್ಟು ಪ್ರಮಾಣದಲ್ಲಿ ಲಸಿಕೆ ನೀಡಲಾಗಿದೆ ಎಂಬುದರ ಕುರಿತ ಅಂಕಿ-ಅಂಶ ಪಡೆದುಕೊಳ್ಳುತ್ತಿದ್ದೇವೆ. ಆ ಮಾಹಿತಿ ಸಿಕ್ಕ ಕೂಡಲೇ ಉಳಿದ ವಿದ್ಯಾರ್ಥಿಗಳಿಗೆ ಇನ್ನೆಷ್ಟು ದಿನಗಳಲ್ಲಿ ಲಸಿಕೆ ನೀಡಲಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸುತ್ತೇವೆ’ ಎಂದು ಹೇಳಿದರು.

ಸಂಜೆವಾಣಿ

6 ಬೆಂಗಳೂರು
ಗುರುವಾರ 08 ಜುಲೈ 2021



ನಗರದ ಮತ್ತೀಕೆರೆಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿಂದು ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್ ವತಿಯಿಂದ ನೀಡಲಾದ ಉಚಿತ ಲ್ಯಾಪ್ ಟಾಪ್‌ಗಳನ್ನು ಶಾಲೆಯ ಮಕ್ಕಳಿಗೆ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ವಿತರಣೆ ಮಾಡಿದರು. ಶಿಕ್ಷಣ ತಜ್ಞ ಡಾ.ವೂಡೇ ಪಿ.ಕೃಷ್ಣ ಇದ್ದಾರೆ.

ಈ ಸಂಜೆ

ಗುರುವಾರ 08-07-202



ಮತ್ತಿಕೆರೆ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಡಿಸಿಎಂ ಅಶ್ವತ್ಥ್ ನಾರಾಯಣ ಲ್ಯಾಪ್‌ಟಾಪ್‌ಗಳನ್ನು ವಿತರಿಸಿದರು. ವೂಡೇ ಪಿ. ಕೃಷ್ಣ ಹಾಗೂ ಹಲವು ಗಣ್ಯರು ಹಾಜರಿದ್ದರು.

12 ಏಪ್ರಿಲ್ 2021 ಸೋಮವಾರ

ಅವಕಾಶವಂಚಿತರಿಗೆ ಉಚಿತ ಸೇವೆ

ಸಂ.ಕ.ಸಮಾಚಾರ, ಬೆಂಗಳೂರು

ಇಂದಿನ ವ್ಯಾಪಾರೀಕರಣದ ದಿನಗಳಲ್ಲಿ ಅವಕಾಶವಂಚಿತರು ಹಾಗೂ ದುರ್ಬಲ ವರ್ಗದ ಜನರಿಗಾಗಿ ಉದಯಭಾನು ಕಲಾಸಂಘು ಉಚಿತ ಶಸ್ತ್ರಚಿಕಿತ್ಸಾ ಶಿಬಿರಗಳನ್ನು ನಡೆಸುತ್ತಿರುವುದು ಪ್ರಶಂಸಾರ್ಹ ಸಂಗತಿಯಾಗಿದೆ ಎಂದ ನಾಡೋಜ ವೂಡೇ ಪಿ.ಕೃಷ್ಣ ಅಭಿಪ್ರಾಯ ಪಟ್ಟರು. ಭಾನುವಾರ ಉದಯಭಾನು ಕಲಾಸಂಘದ ಸುವರ್ಣ ಭವನದಲ್ಲಿ ಏರ್ಪಡಿಸಲಾಗಿದ್ದ ಉಚಿತ ವೈದ್ಯಕೀಯ ಶಿಬಿರ ಹಾಗೂ ವೈದ್ಯರಿಗೆ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಉದಯಭಾನು ಕಲಾಸಂಘವು 250 ಶಿಬಿರಗಳನ್ನು ಆಯೋಜಿಸಿ ಮುನ್ನಡೆಯುತ್ತಿರುವುದು ಸಮಾಜಕ್ಕೆ ನೀಡಿದ ದೊಡ್ಡ ಕೊಡುಗೆಯಾಗಿದೆ ಎಂದರು.

ಹಿರಿಯ ನೇತ್ರತಜ್ಞೆ ಡಾ. ನಾಗರತ್ನ ಬೇಲಿ, ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಹಿರಿಯ ವೈದ್ಯರಿಂದ ನಿಗದಿತ ಸಮಯದಲ್ಲಿ ಉಚಿತ ಸಲಹೆ ಹಾಗೂ ಸಾಮಾನ್ಯ ಔಷಧೋಪಚಾರ ನೀಡುತ್ತಿರುವುದು ಮಾನವೀಯ ಮೌಲ್ಯಗಳನ್ನು ಜೀವಂತವಾಗಿರಿಸುವ ಪ್ರಯತ್ನವಾಗಿದೆ ಎಂದು ಶ್ಲಾಘಿಸಿದರು. ಇದುವರೆಗೂ ಆಯೋಜಿಸಿರುವ ಶಿಬಿರಗಳಲ್ಲಿ 16,156 ಮಂದಿಗೆ ಉಚಿತ ನೇತ್ರ ಪರೀಕ್ಷೆ, 7293 ಮಂದಿಗೆ ಉಚಿತ ನೇತ್ರ ಶಸ್ತ್ರಚಿಕಿತ್ಸೆ (ಕ್ಯಾಟರಾಕ್ಟ್) ನಡೆಸಲಾಗಿದೆ. ತಿಂಗಳಲ್ಲಿ ಎರಡು ಬಾರಿ ನಡೆಸುವ ಈ ಶಿಬಿರದಿಂದ ಸಾವಿರಾರು ಮಂದಿ ಅನುಕೂಲ ಪಡೆದಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಶಿಬಿರದಲ್ಲಿ ಭಾಗವಹಿಸಿದ್ದ ಗೌರವವೈದ್ಯರಿಗೆ ಪ್ರಶಸ್ತಿ ಫಲಕ ಮತ್ತು ಫಲಪುಷ್ಪಗಳನ್ನು ನೀಡಿ ಗೌರಪಿಸಿ ಅಭಿನಂದನೆ ಸಲ್ಲಿಸಲಾಯಿತು. ಸಂಘದ ಸಂಸ್ಥಾಪಕ ಕಾರ್ಯದರ್ಶಿ ಎಂ.ನರಸಿಂಹ, ಸಹಾಯಕ ಕಾರ್ಯದರ್ಶಿ ಕೆ.ಎನ್.ಸೋಮಶೇಖರ್, ಸಿ.ದಾಕ್ಷಾಯಿಣಿ. ಎಸ್.ಚಂದ್ರ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.



ಉದಯಭಾನು ಕಲಾಸಂಘು ಹಮ್ಮಿಕೊಂಡಿದ್ದ ಉಚಿತ ನೇತ್ರ ಮತ್ತು ಆರೋಗ್ಯ ತಪಾಸಣಾ ಶಿಬಿರ ಹಾಗೂ ವೈದ್ಯರಿಗೆ ಅಭಿನಂದನಾ ಸಮಾರಂಭವನ್ನು ನಾಡೋಜ ವೂಡೇ ಪಿ.ಕೃಷ್ಣ ಮತ್ತು ನೇತ್ರತಜ್ಞೆ ಡಾ.ನಾಗರತ್ನ ಬೇಲಿ ಉದ್ಘಾಟಿಸಿದರು.

ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರ 'ಆಧ್ಯಾತ್ಮಿಕ ಸುಸ್ಥಿರತೆ'ಯ ಒಳಹೊರಗೆ

ಓದಿನ ಪ್ರೀತಿಗಾಗಿ



ಎಂ.ಎಚ್.ನಾಗರಾಜು

ಗಾಂಧೀ ವಿಚಾರಧಾರೆಯಲ್ಲಿ ಪರಿಣತರಾಗಿರುವ ಕನ್ನಡನಾಡಿನ ಕೆಲವೇ ಕೆಲವು ಪ್ರಾಜ್ಞರಲ್ಲಿ ನಾಡೋಜ ಡಾ. ವೂಡೇ ಪಿ.ಕೃಷ್ಣ ಕೂಡಾ ಒಬ್ಬರು. ಹುಟ್ಟಿದಂದಿನಿಂದಲೇ ಗಾಂಧಿ ತತ್ವ ಪ್ರಭಾವದೊಂದಿಗೆ ಬೆಳೆದು ಬಂದವರು. ಸಂಸ್ಕಾರವಂತ ಕುಟುಂಬದಿಂದ, ಪರಿಸರದಿಂದ ಬಂದವರು.

ಅವರ ತಾತ ಸೀನಿಯರ್ ಫ.ಊ. ಹನುಮಂತಪ್ಪ, ದೊಡ್ಡಪ್ಪ ಜೂನಿಯರ್ ಫ.ಊ. ಹನುಮಂತಪ್ಪ, ತಂದೆ ಫ.ಊ. ಪುಟ್ಟಯ್ಯ ಹಾಗೂ ಸೋದರರು-ಸೋದರ ಸಂಬಂಧಿಗಳು. ಹೀಗೆ ಬಹುದೊಡ್ಡ ಅವಿಭಕ್ತ ಕುಟುಂಬದ ಸಮಸ್ತ ಜನರು ಒಂದಲ್ಲಾ ಒಂದು ರೀತಿಯಲ್ಲಿ ಗಾಂಧೀ ಚಿಂತನೆಯ ಸ್ಫೂರ್ತಿಯಲ್ಲಿ, ಅವರ ತತ್ವಗಳ ಪ್ರಭಾವಳಿಯಲ್ಲಿ ಬೆಳೆದು ಬಂದವರು. ಮಹಾತ್ಮ ಗಾಂಧೀ ಮತ್ತು ಅವರ ಜೀವನದ ಸಂದೇಶಗಳು ಹಾಗೂ ರಾಜಾರಾಮಮೋಹನರಾಯ್ ಮತ್ತು ಅವರ ಸಮಾಜೋಧಾರ್ಮಿಕ ಸುಧಾರಣಾ ಚಳವಳಿಯೊಂದಿಗೆ ತೆಕ್ಕೆಹಾಕಿದವರು.

ವೂಡೇ ಮನೆತನಕ್ಕೆ ಸೇರಿದ ಮೂರನೇ ತಲೆಮಾರಿನ ಕುಡಿ ಡಾ. ಕೃಷ್ಣ ಅವರಲ್ಲಿ ಭಾರತದ ನವೋದಯದ ಹರಿಕಾರರಾದ ಗಾಂಧೀ ಮತ್ತು ರಾಯ್ ಅವರ ಪ್ರಭಾವ ಸ್ವಲ್ಪ ಹೆಚ್ಚೇ ಇದೆ ಎಂದು ಹೇಳಬಹುದು. ಈ ಹಿನ್ನೆಲೆಯ, ತಾತ್ವಿಕ ನಡೆಯ ಜೊತೆ ಜೊತೆಗೆ ಅವರು ಹೆಚ್ಚು ಹೆಚ್ಚು ಓದಿಕೊಂಡಂತೆ ಸಮರ್ಥ ಶಿಕ್ಷಣ ತಜ್ಞರೂ, ಲೇಖಕರೂ, ಸಂಸ್ಕೃತಿ ಚಿಂತಕರೂ ಆಗಿರುವುದು ಅವರ ವ್ಯಕ್ತಿತ್ವಕ್ಕೊಂದು ಘನವಾದ ಶೋಭೆಯನ್ನು ತಂದುಕೊಟ್ಟಿದೆ. ನಾಡಿನ ಪ್ರಜ್ಞಾವಂತ ವಲಯದಲ್ಲಿ ಮುಂಚೂಣಿಯಲ್ಲಿ ತಂದು ನಿಲ್ಲಿಸಿದೆ.

ಡಾ. ವೂಡೇ ಪಿ. ಕೃಷ್ಣ ಅವರು ಬರೆದಿರುವ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಪ್ರಕಟಿಸಿರುವ 'ಆಧ್ಯಾತ್ಮಿಕ ಸುಸ್ಥಿರತೆ' ಕ್ರೌನ್ 1/8 ಸೈಜಿನ 88 ಪುಟಗಳ ಪುಟ್ಟ ಪುಸ್ತಕ. 2021ರಲ್ಲಿ ಪ್ರಕಟವಾಗಿದ್ದು 78 ರೂಪಾಯಿಗಳ ಮುಖಬೆಲೆಯನ್ನು ಹೊಂದಿದ್ದು ಸಿಂಗಲ್ ಕಲರ್‌ನಲ್ಲಿ ಸುಂದರವಾಗಿ ಮೂಡಿಬಂದಿದೆ. ಪುಸ್ತಕ ಪುಟ್ಟದಾದರೂ ಗಹನವಾದ ವಿಚಾರಗಳನ್ನು ಒಳಗೊಂಡ ಪುಸ್ತಕ. ಒಮ್ಮೆಗೇ ಓದಿ ಅರಗಿಸಿಕೊಳ್ಳಲು, ಅಭಿವ್ಯಕ್ತಪಡಿಸಲು ಆಗುವುದೇ ಇಲ್ಲ. ಪದೇ ಪದೇ ಅದರೊಂದಿಗೆ ಒಡನಾಡಿದಾಗ, ಅನುಸಂಧಾನ ಮಾಡಿದಾಗ, ಈ ವಿಚಾರಧಾರೆಯಲ್ಲಿ ಸ್ವಲ್ಪ ದೂರ ಹೆಜ್ಜೆ ಹಾಕಿದಾಗ ಮಾತ್ರ ಸುಲಭ ಸಾಧ್ಯವಾಗುತ್ತದೆ. ಮನದಾಳಕ್ಕೆ ಇಳಿಯುತ್ತದೆ.

ಕೃತಿಯ ಇನ್ನೊಂದು ವಿಶೇಷ ಎಂದರೆ ಬಾ (ಕಸ್ತೂರಬಾ ಗಾಂಧೀ) ಮತ್ತು ಬಾಪು (ಮಹಾತ್ಮಾಗಾಂಧೀ) ಅವರ 150ನೇ ಜನ್ಮವರ್ಷಾಚರಣೆಯ ಶುಭ ಸಂದರ್ಭದಲ್ಲಿ ಹೊರಬಂದಿರುವುದು. ಗಾಂಧೀ ಮತ್ತು ಅವರ ಪತ್ನಿ ಗಾಂಧೀ ಅವರು ಒಂದೇ ವರ್ಷದಲ್ಲಿ ಜನಿಸಿದವರು, ಸಮಕಾಲೀನರು. ಹಾಗಾಗಿ ಈ ವರ್ಷಾಚರಣೆಯನ್ನು 150ನೇ ಜನ್ಮವರ್ಷಾಚರಣೆಯನ್ನಾಗಿ ಗಾಂಧೀ ಸಮೂಹ ಸಂಸ್ಥೆಗಳು ವಿಶಿಷ್ಟವಾಗಿ ದೇಶದಲ್ಲೆಡೆ ಆಚರಿಸಿ ಇತಿಹಾಸ ಬರೆದಿವೆ. ಇದು ಒಂದು ಶ್ಲಾಘನೀಯ ಆಚರಣೆ.

ಕೃಷ್ಣ ಅವರ 'ಆಧ್ಯಾತ್ಮಿಕ ಸುಸ್ಥಿರತೆ' ಕೃತಿಯನ್ನು ಕೈಗೆತ್ತಿಕೊಂಡ ತಕ್ಷಣವೇ ರಸ್ಕಿನ್ ಅವರ 'ಅನ್ ಟು ದಿಸ್ ಲಾಸ್ಟ್' ಮತ್ತು ಗಾಂಧೀ ಅವರ 'ಹಿಂದ್ ಸ್ವರಾಜ್' ಕೃತಿಗಳು ನೆನಪಾಗುತ್ತವೆ. ಮೂರೂ ಕೃತಿಗಳಲ್ಲಿ ಅಪಾರ ಸಾಮ್ಯತೆ ಇದೆ. ಮೂರು ಕೃತಿಗಳೂ ಪುಟ್ಟ ಕೃತಿಗಳಾಗಿದ್ದರೂ ಅವುಗಳಲ್ಲಿ ಮಂಡನೆಯಾಗಿರುವ ವಿಚಾರಗಳಿಂದ ಮಹತ್ವಪೂರ್ಣವಾಗಿವೆ ಎಂದು ಪರಿಭಾವಿಸಬಹುದು.

ಆಧ್ಯಾತ್ಮಿಕ ಸ್ಥಿರತೆ ಬಾಪು ಸಂದೇಶವನ್ನು ಸಾರುವ ವಿಶಿಷ್ಟವಾದ ಕೃತಿ. ಡಾ. ಕೃಷ್ಣ ಅವರು ಬೇರೆ ಬೇರೆ ಸಂದರ್ಭಗಳಲ್ಲಿ, ವೇದಿಕೆಗಳಲ್ಲಿ ನಡೆಸಿದ ಬಾಪು ಚಿಂತನೆಯ ಅನುಸಂಧಾನವೇ ಲೇಖನವಾಗಿ ಮೂಡಿಬಂದಿವೆ. ಇಂತಹ ನಾಲ್ಕು ಲೇಖನಗಳು ಸೇರಿ ಈ ಪುಸ್ತಕವಾಗಿದೆ. ಈ ನಾಲ್ಕು ಲೇಖನಗಳಿಗೆ ಸಮಾಜವಾದ: ಗಾಂಧೀ ದೃಷ್ಟಿಕೋನ, ಮಹಾತ್ಮಗಾಂಧೀ ಮತ್ತು ಸ್ವಚ್ಛಭಾರತ, ಮಹಾತ್ಮಗಾಂಧೀ ಮತ್ತು ಆಧ್ಯಾತ್ಮಿಕ ರಾಜಕಾರಣ ಹಾಗೂ ಗಾಂಧೀ ಮತ್ತು ಆಧ್ಯಾತ್ಮಿಕ ಸುಸ್ಥಿರತೆ ಎಂದು ಶೀರ್ಷಿಕೆಗಳನ್ನು ನೀಡಲಾಗಿದೆ.

ಮಹತ್ವದ ಸಂಗತಿ ಎಂದರೆ ಪುಟ್ಟ ಎನ್ನಬಹುದಾದ ಇಲ್ಲಿನ ನಾಲ್ಕು ಲೇಖನಗಳಿಗೆ ನಾಲ್ಕು ಜನ ಪ್ರಬುದ್ಧರು, ಓದಿ ನೀಡಿರುವ ಪ್ರತಿಕ್ರಿಯೆ, ಇವನ್ನು ಆಶಯ ನುಡಿ ಎಂದು ಕರೆದು ಕೃತಿಯ ಆರಂಭದಲ್ಲಿಯೇ ನೀಡಲಾಗಿದೆ. ಅವರುಗಳು ಈ ವಿಷಯಗಳಲ್ಲಿ ಪಾರಂಗತರಾಗಿರುವುದು ಇಲ್ಲಿಯ ಮತ್ತೊಂದು ವಿಶೇಷ ಸಂಗತಿ.

ಕೃತಿಯ ಮೊದಲನೇ ಲೇಖನವಾದ ಸಮಾಜವಾದ: ಗಾಂಧೀ ದೃಷ್ಟಿಕೋನ ಲೇಖನಕ್ಕೆ ಪ್ರೊ. ರವಿವರ್ಮಕುಮಾರ್ ಆಶಯನುಡಿ ಬರೆದಿದ್ದಾರೆ. ಮಹಾತ್ಮಗಾಂಧೀ ಮತ್ತು ಸ್ವಚ್ಛಭಾರತ ಲೇಖನಕ್ಕೆ ರಾಷ್ಟ್ರ ಎನ್‌ಎಸ್‌ಎಸ್‌ನ ಹಿರಿಯ ಅಧಿಕಾರಿ ಡಾ. ಗಣನಾಥ ಶೆಟ್ಟಿ ಎಕ್ಕಾರು ಪ್ರತಿಕ್ರಿಯೆ ನೀಡಿದ್ದಾರೆ. ಹಾಗೇ ಮಹಾತ್ಮಗಾಂಧೀ ಮತ್ತು ಆಧ್ಯಾತ್ಮಿಕ ರಾಜಕಾರಣಕ್ಕೆ ಸಂಸ್ಕೃತಿ ಚಿಂತಕ-ಲೇಖಕ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಪ್ರತಿಕ್ರಿಯಿಸಿದ್ದಾರೆ. ಕೊನೆಯ ಗಾಂಧೀ ಮತ್ತು ಆಧ್ಯಾತ್ಮಿಕ ಸುಸ್ಥಿರತೆಗೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಉಪಾಧ್ಯಕ್ಷ ಪ್ರೊ. ಜಿ.ಬಿ. ಶಿವರಾಜು ಆಶಯ ನುಡಿ ನುಡಿದಿದ್ದಾರೆ.

ಗಾಂಧೀ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಪ್ರಕಾಶಕರ ಮಾತು ಬರೆದಿದ್ದಾರೆ. ಮತ್ತು ಹೀಗೆ ಬರೆಯುತ್ತಲೇ ಲೇಖನಗಳ ಮೌಲ್ಯವನ್ನು ಓರೆಗೆ ಹಚ್ಚಿದ್ದಾರೆ. ಮತ್ತೊಂದು ವಿಶೇಷದ ಸಂಗತಿ ಎಂದರೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಮಾಜಿ ಅಧ್ಯಕ್ಷರೂ ಮಾಜಿ ಮುಖ್ಯಮಂತ್ರಿಗಳೂ ಆದ ಕಡಿದಾಳ್ ಮಂಜಪ್ಪ ಅವರಿಗೆ ಕೃತಿಯನ್ನು ಅರ್ಪಿಸಲಾಗಿರುವುದು ಔಚಿತ್ಯಪೂರ್ಣವಾಗಿದೆ.

ಗಾಂಧೀ ಸಾಹಿತ್ಯ ಶ್ರೇಣಿಯನ್ನು ಅದರಲ್ಲೂ ಮುಖ್ಯವಾಗಿ ಅವರ ಹಿಂದ್ ಸ್ವರಾಜ್ ಮತ್ತು ಸರ್ವೋದಯ ಕೃತಿಗಳನ್ನು ಅಧ್ಯಯನ ಮಾಡಿದರೆ ಅವರ ಸಮಾಜವಾದದ ಪರಿಕಲ್ಪನೆ ಏನಿತ್ತು? ಸಮಸ್ತ ಜನರ ಏಳಿಗೆಯ ಹಿನ್ನೆಲೆಯಲ್ಲಿ ಅವರ ಆಶಯ-ಆದರ್ಶ ಏನಾಗಿತ್ತು ಎಂಬುದು ತಿಳಿಯುತ್ತದೆ. ವ್ಯಕ್ತಿಯ ಏಳಿಗೆ ಎಲ್ಲರ ಏಳಿಗೆಯೊಂದಿಗೆ ಬೆಸೆದುಕೊಂಡಿದೆ ಅನ್ನುವಂತಹ ಮಾತಾಗಲಿ, ನಮ್ಮ ಬೇಕುಗಳನ್ನು ಅವಶ್ಯಕತೆಗಳನ್ನು ಮಿತಿಯಲ್ಲಿಡಬೇಕು ಎಂಬ ಮಾತಾಗಲಿ, ಸಮಾಜದಲ್ಲಿ ಶ್ರೀಮಂತರು ಬಡವರ ಧರ್ಮದರ್ಶಿಗಳಂತೆ ಕೆಲಸ ಮಾಡಬೇಕು ಎಂಬ ಆಲೋಚನೆಯಾಗಲಿ ಹೀಗೆ ಎಲ್ಲವನ್ನು ಗಮನಿಸುತ್ತಾ ಹೋದರೆ ಮಹಾತ್ಮ ಗಾಂಧೀ ಅವರು ಒಬ್ಬ ಸಂತನಂತೆ, ಸಮಾಜವಾದಿಯಂತೆ ಕಾಣುತ್ತಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಮತಾವಾದಿಯೂ ಆಗಿ ಕಾಣುವ ಸಾಧ್ಯತೆ ಇದೆ. ಗಾಂಧೀ ಅವರು ಸಮಾಜವಾದ ಅಥವಾ ಸಮತಾವಾದ ಎಂದು ಎಲ್ಲಿಯೂ ಬಲವಾಗಿ ಪ್ರತಿಪಾದನೆ ಮಾಡದೇ ಇದ್ದರೂ ಅವರ ಸರ್ವೋದಯ ಪರಿಕಲ್ಪನೆ ಅವೆರಡಕ್ಕಿಂತಲೂ ಹೆಚ್ಚು ಕ್ರಾಂತಿಕಾರಿಯಾದುದು, ಪರಿಣಾಮಕಾರಿಯಾಗಿರುವಂತಹದ್ದು ಎಂಬುದು ನನ್ನ ಗ್ರಹಿಕೆ.

ಡಾ. ಕೃಷ್ಣ ಅವರು ತಮ್ಮ ಸಮಾಜವಾದ: ಗಾಂಧೀ ದೃಷ್ಟಿಕೋನ ಲೇಖನದಲ್ಲಿ ಇಡೀ ಗಾಂಧೀ ಸಾಹಿತ್ಯವನ್ನು ಅವಲೋಕಿಸುವಂತೆ ಈ ನಿಟ್ಟಿನಲ್ಲಿ ಅವರ ವಿಚಾರಧಾರೆಯನ್ನು ತುಂಬ ಸರಳವಾಗಿ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಆಶಯ ನುಡಿಯಲ್ಲಿ ಪ್ರೊ. ರವಿವರ್ಮಕುಮಾರರೇ ಹೇಳುವಂತೆ ಲೇಖಕರು ಅತ್ಯಂತ ಸರಳವಾದ ನುಡಿಯಲ್ಲಿ ಗಹನವಾದ-ಗೂಢವಾದ ಗಾಂಧೀ ವಿಚಾರವನ್ನು ಏಕಕಾಲಕ್ಕೆ ಪಂಡಿತರು ಮತ್ತು ಪಾಮರರು ಇಬ್ಬರಿಗೂ ಅರ್ಥವಾಗುವಂತೆ ಗಾಂಧೀ ಸಮಾಜವಾದದ ಪರಿಕಲ್ಪನೆಯನ್ನು ಮಂಡಿಸಿದ್ದಾರೆ. ಗಾಂಧೀತತ್ವ ಅಥವಾ ಗಾಂಧೀವಾದ ಅನ್ನುವುದೇ ಸಮಾಜವಾದ ಅಥವಾ ಸಮಾಜವಾದಕ್ಕಿಂತ ಮಿಗಿಲಾದ ಸಾಮಾಜಿಕ ಪರಿಕಲ್ಪನೆ ಎಂಬುದನ್ನು ಲೇಖಕರು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಹೀಗಾಗಿ ಇದೊಂದು ಅರ್ಥಪೂರ್ಣವಾದ ಲೇಖನವಾಗಿ ಮೂಡಿಬಂದಿದೆ. ಹಾಗೂ ಗಾಂಧಿಯನ್ನು ಅರಿಯಲು ಓದುಗರಿಗೆ ಸಹಾಯಕವಾಗಿದೆ.




ಇನ್ನು ಈ ಸಂಕಲನದಲ್ಲಿನ ಎರಡನೇ ಲೇಖನ ಮಹಾತ್ಮಗಾಂಧೀ ಮತ್ತು ಸ್ವಚ್ಛಭಾರತ. ಇತ್ತೀಚೆಗೆ ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಕೈಗೊಂಡ ನಿರ್ಮಲಭಾರತ ಅಭಿಯಾನವನ್ನು ಆಂದೋಲನವನ್ನು ಗಮನಿಸಿದರೆ ಗಾಂಧೀ ಅವರ ಸ್ವಚ್ಛಭಾರತದ ಪರಿಕಲ್ಪನೆ ಅಥವಾ ಆದರ್ಶ ಎಷ್ಟೊಂದು ಮಹತ್ವಪೂರ್ಣವಾದುದ್ದು, ಪ್ರಾಚೀನವಾದುದ್ದು ಎಂಬುದು ತಿಳಿಯುತ್ತದೆ. ಕೇಂದ್ರ ಸರ್ಕಾರ ಇಂದು ಹಮ್ಮಿಕೊಂಡ ಈ ಕಾರ್ಯಕ್ರಮವನ್ನು ಆದರ್ಶವನ್ನು ಗಾಂಧೀ ಕಳೆದ ಶತಮಾನದ ಆದಿಭಾಗದಲ್ಲಿಯೇ ಪ್ರತಿಪಾದಿಸಿದ್ದರು. ಬೋಧಿಸಿದ್ದರು ಎಂಬುದು ಅವರ ದೂರದೃಷ್ಟಿಯ ರಾಜಕಾರಣಕ್ಕೆ, ಹೋರಾಟಕ್ಕೆ ಸಮರ್ಥ ಉದಾಹರಣೆಯೇ ಸರಿ. ಗಾಂಧೀ ಪ್ರತಿಪಾದಿಸಿದ ಹದಿನೆಂಟು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಈ ಗ್ರಾಮ ನೈರ್ಮಲ್ಯವೂ ಒಂದಾಗಿತ್ತು ಎಂಬುದನ್ನು, 1927ರಲ್ಲಿ ಅವರು ತುಮಕೂರು ನಗರಕ್ಕೆ ಭೇಟಿ ನೀಡಿದ್ದಾಗ ಬೆಳ್ಗಿಂಬೆಳಗ್ಗೆ ತಮ್ಮ ಸಂಗಡಿಗರೊಂದಿಗೆ ಭಂಗಿ ಕಾಲೋನಿಗೆ ಹೋಗಿ ಸ್ವಚ್ಛತಾ ಕಾರ್ಯ ನೆರವೇರಿಸಿದ್ದನ್ನು ನಾವು ಧ್ಯಾನಿಸಬೇಕು.

ಡಾ. ಕೃಷ್ಣ ಅವರು ಒಬ್ಬ ಲೇಖಕರಾಗಿ, ಗಾಂಧೀ ದರ್ಶನವನ್ನು ತಮ್ಮದಾಗಿಸಿಕೊಂಡಂತೆ ಅದರ ಮುಂದೆಳೆಗಳಲ್ಲಿ ಗಾಂಧೀ ಮತ್ತು ಸ್ವಚ್ಛಭಾರತ ಲೇಖನವನ್ನು ರಚಿಸಿದ್ದಾರೆ. ಗಾಂಧೀ ಆಶಯವನ್ನು ಆದರ್ಶವನ್ನು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ಕೆಲಸ ಮಾಡಿರುವ ಎನ್.ಎಸ್.ಎಸ್ ಯೋಜನಾಧಿಕಾರಿ ಡಾ. ಗಣನಾಥಶೆಟ್ಟಿ ಎಕ್ಕಾರು ಈ ಲೇಖನಕ್ಕೆ ಬರೆದಿರುವ ಆಶಯ ನುಡಿಯಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ. ಗಾಂಧೀಯಂತಹ ಮೇರು ಸಂತ ಹೇಗೆ ನೆಲದಲ್ಲಿ ನಿಂತು ಸರಳವಾಗಿ ಯೋಚಿಸುತ್ತಿದ್ದರು ಎಂಬುದಕ್ಕೆ ಕೃಷ್ಣ ಅವರ ಈ ಸಾಂದರ್ಭಿಕ ಲೇಖನ ಪುರಾವೆಯನ್ನು ಒದಗಿಸುತ್ತದೆ.

ಸಂಕಲನದ ಮೂರನೇ ಲೇಖನವಾಗಿ ಮಹಾತ್ಮಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ ಇದೆ. ಆಧ್ಯಾತ್ಮದಂತಹ ಗಂಭೀರ ವಿಚಾರವನ್ನು ಲೇಖಕ ಕೃಷ್ಣ ಅವರು ಅತ್ಯಂತ ಸರಳವಾಗಿ, ಸುಂದರವಾಗಿ ಆಸಕ್ತ ಓದುಗರ ಮನದಾಳಕ್ಕೆ ಇಳಿಸುವಲ್ಲಿ ಯಶಸ್ವಿಯಾಗುತ್ತಾರೆ. ಗಾಂಧೀ ಸಾಹಿತ್ಯ ಸಂಪುಟವನ್ನು ಪರಾಮರ್ಶಿಸಿದಾಗ ಅಥವಾ ಅದರ ಭಾಗವಾಗಿ ಏಳು ಸಾಮಾಜಿಕ ಪಾತಕಗಳನ್ನು ಅವಲೋಕಿಸಿದಾಗ ಗಾಂಧೀ ಅವರ ಧರ್ಮ ಏನು ಅಥವಾ ಆಧ್ಯಾತ್ಮಿಕತೆ ಏನಾಗಿತ್ತು ಎಂಬುದು ಮನದಟ್ಟಾಗುತ್ತದೆ. ಉದಾತ್ತವಾದ ಎಲ್ಲರಿಗೂ ಅಗತ್ಯವಾದ ಪೂರಕವಾದ ಧರ್ಮದ ಅಡಿಗಲ್ಲಿನ ಮೇಲೆ, ಬದುಕು ಅದರಲ್ಲೂ ರಾಜಕಾರಣದ ಬದುಕು ಆಧರಿಸಬೇಕು ಎನ್ನುವುದನ್ನು ಗಾಂಧೀ ಪ್ರತಿಪಾದನೆ ಮಾಡುತ್ತಾರೆ. ಲೇಖಕ ಕೃಷ್ಣ ಅವರು ಸಹ ಇಂತಹ ಹಲವು ಪುರಾವೆಗಳನ್ನು ಹೆಕ್ಕಿ ತೆಗೆದು ಈ ನಿಟ್ಟಿನಲ್ಲಿ ಗಾಂಧೀ ಅವರ ಆಲೋಚನೆಯನ್ನು, ಚಿಂತನೆಯನ್ನು ಓದುಗರನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ ಮತ್ತು ಯಶಸ್ವಿಯಾಗಿದ್ದಾರೆ

ಬಹುಶಃ ಈ ಆಧ್ಯಾತ್ಮಿಕ ರಾಜಕಾರಣ ಎಂಬ ಶೀರ್ಷಿಕೆಯೇ ತುಂಬ ಮಹತ್ವದಿಂದ ಕೂಡಿದೆ. ಅಂದಿನ ಗಾಂಧಿಯ ಈ ಆಶಯ ಇಂದಿನ ರಾಜಕಾರಣಕ್ಕೆ ತುಂಬ ತುಂಬಾನೇ ಅಗತ್ಯ. ಅಂದಿನ ರಾಜಕಾರಣಕ್ಕೂ ಇಂದಿನ ರಾಜಕಾರಣಕ್ಕೂ ಭೂಮಿ-ಆಕಾಶದಷ್ಟು ಅಂತರ ಇದೆ. ಇಂದು ರಾಜಕಾರಣ ಅನ್ನುವುದು ಜನಸೇವೆಯಾಗಿ ಉಳಿದಿಲ್ಲ, ಆದರ್ಶವಾಗಿ ಉಳಿದಿಲ್ಲ. ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ಗಾಂಧಿಯ ಆಧ್ಯಾತ್ಮಿಕ ರಾಜಕಾರಣದ ಕನಸು ನಿಜಕ್ಕೂ ಒಂದು ಆದರ್ಶ. ಇವತ್ತಿನ ಪ್ರಜಾಪ್ರಭುತ್ವ ಯಶಸ್ವಿಯಾಗುವಲ್ಲಿ ಎಷ್ಟೊಂದು ಅನಿವಾರ್ಯವಾಗಿದೆ ಎಂಬುದನ್ನು ಗಾಂಧಿಯ ಮಾತುಗಳಲ್ಲಿಯೇ ಲೇಖನದಲ್ಲಿ ಕಟ್ಟಿಕೊಟ್ಟಿದ್ದಾರೆ. ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರ ಆಶಯದ ನುಡಿಯೂ ಲೇಖನದ ವ್ಯಕ್ತಿತ್ವಕ್ಕೆ ಸಾಣೆ ಹಿಡಿಯುತ್ತದೆ.

ಇದೇ ಹಾದಿಯಲ್ಲಿ, ಮುಂದುವರೆದ ಭಾಗವಾಗಿ ಲೇಖಕ ಡಾ. ಕೃಷ್ಣ ಅವರ ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ ಇದೆ. ಇದು ಈ ಕೃತಿಯ ಕೊನೆಯ ಲೇಖನ. ಇವತ್ತು ಬದುಕು ನಾಗಾಲೋಟದಲ್ಲಿ ಸಾಗುತ್ತಿದೆ. ಬದುಕಲು, ಬದುಕಿನಲ್ಲಿ ಯಶಸ್ವಿಯಾಗಲು ಮನುಷ್ಯ ಏನೆಲ್ಲ ಕಸರತ್ತುಗಳನ್ನು ಮಾಡುತ್ತಾನೆ. ಈ ಕಸರತ್ತು




ಒಳ್ಳೆಯ ದಾರಿಯಲ್ಲಿದ್ದರೆ ಓಕೆ. ಅದೇ ಒಳ್ಳೆಯದಲ್ಲದ ದಾರಿಯಲ್ಲಿದ್ದರೆ? ಬದುಕು ಭೂಮಿಯ ಮೇಲೆ ನರಕವಾಗುತ್ತದೆ. ಈ ಲೇಖನದಲ್ಲಿ ಕೃಷ್ಣ ಅವರು ಈ ಎಲ್ಲವನ್ನು, ಬದುಕಿನಲ್ಲಿ ಆಧ್ಯಾತ್ಮಿಕ ಭಾವವನ್ನು, ಅದರಲ್ಲೂ ಆಧ್ಯಾತ್ಮಿಕ ಸುಸ್ಥಿರತೆಯನ್ನು ಸರಳವಾಗಿ ಯಶಸ್ವಿಯಾಗಿ ಪ್ರಸ್ತುತಪಡಿಸುತ್ತಾ ಹೋಗುತ್ತಾರೆ. ಹೀಗೆ ಸರಳವಾಗಿಯೂ ಬದುಕಿಗೆ ಅಗತ್ಯವಾದ ಆಧ್ಯಾತ್ಮಿಕ ಸುಸ್ಥಿರತೆಯನ್ನು ಮನಗಾಣಿಸಬಹುದೇ? ಆಶ್ಚರ್ಯವಾಗುತ್ತದೆ. ಇಲ್ಲಿ ಲೇಖಕರು ಖಂಡಿತ ಯಶಸ್ವಿಯಾಗಿದ್ದಾರೆ. ಪ್ರೊ. ಜಿ.ಬಿ. ಶಿವರಾಜು ಅವರು ಸಹ ತಮ್ಮ ಆಶಯ ನುಡಿಯಲ್ಲಿ ಇದನ್ನು ದಾಖಲಿಸಿದ್ದಾರೆ.

ಒಂದು ಪುಟ್ಟ ಪುಸ್ತಕದಲ್ಲಿ, ಇಂತಹ ನಾಲ್ಕು ಮಹತ್ವದ ವಿಚಾರಗಳನ್ನು ಸಂಗತಿಗಳನ್ನು ಸುಲಲಿತವಾಗಿ ಹೇಳಿರುವ ಡಾ. ವೂಡೇ ಪಿ. ಕೃಷ್ಣ ಅವರು ಅಭಿನಂದನಾರ್ಹರು. ಕೃತಿಯ ಕೊನೆಯಲ್ಲಿ ಮಹಾತ್ಮ ಗಾಂಧಿ ಮತ್ತು ಕಸ್ತೂರಬಾಗಾಂಧಿ ಅವರ ಜೀವನದ ಘಟನಾವಳಿಗಳನ್ನು ಕಾಲಾನುಕ್ರಮದಲ್ಲಿ ನೀಡಲಾಗಿದೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳ ಪಟ್ಟಿಯನ್ನು ಜೊತೆಗೆ ಹಾಗೂ ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು ಮತ್ತು ದಿನಾಂಕಗಳನ್ನು ನೀಡಲಾಗಿದೆ. ಏಕಾದಶ ವ್ರತಗಳು, ಏಳು ಸಾಮಾಜಿಕ ಪಾತಕಗಳು ಮತ್ತು ಹದಿನೆಂಟು ರಚನಾತ್ಮಕ ಕಾರ್ಯಗಳನ್ನು ಗಾಂಧಿ ಅವರ ನೀತಿಮಾರ್ಗ ಸೂಚಿಯಲ್ಲಿ ನೀಡಿರುವುದು ಕೃತಿಯ ಮೌಲ್ಯವನ್ನು ಖಂಡಿತವಾಗಿ ಹೆಚ್ಚಿಸಿದೆ. 'ಆಧ್ಯಾತ್ಮಿಕ ಸುಸ್ಥಿರತೆ' ಎಂಬ ಡಾ. ಕೃಷ್ಣ ಅವರ ಈ ಕೃತಿ ಅಭ್ಯಾಸಯೋಗ್ಯವಾದ ಕೃತಿಯಾಗಿದೆ ಎಂದು ಹೇಳ ಬಯಸುತ್ತೇನೆ.



ಡಾ.ಪುತ್ತೂರಾಯರ ಜನಪ್ರಿಯ ಅಂಕಣಗಳನ್ನು ಒಳಗೊಂಡ 'ಜೀವನ ದರ್ಪಣ' ಎಂಬ ಪುಸ್ತಕವನ್ನು ನಾಡೋಜ ಡಾ.ವೂಡೆ ಪಿ ಕೃಷ್ಣ ಲೋಕಾರ್ಪಣೆಗೊಳಿಸಿದರು.

ವಿಶ್ವವಾಣಿ
06.04.2021 ಮಂಗಳವಾರ
vishwavani.news




ಡಾ. ಪುತ್ತೂರಾಯರ ಜನಪ್ರಿಯ ಅಂಕಣಗಳನ್ನು ಒಳಗೊಂಡ 'ಜೀವನ ದರ್ಪಣ' ಎಂಬ ಪುಸ್ತಕವನ್ನು ನಗರದ ಖಾಸಗಿ ಹೋಟೆಲ್‌ನಲ್ಲಿ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಡಾ. ವೂಡೆ ಪಿ. ಕೃಷ್ಣ ಅವರು ಲೋಕಾರ್ಪಣೆ ಮಾಡಿದರು.

ಕನ್ನಡಪ್ರಭ

ಮಂಗಳವಾರ 6.4.2021

ಪುತ್ತೂರಾಯ ವಿರಚಿತ ಕೃತಿ 'ಜೀವನ ದರ್ಪಣ' ಲೋಕಾರ್ಪಣೆ



ನಗರದ ಖಾಸಗಿ ಹೋಟೆಲ್‌ನಲ್ಲಿ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಂಕಣಕಾರ ಡಾ। ಕೆ.ಪಿ.ಪುತ್ತೂರಾಯ ವಿರಚಿತ 'ಜೀವನ ದರ್ಪಣ' ಕೃತಿಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ। ವೂಡೇ ಪಿ.ಕೃಷ್ಣ ಬಿಡುಗಡೆ ಮಾಡಿದರು.

ಪುಸ್ತಕ ಬಿಡುಗಡೆ

ಬೆಂಗಳೂರು: ಸಾಹಿತ್ಯದಲ್ಲಿ ವೈವಿಧ್ಯತೆ ಬರಬೇಕಾದರೆ ಸಾಹಿತ್ಯೇತರ ಕ್ಷೇತ್ರದ ಜನರು ಸಾಹಿತ್ಯ ಬರೆಯಬೇಕು ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ। ವೂಡೇ ಪಿ.ಕೃಷ್ಣ ಅಭಿಪ್ರಾಯಪಟ್ಟರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಮಂಗಳವಾರ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಅಂಕಣಕಾರ ಡಾ। ಕೆ.ಪಿ. ಪುತ್ತೂರಾಯ ಅವರ 'ಜೀವನ ದರ್ಪಣ' ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿ, ಸಾಹಿತಿಗಳು ಮಾತ್ರವಲ್ಲದೆ ಎಂಜಿನಿಯರ್‌ಗಳು, ವೈದ್ಯರು, ಕೃಷಿ ವಿಜ್ಞಾನಿಗಳು ಸೇರಿದಂತೆ ಸಾಹಿತ್ಯೇತರ ಕ್ಷೇತ್ರದ ಜನರು ಸಾಹಿತ್ಯ ರಚಿಸಬೇಕು ಎಂದರು.

ಇದೇ ವೇಳೆ ಲೇಖಕಿ ಬಿ.ಕೆ.ಪೂರ್ಣಿಮಾ ಅವರಿಗೆ 'ಸಿಸಿರಾ ಯುವ ಸಾಹಿತ್ಯ ಪ್ರತಿಭಾ ಪುರಸ್ಕಾರ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಉಪನ್ಯಾಸಕ ವಾದಿರಾಜ್, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟಿನ ಅಧ್ಯಕ್ಷ ಡಾ। ಎಸ್.ರಾಮಲಿಂಗೇಶ್ವರ, ಲೇಖಕಿ ಬಿ.ಕೆ. ಪೂರ್ಣಿಮಾ, ಸಾಹಿತಿ ಡಾ। ಬೈರಮಂಗಲ ರಾಮೇಗೌಡ, ಕನ್ನಡ ಹೋರಾಟಗಾರ ತಿಮ್ಮಯ್ಯ ಇದ್ದರು.

ಕನ್ನಡ ದಿನಪತ್ರಿಕೆ
ಮಂಗಳವಾರ 6 ಏಪ್ರಿಲ್ 2021 6 APRIL 2021
VIJAYAVANI BENGALURU

ಡಾ.ವೂಡೇ ಪಿ.ಕೃಷ್ಣ ಅಭಿಮತ | ಡಾ.ಕೆ.ಪಿ. ಪುತ್ತೂರಾಯರ ಜೀವನ ದರ್ಪಣ ಕೃತಿ ಬಿಡುಗಡೆ

ಪರಸ್ಪರ ಪ್ರೀತಿಯಿಂದ ನೈತಿಕತೆ ಮರುಸ್ಥಾಪನೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಪ್ರಸ್ತುತ ಕಾಲಘಟ್ಟದಲ್ಲಿ ನೈತಿಕತೆಯ ಮರುಸ್ಥಾಪನೆಗಾಗಿ ಪರಸ್ಪರ ಪ್ರೀತಿಯಿಂದ ಮನಸ್ಸುಗಳನ್ನು ಕಟ್ಟುವ ಕೆಲಸವಾಗಬೇಕಿದೆ ಎಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಹೇಳಿದ್ದಾರೆ.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಸೋಮವಾರ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ, ವಿಜಯವಾಣಿ ಅಂಕಣಕಾರ ಡಾ.ಕೆ.ಪಿ. ಪುತ್ತೂರಾಯ ರಚಿಸಿರುವ 'ಜೀವನ ದರ್ಪಣ' ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿದರು.


» ಎಲ್ಲ ಕ್ಷೇತ್ರದವರು ಸಾಹಿತ್ಯ ರಚಿಸಲಿ

ರಾಷ್ಟ್ರಪಿತ ಗಾಂಧಿ ಅವರನ್ನು 'ನೈತಿಕತೆಯ ಜೀನಿಯಸ್' ಎಂದು ಬ್ರಿಟಿಷರು ಬಣ್ಣಿಸಿದ್ದರು. ಈಗಿನ ಕಾಲದಲ್ಲಿ ನೈತಿಕ ಸ್ವಾತಂತ್ರ್ಯ ಸಂಪಾದಿಸುವ ಹೊಣೆಗಾರಿಕೆ ನಮ್ಮ ಮೇಲಿದೆ. ಇದಕ್ಕಾಗಿ ಗಾಂಧಿ ಚಿಂತನೆಗಳ ಅಧ್ಯಯನ ಅಗತ್ಯ ಎಂದರು.

ಇಂಜಿನಿಯರ್‌ಗಳು, ವೈದ್ಯರು, ಕೃಷಿವಿಜ್ಞಾನಿಗಳು ಸಹ ಸಾಹಿತ್ಯ ಕೃಷಿ ಮಾಡಿದಾಗ ಕನ್ನಡ ಸಾಹಿತ್ಯದ ಗಟ್ಟಿತನ ಮತ್ತಷ್ಟು ಹೆಚ್ಚುತ್ತದೆ. ಈ ಕಾರ್ಯದಲ್ಲಿ ಪುತ್ತೂರಾಯರ ಕಾಣಿಕೆ ಅಪಾರ ಎಂದು ಹೇಳಿದರು.

ಉಪನ್ಯಾಸಕ ವಾದಿರಾಜ್ ಮಾತನಾಡಿ, ಬದುಕು ಒಂದು ಸಂಭ್ರಮವಾಗಬೇಕು. 'ವಿಜಯವಾಣಿ'ಯಲ್ಲಿ ಪ್ರಕಟವಾದ 'ಪ್ರೇರಣೆ' ಅಂಕಣ ಬರಹಗಳ ಈ ಕೃತಿಯು ವಾಚನವೂ ಸಂಭ್ರಮದ ಭಾವ ಮೂಡಿಸುತ್ತದೆ ಎಂದರು. ಲೇಖಕಿ ಬಿ.ಕೆ. ಪೂರ್ಣಿಮಾಗೆ 'ಸಿಸಿರಾ ಯುವ ಸಾಹಿತ್ಯ ಪ್ರತಿಭಾ ಪುರಸ್ಕಾರ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಟ್ರಸ್ಟ್ ಅಧ್ಯಕ್ಷ ಡಾ.ಎಸ್. ರಾಮಲಿಂಗೇಶ್ವರ, ಸಾಹಿತಿ ಡಾ.ಬೈರಮಂಗಲ ರಾಮೇಗೌಡ, ಕನ್ನಡಪರ ಹೋರಾಟಗಾರ ತಿಮ್ಮಯ್ಯ ಮತ್ತಿತರಿದ್ದರು.


ವಿಜಯವಾಣಿ



'ಜೀವನ ದರ್ಪಣ' ಪುಸ್ತಕವನ್ನು ಡಾ.ವೂಡೇ ಪಿ.ಕೃಷ್ಣ ಬಿಡುಗಡೆ ಮಾಡಿದರು. ಡಾ.ಕೆ.ಪಿ. ಪುತ್ತೂರಾಯ, ಬಿ.ಕೆ. ಪೂರ್ಣಿಮಾ, ಟ್ರಸ್ಟಿನ ಅಧ್ಯಕ್ಷ ಡಾ.ಎಸ್. ರಾಮಲಿಂಗೇಶ್ವರ ಮತ್ತಿತರಿದ್ದರು.

'ಜೀವನ ದರ್ಪಣ' ಪುಸ್ತಕದಲ್ಲಿ ಸಮಾಜಮುಖಿ ಸಂದೇಶ ಮತ್ತು ಉಪದೇಶಗಳಿವೆ. ಸಂತೋಷ ಹಾಗೂ ಸಾರ್ಥಕ ಜೀವನ ನಡೆಸಲು ಅಗತ್ಯ ಸಲಹೆಗಳಿವೆ. ವೈಚಾರಿಕ, ಶೈಕ್ಷಣಿಕ, ಸಾಂಸಾರಿಕ, ಸಮಾಜಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಉಪಯುಕ್ತ ವಿಷಯಗಳ ಮೇಲೆ ಚಿಂತನ ಮಂಥನವಿದೆ.


| ಡಾ.ಕೆ.ಪಿ. ಪುತ್ತೂರಾಯ ಸಾಹಿತಿ



ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪ್ರತಿಷ್ಠಾನದಿಂದ ಗಾಂಧಿಭವನದಲ್ಲಿ ನಡೆದ ಎಸ್. ಅಮ್ಮಿ ಚಂದ್ರಕುಮಾರ್ ಅವರ ಹುಡುಗಿಯರ ಅಮೃತ ಲೋಕ ಲಲಿತ ಪ್ರಬಂಧಗಳ ಸಂಕಲನ ಮತ್ತು ಪ್ರದೂಷಣ ಕವನ ಸಂಕಲನ ಬಿಡುಗಡೆ ಸಮಾರಂಭದಲ್ಲಿ ರೈಲ್ವೆ ಇಲಾಖೆಯ ಎ.ಡಿ.ಜಿ.ಪಿ. ಕೆ. ಭಾಸ್ಕರರಾವ್, ಕನ್ನಡ ಹೋರಾಟಗಾರ ಸಾ.ರಾ. ಗೋವಿಂದು, ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತರಾದ ಡಾ. ಬಿ.ಆರ್. ರವಿಕಾಂತೇಗೌಡ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಿ. ಸೋಮಶೇಖರ್, ನಾಡೋಜ ವೂಡೇ ಪಿ. ಕೃಷ್ಣ, ಸಾಹಿತಿ ಹಾಗೂ ವಿಮರ್ಶಕರಾದ ಡಾ. ಬೈರಮಂಗಲ ರಾಮೇಗೌಡ, ಪಾಲನೇತ್ರ, ಎನ್. ಜಯರಾಂ ಮತ್ತು ಎಂ. ತಿಮ್ಮಯ್ಯ ಇವರುಗಳು ಉಪಸ್ಥಿತರಿದ್ದರು.

ಕಸ್ತೂರಿ ಪ್ರಭ ಏಪ್ರಿಲ್, ೨೦೨೧

ಜೀವನದರ್ಪಣ ಕೃತಿ ಲೋಕಾರ್ಪಣೆ



ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಆಶ್ರಯದಲ್ಲಿ ಇತ್ತೀಚೆಗೆ ಶೇಷಾದ್ರಿಪುರದ ಸನ್ಮಾನ್ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ, ಖ್ಯಾತ ವೈದ್ಯ ಡಾ. ಕೆ.ಪಿ. ಪುತ್ತೂರಾಯ ಅವರು "ವಿಜಯವಾಣಿ" ಪತ್ರಿಕೆಗಾಗಿ ಬರೆಯುತ್ತಿದ್ದ "ಪ್ರೇರಣೆ" ಅಂಕಣಗಳನ್ನಾಧರಿಸಿದ "ಜೀವನದರ್ಪಣ" ಪುಸ್ತಕವನ್ನು ಶಿಕ್ಷಣತಜ್ಞ, ನಾಡೋಜ ಡಾ. ವೂಡೇ ಪಿ. ಕೃಷ್ಣ ಲೋಕಾರ್ಪಣೆಗೊಳಿಸಿದರು. ಹಿರಿಯ ಸಾಹಿತಿ ಡಾ. ಬೈರಮಂಗಲ ರಾಮೇಗೌಡ ಮತ್ತು ಟ್ರಸ್ಟ್ ಅಧ್ಯಕ್ಷ ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ) ಇದ್ದಾರೆ.



ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಆಶ್ರಯದಲ್ಲಿ ಇತ್ತೀಚೆಗೆ ಶೇಷಾದ್ರಿಪುರದ ಸನ್ಮಾನ್ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಯುವ ಬರಹಗಾರ್ತಿ ಬಿ.ಕೆ. ಪೂರ್ಣಿಮಾ ಅವರಿಗೆ 'ಯುವ ಸಾಹಿತಿ' ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವ ಸನ್ಮಾನಿಸಲಾಸಿತು.

ವಿಜಯ ಕರ್ನಾಟಕ ಸೋಮವಾರ,5 ಏಪ್ರಿಲ್ 2021

ಹೆಡ್ಮಾಸ್ಟರ್ ಕೆಂಗರಾಮಯ್ಯ ಬಿಡುಗಡೆ



ನಗರದ ಗಾಂಧಿ ಭವನದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ 'ಹೆಡ್ ಮಾಸ್ಟರ್ ಕೆಂಗರಾಮಯ್ಯ' ಪುಸ್ತಕ ಲೋಕಾರ್ಪಣೆ ಮಾಡಿದರು.

:: **ವಿಕ ಸುದ್ದಿಲೋಕ** ಬೆಂಗಳೂರು

''ಜಾತ್ಯತೀತತೆಯ ಬಗ್ಗೆ ಬದ್ಧತೆ ಹಾಗೂ ದಲಿತರೊಂದಿಗೆ ಒಂದೇ ತಟ್ಟೆಯಲ್ಲಿ ಊಟ ಮಾಡಿವವರಿಗೆ ಮಾತ್ರ ಅವರ ಏಳಿಗೆ ಬಯಸಲು ಸಾಧ್ಯ'' ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದರು.

ಲೇಖಕ ಡಾ.ನಂದೀಶ್ವರ್ ರಚಿಸಿರುವ ಕೃತಿ


ಡಾ. ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಲೇಖಕ ಡಾ.ನಂದೀಶ್ವರ್ ರವರ 'ಹೆಡ್ಮಾಸ್ಟರ್ ಕೆಂಗರಾಮಯ್ಯ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ''ಹೆಡ್ಮಾಸ್ಟರ್ ಕೆಂಗರಾಮಯ್ಯ ದಲಿತ ಸಮುದಾಯದ ಕೆ.ಎಚ್. ರಂಗನಾಥ್ ಅವರನ್ನು ತಮ್ಮ ಮನೆಗೆ ಊಟಕ್ಕೆ ಕರೆದು ಒಂದೇ ತಟ್ಟೆಯಲ್ಲಿ ಊಟ ಮಾಡುವ ಮೂಲಕ ಮಾದರಿ ಯಾಗಿದ್ದಾರೆ. ಇಂತಹ ಬದ್ಧತೆಯಿದ್ದರೆ ಮಾತ್ರ ದಲಿತರೊಂದಿಗೆ ಒಂದಾಗಲು ಸಾಧ್ಯ'' ಎಂದು ತಿಳಿಸಿದರು.

''ದಲಿತ ಹಾಗೂ ಶೂದ್ರ ಸಮುದಾಯವನ್ನು ಅಕ್ಷರ ಸಂಸ್ಕೃತಿ ಯಿಂದ ದೂರವಿಟ್ಟಿದ್ದ ಪರಿಣಾಮ ಸಮುದಾಯ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿಯಲು ಕಾರಣವಾಯಿತು. ಇತ್ತೀಚಿನ ದಿನಗಳಲ್ಲಿ ಎಲ್ಲರಿಗೂ ಶಿಕ್ಷಣ ಸಿಗುತ್ತಿದ್ದರೂ ಶೇ.100ರಷ್ಟು ಸಾಕ್ಷರತೆ ಯನ್ನು ಹೊಂದಲು ಸಾಧ್ಯವಾಗಿಲ್ಲ'' ಎಂದರು.

ಮಾಜಿ ಅಡ್ವೊಕೇಟ್ ಜನರಲ್ ರವಿವರ್ಮಕುಮಾರ್ ಮಾತನಾಡಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಲೇಖಕ ಡಾ.ನಂದೀಶ್ವರ್, ನಿವೃತ್ತ ಪ್ರಾಧ್ಯಾಪಕ ಡಾ.ವಿವೇಕಾನಂದ, ಇಂದಿರಾ ಕೃಷ್ಣಪ್ಪ ಮತ್ತಿತರರಿದ್ದರು.

ಟ್ಯೂಶನ್ ದಂಧೆ

ಹೆಡ್ಮಾಸ್ಟರ್ ಕೆಂಗರಾಮಯ್ಯರವರು ತಮ್ಮ ಜೀವನದಲ್ಲಿ ಎಂದಿಗೂ ಟ್ಯೂಶನ್ ಮಾಡಿದವರಲ್ಲ, ಎಲ್ಲರಿಗೂ ಉಚಿತವಾಗಿ ಶಿಕ್ಷಣವನ್ನು ಹೇಳಿಕೊಟ್ಟವರು. ಆದರೆ, ಇತ್ತೀಚಿನ ದಿನಗಳಲ್ಲಿ ಕೆಲ ಶಿಕ್ಷಕರು, ಪ್ರಾಧ್ಯಾಪಕರು ಟ್ಯೂಶನ್ ಸಿಂಡಿಕೇಟ್‌ಗಳನ್ನು ಮಾಡಿಕೊಂಡು ಹಣದ ದಂಧೆ ನಡೆಸುತ್ತಿದ್ದಾರೆ. ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಂದ ಟ್ಯೂಶನ್ ಶುಲ್ಕವೆಂದೇ ಲಕ್ಷಾಂತರ ರೂ. ಪಡೆಯಲಾಗುತ್ತಿದೆ. ಇದು ಶಿಕ್ಷಕ ವೃತ್ತಿಗೆ ಮಾಡುವ ದ್ರೋಹ,'' ಎಂದು ಮಾಜಿ ಸ್ಪೀಕರ್ ರಮೇಶ್ ಕುಮಾರ್ ದೂರಿದರು.



ಬೆಂಗಳೂರಿನ ಗಾಂಧಿ ಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಹೆಡ್ ಮಾಸ್ಟರ್ ಕೆಂಗರಾಮಯ್ಯ ಪುಸ್ತಕವನ್ನು ಸಿದ್ದರಾಮಯ್ಯ ಅವರು ಬಿಡುಗಡೆ ಮಾಡಿದರು. ವಿಧಾನಸಭೆ ಮಾಜಿ ಸ್ಪೀಕರ್ ರಮೇಶ್ ಕುಮಾರ್, ಹಿರಿಯ ನ್ಯಾಯವಾದಿ ರವಿವರ್ಮ ಕುಮಾರ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ
05 ಏಪ್ರಿಲ್ 2021 ಸೋಮವಾರ

ಜನರು ಅಕ್ಷರ ಸಂಸ್ಕೃತಿಯಿಂದ ವಂಚಿತ

ಸಂ.ಕ ಸಮಾಚಾರ ಬೆಂಗಳೂರು

[illegible] ಜಾತಿ ವ್ಯವಸ್ಥೆಯ ತಾರತಮ್ಯದಿಂದ ಬಹುಸಂಖ್ಯೆಯಲ್ಲಿ ಜನರು ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದಾರೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು. ಡಾ. ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯ [illegible] ಏರ್ಪಡಿಸಿದ 'ಹೆಡ್‌ಮಾಸ್ಟರ್ ಕೆಂಗರಾಮಯ್ಯ' [illegible] ಮಾತನಾಡಿದ ಅವರು, ಸ್ವಾತಂತ್ರ್ಯ ಬಂದು [illegible] ಕಳೆದರೂ ಜಾತಿ ವ್ಯವಸ್ಥೆ, ಅಸಮಾನತೆ ಹೋಗಿಲ್ಲ. [illegible] ಸಮಾನ ಅವಕಾಶ ಸಿಕ್ಕಾಗ ಮಾತ್ರ ಸಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕೆಂಗರಾಮಯ್ಯ ಅವರು ಶಿಕ್ಷಣಕ್ಕೆ ತಮ್ಮನ್ನೇ ಅರ್ಪಿಸಿಕೊಂಡು ಇತರರಿಗೆ ಆದರ್ಶಪ್ರಾಯರಾದವರು. ಸಾಮಾನ್ಯ ಕುಟುಂಬದಲ್ಲಿ ಜನಿಸಿ ಶಿಕ್ಷಕನ ವೃತ್ತಿಯಲ್ಲಿ ಬದ್ಧತೆ ಮೆರೆದವರು ಎಂದು ಸರಳತೆ ಬಗ್ಗೆ ವಿವರಿಸಿದರು. ಕೆಂಗರಾಮಯ್ಯ ಅವರು ಜಾತ್ಯತೀತ ತತ್ವ, ಗಾಂಧಿವಾದವನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬದುಕಿದವರು. ತಮ್ಮ ಬದುಕಿನುದ್ದಕ್ಕೂ ಗಾಂಧಿ ಅನುಯಾಯಿಯಾಗಿ ಬದುಕುತ್ತಾ ವಿವೇಕಾನಂದರ ಮೌಲ್ಯಗಳನ್ನು ಅಳವಡಿಸಿಕೊಂಡರು. ತಮ್ಮ ಮಕ್ಕಳನ್ನೂ ಗೊಡ್ಡು ಸಂಪ್ರದಾಯ, ಮೌಢ್ಯಗಳಿಂದ ಬಿಡುಗಡೆ ಮಾಡಿ ವೈಜ್ಞಾನಿಕತೆ ಬೆಳೆಸಿದರು. ಸ್ವಾರ್ಥವಿಲ್ಲದ ಅವರ ಬದುಕು ಎಲ್ಲರಿಗೂ ಪ್ರೇರಕ ಎಂದರು.

ಶಾಸಕ ರಮೇಶ್ ಕುಮಾರ್, ಕೆಂಗರಾಮಯ್ಯ ಹಳ್ಳಿಗಾಡಿನಲ್ಲಿ ಹುಟ್ಟಿ ಜಾತ್ಯತೀತ ವ್ಯಕ್ತಿಯಾಗಿ ಜನಮನ್ನಣೆ ಗಳಿಸಿದರು. ಆದರೆ ಇಂದು ಜಾತಿಯ ಹೆಸರಿನಲ್ಲಿ ಬಡಿದಾಡಿಕೊಳ್ಳುತ್ತಿದ್ದಾರೆ. ಜೀವನದಲ್ಲಿ ಕಷ್ಟಗಳನ್ನು ಎದುರಿಸಿದರೂ ಆದರ್ಶದ ಜೀವನ ನಡೆಸಿದರು. ಸ್ವಾರ್ಥಿಗಳು ತುಂಬಿರುವ ಈ ನಾಡಿನಲ್ಲಿ ಇಂತಹ ವ್ಯಕ್ತಿಗಳು ಎಲೆಮರಿಯ ಕಾಯಿಗಳಂತೆ ಸರಿದುಹೋಗುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು. ಇಂದು ಸಮಾಜದಲ್ಲಿ ನಮ್ಮ ಪಂಚೇಂದ್ರಿಯ ಗಳು ನಾಶವಾಗಿವೆ. ಕೆಟ್ಟದರ ಬಗ್ಗೆ ಅರಿವಿಲ್ಲದಂತಾಗಿದೆ. ಇಂತಹ ಹೊತ್ತಿನಲ್ಲಿ ಕೆಂಗರಾಮಯ್ಯನಂತಹ ಮಹನೀಯರ ಬದುಕಿನ ಪುಸ್ತಕ ಪ್ರಸ್ತುತವಾಗಿದೆ ಎಂದರು. ಮಾಜಿ ಅಡ್ವೋಕೇಟ್ ಜನರಲ್ ಪ್ರೊ.ರವಿವರ್ಮ ಕುಮಾರ್, ಸಂಶೋಧಕ ಡಾ.ನಂದೀಶ್ವರ್, ವಿಶ್ರಾಂತ ಪ್ರಾಧ್ಯಾಪಕ ಡಾ.ವಿವೇಕಾನಂದ ಮತ್ತಿತರರು ಉಪಸ್ಥಿತರಿದ್ದರು.



ಡಾ.ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ ಏರ್ಪಡಿಸಿದ ಸಮಾರಂಭದಲ್ಲಿ ವಿಪಕ್ಷ ನಾಯಕ ಸಿದ್ಧರಾಮಯ್ಯ 'ಹೆಡ್‌ಮಾಸ್ಟರ್ ಕೆಂಗರಾಮಯ್ಯ' ಪುಸ್ತಕ ಬಿಡುಗಡೆಗೊಳಿಸಿದರು. ಶಾಸಕ ರಮೇಶ್ ಕುಮಾರ್, ಹಿರಿಯ ವಕೀಲ ಪ್ರೊ.ರವಿವರ್ಮಕುಮಾರ್, ಡಾ.ನಂದೀಶ್ವರ್, ಡಾ.ವಿವೇಕಾನಂದ ಮತ್ತಿತರರಿದ್ದರು.

ಇಂದಿನ ಆಮಂತ್ರಣ

ಉದಯವಾಣಿ ಬೆಂಗಳೂರು
ಸೋಮವಾರ, ಏಪ್ರಿಲ್ 5, 2021

■ ಬುದ್ಧ ಬಸವ ಗಾಂಧಿ,ಸಾಂಸ್ಕೃತಿಕ ಟ್ರಸ್ಟ್: ಅಂಕಣಕಾರ ಡಾ.ಕೆ.ಪಿ.ಪುತ್ತೂರಾಯರ 'ಜೀವನ ದರ್ಪಣ' ಕೃತಿ ಲೋಕಾರ್ಪಣೆ. ಮುಖ್ಯ ಅತಿಥಿಗಳು: ನಾಡೋಜ ಡಾ. ವೂಡೇ ಪಿ.ಕೃಷ್ಣ ಉದ್ಯಮಿ ರಂಗರಾಜು, ಲೇಖಕ,ಡಾ.ಎಸ್ ರಾಮಲಿಂಗೇಶ್ವರ.ಉಪಸ್ಥಿತಿ: ಲೇಖಕ ಪುತ್ತೂರಾಯ. ಸ್ಥಳ: ಸನ್ಮಾನ ಹೋಟೆಲ್, ಶೇಷಾದ್ರಿಪುರ.ಸಂಜೆ 4.30ಕ್ಕೆ.

ವಿಜಯ ಕರ್ನಾಟಕ
ಸೋಮವಾರ, 5 ಏಪ್ರಿಲ್ 2021 | 05
ಬೆಂಗಳೂರು

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್:ಡಾ. ಕೆ.ಪಿ.ಪುತ್ತೂರಾಯರ 'ಜೀವನ ದರ್ಪಣ' ಕೃತಿ ಲೋಕಾರ್ಪಣೆ



ಮತ್ತು 'ಯುವ ಸಾಹಿತ್ಯ ಪುರಸ್ಕಾರ' ಪ್ರದಾನ. ಕೃತಿ ಲೋಕಾರ್ಪಣೆ: ನಾಡೋಜ ಡಾ. ವೂಡೇ ಪಿ. ಕೃಷ್ಣ ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ. ಪ್ರಸ್ತಾವಿಕ ನುಡಿ: ಡಾ. ಎಸ್.ರಾಮಲಿಂಗೇಶ್ವರ(ಸಿಸಿರಾ), ಅಧ್ಯಕ್ಷರು, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್. ಸ್ಥಳ: ಸನ್ಮಾನ್ ಹೋಟೆಲ್, ಶೇಷಾದ್ರಿಪುರಂ. 4.30

05 ಏಪ್ರಿಲ್ 2021, ಸೋಮವಾರ

ಕುಶ್ಚಂಗಿ ಪ್ರಸನ್ನ ತಂಡದ

ಬೇವರ ಹನಿ


ಅತ್ಯಧಿಕ ಪ್ರಸಾರದ ಜಿಲ್ಲಾ ದಿನಪತ್ರಿಕೆ

ಜನ ಪರ-ಜೀವ ಪರ

BEVARA HANI Kannada Daily * TUMAKURU * RNI-KARKAN/2018/77427 * VOL: 03 * ISSUE: 169 * 05 APRIL 2021, MONDAY * 4 PAGES * RS 2.00, ✉ bevarahanipaper@gmail.com

☎ : 0816-2955213

✆ : 9480612021, 9481701813



ನ್ಯಾಯಾಲಯದ ಎಚ್ಚರಿಕೆಗೆ ಹೆಚ್.ಡಿ.ಕುಮಾರಸ್ವಾಮಿ ಡೋಂಟ್ ಕೇರ್



ಜಿಲ್ಲೆಯಲ್ಲಿ ಕೋವಿಡ್

ಭಾನುವಾರದ ಪ್ರಕರಣಗಳು

ದಿನದ ಸೋಂಕಿತರು: 136

ಒಟ್ಟು ಸಕ್ರಿಯ ಪ್ರಕರಣಗಳು: 1058

ಒಟ್ಟು ಸೋಂಕಿತರು: 26,197

ದಿನದ ಮರಣ: 00+00

ಒಟ್ಟು ಮರಣ: 267+195

ಐಸಿಯುನಲ್ಲಿ: 13

ಸಮ ಸಮಾಜ ನಿರ್ಮಾಣಕ್ಕೆ ಜಾತಿ ಪದ್ಧತಿ ಅಡ್ಡಿ: ಸಿದ್ದರಾಮಯ್ಯ


ರಾಜಧಾನಿಯಲ್ಲಿ "ಹೆಡ್‌ಮಾಸ್ಟರ್ ಕೆಂಗರಾಮಯ್ಯ" ಕೃತಿ ಬಿಡುಗಡೆ ಮಾಡಿದ ಮಾಜಿ ಸಿಎಂ



ಬೆಂಗಳೂರು: [illegible]

ಮುಂದೆ 4ಕ್ಕೆ

ಮೀಸಲಾತಿ ಪ್ರಮಾಣ ಹೆಚ್ಚಿಸಲು ಸರ್ಕಾರ ಬದ್ಧ: ಬೊಮ್ಮಾಯಿ



ಹಾವೇರಿ: [illegible]

ಮುಂದೆ 4ಕ್ಕೆ

ಚುರುಕುಗೊಂಡ ಕಸಾಪ ಚುನಾವಣಾ ಪ್ರಚಾರ: ತಂಡಗಳೊಂದಿಗೆ ಅಭ್ಯರ್ಥಿಗಳ ಮತ ಯಾಚನೆ

ತುಮಕೂರು: [illegible]

ಮುಂದೆ 4ಕ್ಕೆ



'ಕೊರೊನಾ ಮಾರ್ಗಸೂಚಿ ಕಡ್ಡಾಯವಾಗಿ ಪಾಲಿಸಿ'

[illegible]

ಹುಳಿಯಾರು ಪಪಂ ಪಕ್ಷೇತರ ಸದಸ್ಯ ಜೆಸಿಎಂ ತೆಕ್ಕೆಗೆ

ಆಡಳಿತ ಚುಕ್ಕಾಣಿ ಹಿಡಿಯಲು ಬಿಜೆಪಿ ಕಸರತ್ತು



ಹುಳಿಯಾರು: [illegible]

ಕೊರೊನಾ: 136 ಜನರಿಗೆ ಸೋಂಕು

ತುಮಕೂರು: ಜಿಲ್ಲೆಯಲ್ಲಿ ಭಾನುವಾರ ಹೊಸ ಕೊರೊನಾ ಸೋಂಕಿನ 136 ಪ್ರಕರಣ ವರದಿಯಾಗಿವೆ. ಇದರೊಂದಿಗೆ ಸೋಂಕಿತರ ಸಂಖ್ಯೆ 26,197ಕ್ಕೆ ಏರಿಕೆಯಾಗಿದೆ.


ಭಾನುವಾರ 50 ಮಂದಿ [illegible] 1058 ಜನರಲ್ಲಿ ಸೋಂಕು ಸಕ್ರಿಯವಾಗಿದೆ. 13 ಜನ ಐಸಿಯುನಲ್ಲಿದ್ದಾರೆ.


ಭಾನುವಾರ ವರದಿಯಾದ 136 ಸೋಂಕು ಪ್ರಕರಣಗಳಲ್ಲಿ ತುಮಕೂರು ತಾಲ್ಲೂಕಿನ 67 ಜನರಿದ್ದಾರೆ. [illegible] ತಾಲ್ಲೂಕಿನ 3, ಗುಬ್ಬಿ ತಾಲ್ಲೂಕಿನ 13, ಕೊರಟಗೆರೆ ತಾಲ್ಲೂಕಿನ [illegible], ಕುಣಿಗಲ್ ತಾಲ್ಲೂಕಿನಲ್ಲಿ 2, ಮಧುಗಿರಿ ತಾಲ್ಲೂಕಿನ 1, ಪಾವಗಡ ತಾಲ್ಲೂಕಿನಲ್ಲಿ 17, ಶಿರಾ ತಾಲ್ಲೂಕಿನಲ್ಲಿ 7, ತಿಪಟೂರು ತಾಲ್ಲೂಕಿನಲ್ಲಿ 13 ಹಾಗೂ ತುರುವೇಕೆರೆ ತಾಲ್ಲೂಕಿನ 10 ಜನರಲ್ಲಿ ಸೋಂಕು ವರದಿಯಾಗಿದೆ.

ನಿಗದಿತ ಅವಧಿಯಲ್ಲಿ ಮುಗಿಯುತ್ತಿಲ್ಲ ಕಾಮಗಾರಿ

ಸ್ಮಾರ್ಟ್ ಸಿಟಿ ಯೋಜನೆಗಳಲ್ಲಿ ಕಾಣದ ಕಾಳಜಿ







ತುಮಕೂರು: [illegible]

ಮುಂದೆ 4ಕ್ಕೆ

ರಾಜ್ಯದಲ್ಲಿ ಕೊರೋನಾ ಅಬ್ಬರ: 4,553 ಸೋಂಕು–15 ಮರಣ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಅಬ್ಬರ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಭಾನುವಾರ 4,553 ಹೊಸ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಸೋಂಕಿತರ ಸಂಖ್ಯೆ 10,15,155ಕ್ಕೆ ಏರಿಕೆಯಾಗಿದೆ.

ಕಳೆದ 24 ಗಂಟೆಯಲ್ಲಿ ರಾಜ್ಯದಲ್ಲಿ ಕೊರೊನಾ ಸೋಂಕಿನಿಂದ 15 ಸೋಂಕಿತರು ಮೃತಪಟ್ಟಿದ್ದು, ಸಾವಿನ ಸಂಖ್ಯೆ 12,625ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.


ಬೆಂಗಳೂರಿನಲ್ಲಿ 2,787 ಮಂದಿಗೆ ಸೋಂಕು ದೃಢಪಟ್ಟಿದ್ದು, ಇದರೊಂದಿಗೆ ಸೋಂಕಿತರ ಸಂಖ್ಯೆ 4,47,031ಕ್ಕೆ ಏರಿಕೆಯಾಗಿದೆ. [illegible]

ರಾಜ್ಯದಲ್ಲಿ ಇಂದು 2,060 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 9,63,419ಕ್ಕೆ ಏರಿಕೆಯಾಗಿದೆ. ಇನ್ನು 39,092 ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 331 ಮಂದಿ ಕೋವಿಡ್ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

[illegible]

ಮುಂದೆ 4ಕ್ಕೆ

ಈ ಸಂಜೆ
ಭಾನುವಾರ, 04-04-2021



ಗಾಂಧಿ ಭವನದಲ್ಲಿಂದು ಡಾ.ರಾಮ್ ಮನೋಹರ್ ಲೋಹಿಯಾ ಸಮತಾ ವಿದ್ಯಾಲಯ ವತಿಯಿಂದ ಹೆಡ್‌ಮಾಸ್ಟರ್ ಕೆಂಗರಾಮಯ್ಯ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ, ಮಾಜಿ ಸ್ಪೀಕರ್ ಹಾಗೂ ಶಾಸಕ ಕೆ.ಆರ್.ರಮೇಶ್ ಕುಮಾರ್, ನಾಡೋಜ ವೂಡೆ.ಪಿ.ಕೃಷ್ಣ, ಪ್ರೊ.ರವಿವರ್ಮ ಕುಮಾರ್ ಪಾಲ್ಗೊಂಡಿದ್ದರು.

ಸಂಜೆವಾಣಿ

8 ಬೆಂಗಳೂರು
ಭಾನುವಾರ 04 ಏಪ್ರಿಲ್ 2021



ವಿಡಿಯೋಗಾಗಿ ಸ್ಕ್ಯಾನ್ ಮಾಡಿ

ನಗರದ ಗಾಂಧಿ ಭವನದಲ್ಲಿಂದು ನಡೆದ ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು "ಹೆಡ್ಮಾಸ್ಟರ್ ಕೆಂಗರಾಮಯ್ಯ" ಕೃತಿಯನ್ನು ಲೋಕಾರ್ಪಣೆ ಮಾಡಿದರು. ಶಾಸಕ ಕೆ.ಆರ್.ರಮೇಶ್‌ಕುಮಾರ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ॥ ವೂಡೇ ಪಿ.ಕೃಷ್ಣ ಮತ್ತಿತರರು ಇದ್ದಾರೆ.

ಸಂಯುಕ್ತ ಕರ್ನಾಟಕ
26 ಮಾರ್ಚ್ 2021 ಶುಕ್ರವಾರ

ಮಕ್ಕಳಿಗೆ ಆತ್ಮಸ್ಥೈರ್ಯ ತುಂಬುವ ಶಿಕ್ಷಣ ಅಗತ್ಯ


ಸಂ.ಕ.ಸಮಾಚಾರ ಬೆಂಗಳೂರು

ಇಂದಿನ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವಂತ ಶಿಕ್ಷಣ ನೀಡಬೇಕಾಗಿದೆ ಎಂದು ಶಿಕ್ಷಣ ತಜ್ಞೆ ಡಾ.ಗೀತಾ ರಾಮಾನುಜ ಹೇಳಿದರು.

ಶೇಷಾದ್ರಿಪುರ ಕಾಲೇಜಿನಲ್ಲಿ ಬುದ್ಧ-ಬಸವ ಗಾಂಧಿ ಟ್ರಸ್ಟ್ ಹಮ್ಮಿಕೊಂಡಿದ್ದ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಯುವ ಶಕ್ತಿದೇಶದ ಸಂಪತ್ತು ಎಂದು ಹೇಳುತ್ತಾರೆ. ಆದರೆ ಇಂದಿನ ಯುವಶಕ್ತಿ ಸಣ್ಣ ವಿಚಾರಕ್ಕೂ ಕೂಡ ಆತ್ಮಹತ್ಯೆಯ ಹಾದಿಹಿಡಿಯುತ್ತಿದ್ದಾರೆ. ಇದಕ್ಕೆ ಇಂದಿನ ಶಿಕ್ಷಣ ವ್ಯವಸ್ಥೆ ಕೂಡ ಕಾರಣವಾಗಿ ಎಂದು ಹೇಳಿದರು.

ಪ್ರತಿಯೊಂದು ಹೆಣ್ಣಿನಲ್ಲಿ ಸಾಧನೆಯ ಮಾಡಬಲ್ಲ ಛಲವಿದೆ. ಆದರೆ ಅವಕಾಶಗಳು ದೊರೆಯುತ್ತಿಲ್ಲ. ಕಿತ್ತೂರು ರಾಣಿಚನ್ನಮ್ಮ, ಅಕ್ಕಮಹಾದೇವಿ ಸೇರಿದಂತೆ ಹಲವರು ತಮ್ಮದೇ ಆದ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಅವುಗಳನ್ನು ಸ್ತ್ರೀ ಸಂಕುಲ ಮಾದರಿಯಾಗಿ ತೆಗೆದುಕೊಂಡು ಮುಂದಿನ ಹೆಜ್ಜೆಯಿರಿಸಬೇಕೆಂದರು.

ಲೇಖಕಿ ಡಾ.ವಸುಂಧರಾ ಭೂಪತಿ ಮಾತನಾಡಿ, ಮಹಿಳೆಯರಿಗೆ ಗೌರವ ಕೊಡುವುದನ್ನು ನಾವು ಗಂಡು ಮಕ್ಕಳಿಗೆ ಕಲಿಸಬೇಕಾಗಿದೆ. ಗಂಡು ಮಕ್ಕಳು ಮನೆಗೆ ತಡವಾಗಿ ಬಂದರೆ ನಾವು ಅವರನ್ನು ಪ್ರಶ್ನಿಸುವುದಿಲ್ಲ. ಆದರೆ ಹೆಣ್ಣು ಮಕ್ಕಳು ಕಾಲೇಜಿನಿಂದ ಅಥವಾ ಶಾಲೆಯಿಂದ ಮನೆಗೆ ತಡವಾಗಿ ಬಂದರೆ ಪ್ರಶ್ನಿಸುತ್ತೇವೆ. ಹೆಣ್ಣು ಮಕ್ಕಳನ್ನು ಪ್ರಶ್ನಿಸಿದ ರೀತಿಯಲ್ಲಿ ಗಂಡು ಮಕ್ಕಳನ್ನು ಪ್ರಶ್ನೆ ಮಾಡುವುದನ್ನು ಪೋಷಕರು ರೂಢಿಸಿಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದರು.



ಶೇಷಾದ್ರಿಪುರ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರಿಗೆ ಡಾ.ಲೋಹಿಯಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹೆಣ್ಣು ಮಕ್ಕಳನ್ನು ಕೇವಲ ತರಗತಿಯಲ್ಲಿ ಅಂಕಗಳಿಸುವ ವಿದ್ಯಾರ್ಥಿಯನ್ನಾಗಿ ಬೆಳೆಸಿದರೆ ಸಾಲದು. ಬದಲಾಗಿ ಭವಿಷ್ಯತ್ತಿನಲ್ಲಿ ಎದುರಾಗುವ ಸವಾಲುಗಳನ್ನು ಧೈರ್ಯದಿಂದ ಮೆಟ್ಟಿ ನಿಲ್ಲುವ ಹೆಣ್ಣಾಗಿ ರೂಪಿಸಬೇಕಾದ ಅಗತ್ಯವಿದೆ ಎಂದ ಅವರು, ಕರ್ನಾಟಕ, ಮಹಾರಾಷ್ಟ್ರ ಸೇರಿದಂತೆ ಹಲವು ಕಡೆಗಳಲ್ಲಿ ಮರ್ಯಾದಾ ಹತ್ಯೆ ಪ್ರಕರಣಗಳು ನಡೆಯುತ್ತಿರುವುದು ಆತಂಕ ಪಡುವ ವಿಚಾರವಾಗಿದೆ ಎಂದರು.

ನಾಡೋಜ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಸ್ತ್ರೀ ಸಂಕುಲ ಸಮಾನತೆಗಾಗಿ ಹೋರಾಟ ಮಾಡುವುದಕ್ಕಿಂತಲೂ ಸಮರ್ಥ್ಯವನ್ನು ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸಬೇಕೆಂದು ಹೇಳಿದರು. ಇದೇ ವೇಳೆ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರಿಗೆ ಡಾ.ಲೋಹಿಯಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಲೇಖಕಿ ಗುಣಸಾಗರಿ ನಾಗರಾಜ್, ಶೇಷಾದ್ರಿಪುರ ಕಾಲೇಜಿನ ಅಧ್ಯಾಪಕ ಡಾ.ಸಿಸಿರಾ, ಎಂ.ತಿಮ್ಮಯ್ಯ ಸೇರಿದಂತೆ ಮತ್ತಿತರರಿದ್ದರು.

ಕನ್ನಡಪ್ರಭ ಶುಕ್ರವಾರ 26.3.2021

ಪುಸ್ತಕ ಬಿಡುಗಡೆ ಡಾ। ವಸುಂಧರಾ ಭೂಪತಿ ಅಭಿಮತ ಗುಣಸಾಗರಿ ನಾಗರಾಜ್ ಅವರ 3 ಕೃತಿ ಬಿಡುಗಡೆ

ಮಹಿಳಾ ದಿನ ವರ್ಷ ಪೂರ್ತಿ ಆಚರಿಸಿ

• **ಕನ್ನಡ ಪ್ರಭ ವಾರ್ತೆ** ಬೆಂಗಳೂರು


ಜಗತ್ತಿನ ಎಲ್ಲ ಸಂಪನ್ಮೂಲದಲ್ಲಿಯೂ ಮಹಿಳೆಯರಿಗೆ ಪಾಲಿದೆ. ಆದರೆ ಸಂಪನ್ಮೂಲ ಮಹಿಳೆಯರಿಗೆ ಸಿಗುತ್ತಿಲ್ಲ. ಜಗತ್ತಿನ ಸಂಪನ್ಮೂಲದ ಶೇ.1ರಷ್ಟು ಕೂಡ ಮಹಿಳೆಯರ ಹೆಸರಲ್ಲಿ ಇಲ್ಲ ಎಂದು ಲೇಖಕಿ ಡಾ। ವಸುಂಧರಾ ಭೂಪತಿ ಹೇಳಿದ್ದಾರೆ.

ಶೇಷಾದ್ರಿಪುರಂ ಕಾಲೇಜಿನಲ್ಲಿ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ರಾಜ್ಯ ಮಟ್ಟದ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿ ಗುಣಸಾಗರಿ ನಾಗರಾಜ್ ಅವರ ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮಹಿಳೆಯರನ್ನು ಮಾರುಕಟ್ಟೆಯಲ್ಲಿ ಸಿಗುವ, ಬಳಸಿ ಬೀಸಾಡುವ ವಸ್ತು ಎಂಬುವ ರೀತಿಯಲ್ಲಿ ನೋಡಲಾಗುತ್ತಿದೆ. ಮಹಿಳಾ ದಿನಾಚರಣೆ ಎಂಬುದು ಒಂದು ದಿನದ ಆಚರಣೆಯಾಗದೇ ವರ್ಷದ ಪ್ರತಿ ದಿನವೂ ಮಹಿಳೆಯ ಘನತೆಯನ್ನು ಎತ್ತಿ ಹಿಡಿಯುವ ಕೆಲಸವಾಗಬೇಕಿದೆ ಎಂದು ವಸುಂಧರಾ ಭೂಪತಿ ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ನಾಡೋಜ ಡಾ। ವೂಡೇ ಪಿ.ಕೃಷ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಇಂದಿರಾ ಕೃಷ್ಣಪ್ಪ ಹಾಗೂ ಸಹನ ಶೇಖರ್ ಅವರಿಗೆ ಲೋಹಿಯಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಗೀತ ಕಲಾವಿದೆ ಪಿ.ಎಸ್.ವೈಷ್ಣವಿ, ನೃತ್ಯ ಕಲಾವಿದೆ ಭವ್ಯ ಆರ್.ಎಸ್, ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚಿನ ಅಂಕ ಪಡೆದ ಗೌರಿ ವೈಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಮ್ಮೇಳನಾಧ್ಯಕ್ಷೆ ಎಸ್.ಗುಣಸಾಗರಿ ನಾಗರಾಜ್, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ ಮುಂತಾದವರು ಮಾತನಾಡಿದರು.



ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ರಾಜ್ಯ ಮಟ್ಟದ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ ಇಂದಿರಾ ಕೃಷ್ಣಪ್ಪ ಹಾಗೂ ಸಹನಾ ಶೇಖರ್ ಅವರಿಗೆ ಲೋಹಿಯಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

Thu, 25 March 2021



ರಂಗ ಸಮಾಜ ಸಾಂಸ್ಕೃತಿಕ ಸಂಸ್ಥೆ ಮತ್ತು ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಸಹಯೋಗದೊಂದಿಗೆ ಕೆ.ಆರ್.ಪುರಂ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಎಸ್.ಎಸ್.ರಾವ್ ವಿರಚಿತ ರಣ ದುಂದುಭಿ ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ [illegible], ಪ್ರಾಂಶುಪಾಲ ಡಾ.[illegible], ಕನ್ನಡ ಉಪನ್ಯಾಸಕ ಡಾ.[illegible], ರಂಗಭೂಮಿ ಕಲಾವಿದ [illegible], ಡಾ.[illegible], ಡಾ.[illegible] ಪಾಲ್ಗೊಂಡಿದ್ದರು.

ಸಂಜೆವಾಣಿ
ಬೆಂಗಳೂರು
ಬುಧವಾರ 24 ಮಾರ್ಚ್ 2021

ನಾಳೆ ಮಹಿಳಾ ಸಾಹಿತ್ಯ ಸಮ್ಮೇಳನ

ಬೆಂಗಳೂರು,ಮಾ.24–ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ (ರಿ) ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ ಮಹಿಳಾ ಸಾಹಿತ್ಯ ಸಮ್ಮೇಳನ ಹಾಗೂ ವಿಚಾರ ಗೋಷ್ಠಿ ಸಮಾರಂಭ ಆಯೋಜಿಸಲಾಗಿದೆ.

ನಾಳೆ 2.15 ಗಂಟೆಗೆ ನಗರದ ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಂಭಾಗಣದಲ್ಲಿ ಕಾರ್ಯಕ್ರಮ ನಡೆಯಲ್ಲಿದೆ. ಖ್ಯಾತ ಶಿಕ್ಷಣ ತಜ್ಞರು ಗೀತಾ ರಾಮಾನುಜಂ ರವರು ಕಾರ್ಯಕ್ರಮ ಉದ್ಘಾಟಿಸಲ್ಲಿದ್ದಾರೆ. ನಿಕಟಪೂರ್ವ ಅಧ್ಯಕ್ಷೆ ವಸುಂಧರ ಭೂಪತಿ ರವರು 3 ಕೃತಿಗಳ ಲೋಕಾರ್ಪಣೆಗೊಳ್ಳಿಸಲ್ಲಿದ್ದಾರೆ. ಹಿರಿಯ ಸಾಹಿತಿ ಎಸ್.ಗುಣಸಾಗರಿ ನಾಗರಾಜ್ ರವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಎಂ.ತಿಮ್ಮಯ್ಯ ರವರು ಆಗಮಿಸಲಿದ್ದಾರೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ ಅವರು ಪ್ರಶಸ್ತಿ ಪ್ರದಾನ ಮಾಡಲ್ಲಿದ್ದಾರೆ. ಕಾರ್ಯಕ್ರಮಕ್ಕೆ ಭಾಗವಹಿಸಲಿದ್ದಾರೆ.

ಪ್ರಜಾವಾಣಿ ಮಂಗಳವಾರ ● ಮಾರ್ಚ್ 23, 2021

ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷರಾಗಿ ಜೇರಿಗೆ ಲೋಕೇಶ್ ಪುನರಾಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧಿವಾದಿ ಜೇರಿಗೆ ಲೋಕೇಶ್ ಅವರು ಬೆಂಗಳೂರು ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ.ವೆಂಕಟೇಶ ಗೌರವ ಉಪಾಧ್ಯಕ್ಷ, ಕವಿ ಸತ್ಯಮಂಗಲ



ಮಹಾದೇವ ಗೌರವ ಕಾರ್ಯದರ್ಶಿ ಹಾಗೂ ಎಸ್. ರಾಮಲಿಂಗೇಶ್ವರ ಗೌರವ ಖಜಾಂಚಿಯಾಗಿ ಅವಿರೋಧ ಆಯ್ಕೆಯಾಗಿದ್ದಾರೆ.

ವೂಡೇ ಪಿ.ಕೃಷ್ಣ ಮತ್ತು ಚಂದ್ರಿಕಾ ಪುರಾಣಿಕ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಶನಿವಾರ 6 ಮಾರ್ಚ್ 2021 6 MARCH 2021
VIJAYAVANI BENGALURU


ವಿಜಯವಾಣಿ ಚಿತ್ರ



ಕೆಂಗೇರಿ ಉಪನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಜೈನ ಧರ್ಮದಲ್ಲಿ ಲೌಕಿಕ ಮತ್ತು ಅಲೌಕಿಕ ಬದುಕಿನ ಪರಿಕಲ್ಪನೆ' ವಿಚಾರಸಂಕಿರಣಕ್ಕೆ ಹಿರಿಯ ವಿದ್ವಾಂಸ ಡಾ. ಹಂ.ಪ. ನಾಗರಾಜಯ್ಯ ಚಾಲನೆ ನೀಡಿದರು. ಸಾಹಿತಿ ಡಾ. ಕಮಲಾ ಹಂಪನಾ, ಸಂಯೋಜನಾಧಿಕಾರಿ ಡಾ. ತಾರಿಹಳ್ಳಿ ಹನುಮಂತಪ್ಪ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ

ಶನಿವಾರ ● ಮಾರ್ಚ್ 6, 2021



ಸಾಹಿತಿ ಹಂಪ ನಾಗರಾಜಯ್ಯ ಹಾಗೂ ಕಮಲಾ ಹಂಪನಾ ಅವರನ್ನು ಸನ್ಮಾನಿಸಲಾಯಿತು. ವೂಡೇ ಪಿ.ಕೃಷ್ಣ, ಸ.ಚಿ.ರಮೇಶ್, ಶೇಷಾದ್ರಿಪುರ ಪದವಿ ಕಾಲೇಜು ಪ್ರಾಂಶುಪಾಲ್ಲ ಪ್ರೊ.ಜಯರಾಮ್, ಡಾ.ಮಂಜುನಾಥ್ ಇದ್ದಾರೆ.

‘ಗಾಂಧಿ ತತ್ವಗಳಿಗೆ ಜೈನ ಧರ್ಮ ಪ್ರೇರಕ’

ಪ್ರಜಾವಾಣಿ ವಾರ್ತೆ

ಕೆಂಗೇರಿ:‘ಮಹಾತ್ಮ ಗಾಂಧೀಜಿ ಅವರು ತಮ್ಮ ಜೀವನದುದ್ದಕ್ಕೂ ಪ್ರತಿಪಾದಿಸಿದ ಸತ್ಯ ಹಾಗೂ ಅಹಿಂಸೆಗೆ ಜೈನ ಧರ್ಮದ ತತ್ವ ಮತ್ತು ಆದರ್ಶಗಳೇ ಪ್ರೇರಕ ಶಕ್ತಿಯಾಗಿದ್ದವು’ ಎಂದು ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ತಿಳಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಕೆಂಗೇರಿ ಉಪನಗರದ ಶೇಷಾದ್ರಿಪುರ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ‘ಜೈನ ಧರ್ಮದಲ್ಲಿ ಲೌಕಿಕ ಮತ್ತು ಬದುಕಿನ ಪರಿಕಲ್ಪನೆ’ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಜೈನ ಧರ್ಮದ ಮೂಲ ತತ್ವವಾದ ಅಹಿಂಸಾ ಭಾವದ ಅಚರಣೆಯಿಂದಲೇ ಗಾಂಧೀಜಿ ರಾಜಕೀಯ ಸಂತನಾಗಲು ಸಾಧ್ಯವಾಯಿತು’ ಎಂದರು.

ಸಾಹಿತಿ ಹಂಪ ನಾಗರಾಜಯ್ಯ,‘ರನ್ನ, ಪೊನ್ನ, ಜನ್ನ ಸೇರಿದಂತೆ ಹಲವಾರು ಜೈನ ಕವಿಗಳು ಕನ್ನಡ ಸಾಹಿತ್ಯ ಪ್ರಾಕಾರಕ್ಕೆ ಅಮೂಲಾಗ್ರ ಕೊಡುಗೆ ನೀಡಿದ್ದಾರೆ’ ಎಂದರು.

‘ಎಲ್ಲ ಜೀವಿಗೂ ಸ್ವತಂತ್ರವಾಗಿ, ನೆಮ್ಮದಿಯಿಂದ ಜೀವಿಸುವ ಅವಕಾಶ ನೀಡುವ ಜೈನ ಧರ್ಮ ನಿಜವಾದ ಅರ್ಥದಲ್ಲಿ ಪರಿಸರ ಸ್ನೇಹಿ ಧರ್ಮ’ ಎಂದರು.

‘ಎಲ್ಲ ಧರ್ಮಗಳಲ್ಲೂ ಒಳ್ಳೆಯ ಅಂಶಗಳಿರುತ್ತದೆ. ಧಾರ್ಮಿಕ ಜಿಜ್ಞಾಸೆಗಳನ್ನು ಬದಿಗಿಟ್ಟು, ಧರ್ಮದ ಸಾರವನ್ನು ಮಾತ್ರ ಗ್ರಹಿಸಬೇಕು ಎಂದು ಹೇಳುವ ಮೂಲಕ ಗಾಂಧಿ ಅವರಲ್ಲಿ ಹಿಂದೂ ಧರ್ಮದ ಬಗ್ಗೆ ಮೂಡಿದ್ದ ಗೊಂದಲಕ್ಕೆ ತೆರೆ ಎಳೆದಿದ್ದು ಜೈನ ಮುನಿಗಳು’ ಎಂದು ಸಾಹಿತಿ ಕಮಲಾ ಹಂಪನಾ ಹೇಳಿದರು.

ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಕುಲಪತಿ ಸ.ಚಿ.ರಮೇಶ್,‘ಜೈನ ಧರ್ಮ ಸ್ವಚ್ಛತೆ, ಶಾಂತಿ, ಅಹಿಂಸೆಯಿಂದ ಕೂಡಿದ ಜೀವನ ಕ್ರಮ ಪ್ರತಿಪಾದಿಸುತ್ತದೆ. ಜೈನ ತತ್ವಾದರ್ಶಗಳನ್ನು ಅರಿತು ಪಾಲಿಸಿದರೆ, ಗಾಂಧಿ ಮತ್ತು ಲೋಹಿಯಾ ಕಂಡ ಸಮ ಸಮಾಜ ನಿರ್ಮಾಣ ಸಾಧ್ಯ’ ಎಂದರು.

ಪ್ರಜಾವಾಣಿ
ಶನಿವಾರ ● ಮಾರ್ಚ್ 6, 2021

ಎನ್‌ಎಸ್‌ಎಸ್ ಪ್ರಾಂತೀಯ ಕೇಂದ್ರ ನಿರ್ದೇಶಕ ಖಾದ್ರಿ ನರಸಿಂಹಯ್ಯ ಅಭಿಮತ

‘ಯುವಜನ ಸಂಪನ್ಮೂಲ ಬಳಕೆಯಿಂದ ಅಭಿವೃದ್ಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 55ರಷ್ಟು ಯುವಜನರಿದ್ದಾರೆ. ಈ ಯುವಸಂಪನ್ಮೂಲವನ್ನು ಸಮರ್ಥವಾಗಿ ಬಳಸಿಕೊಂಡರೆ ದೇಶ ಇನ್ನೂ ಹೆಚ್ಚು ಅಭಿವೃದ್ಧಿ ಸಾಧಿಸುವುದರಲ್ಲಿ ಅನುಮಾನವಿಲ್ಲ’ ಎಂದು ಎನ್‌ಎಸ್‌ಎಸ್ ಪ್ರಾಂತೀಯ ಕೇಂದ್ರ ನಿರ್ದೇಶಕ ಖಾದ್ರಿ ನರಸಿಂಹಯ್ಯ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಶುಕ್ರವಾರ ನಡೆದ ಸ್ಕೂಲ್ ಬೆಲ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಎನ್‌ಎಸ್‌ಎಸ್ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಏಳಿಗೆ ಮತ್ತು ಶ್ರೇಯೋಭಿವೃದ್ಧಿಗೆ ಬಳಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.



ಹೊಸದಾಗಿ ನೇಮಕಗೊಂಡ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಅವರನ್ನು ಸನ್ಮಾನಿಸಲಾಯಿತು. ಪ್ರೇಮ್ ಹಾಗೂ ವಿಶ್ವವಿದ್ಯಾಲಯದ ಸಂಯೋಜನಾಧಿಕಾರಿ ಡಾ. ಎನ್ ಸತೀಶ್ ಗೌಡ ಉಪಸ್ಥಿತರಿದ್ದರು.

ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಎನ್. ಸತೀಶ್ ಗೌಡ, ‘ಕೋವಿಡ್ ಸಂದರ್ಭದಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಅದ್ವಿತೀಯ ಕೆಲಸ ಮಾಡಿದ್ದಾರೆ. ಸ್ಕೂಲ್ ಬೆಲ್ ಕಾರ್ಯಕ್ರಮದ ಮೂಲಕ ಎಷ್ಟೋ ಬಡ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳಿಗೆ ನೆರವಾಗಲಿದ್ದಾರೆ’ ಎಂದರು.

ಬೆಂಗಳೂರು ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯ ಪ್ರೇಮ್, ‘ಶಾಲೆ ಬಿಟ್ಟಿರುವ ವಿದ್ಯಾರ್ಥಿಗಳು ಪುನಃ ಶಾಲೆಗೆ ಹಾಜರಾಗುವಂತೆ ಮಾಡಲಾಗುವುದಲ್ಲದೆ, ಬಾಲ್ಯವಿವಾಹ ತಡೆಗಟ್ಟುವ ಕೆಲಸವನ್ನು ಸ್ಕೂಲ್ ಬೆಲ್ ಕಾರ್ಯಕ್ರಮದ ಮೂಲಕ ಮಾಡಲಾಗುವುದು’ ಎಂದರು.

ನಮ್ಮ ರಾಜ್ಯ ಪ್ರಗತಿ ಫೆಬ್ರವರಿ 25. 2021

ಜನರ ಭಾವನೆಗಳಿಗೆ ಮಿಡಿಯುವಂತಹ ಸಾಹಿತ್ಯ ರಚನೆಯಾಗಬೇಕು

• ಜಾಣಗೆರೆ ಅವರ "ಜಲಯುದ್ಧ" ಕಾದಂಬರಿ ಲೋಕಾರ್ಪಣೆ ಸಮಾರಂಭದಲ್ಲಿ ನಾಡೋಜ ಡಾ. ಹಂಪನಾ



ಕೃತಿ ಲೋಕಾರ್ಪಣೆ: ಎಡದಿಂದ ಡಾ. ವೂಡೇ ಪಿ.ಕೃಷ್ಣ, ಡಾ. ಬಂಜಗೆರೆ ಜಯಪ್ರಕಾಶ್, ಜಾಣಗೆರೆ ವೆಂಕಟರಾಮಯ್ಯ, ನಾಡೋಜ ಡಾ. ಹಂಪನಾ, ಡಾ. ಬಸವರಾಜ ಕಲ್ಗುಡಿ, ಡಾ. ಬೈರಮಂಗಲ ರಾಮೇಗೌಡ ಮತ್ತು ಪ್ರೊ. ಎಲ್.ಎನ್.ಮುಕುಂದರಾಜ್ ಇದ್ದಾರೆ.

"40 ವರ್ಷಗಳಿಂದ ಪರಿಚಿತರಾಗಿರುವ ಜಾಣಗೆರೆ ವೆಂಕಟರಾಮಯ್ಯ ಹೋರಾಟಗಾರರಾಗಿ, ಸಾಹಿತಿಯಾಗಿ ಮತ್ತು ಪತ್ರಕರ್ತರಾಗಿ ಕನ್ನಡಿಗರನ್ನು ಜಾಗೃತಗೊಳಿಸುತ್ತಲೇ ಬಂದಿದ್ದಾರೆ. ನಾಡಿನಲ್ಲಿ ನದಿ ನೀರಿನ ಹಂಚಿಕೆಗಾಗಿ ಯುದ್ಧಗಳೇ ನಡೆದಿವೆ. ಈ ಹಿನ್ನೆಲೆಯಲ್ಲಿ ಅವರು ರಚಿಸಿರುವ ಜಲಯುದ್ಧ ಕಾದಂಬರಿ ಸರ್ವಕಾಲಕ್ಕೂ ಪ್ರಸ್ತುತ. ನೃಪತುಂಗನ ಆಸ್ಥಾನ ಕವಿ ಶ್ರೀ ವಿಜಯ ರಚಿಸಿರುವ ಕವಿರಾಜಮಾರ್ಗ ಗ್ರಂಥದಲ್ಲೂ ಕಾವೇರಿಯಿಂದ ಗೋದಾವರಿವರೆಗಿನ ನಾಡು ಕನ್ನಡ ನಾಡು ಎಂಬ ಸಾಲಿದ್ದು ಎರಡು ನದಿಗಳನ್ನು ಗುರುತಿಸಲಾಗಿದೆ. ಇಮ್ಮಡಿ ಪುಲಿಕೇಶಿಯ ಆಸ್ಥಾನ ಕವಿ ರವಿಕೀರ್ತಿ ವರದಾ ನದಿ ಕುರಿತು ಬರೆದಿದ್ದಾನೆ. ಜಲಯುದ್ಧ ಕಾದಂಬರಿಯೂ ನೀರಿಗಾಗಿ ಎರಡು ಹಳ್ಳಿಗಳು ಹೋರಾಡುವ ಚಿತ್ರಣ ಹೊಂದಿದೆ. ರಾಜನೊಬ್ಬನ ಅಧಃಪತನಕ್ಕೆ ಪುರೋಹಿತ ಶಾಹಿಗಳೇ ಕಾರಣ ಎಂಬುದನ್ನು ಸೂಕ್ಷ್ಮವಾಗಿ ಬರೆದಿದ್ದಾರೆ. ದೀರ್ಘ ಅಧ್ಯಯನ ಮಾಡಿ ಏಕಕಾಲದಲ್ಲಿಯೇ ಇತಿಹಾಸ, ವರ್ತಮಾನ ಮತ್ತು ಭವಿಷ್ಯಗಳ ಬಗ್ಗೆ ಬರೆದಿದ್ದಾರೆ. ಜನರ ಭಾವನೆಗಳಿಗೆ ಮಿಡಿಯುವಂತಹ ಸಾಹಿತ್ಯ ಸೃಷ್ಟಿಯಾಗಬೇಕು. ಅಂತಹ ಕೆಲಸವನ್ನು ಜಾಣಗೆರೆ ವೆಂಕಟರಾಮಯ್ಯ ಮಾಡಿದ್ದಾರೆ" ಎಂದು ಹಿರಿಯ ವಿದ್ವಾಂಸ, ನಾಡೋಜ ಡಾ. ಹಂಪಾ.ನಾಗರಾಜಯ್ಯ ತಿಳಿಸಿದರು.

20.12.2021ರಂದು ಗಾಂಧಿಭವನದಲ್ಲಿ ಪಾಲಮಂಗಲದ ಸಾಹಿತ್ಯ ಸಂಗಮ ಟ್ರಸ್ಟ್ ಮತ್ತು ಜಾಣಗೆರೆ ಪತ್ರಿಕೆ ಪ್ರಕಾಶನಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಾಡಾಗಿದ್ದ ಸಮಾರಂಭದಲ್ಲಿ ಹಿರಿಯ ಪತ್ರಕರ್ತ, ಸಾಹಿತಿ, ಕನ್ನಡಪರ ಹೋರಾಟದ ಮುಂದಾಳು ನಾಯಕ ಜಾಣಗೆರೆ ವೆಂಕಟರಾಮಯ್ಯ ಅವರ "ಜಲಯುದ್ಧ" ಬೃಹತ್ ಕಾದಂಬರಿಯನ್ನು ಲೋಕಾರ್ಪಣೆಗೊಳಿಸಿ ಡಾ. ಹಂಪನಾ ಮಾತನಾಡಿದರು. ಮುಖ್ಯ ಅತಿಥಿಯಾಗಿದ್ದ ಹಿರಿಯ ಕವಿ, ವಿಮರ್ಶಕ ಡಾ. ಬಂಜಗೆರೆ ಜಯಪ್ರಕಾಶ್ ಮಾತನಾಡಿ, "ಕಾವೇರಿ, ಕೃಷ್ಣ ಮೊದಲಾದ ನದಿಗಳ ನೀರು ಕರ್ನಾಟಕಕ್ಕೆ ಮರೀಚಿಕೆಯಾಗಿರುವ ಬಗ್ಗೆ ಜಾಣಗೆರೆ ವೆಂಕಟರಾಮಯ್ಯ ಅವರಿಗೆ ಬೇಸರವಾಗಿದೆ. ಆಳುವವರು ಜನರ ಶ್ರೇಯಸ್ಸಿಗಾಗಿ ಶ್ರಮಿಸಿದರೆ ಜನ ಸಂತಸ ಪಡುತ್ತಾರೆ. ಜನಹಿತ ಮರೆತು ಸ್ವಾರ್ಥಿಗಳಾಗಿದ್ದರೆ ಜನರ ಶಾಪಕ್ಕೆ ಗುರಿಯಾಗುತ್ತಾರೆ. ಈ ಎಲ್ಲಾ ಅಂಶಗಳನ್ನು ಚುರುಕಾದ ಬರವಣಿಗೆಯ ಮೂಲಕ ಜಾಣಗೆರೆ ದಾಖಲಿಸಿದ್ದಾರೆ. ಅವರ ಲೋಕಾನುಭವ ವಿಸ್ತಾರವಾಗಿದ್ದು, ಇನ್ನೂ ಹಲವು ಕಾದಂಬರಿಗಳನ್ನು ರಚಿಸುವ ಸರಕು ಹೊಂದಿದ್ದಾರೆ. ಜಲಯುದ್ಧ ಕಾದಂಬರಿ ಸಜ್ಜನರ ಪರವಾಗಿದ್ದು ದುರ್ಜನರಿಗೆ ಎಚ್ಚರಿಕೆ ನೀಡುತ್ತದೆ" ಎಂದು ಹೇಳಿದರು.

ಕತೆಗಾರ, ವಿಮರ್ಶಕ ಡಾ. ಬೈರಮಂಗಲ ರಾಮೇಗೌಡ ಮಾತನಾಡಿ, "ಆರು ರಾಜ್ಯಗಳ ಜೊತೆಗೆ ಗಡಿಗಳನ್ನು ಹಂಚಿಕೊಂಡಿರುವ ಕರ್ನಾಟಕಕ್ಕೆ ಈ ಭೌಗೋಳಿಕ ಲಕ್ಷಣಗಳೇ ಜಲ, ಗಡಿ ಮತ್ತು ಭಾಷಾ ಸಮಸ್ಯೆಗಳಿಗೆ ಕಾರಣವಾಗಿವೆ. ಕನ್ನಡ ಚಳವಳಿಯ ಇತಿಹಾಸದ ಕುರಿತು ಜಾಣಗೆರೆ ಅವರ ಕೃತಿಯನ್ನು ಓದಿದರೆ ಪ್ರಾಮಾಣಿಕ ಹೋರಾಟಗಾರರ ನೋವು ಅರ್ಥವಾಗುತ್ತದೆ. ವಿಚಾರವಾದಿಗಳನ್ನು ಅನುಮಾನದಿಂದ ನೋಡುವ ಕಾಲಘಟ್ಟದಲ್ಲಿ ಲೋಕಾರ್ಪಣೆಗೊಂಡಿರುವ ಜಲಯುದ್ಧ ಕಾದಂಬರಿ ದಿಕ್ಕೆಟ್ಟವರಿಗೆ ದಾರಿ ತೋರಿಸುವ ಕೃತಿಯಾಗಿದೆ" ಎಂದರು.

ಕವಿ-ನಾಟಕಕಾರ ಪ್ರೊ. ಎಲ್.ಎನ್.ಮುಕುಂದರಾಜ್ "85ರ ಇಳಿವಯಸ್ಸಿನ ಡಾ. ಹಂಪನಾ, ಮುಗ್ಧ ಯುವತಿ ದಿಶಾ ರವಿ ಇಂತಹವರ ಮೇಲೆ ನಡೆಯುವ ಪೊಲೀಸ್ ದಬ್ಬಾಳಿಕೆ ಇಂತಹವನ್ನೆಲ್ಲಾ ಗಮನಿಸಿದರೆ ದೇಶದ ದುಸ್ಥಿತಿ ಅರ್ಥವಾಗುತ್ತದೆ ಎಂದರಲ್ಲದೆ, "ಲೇಖಕರು ಹೇಳುವ ಸತ್ಯಗಳನ್ನು ಸಹಿಸಲು ಸರ್ಕಾರದ ಅಧಿಪತಿಗಳಿಗೆ ಆಗುತ್ತಿಲ್ಲ. ಈ ಸೂಕ್ಷ್ಮಗಳನ್ನೆಲ್ಲಾ ದಾರ್ಶನಿಕ ಪ್ರಜ್ಞೆ ಇರುವ ಜಾಣಗೆರೆ ಜಲಯುದ್ಧ ಕಾದಂಬರಿಯಲ್ಲಿ ತಂದಿದ್ದಾರೆ. ಗುಡ್ಡೇ ಹೊಸೂರು ಮತ್ತು ಅಮರಾವತಿ ಎಂಬ ಎರಡು ಗ್ರಾಮಗಳ ನಡುವೆ ನಡೆಯುವ ಜಲಸಂಘರ್ಷದ ಕಥೆಯನ್ನು ವಿಭಿನ್ನ ಶೈಲಿಯಿಂದ ದಾಖಲಿಸಿದ್ದು, ಮೊದಲನೇ ಪುಟದಿಂದ ಕೊನೆ ಪುಟದವರೆಗೂ ವಿರಾಮವಿಲ್ಲದಂತೆ ಓದಿಸಿಕೊಂಡು ಹೋಗುತ್ತದೆ" ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರು, ಶಿಕ್ಷಣ ತಜ್ಞರು, ನಾಡೋಜ ಡಾ. ವೂಡೇ ಪಿ.ಕೃಷ್ಣ ಅವರು "ನಮ್ಮ ಶೇಷಾದ್ರಿಪುರಂ ಸಂಜೆ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಜಾಣಗೆರೆ ಅವರು ಇಷ್ಟೊಂದು ಎತ್ತರಕ್ಕೆ ಬೆಳೆದಿರುವುದು ನಮ್ಮ ಸಂಸ್ಥೆಗೆ ಹೆಮ್ಮೆ. ಮಹಾತ್ಮಗಾಂಧಿ, ಕುವೆಂಪು ಅವರಂತೆ ಇವರೂ ಪುರೋಹಿತಶಾಹಿಗೆ ಸೊಪ್ಪುಹಾಕಿದವರಲ್ಲ ಎಂಬುದು ಅವರ ಜಲಯುದ್ಧ ಕಾದಂಬರಿ ಓದಿದವರಿಗೆಲ್ಲಾ ತಿಳಿಯುತ್ತದೆ" ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ವಿಮರ್ಶಕ, ಸಂಶೋಧಕ ಡಾ. ಬಸವರಾಜ ಕಲ್ಗುಡಿ "ಸತ್ಯಗಳ ನಡುವೆ ಅನ್ವೇಷಣೆ ವಿಚಾರಗಳನ್ನು ಜಾಣಗೆರೆ ದಾಖಲಿಸಿದ್ದು ಜಲಯುದ್ಧ ಕಾದಂಬರಿ ಓದುತ್ತಿದ್ದರೆ, ಮಾಸ್ತಿಯವರ ಚನ್ನಬಸವನಾಯಕ ಮತ್ತು ಚಿಕ್ಕವೀರರಾಜೇಂದ್ರ ಕಾದಂಬರಿಗಳು ನೆನಪಿಗೆ ಬರುತ್ತವೆ" ಎಂದು ಹೇಳಿದರು.

ಆರಂಭದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾದಂಬರಿಕಾರ ಜಾಣಗೆರೆ ವೆಂಕಟರಾಮಯ್ಯ "ಪ್ರತಿ ದಿನ ದುಡಿಮೆ ಮಾಡುತ್ತಿದ್ದ ನನಗೆ ಕೊರೋನಾ ಲಾಕ್‌ಡೌನ್ ಸಂದರ್ಭದಲ್ಲಿ ನಾಲ್ಕು ತಿಂಗಳುಗಳ ಕಾಲ ಒಂದು ರೂಪಾಯಿ ಸಂಪಾದನೆಯೂ ಆಗಲಿಲ್ಲ. ಸಾಹಿತ್ಯ ಸಂಗಮ ಟ್ರಸ್ಟ್‌ನ ನಾಗಭೂಷಣ ಅವರ ಉತ್ತೇಜನದ ಮಾತುಗಳಿಂದ ಪ್ರೇರಣೆ ಹೊಂದಿ, ಏಪ್ರಿಲ್ 1ರಿಂದ ಆರಂಭಿಸಿ, 55 ಅಧ್ಯಾಯಗಳ, 468 ಪುಟಗಳ ಕಾದಂಬರಿಯನ್ನು 57 ದಿನಗಳಲ್ಲಿ ಬರೆದು ಮುಗಿಸಿದ್ದೇನೆ. ಕಾವೇರಿ ವಿಷಯಕ್ಕೆ ಪ್ರಾಮುಖ್ಯ ನೀಡಿದ್ದೇನೆ" ಎಂದು ಹೇಳಿದರು.

ಪತ್ರಕರ್ತ ಕೆ.ಸಿ.ಶಿವರಾಮಯ್ಯ ನಿರೂಪಿಸಿದ ಕಾರ್ಯಕ್ರಮ ಸಂತವಾಣಿ ಸುಧಾಕರ್ ಮತ್ತು ತಂಡದವರು ನಾಡಗೀತೆ ಹಾಡುವುದರೊಂದಿಗೆ ಆರಂಭವಾಯಿತು. 400 ರೂ. ಮುಖ ಬೆಲೆಯ ಕಾದಂಬರಿಯ ಪ್ರತಿಗಳನ್ನು 200 ರೂಗಳಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಯಿತು. ಸಮಾರಂಭದಲ್ಲಿ ನಾಡೋಜ ಡಾ. ಕಮಲಾ ಹಂಪನಾ ಮತ್ತಿತರ ಗಣ್ಯರು ಉಪಸ್ಥಿತರಿದ್ದರು. ಹಂಪನಾ ಮತ್ತು ಕಮಲಾ ಹಂಪನಾ ದಂಪತಿಗಳನ್ನು ಸನ್ಮಾನಿಸಲಾಗಿತ್ತು.

ಡಾ. ರಾಣಿ ಗೋವಿಂದರಾಜು ಅವರ ಸಂಚಾಲಕತ್ವದಲ್ಲಿ ಯಶಸ್ವಿಯಾಗಿ ನಡೆದ ಮಹಾನ್ ಕನ್ನಡ ಕಾವ್ಯ ಮೇಳ



ಸಮಾರಂಭದಲ್ಲಿ (ಎ–ಬ): ನಾ.ಶ್ರೀಧರ್, ಸಂಗಮೇಶ್ ಬಸಗುಂಡಿ, ಎಸ್.ಎಸ್.ಪಡಶೆಟ್ಟಿ, ಡಾ.ರಾಣಿ ಗೋವಿಂದರಾಜು, ಡಾ. ಎಸ್.ರಾಮಲಿಂಗೇಶ್ವರ, ಎಂ.ತಿಮ್ಮಯ್ಯ, ಶ್ರೀಮತಿ.ವೀ.ಮಂಜುಳಾ ಶಿವಾನಂದ ಮತ್ತು ಕೆ.ವಿ.ಲಕ್ಷ್ಮಣಮೂರ್ತಿ.

14.02.2021ರಂದು ಬೆಳಿಗ್ಗೆಯಿಂದ ಸಂಜೆಯವರೆಗೆ, ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಮಹಾನ್ ಕವಿಗಳಾದ ಪಂಪ, ಬೇಂದ್ರೆ, ಕನ್ನಡದ ಮೊದಲ ಕವಯತ್ರಿ ಅಕ್ಕ ಮಹಾದೇವಿ, ವಚನ ಚಳವಳಿಯ ರೂವಾರಿ ಬಸವಣ್ಣ, ದಾಸ ಶ್ರೇಷ್ಠರಾದ ಪುರಂದರ ಮತ್ತು ಕನಕರು, ಜಗದ ಕವಿ ಯುಗದ ಕವಿ ಕುವೆಂಪು, ಅ.ನ.ಕೃ ಮತ್ತು ಮ.ರಾಮಮೂರ್ತಿ ಅವರೊಡಗೂಡಿ 60ರ ದಶಕದಲ್ಲಿ ಕನ್ನಡ ಚಳವಳಿ ನಡೆಸಿದ ನಾಡಿಗೇರ ಕೃಷ್ಣರಾಯರಲ್ಲದೆ ಅನೇಕ ಕನ್ನಡ ಹೋರಾಟಗಾರರು ಉತ್ಕೃಷ್ಟ ಕವನಗಳ ಮೂಲಕ ವಿರಾಜಿಸಿದರು. ಅ.ನ.ಕೃ. ಕನ್ನಡ ಸಂಘ ಮತ್ತು ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟಗಳ ಆಶ್ರಯದಲ್ಲಿ ಕವಯತ್ರಿ ಡಾ.ರಾಣಿಗೋವಿಂದರಾಜು ಅವರ ಸಂಚಾಲಕತ್ವದಲ್ಲಿ ಏರ್ಪಡಿಸಿದ್ದ ಮಹಾನ್ ಕನ್ನಡ ಕಾವ್ಯಮೇಳದ ಒಂಭತ್ತು ಕವಿಗೋಷ್ಠಿಗಳಲ್ಲಿ ಭಾಗವಹಿಸಿದ ಕವಿಕವಯತ್ರಿಯರು ಪಂಪನಿಂದ ಕುವೆಂಪುವರೆಗೆ, ಕನಕದಾಸರಿಂದ ಬೇಂದ್ರೆವರೆಗೆ, ಬಸವಣ್ಣನಿಂದ "ಕನ್ನಡ" ಹೋರಾಟರ ಅಕ್ಕಮಹಾದೇವಿಯಿಂದ ಪುರಂದರದಾಸರವರೆಗೆ – ಹೀಗೆ ಒಂದು ಸಹಸ್ರಮಾನಕ್ಕಿಂತಲೂ ಹೆಚ್ಚಿನ ಕಾಲದಲ್ಲಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿ ಹೋಗಿರುವ ದಿಗ್ಗಜರನ್ನು ಸಹೃದಯರ ಮನಮಂದಿರಗಳಲ್ಲಿ ಮನಃ ಪ್ರತಿಷ್ಠಾಪಿಸಿದರು.

ಹೆಚ್.ಸಿ.ಮಹಾದೇವ್ ನಾಡಗೀತೆ ಹಾಡುವುದರೊಂದಿಗೆ ಆರಂಭವಾದ ಈ ಅಭೂತಪೂರ್ವ ಕಾರ್ಯಕ್ರಮದಲ್ಲಿ ಕ.ಕೈ.ಕ.ಸಂ.ಒಕ್ಕೂಟದ ಪ್ರಧಾನ ಕಾರ್ಯದರ್ಶಿ ನಾ.ಶ್ರೀಧರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹಿರಿಯ ಸಾಹಿತಿ ಡಾ.ಎಸ್.ರಾಮಲಿಂಗೇಶ್ವರ (ಸಿಸಿರಾ) ಅವರ ಅಚ್ಚುಕಟ್ಟಾದ ನಿರ್ವಹಣೆಯಲ್ಲಿ ನಡೆದ ಆದಿ ಕವಿ ಪಂಪನ ಕುರಿತು ಗೋಷ್ಠಿ ಉದ್ಘಾಟಿಸಿದ ನಾಡೋಜ, ಶಿಕ್ಷಣ ತಜ್ಞ ಡಾ.ವೂಡೇ ಪಿ.ಕೃಷ್ಣ "ಸಾಹಿತ್ಯ ಲೋಕದಲ್ಲಿ ಜಾತಿ, ಧರ್ಮಗಳ ಸೋಂಕು" ಹರಡಿರುವುದನ್ನು ಕಳವಳದಿಂದ ಪ್ರಸ್ತಾಪಿಸಿ, ಆದಿಕವಿ ಪಂಪನಿಂದ ಯುಗದ ಕವಿ ಕುವೆಂಪುವರೆಗೆ ಅನೇಕ ಕವಿಗಳು ಬೋಧಿಸಿ ಹೋಗಿರುವ ವಿಶ್ವಮಾನವ ತತ್ವಗಳನ್ನು ಪಾಲಿಸೋಣ" ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿದ್ದ ಹಿರಿಯ ಸಾಹಿತಿ, ಗಾಂಧಿನಗರ ವಿಧಾನಸಭಾ ಕ್ಷೇತ್ರ ಕಸಾಪ ಅಧ್ಯಕ್ಷರಾದ ಡಾ.ವೀ.ಮಂಜುಳಾ ಶಿವಾನಂದ ಅವರು ಒಂದು ವೈಶಿಷ್ಟ್ಯಪೂರ್ಣ ಕಾರ್ಯಕ್ರಮ ಆಯೋಜಿಸಿದ ರಾಣಿ ಗೋವಿಂದರಾಜು ಅವರನ್ನು ಅಭಿನಂದಿಸಿದರು. "ಇಂತಹ ಗೋಷ್ಠಿಗಳಿಂದ ಕವಿಗಳು ಹೆಚ್ಚು ಅಧ್ಯಯನ ಮಾಡುವ ಪರಿಸ್ಥಿತಿ ಬಂದು ಅವರು ಹೆಚ್ಚಿನ ಜ್ಞಾನಿಗಳಾಗುವಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಆದಿಕವಿ ಪಂಪನ ಕುರಿತು ಸ್ಥಳದಲ್ಲಿಯೇ ರಚಿಸಿದ ಸುಂದರವಾದ ಕವನವನ್ನು ವಾಚಿಸಿದರು.

ಅಧ್ಯಕ್ಷತೆ ವಹಿಸಿದ್ದ ಕ.ಕೈ.ಮತ್ತು ವಾ.ಕ.ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ ಅವರು "ಮನುಷ್ಯನ ಏಳ್ಗೆಗೆ ಬೇಕಾದುವನ್ನೆಲ್ಲಾ ಸಾವಿರ ವರ್ಷಗಳ ಹಿಂದೆಯೇ ಬೋಧಿಸಿ ಹೋಗಿರುವ ಆದಿಕವಿ ಪಂಪನನ್ನು ಧ್ಯಾನಿಸಿಯೇ ನನ್ನ ದಿನಚರಿ ಆರಂಭವಾಗುತ್ತದೆ. ಇಂತಹ ಮಹಾನ್‌ಕವಿಯನ್ನು ಪಡೆದ ಕನ್ನಡಿಗರು ಧನ್ಯರು. ಕನ್ನಡಕ್ಕೆ ನಿಜವಾದ ಒಡೆಯನೆನ್ನಿಸಿಕೊಂಡಿರುವ ಈ ಮಹಾಕವಿಯ ಹೆಸರು ಸೂರ್ಯ ಚಂದ್ರರಿರುವವರೆಗೂ ಅಜರಾಮರವಾಗಿರುತ್ತದೆ. ಇಡೀ ಜಗತ್ತಿನಲ್ಲಿ ಪಂಪ, ರನ್ನ, ಕುಮಾರ ವ್ಯಾಸರಿಗೆ ಸಾಟಿಯಾದ ಕವಿಗಳು ಹುಟ್ಟಿಲ್ಲ" ಎಂದು ಹೇಳಿದರು.

ಕವಿಗಳಾದ ಡಾ. ಸಿ.ಜಿ.ಹಳ್ಳಿಮೂರ್ತಿ, ಗುಂಡಿಗೆರೆ ವಿಶ್ವನಾಥ್, ಕೃಷ್ಣ ಹಾನ್‌ಬಾಳ್ ಮತ್ತು ಪ್ರೊ ಪ್ರತಿಮಾ ನಾಗರಾಜ್ ಅವರು ಪಂಪನನ್ನು ಕುರಿತು ಸ್ವರಚಿತ ಕವನಗಳನ್ನು ವಾಚಿಸಿದರು.

ಕವಿಗೋಷ್ಠಿ : ನೇಗಿಲ ಯೋಗಿಗಳು

ಶಿವಾಜಿನಗರ ವಿಧಾನಸಭಾ ಘಟಕದ ಅಧ್ಯಕ್ಷರಾದ ಕೆ.ಎನ್.ಸವಿತಾ ರಾಮು ಅವರ ನಿರ್ವಹಣೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ಕವಿಗಳಾದ ರಾಘವೇಂದ್ರ ಕೊಪ್ಪರ, ಅನ್ನಪೂರ್ಣ, ಜಿ.ಎಸ್.ಮಧುಲತ, ಡಾ.ಕನಕತಾರ, ವಿ.ಆರ್.ಸುಬ್ರಹ್ಮಣ್ಯ ಶರ್ಮ, ಪ್ರೊ ವಿದ್ಯಾ ಮತ್ತು ಎನ್.ಸಿ.ಶೇಷಪ್ಪ ಭಾಗವಹಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಆಗರ ಗ್ರಾಮದ ಸಾಹಿತ್ಯ–ಸಂಸ್ಕೃತಿ ವೇದಿಕೆ ಅಧ್ಯಕ್ಷ ಆರ್.ಸದಾಶಿವಯ್ಯ ಜರಗನಹಳ್ಳಿ "ಹೊಲದ ಸನಿಹ ಇದ್ದು ಬೆವರು ಸುರಿಸಿ ದುಡಿಯುವ ರೈತನೇ ನಮ್ಮ ಪಾಲಿನ ಅನ್ನದಾತ.. ಇಂತಹ ಪ್ರಾಮಾಣಿಕ ಮಣ್ಣಿನ ಮಗನನ್ನು ಈಗ ಭಯೋತ್ಪಾದಕನಂತೆ ಬಿಂಬಿಸುತ್ತಿರುವುದು ದುರದೃಷ್ಟಕರ. ಸ್ವತಃ ಬೇಸಾಯ ಮಾಡದ ದೊಡ್ಡ ದೊಡ್ಡ ಶ್ರೀಮಂತ ಜಮೀನುದಾರರು ಇಂದು ಬಡ ರೈತರನ್ನು ಜೀತದಾಳುಗಳನ್ನಾಗಿ ದುಡಿಸಿಕೊಳ್ಳುತ್ತಿರುವುದು ಬಹಳ ದುಃಖದ ಸಂಗತಿ" ಎಂದರಲ್ಲದೆ, "ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಾಲಿ, ಭತ್ತ ರಾಗಿ ಬೆಳೆಯೋರ" ಸ್ವರಚಿತ ಕವನ ವಾಚಿಸಿದರು.

ಕನಕದಾಸರು

ಹಿರಿಯ ಸಾಹಿತಿ, ಪತ್ರಕರ್ತ, ಗಾಯಕ ಎಸ್.ಎಸ್.ಪಡಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕನಕ ದಾಸರನ್ನು ಕುರಿತಾದ ಕವಿಗೋಷ್ಠಿಯಲ್ಲಿ ಕವಿಗಳಾದ ಹಾರಗದ್ದೆ ಸತ್ಯನಾರಾಯಣ, ಆರ್.ಬನಪ್ಪ,

10ನೇ ಪುಟಕ್ಕೆ

ಆದಿಕವಿ

ಶ್ರೇಷ್ಠಿಯರಲ್ಲಿ ಒಂದು ಶ್ರೇಷ್ಠ
[illegible]
ವಿಕ್ರಮಾರ್ಜುನ ವಿಜಯ
[illegible] ನಯನ
[illegible] ಶೈಲಿಯ
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]



–ಡಾ.ವೀ.ಮಂಜುಳಾ ಶಿವಾನಂದ
ಮೊ: 9480511714

ನಾಡಿಗೇರ ಕೃಷ್ಣರಾಯರು

ಕನ್ನಡ ರಾಜ್ಯ ಧ್ವಜಯಾಗುವರೆ
[illegible]
[illegible]
[illegible]
[illegible] –
ಅನಕೃ – ನಾಡಿಗೇರ ಕೃಷ್ಣರಾಯರು –
ಮ.ರಾಮಮೂರ್ತಿ
ಕನ್ನಡಾಂಬೆಯ ಮುಕುಟದ ರತ್ನತ್ರಯರು

ನಾಡಿಗೆ ನಗೆಯ ಗೇರನ್ನು ಹಾಕಿದ
ನಾಡಿಗೇರರ ಬದುಕು [illegible]
[illegible]
[illegible]
[illegible]
[illegible]
[illegible]
ನಾಡಿಗೇರರ [illegible]
ಇವರಿಗೆ ಸಾಟಿ ಕನ್ನಡ ಮತ್ತು
[illegible]
ಒಟ್ಟಿನಲ್ಲಿ ನಾಡಿಗೇರರೇ ಒಂದು [illegible]
[illegible] ಹಾಸ್ಯ
ಸಾಹಿತ್ಯ
[illegible]
[illegible] ಹಾಸ್ಯ ಜೀವನ [illegible]

[illegible]
"ಅಭಿನಂದನಾ ಗ್ರಂಥ" – ಕರ್ನಾಟಕದ ಹಾಸ್ಯ
ಚಕ್ರವರ್ತಿ ಬಿರುದು

ಇದು ಸಾರಿತು ನಾಡಿಗೇರರ ಹಿರಿಮೆ
ಅ.ನ.ಕೃ. ಅವರ ಈ ನುಡಿ ಗರಿಮೆ –
ಪತ್ರಿಕೋದ್ಯಮಿಯಾಗಿ ಕಟ್ಟಿದರು ಗೆಜ್ಜೆ
ಕಾದಂಬರಿಗಳ ಬರೆದು ಹಾಕಿದರು ಹೆಜ್ಜೆ
ನಗೆ ಹರಟೆಗಳ ರಚನೆ
ದಾರಿಸಿದರು ಡೋಲು
ಇವರ ಜೀವನ ಹಿಂದು –
ಇವರಿಗಿಲ್ಲ ಸೋಲು
ನಾಡಿಗೇರರು ಕನ್ನಡಾಂಬೆಯ
ಕಿರೀಟದ ಮೇರು

–ವೀಣಾ ನಾಡಿಗೇರ್

ಸಾಹಿತ್ಯ ಸಂಸ್ಕೃತಿಗಳ ಮಹಾನ್ ಚಿಂತಕ ಕೆ.ವಿ.ಲಕ್ಷ್ಮಣಮೂರ್ತಿ

ಕಾರ್ಯಕ್ರಮದಲ್ಲಿ "ವರಕವಿ ಬೇಂದ್ರೆ" ಕುರಿತ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಐಎಫ್‌ಎಸ್ ಅಧಿಕಾರಿ ಕೆ.ವಿ.ಲಕ್ಷ್ಮಣಮೂರ್ತಿ ಅವರು ಸಾಹಿತ್ಯ ಮತ್ತು ಸಂಸ್ಕೃತಿಗಳ ಮಹಾನ್ ಚಿಂತಕರು. ಕನ್ನಡಮ್ಮನ ಹೆಮ್ಮೆಯ ಈ ಪುತ್ರ ಉತ್ತರ ಪ್ರದೇಶ ಕೇಡರ್‌ನ ಐ.ಎಫ್.ಎಸ್. ಅಧಿಕಾರಿಯಾಗಿ, ಆ [illegible] ರಾಜ್ಯದ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಯಾಗಿ ದಕ್ಷತೆಯಿಂದ ಸೇವೆ ಸಲ್ಲಿಸಿ ನಿವೃತ್ತರಾದವರು. ಉತ್ತರ ಪ್ರದೇಶದಲ್ಲಿದ್ದಾಗಲೂ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಬಗೆಗೆ ತಮ್ಮ ಅಭಿಮಾನವನ್ನು ಕಡಿಮೆ ಮಾಡಿಕೊಂಡಿರಲಿಲ್ಲ. ಇಲ್ಲಿನ ಕನ್ನಡಾಭಿಮಾನಿ ಗೆಳೆಯರೊಂದಿಗೆ ಸಂಪರ್ಕ ಕಳೆದುಕೊಂಡಿರಲಿಲ್ಲ. ಗೆಳೆಯರ ಮೂಲಕ ಹಾಗೂ ಉತ್ತರ ಪ್ರದೇಶದಲ್ಲಿದ್ದುಕೊಂಡೇ ಕನ್ನಡ ಸಾಹಿತ್ಯ–ಸಂಸ್ಕೃತಿಗಳ ಪರಿಚಾರಿಕೆ ಮಾಡುತ್ತಿದ್ದರು. ಸರ್ಕಾರಿ ಸೇವೆಯಿಂದ ನಿವೃತ್ತರಾದ ನಂತರ ಪೂರ್ಣಾವಧಿ ಕನ್ನಡ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ವಿಷಯವನ್ನೆಲ್ಲಾ ಕಾವ್ಯಮೇಳದ ಉದ್ಘಾಟನಾ ಭಾಷಣದಲ್ಲಿ ಪ್ರಸ್ತಾಪಿಸಿದ ನಾಡೋಜ ಡಾ. ವೂಡೇ ಪಿ.ಕೃಷ್ಣ ಅವರು ಲಕ್ಷ್ಮಣಮೂರ್ತಿ ಅವರನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಬಹುದೊಡ್ಡ ಹುದ್ದೆಯಲ್ಲಿದ್ದು ನಿವೃತ್ತರಾಗಿದ್ದರೂ ಯಾವುದೇ ಹಮ್ಮು ಬಿಮ್ಮು ವಿಗುಮಾನ ಪ್ರದರ್ಶಿಸದ ಇವರನ್ನು ಮಾದರಿಯಾಗಿಸಿಕೊಳ್ಳಿ ಎಂದು ಕನ್ನಡ [illegible] ಕರೆ ನೀಡಿದರು.

ಬೇಂದ್ರೆ ಅವರ ಸಮೀಪದರ್ಶನ ಮಾಡಿಸಿದ ಲಕ್ಷ್ಮಣ ಮೂರ್ತಿ


ಮಹಾ ಕಾವ್ಯ ಮೇಳದಲ್ಲಿ ವರಕವಿ ಬೇಂದ್ರೆ ಕುರಿತ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಬೇಂದ್ರೆ ಅವರ ಮಹಾನ್ ಅಭಿಮಾನಿ ಕೆ.ವಿ.ಲಕ್ಷ್ಮಣಮೂರ್ತಿ ಬೇಂದ್ರೆ ಅವರ ಬಗೆಗೆ ಸೊಗಸಾದ ಕವನ ಬರೆದು ಅವರ ಪ್ರಮುಖ ಕೃತಿಗಳನ್ನು ಸಭೆಯಲ್ಲಿ ಅನಾವರಣಗೊಳಿಸಿದರು. ಅಲ್ಲದೆ, ಅಂಬಿಕಾತನಯದತ್ತರ ಬಗೆಗೆ ವಾರ್ತಾ ಇಲಾಖೆ ನಿರ್ಮಿಸಿದ್ದ ಸಾಕ್ಷ್ಯ ಚಿತ್ರವನ್ನು ಸಭೆಯಲ್ಲಿ ಪ್ರದರ್ಶನದ ವ್ಯವಸ್ಥೆ ಮಾಡಿ, ಸಭೆಯಲ್ಲಿದ್ದ ಕಾವ್ಯಾಭಿಮಾನಿಗಳಿಗೆಲ್ಲಾ ಬೇಂದ್ರೆ ಅವರ ಸಮೀಪದರ್ಶನ ಮಾಡಿಸಿದರು.

ಡಾ. ಮೋಹನ್ ಆಳ್ವರಿಗೆ ಪತ್ರ

ತಾಯಿಯನ್ನು ಆರಾಧನಾ ನೆಲೆಯಿಂದ ಕಂಡಿರುವ 80 ಕವಿ ಕವಯತ್ರಿಯರು ಬರೆದಿರುವ "ಗರ್ಭಸಂಜಾತ ಕಾರುಣ್ಯಮೂರ್ತಿ" ಕವನ ಸಂಕಲನವನ್ನು ಡಾ.ರಾಣಿಗೋವಿಂದರಾಜು ಸಂಪಾದಿಸಿದ್ದು, ಆ ಸಂಕಲನದಲ್ಲಿ ಲಕ್ಷ್ಮಣಮೂರ್ತಿ ಅವರ "ಅಮ್ಮ ಪರಿಸರವಾದಿ" ಎಂಬ ಸುಂದರ ಕವನವೂ ಪ್ರಕಟವಾಗಿದೆ. ಈ ಕವನ ಸಂಕಲನದ ಒಂದು ಪ್ರತಿಯನ್ನು ಶಿಕ್ಷಣ ತಜ್ಞ, ಆಳ್ವಾಸ್ ನುಡಿ ಸಿರಿ ಖ್ಯಾತಿಯ ಡಾ॥ ಎಂ.ಮೋಹನ ಆಳ್ವ ಅವರಿಗೆ ಕಳುಹಿಸಿ ಕೊಟ್ಟಿದ್ದಾರೆ. ಸಂಕಲನದಲ್ಲಿನ ಕವನಗಳನ್ನು ಓದಿ ಸಂತಸಗೊಂಡ ಡಾ॥ ಆಳ್ವ ತಮಗೆ ಆತ್ಮೀಯರಾದ ಲಕ್ಷ್ಮಣಮೂರ್ತಿ ಅವರಿಗೆ ಪತ್ರ ಬರೆದು "ಮಾಗಿದ ಬದುಕಿನ ಕವಿಗಳಿಗೆ ಅಮ್ಮನ ಮಹತ್ವದ ಅರಿವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಅನೇಕ ಸಂದರ್ಭಗಳಲ್ಲಿ ಮೌಲ್ಯಾದರ್ಶಗಳು ಮೂಲೆಗುಂಪಾಗಿ ಮಕ್ಕಳಿಂದಲೇ ತಾಯಂದಿರು ನೋವು ಅನುಭವಿಸುತ್ತಿದ್ದಾರೆ. ಇಂಥಾ ಸಂದರ್ಭದಲ್ಲಿ ಪ್ರಕಟವಾಗಿರುವ ಈ ಕವನ ಸಂಕಲನದಿಂದ ಕೆಲವರಿಗಾದರೂ ತಾಯಿಯ ಬಗೆಗಿನ ಆಲೋಚನೆಗಳು ಬದಲಾದರೆ ಈ ಕವನ ಸಂಕಲನ ಪ್ರಕಟವಾದದ್ದು ಸಾರ್ಥಕವಾದೀತು" ಎಂದು ತಿಳಿಸಿದ್ದಾರೆ.

ಈ ಸಂಜೆ

ಗುರುವಾರ
25-2-2021



ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು, ಕರ್ನಾಟಕ ಪ್ರತಿಭಾ ಕೇಂದ್ರ ಹಾಗೂ ಸಮರ್ಪಣಾ ಸಂಪದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಡಾ. ಆರ್. ವಾದಿರಾಜು ಅವರ ವಚನ ಚಂದ್ರಮ ಕೃತಿಯನ್ನು ವಿಮರ್ಶಕ ಡಾ. ವಿಜಯಾ ಸುಬ್ಬರಾಜ್, ಡಾ. ಮಂಜುನಾಥ್ ಪಾಳ್ಯ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ. ವೂಡೇ. ಪಿ. ಕೃಷ್ಣ ಬಿಡುಗಡೆ ಮಾಡಿದರು. ಪ್ರೊ. ಎನ್. ಎಸ್. ಸತೀಶ್, ಡಾ. ರಾಮಲಿಂಗೇಶ್ವರ ಉಪಸ್ಥಿತರಿದ್ದರು.

ಪ್ರಜಾವಾಣಿ
ಮಂಗಳವಾರ ಫೆಬ್ರುವರಿ 23, 2021

‘ಇತಿಹಾಸ ಮುಚ್ಚಿಡುವ ಕೆಲಸ ಮಾಡದಿರಿ: ಬಂಜಗೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೌದ್ಧ ಮತ್ತು ಜೈನ ಧರ್ಮಗಳ ಹುಟ್ಟಿನ ಕುರಿತ ಪಾಠಗಳು ಪರೀಕ್ಷೆಗೆ ಅಗತ್ಯವಿಲ್ಲ ಎಂದು ಶಿಕ್ಷಣ ಇಲಾಖೆ ಹೇಳಿರುವುದು ತಪ್ಪು. ಇತಿಹಾಸ ನಡೆದು ಬಂದ ದಾರಿಯನ್ನು ಎಲ್ಲರೂ ತಿಳಿಯುವುದು ಅಗತ್ಯ. ಇತಿಹಾಸವನ್ನೇ ಮುಚ್ಚಿಡುವ ಕೆಲಸ ಮಾಡಬಾರದು’ ಎಂದು ವಿಮರ್ಶಕ ಡಾ.ಬಂಜಗೆರೆ ಜಯಪ್ರಕಾಶ್ ತಿಳಿಸಿದರು.

ಜಾಣಗೆರೆ ಪತ್ರಿಕಾ ಪ್ರಕಾಶನ ಹಾಗೂ ಸಾಹಿತ್ಯ ಸಂಗಮ ಟ್ರಸ್ಟ್‌ನ ಸಹಯೋಗದಲ್ಲಿ ಆಯೋಜಿಸಿದ್ದ ಲೇಖಕ ಜಾಣಗೆರೆ ವೆಂಕಟರಾಮಯ್ಯ ಅವರ ‘ಜಲಯುದ್ಧ’ ಕಾದಂಬರಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ (ಎಡದಿಂದ) ಪ್ರಕಾಶಕ ನಾಗಭೂಷಣ್, ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ, ಬಂಜಗೆರೆ ಜಯಪ್ರಕಾಶ್, ಜಾಣಗೆರೆ ವೆಂಕಟರಾಮಯ್ಯ, ಹಂಪ ನಾಗರಾಜಯ್ಯ, ಬಸವರಾಜ ಕಲ್ಗುಡಿ, ಬೈರಮಂಗಲ ರಾಮೇಗೌಡ, ಎಲ್.ಎನ್.ಮುಕುಂದರಾಜ್ ಇದ್ದರು

‘ಅಧಿಕಾರದಲ್ಲಿರುವವರು ಜನರ ಅಭಿವೃದ್ಧಿಗಾಗಿ ಆಡಳಿತ ನಡೆಸಿದರೆ, ಅವರು ಜನರ ಮನಸ್ಸಿನಲ್ಲಿ ಉಳಿಯುತ್ತಾರೆ. ಅಧಿಕಾರವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡರೆ ಅವರ ದುಷ್ಟತನ ತೋರುತ್ತದೆ’ ಎಂದರು.

‘ಶತಮಾನಗಳಿಂದಲೂ ರಾಜ್ಯವು ಜಲ ಮತ್ತು ಗಡಿ ವಿಚಾರಗಳಲ್ಲಿ ಸಂಕಷ್ಟ ಮತ್ತು ಸಂಘರ್ಷ ಎದುರಿಸುತ್ತಲೇ ಬಂದಿದೆ. ಬ್ರಿಟಿಷ್ ಸರ್ಕಾರ ಹಾಗೂ ನಂತರದ ನಮ್ಮ ಸರ್ಕಾರಗಳು ಮಾಡಿದ ನಿರ್ಲಕ್ಷ್ಯ ಹಾಗೂ ವಂಚನೆಗಳಿಂದ ನೀರಿನ ಸಮಸ್ಯೆ ಇಂದಿಗೂ ಕೊನೆಗೊಂಡಿಲ್ಲ. ಜಾಣಗೆರೆ ವೆಂಕಟರಾಮಯ್ಯ ಅವರ ಈ ಕಾದಂಬರಿ ಜಲ ವಿವಾದದ ಕುರಿತು ಒಂದು ಸೂಚನೆ ನೀಡಿದೆ’ ಎಂದು ಹೇಳಿದರು.


ಸಾಹಿತಿ ಡಾ.ಹಂಪ ನಾಗರಾಜಯ್ಯ,‘ನಾಡಿನಲ್ಲಿ ನದಿಯ ಉಳಿವಿಗಾಗಿ ಕದನಗಳು ನಡೆದಿವೆ. ನದಿ ತೀರಗಳಲ್ಲಿ ಸಾಮ್ರಾಜ್ಯ ಕಟ್ಟಿಕೊಳ್ಳುತ್ತಿದ್ದ ರಾಜರೂ ಅದರ ಉಳಿವಿಗಾಗಿ ಯುದ್ಧ ನಡೆಸಿದ್ದಾರೆ. ಈ ಕುರಿತು ‘ಕವಿರಾಜ ಮಾರ್ಗ’ದಲ್ಲಿ ಕಾವೇರಿಯಿಂದ ಗೋದಾವರಿವರೆಗೆ ಕನ್ನಡ ನಾಡನ್ನು ಗುರುತಿಸಲಾಗಿದೆ’ ಎಂದರು.

ವಿಮರ್ಶಕ ಬೈರಮಂಗಲ ರಾಮೇಗೌಡ, ‘ಹಲವು ರಾಜ್ಯಗಳ ಜೊತೆಗೆ ಗಡಿ ಹಂಚಿಕೊಂಡಿರುವ ಏಕೈಕ ರಾಜ್ಯ ನಮ್ಮದು. ಹಾಗಾಗಿ, ಜಲ, ಗಡಿ ಮತ್ತು ಭಾಷೆಯ ಸಮಸ್ಯೆ ಉದ್ಭವಿಸಿದೆ. ದಿಕ್ಕು ತಪ್ಪುತ್ತಿರುವ ಆಡಳಿತ ವ್ಯವಸ್ಥೆಯನ್ನು ಜನರೇ ಸರಿಯಾದ ದಾರಿಗೆ ತರಬೇಕಿದೆ’ ಎಂದರು.

ಲೇಖಕ ಜಾಣಗೆರೆ ವೆಂಕಟರಾಮಯ್ಯ,‘ಕನ್ನಡಿಗರು ಜಲವಿವಾದ ಹೋರಾಟ ಮಾಡಿಕೊಂಡೇ ಬಂದಿದ್ದಾರೆ. ಅಂದಿನ ತಪ್ಪು ನಿರ್ಧಾರಗಳಿಂದ ಆಗಿರುವ ಸಮಸ್ಯೆಗಳಿಗೆ ಪುಸ್ತಕದಲ್ಲಿ ಎಚ್ಚರಿಕೆಯ ಸಂದೇಶವೂ ನೀಡಿದ್ದೇನೆ’ ಎಂದು ಅವರು ತಿಳಿಸಿದರು.

[illegible] 2021

ಗಾಂಧೀಜಿ ಅಧ್ಯಯನದಿಂದ ಭಾರತದ ಚಿತ್ರಣ ತಿಳಿಯಬಹುದು



ಬೆಂಗಳೂರು,ಫೆ.19- ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಬಗ್ಗೆ ಆಳವಾಗಿ ಅಧ್ಯಯನ ಮಾಡಿದರೆ ಇಡೀ ಭಾರತದ ಚಿತ್ರಣವನ್ನೇ ತಿಳಿಯಬಹುದು ಎಂದು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ, ನಾಡೋಜ ಡಾ.ವೂಡೆ ಪಿ ಕೃಷ್ಣ ತಿಳಿಸಿದರು.

ಮಹಾಲಕ್ಷ್ಮಿ ಬಡಾವಣೆಯಲ್ಲಿರುವ ವಿವೇಕಾನಂದ ಮಹಿಳಾ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟನೆ ಹಾಗೂ ಗಾಂಧೀಜಿಯವರ ಸಂದೇಶಗಳ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಗಾಂಧೀಜಿಯವರನ್ನು ಬಿಟ್ಟು ಭಾರತವಿಲ್ಲ, ಭಾರತ ಬಿಟ್ಟು ಗಾಂಧೀಜಿ ಇಲ್ಲ. ಆ ಮಟ್ಟಿಗೆ ಗಾಂಧೀಜಿಯವರ ಬದುಕು ಹಾಸುಹೊಕ್ಕಾಗಿದೆ. ವೈವಿಧ್ಯತೆಯೇ ನಮ್ಮ ದೇಶದ ಶಕ್ತಿ. ಅದು ದೌರ್ಬಲ್ಯವಲ್ಲ. ಇದನ್ನು ಅರಿತಿದ್ದ ಗಾಂಧೀಜಿಯವರು ಸಮುದಾಯಿಕ ಸಮಾಜ ಮತ್ತು ಶಾಂತಿಯುತ ಅಹಿಂಸಾತ್ಮಕ ಸಮಾಜದ ಕಲ್ಪನೆಯನ್ನು ರಾಷ್ಟ್ರಕ್ಕೆ ಕೊಟ್ಟರು ಎಂದು ಹೇಳಿದರು.

ಅಡಿಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಮಹಾತ್ಮ ಗಾಂಧೀಜಿಯವರು ತಲುಪದ ವಿಚಾರವಿಲ್ಲ. ವಿಶ್ವಕಂಡ ಶ್ರೇಷ್ಠ ವ್ಯಕ್ತಿ. ಪಾರದರ್ಶಕ ಜೀವನ ನಡೆಸಿದವರು. ಸತ್ಯ, ಅಹಿಂಸೆ, ಸತ್ಯಾಗ್ರಹ, ಸರ್ವೋದಯ ತತ್ವಗಳನ್ನು ನೀಡಿದರು. ಬಹುಜನ ಹಿತಾಯ, ಬಹುಜನ ಸುಖಾಯ ಎಂಬುದು ಅವರ ಧ್ಯೇಯವಾಗಿತ್ತು. ಅವರವರ ವೃತ್ತಿಯಿಂದ ಬದುಕು ಹಕ್ಕು ಪಡೆದುಕೊಳ್ಳಬೇಕು, ಸಮಸಮಾಜ ನಿರ್ಮಾಣವಾಗಬೇಕು ಎಂಬುದು ಅವರ ಕನಸಾಗಿತ್ತು. ಗಾಂಧೀಜಿಯವರ ವಿಚಾರಧಾರೆಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜನತಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಸಿ.ಎನ್.ಮಂಚೇಗೌಡ, ಆಡಳಿತ ಮಂಡಳಿ ಸದಸ್ಯರಾದ ಜಿ.ಎಚ್.ಪಂಕಜ, ವಿವೇಕಾನಂದ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಎನ್.ಚನ್ನವೀರೇಗೌಡ, ಉಪ ಪ್ರಾಂಶುಪಾಲರಾದ ಕೆ.ಪಿ.ಪುಷ್ಪಲತಾ, ವಿವೇಕಾನಂದ ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ತ್ರಿವೇಣಿ ಮತ್ತಿತರರು ಉಪಸ್ಥಿತರಿದ್ದರು.

ವಾರ್ತಾ ಭಾರತಿ | ಗುರುವಾರ, ಫೆಬ್ರವರಿ 18, 202



ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಅನಕೃ ಕನ್ನಡ ಸಂಘ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಸಂಘಗಳ ಒಕ್ಕೂಟದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾವ್ಯಮೇಳವನ್ನು ಡಾ.ಪ್ರೋಡೆ ಕೃಷ್ಣ ಉದ್ಘಾಟಿಸಿದರು. ಈ ವೇಳೆ ರು.ಬಸಪ್ಪ, ಗೋವಿಂದರಾಜು, ಎಂ.ತಿಮ್ಮಯ್ಯ, ನಾ.ಶ್ರೀಧರ್, ಸಿಸಿರಾ ಸೇರಿದಂತೆ ಮತ್ತಿತರರು ಹಾಜರಿದ್ದರು.

ಕಸ್ತೂರಿ ಪ್ರಭ

ಫೆಬ್ರವರಿ, ೨೦೨೧



ನಾಡೋಜ ಪುರಸ್ಕೃತ ಖ್ಯಾತ ಶಿಕ್ಷಣ ತಜ್ಞರು, ಕರ್ನಾಟಕ ಗಾಂಧಿ ಭವನದ ಅಧ್ಯಕ್ಷರು, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ ಪಿ. ಕೃಷ್ಣ ಅವರಿಗೆ ಉದಯಭಾನು ಕಲಾ ಸಂಘದ ೨೦೧೯–೨೦೨೦ರ ಸಾಲಿನ ಅತ್ಯುನ್ನತ ಗೌರವ ಸದಸ್ಯತ್ವ ಪ್ರಧಾನ ಸಮಾರಂಭದಲ್ಲಿ ವಿಶ್ರಾಂತ ನ್ಯಾಯಮೂರ್ತಿಗಳಾದ ಎನ್. ಕುಮಾರ್, ಸುಪ್ರಸಿದ್ಧ ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಉದಯಭಾನು ಕಲಾ ಸಂಘದ ಅಧ್ಯಕ್ಷರಾದ ಶ್ರೀ ರಾಮೇಗೌಡರಿದ್ದರು.

ಕನ್ನಡಪ್ರಭ ಸೋಮವಾರ 5.4.2021

ಜಾತ್ಯತೀತತೆಯ ಬದ್ಧತೆ ಇದ್ದರಷ್ಟೇ ದಲಿತರೊಂದಿಗೆ ಬೆರೆಯಲು ಸಾಧ್ಯ

ದಲಿತನೊಂದಿಗೆ ಒಂದೇ ತಟ್ಟೆಯಲ್ಲಿ ಊಟ ಮಾಡಿದ್ದ ಕೆಂಗರಾಮಯ್ಯ ಮಾದರಿ: ಸಿದ್ದು

ಲೇಖಕ ಡಾ| ನಂದೀಶ್ವರ್ ವಿರಚಿತ 'ಹೆಡ್‌ಮಾಸ್ಟರ್ ಕೆಂಗರಾಮಯ್ಯ' ಕೃತಿ ಲೋಕಾರ್ಪಣೆ

ಕನ್ನಡಪ್ರಭ ವಾರ್ತೆ ಬೆಂಗಳೂರು

ಜಾತ್ಯತೀತತೆಯ ಬಗ್ಗೆ ಬದ್ಧತೆ ಇದ್ದವರಿಗೆ ಮಾತ್ರ ದಲಿತರೊಂದಿಗೆಒಂದೇತಟ್ಟೆಯಲ್ಲಿಊಟಮಾಡುವುದಕ್ಕೆ ಸಾಧ್ಯ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.


ಡಾ| ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಡಾ| ನಂದೀಶ್ವರ್ ಅವರ 'ಹೆಡ್‌ಮಾಸ್ಟರ್ ಕೆಂಗರಾಮಯ್ಯ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಹೆಡ್ ಮಾಸ್ಟರ್ ಕೆಂಗರಾಮಯ್ಯ ಅವರು ದಲಿತ ಸಮುದಾಯದ ಕೆ.ಎಚ್.ರಂಗನಾಥ್ ಅವರನ್ನು ತಮ್ಮ ಮನೆಗೆ ಊಟಕ್ಕೆ ಕರೆದು ಒಂದೇ ತಟ್ಟೆಯಲ್ಲಿ ಊಟ ಮಾಡುವ ಮೂಲಕ ಮಾದರಿಯಾಗಿದ್ದಾರೆ ಎಂದು ಅವರು ಹೇಳಿದರು.

ಕೆಂಗರಾಮಯ್ಯ ಅವರು ಸಮಾಜ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ತಮ್ಮ ಜೀವನವನ್ನೇ ಅರ್ಪಿಸಿಕೊಂಡಿದ್ದರು. ಸಾಮಾನ್ಯ ಕುಟುಂಬದಲ್ಲಿ ಜನಿಸಿ ಶಿಕ್ಷಕ ವೃತ್ತಿಯಲ್ಲಿ ಬದ್ಧತೆ ಮೆರೆದಿದ್ದರು. ಜಾತ್ಯಾತೀತತೆ, ಗಾಂಧಿವಾದ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬದುಕಿದ್ದರು ಎಂದು ಹೇಳಿದರು.

ವಿಧಾನಸಭೆ ಮಾಜಿ ಸಭಾಪತಿ ರಮೇಶ್‌ಕುಮಾರ್ ಮಾತನಾಡಿ, ಹೆಡ್ ಮಾಸ್ಟರ್ ಕೆಂಗರಾಮಯ್ಯ ಅವರು ಎಲ್ಲರಿಗೂ ಉಚಿತವಾಗಿ ಶಿಕ್ಷಣವನ್ನು ಹೇಳಿಕೊಟ್ಟವರು. ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವು ಶಿಕ್ಷಕರು, ಪ್ರಾಧ್ಯಾಪಕರು ಟ್ಯೂಶನ್ ಸಿಂಡಿಕೇಟ್‌ಗಳನ್ನು ಮಾಡಿಕೊಂಡು ಹಣದ ದಂಧೆ ನಡೆಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಮಾಜಿ ಅಡ್ವೊಕೇಟ್ ಜನರಲ್ ರವಿವರ್ಮ ಕುಮಾರ್ ಮಾತನಾಡಿ, ಹೆಡ್ ಮಾಸ್ಟರ್ ಕೆಂಗರಾಮಯ್ಯ ಅವರು ನನ್ನ ತಂದೆಯಾಗಿರುವುದಕ್ಕೆ ಹೆಮ್ಮೆ ಆಗುತ್ತದೆ. ಅವರು ನಮಗೆ ಬಾಲ್ಯದಿಂದಲೇ ಜಾತ್ಯತೀತ ಮೌಲ್ಯಗಳನ್ನು ಹೇಳಿಕೊಟ್ಟವರು. ಮುಸ್ಲಿಮ್ ಮದುವೆಗಳಿಗೆ ಕರೆದುಕೊಂಡು ಹೋಗಿ ಅಲ್ಲಿನ ಸಂಸ್ಕೃತಿಯನ್ನು ಪರಿಚಯಿಸಿದರು ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ| ವೂಡೇ ಪಿ.ಕೃಷ್ಣ, ಲೇಖಕ ಡಾ| ನಂದೀಶ್ವರ್, ವಿಶ್ರಾಂತ ಪ್ರಾಧ್ಯಾಪಕ ಡಾ. ವಿವೇಕಾನಂದ, ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಇನ್ನಿತರರು ಇದ್ದರು.



ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಹೆಡ್‌ಮಾಸ್ಟರ್ ಕೆಂಗರಾಮಯ್ಯ' ಕೃತಿಯನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆ ಮಾಡಿದರು. ರಮೇಶ್ ಕುಮಾರ್, ರವಿವರ್ಮ ಕುಮಾರ್, ಡಾ| ವೂಡೇ ಪಿ.ಕೃಷ್ಣ, ಡಾ| ನಂದೀಶ್ವರ್ ಇತರರಿದ್ದರು.

ಸರ್ಕಾರಿ ದುಡ್ಡು ಯಾರಪ್ಪನ ಮನೆ ದುಡ್ಡಲ್ಲ ಅನ್ನುವುದು ಬೈದಂಗಾ?

ಸರ್ಕಾರಿ ದುಡ್ಡು ಯಾರಪ್ಪನ ಮನೆ ದುಡ್ಡಲ್ಲ ಅಂದರೆ ಅದು ಬೈದಂಗಾ? ಮೊದಲು ಯಡಿಯೂರಪ್ಪ ಯತ್ನಾಳ್‌ಗೆ ಬೈದು ಬಾಯಿ ಮುಚ್ಚಿಸಲಿ. ನನಗೂ 40 ವರ್ಷದ ಅನುಭವವಿದೆ. ಇದು ಯಡಿಯೂರಪ್ಪರ ಮನೆ ಹಣ ಅಲ್ಲ, ಸರ್ಕಾರದ ಹಣ ಅಂತ ಹೇಳುವುದು ಅನ್ ಪಾರ್ಲಿಮೆಂಟರಿ ಪದವಾ ಎಂದು ಪ್ರಶ್ನಿಸುವ ಮೂಲಕ ಸಿದ್ದರಾಮಯ್ಯ ಅವರು ತಮ್ಮ ಹೇಳಿಕೆ ಸಮರ್ಥಿಸಿಕೊಂಡರು.

ಸಿದ್ದರಾಮಯ್ಯ ಅವರನ್ನು ಮಾಜಿ ಮುಖ್ಯಮಂತ್ರಿ ಎಂದು ಕರೆದರೆ ನೋವಾಗುತ್ತೆ. ಅವರನ್ನು ವಿರೋಧ ಪಕ್ಷದ ನಾಯಕ ಎಂದು ಕರೆಯಿರಿ. ಕಾಲ ಕೂಡಿಬಂದರೆ ಮತ್ತೊಮ್ಮೆ ಅವರು ಮುಖ್ಯಮಂತ್ರಿ ಆಗಲಿದ್ದಾರೆ. ಸಿದ್ದರಾಮಯ್ಯ ಅವರನ್ನು ಮಾಜಿ ಮುಖ್ಯಮಂತ್ರಿ ಅನ್ನಬೇಡಿ. ಇದು ಅವರಿಗೆ ಅಪಮಾನ ಮಾಡಿದಂತೆ.

• **ರಮೇಶ್‌ಕುಮಾರ್** ಮಾಜಿ ಸ್ಪೀಕರ್

ಬೆಂಗಳೂರು ಉದಯವಾಣಿ
ಸೋಮವಾರ, ಏಪ್ರಿಲ್ 5, 2021

ಜನಾಶೀರ್ವಾದ ಸಿಕ್ಕರೆ ಸಿದ್ದು ಮತ್ತೆ ಸಿಎಂ



ನಗರದ ಗಾಂಧಿ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಹೆಡ್ ಮಾಸ್ಟರ್ ಕೆಂಗರಾಮಯ್ಯ ಕೃತಿಯನ್ನು ವಿರೋಧ ಪಕ್ಷ ನಾಯಕ ಸಿದ್ದರಾಮಯ್ಯ ವಿಧಾನಸಭೆ ಮಾಜಿ ಸಭಾಪತಿ ರಮೇಶ್ ಕುಮಾರ್, ಬಿಡುಗಡೆ ಮಾಡಿದರು.

ಬೆಂಗಳೂರು: 'ಎಲ್ಲರಿಗೂ ವಿನಂತಿ ಮಾಡುತ್ತೇನೆ. ದಯಮಾಡಿ ನಮ್ಮ ನಾಯಕರನ್ನು ಮಾಜಿ ಮುಖ್ಯಮಂತ್ರಿ ಎಂದು ಕರೆಯಬೇಡಿ. ಅವರು ಹಿಂದೆ ಮುಖ್ಯಮಂತ್ರಿ ಆಗಿದ್ದರು. ಜನರಿಗೆ ಇಷ್ಟವಿದ್ದರೆ ಹಾಗೂ ಅವಕಾಶ ಸಿಕ್ಕರೆ ಮತ್ತೊಮ್ಮೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಬಹುದು ಎಂದು ವಿಧಾನಸಭೆ ಮಾಜಿ ಸಭಾಪತಿ ರಮೇಶ್ ಕುಮಾರ್ ಅವರು ಸಿದ್ದರಾಮಯ್ಯನವರ ಸಮ್ಮುಖದಲ್ಲೇ ವಿಶ್ವಾಸ ವ್ಯಕ್ತಪಡಿಸಿದರು.

ಡಾ.ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಿಂದ ನಗರದ ಗಾಂಧಿ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಹೆಡ್‌ಮಾಸ್ಟರ್ ಕೆಂಗರಾಮಯ್ಯ ಕೃತಿ ಲೋಕಾರ್ಪಣೆ ಸಮಾರಂಭ ಉದ್ದೇಶಿಸಿ ಮಾತನಾಡಿದರು.

'ರಾಜ್ಯದ ಜನರು ಇಷ್ಟಪಟ್ಟರೆ ಮಾತ್ರ, ಸಿದ್ದರಾಮಯ್ಯನವರು ಮತ್ತೆ ಮುಖ್ಯಮಂತ್ರಿ ಆಗಬಹುದು. ಜನರು ಇಷ್ಟಪಡುವುದು, ಜನರ ಹತ್ತಿರ ಇದ್ದು ಅವರ ನೋವನ್ನು ಅರ್ಥ ಮಾಡಿಕೊಂಡಾಗ ಮಾತ್ರ. ಅವರ ಸಮಸ್ಯೆಗಳಿಗೆ ಸ್ಪಂದಿಸಿದಾಗ, ಬಹುಶಃ ಸಿದ್ದರಾಮಯ್ಯ ಅವರು ಆ ದಾರಿಯಲ್ಲಿ ಸಾಗುತ್ತಿದ್ದಾರೆ. ಮುಂದೆ ಮತ್ತೆ ಸಿಎಂ ಆಗುವ ಅವಕಾಶ ಜನರೇ ನೀಡಬಹುದು' ಎಂದು ಭವಿಷ್ಯ ನುಡಿದರು.

ನಮ್ಮ ಪಂಚೇಂದ್ರಿಯಗಳೆಲ್ಲಾ ಸತ್ತು ಹೋಗುತ್ತಿವೆ: 'ನಮಗೆ ನಮ್ಮ ಪಂಚೇಂದ್ರಿಯಗಳೆಲ್ಲಾ ಕ್ರಮೇಣವಾಗಿ ಸತ್ತು ಹೋಗುತ್ತಿವೆ. ನಾಚಿಕೆ ಎನ್ನುವ ಪದ ನಮಗೆ ಮರೆತು ಹೋಗಿದೆ. ಕೃತಜ್ಞತೆ ಎಂಬುದು ನಮ್ಮ ತಬ್ಬಕೋಶದಲ್ಲೇ ಇಲ್ಲ, ನ್ಯಾಯ, ಅನ್ಯಾಯಗಳ ಬಗ್ಗೆ ಹೆಚ್ಚಿನ ಸಮಯ ಕೊಡಲು ಆಗುವುದಿಲ್ಲ, ಏಕೆಂದರೆ, ನಮ್ಮ ಪಂಚೇಂದ್ರಿಗಳು ಕೆಲಸ ಮಾಡುತ್ತಿಲ್ಲ, ಈ ರೀತಿಯ ಪರಿಸ್ಥಿತಿಯಲ್ಲಿರುವ ನಾವು ಈ ರೀತಿಯ ಪುಸ್ತಕಗಳನ್ನು ಓದುವ ಅಗತ್ಯವಿದೆ ಎಂದರು.

ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಪ್ರಸ್ತುತ ಸಮಾಜದಲ್ಲಿ ತಾರತಮ್ಯ ತಾಂಡವವಾಡುತ್ತಿದೆ. ಜಾತ್ಯತೀತತೆ ,ಮತ್ತು ಶಿಕ್ಷಣ ಸಂಸ್ಕೃತಿಯ ವಂಚನೆ ಇದಕ್ಕೆ ಕಾರಣ. ಬಹುಸಂಖ್ಯಾತ ಜನರು ಅಕ್ಷರದಿಂದ ವಂಚಿತರಾಗಿದ್ದಾರೆ. ಆದರೆ, ಕೆಂಗರಾಮಯ್ಯ, ವಿದ್ಯೆ ಕೊಡುವುದೇ ಆಸ್ತಿ ಎಂದು ನಂಬಿದ್ದರು. ಅವರೊಬ್ಬ ಆದರ್ಶ ಶಿಕ್ಷಕ ಎಂದೂ ದೂರಾಸೆ ಪಟ್ಟವರಲ್ಲ, ತಮ್ಮ ಪಿತ್ರಾರ್ಜಿತ ಆಸ್ತಿ ಪಡೆಯದೆ, ಸಹೋದರರಿಗೆ ಬಿಟ್ಟು ಕೊಟ್ಟಿದ್ದಾರೆ. ಪ್ರಸ್ತುತ ಯಾರಾದರೂ ಈ ರೀತಿ ಆಸ್ತಿ ಕೊಡಲು ಸಾಧ್ಯವೇ? ಗಂಡಂದಿರು ಬಿಟ್ಟರೂ ಹೆಂಡತಿಯರು ಬಿಡಲ್ಲ ಅಲ್ವಾ..' ಎಂದು ನಗೆ ಚಟಾಕಿ ಹಾರಿಸಿದರು.

ಹಿರಿಯ ವಕೀಲ ಪ್ರೊ.ರವಿವರ್ಮಕುಮಾರ್ ಮಾತನಾಡಿದರು. ಮಾಜಿ ಸಚಿವ ಟಿ.ಬಿ.ಜಯಚಂದ್ರ, ಮಾಜಿ ಶಾಸಕ ಕೆ.ಎನ್.ರಾಜಣ್ಣ, ಕೆಪಿಸಿಸಿ ವಕ್ತಾರ ಮುರಳೀಧರ ಹಾಲಪ್ಪ, ಕೃತಿಕಾರ ಡಾ.ನಂದೀಶ್ವರ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ ವಿಶ್ರಾಂತ ಪ್ರಾಧ್ಯಾಪಕ ಡಾ.ವಿವೇಕಾನಂದ ಇತರರಿದ್ದರು.

ಕೆಂಗರಾಮಯ್ಯ ಒಬ್ಬ ಆದರ್ಶ ಶಿಕ್ಷಕ

'ಹೆಡ್ ಮಾಸ್ಟರ್ ಕೆಂಗರಾಮಯ್ಯ ಒಬ್ಬ ಆದರ್ಶ ಶಿಕ್ಷಕ. ವಿವೇಕಾನಂದ ಮತ್ತು ಮಹಾತ್ಮಗಾಂಧಿ ವಿಚಾರಧಾರೆ ಅವರ ಮೇಲೆ ಗಾಢವಾಗಿ ಪ್ರಭಾವ ಬೀರಿದ್ದವು. ಸಾಮಾನ್ಯ ಕುಟುಂಬದಲ್ಲಿ ಬೆಳೆದು ಬಿಎಸ್ಸಿ ಪದವಿ ಪಡೆದು, ಶಿಕ್ಷಕ ವೃತ್ತಿ ರಂಭಿಸಿದ್ದರು. ನಿವೃತ್ತಿವರೆಗೂ ಬದ್ಧತೆಯಿಂದ ಶಿಕ್ಷಕ ವೃತ್ತಿ ನಿರ್ವಹಿಸಿದ್ದಾರೆ. ತನ್ನ ಜೀವನದಲ್ಲಿ ಜಾತ್ಯತೀತ ತತ್ವ ಅಳವಡಿಸಿಕೊಂಡು, ಎಲ್ಲ ವಿದ್ಯಾರ್ಥಿಗಳನ್ನು ತನ್ನ ಮಕ್ಕಳು ಎಂಬ ದೊಡ್ಡ ಗುಣ ಅಳವಡಿಸಿಕೊಂಡಿದ್ದರು. ಸಂಜೆ ವೇಳೆ ಅವರ ಮನೆಯಲ್ಲಿ ಎಲ್ಲ ಜಾತಿಯ ಮಕ್ಕಳಿಗೆ ಉಚಿತವಾಗಿ ಪಾಠ ಮಾಡುತ್ತಿದ್ದರು. ಒಬ್ಬ ಮಾದರಿ ಶಿಕ್ಷಕ ಹೇಗಿರಬೇಕು ಎಂಬುದನ್ನು ಅವರ ಜೀವನ ಚರಿತ್ರೆಯಲ್ಲಿ ಕಾಣಬಹುದು' ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದರು.







ಬೆಂಗಳೂರಿನ ಗಾಂಧೀ ಭವನದಲ್ಲಿ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ರಾಜ್ಯ ಎನ್.ಎಸ್.ಎಸ್., ಕರ್ನಾಟಕ ಪ್ರತಿಭಾ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಆರನೇ ಯುವಜನ ಸಮ್ಮೇಳನದಲ್ಲಿ ಖ್ಯಾತ ಕವಯಿತ್ರಿ ಶ್ರೀಮತಿ ಜಯಶ್ರೀ ರಾಜು ಅವರ 'ಮುಖ ಹೊತ್ತ ಭಾವ' ಕೃತಿಯನ್ನು ನಾಡೋಜ ಡಾ. ಕಮಲ ಹಂಪನಾ ಲೋಕಾರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ ಅವರನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣ ಹಾಗೂ ನಾಡೋಜ ಡಾ. ಹಂಪನಾ ಅವರುಗಳು ಅಭಿನಂದಿಸಿದರು. ವೇದಿಕೆಯಲ್ಲಿ ಸಾಹಿತಿಗಳಾದ ಡಾ. ಸಿಸಿರಾ, ಡಾ. ಪಾನ್ಯಂ ನಟರಾಜ್, ಡಾ. ಗಣನಾಥ ಶೆಟ್ಟಿ ಎಕ್ಕಾರ್, ಇಂದಿರಾ ಕೃಷ್ಣಪ್ಪ, ಶ್ರೀಮತಿ ಸವಿತಾ ರಾಮು ಇದ್ದಾರೆ.

ಪಬ್ಲಿಕ್ ಪವರ್ 16 February - 2021

ಎಂ.ಬಿ.ಎ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ





ಬೆಂಗಳೂರು :- ಯಲಹಂಕ ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡಿ ಸಂಸ್ಥೆ ಇವಿ ನಡೆಯುತ್ತಿರುವ ಎಂ.ಬಿ.ಎ. ಪ್ರಸ್ತುತ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಆಯೋಜಿಸಲಾಯಿತು. ಮುಖ್ಯ ಅತಿಥಿಗಳಾಗಿ ಪ್ರೊ. ನರಸಿಂಹಮೂರ್ತಿ ಉಪ ಕುಲಪತಿಗಳು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ ಬೆಂಗಳೂರು ರವರು ಮಾತನಾಡಿ ಪ್ರಸ್ತುತ ಸಮಾಜದಲ್ಲಿ ಜಾಗತೀಕರಣವಾಗಿ ಪರಿವರ್ತನೆಗೊಳ್ಳುತ್ತಿದ್ದು ಈ ಸಂಸ್ಥೆ ಅತ್ಯುತ್ತಮ ಶಿಕ್ಷಣ ನೀಡುವುದರೊಂದಿಗೆ ಪಾರಂಪರಿಕ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದರಲ್ಲಿ ಮಹತ್ವದ್ದಾಗಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಂ.ಬಿ.ಎ ಪದವಿ ಅತ್ಯವಶಕವಾಗಿದೆ. ಪ್ರತಿಯೊಂದು ವಸ್ತುವನ್ನು ಮಾರಾಟ ಮಾಡಬೇಕಾದರೆ ಮಾರ್ಕೆಟಿಂಗ ನಿರ್ವಹಣೆ ಬಹಳ ಮುಖ್ಯವಾದ್ದದು. ಇಲ್ಲದಿದ್ದರೆ ನಷ್ಟ ಅನುಭವಿಸಬೇಕಾಗುತ್ತದೆ ಎಂದು ಹೇಳಿದರು. ಇವತ್ತಿನ ವಿದ್ಯಾರ್ಥಿಗಳು ಶ್ರದ್ಧಾ ಭಕ್ತಿಯಿಂದ ಹಾಗೂ ಮನಸ್ಪೂರ್ತಿಯಾಗಿ ಶಿಕ್ಷಣದ ಕಡೆಗೆ ಗಮನ ಹರಿಸಿ ತನ್ನ ಬದುಕು ಸಾಕಾರಗೊಳಿಕೊಳ್ಳಲು ಪಣತೊಡಬೇಕು ಎಂದು ಸಲಹೆ ನೀಡಿದರು. ವಿಪ್ರೋ ಲಿಮಿಟೆಡ್ ಕಂಪನಿ ಬೆಂಗಳೂರು ವಿಭಾಗಿಯ ಸರಬರಾಜು ಮುಖ್ಯಸ್ಥರಾದ ಮಧುಸುಧನ ಮೂರ್ತಿ ರವರು ಮಾತನಾಡಿ ಮಹಾಭಾರತದಲ್ಲಿ ಬರುವಂತಹ ದ್ರೋಣಾಚಾರ್ಯ, ಅರ್ಜುನ ಮತ್ತು ಏಕಲವ್ಯನ ಸನ್ನಿವೇಶಗಳನ್ನು ಪರಿಚಯಿಸುವುದರ ಮುಖಾಂತರ ದ್ರೋಣಾಚಾರ್ಯರ ಪ್ರತಿಮೆಯನ್ನೆ ಗುರು ಎಂದು ಭಾವಿಸಿ ಶ್ರದ್ಧಾಭಕ್ತಿಯಿಂದ ಬಿಲ್‌ವಿದ್ಯೆಯನ್ನು ಕಲಿತ ಏಕಲವ್ಯನ ಸಾಧನೆ ಮಹತ್ವವಾದದ್ದು, ಹಾಗೇ ವಿದ್ಯಾರ್ಥಿಗಳು ಯಾವುದೇ ಕೆಲಸ ಮಾಡಿದರು ಯಾವುದೇ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರು ನಿಷ್ಠೆ ಪ್ರಮಾಣಿಕತೆ ಪರಿಶ್ರಮದಿಂದ ಮಾತ್ರ ಗುರಿಮುಟ್ಟಲು ಸಾಧ್ಯ ಎಂದು ಸ್ಪಷ್ಟವಾಗಿ ತಿಳಿಸಿದರು. ಗೌರವಾನ್ವಿತ ಅತಿಥಿಗಳಾಗಿ ಆಗಮಿಸಿದ ನಾಡೋಜ ಡಾ. ವೂಡ್ಡೆ ಪಿ. ಕೃಷ್ಣ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವಾನ್ವಿತ ಕಾರ್ಯದರ್ಶಿಗಳು ಮಾತನಾಡಿ ಹೊಸದಾಗಿ ಪ್ರವೇಶ ಪಡೆದಿರುವ ಎಂ.ಬಿ.ಎ ತರಗತಿಯ ಎಲ್ಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸ್ವಾಗತಿಸಿ, ಇವತ್ತಿನ ದಿನಗಳಲ್ಲಿ ವಿದ್ಯಾರ್ಥಿಗಳು ಸಾಮಾಜೀಕ ಜಾಲ ತಾಣಗಳನ್ನು ಉಪಯೋಗಿಸುವವರ ಜೊತೆಗೆ ಹೊಸ ಹೊಸ ಸಂಶೋಧನಾ ಗ್ರಂಥಗಳು ಓದುವುದರಿಂದ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಇನ್ನೋರ್ವ ಗೌರವಾನ್ವಿತ ಅತಿಥಿಗಳಾದ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಜಂಟಿ ಕಾರ್ಯದರ್ಶಿ ಶೇಷನಾರಾಯಣ, ಸಂಸ್ಥೆಯ ಅಧ್ಯಕ್ಷರಾದ ಎನ್.ಆರ್. ಪಂಡಿತ್ಯಾರಾಧ್ಯ, ಪ್ರಾಧ್ಯಾಪಕ ಮತ್ತು ನಿರ್ದೇಶಕರಾದ ಡಾ. ವತ್ಸಲಾ ಜಿ. ಹಾಗೂ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಂಜೆವಾಣಿ

ಬೆಂಗಳೂರು
ಮಂಗಳವಾರ 16 ಫೆಬ್ರವರಿ 2021



ನಗರದ ಯಲಹಂಕ ಶೇಷಾದ್ರಿಪುರಂ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಎಂಬಿಎ 2020-22ರ ವಿದ್ಯಾರ್ಥಿ ಬಳಗದ ಉದ್ಘಾಟನೆಯನ್ನು ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ.ಕೃಷ್ಣ ನೆರವೇರಿಸಿದರು. ಬೆ.ವಿವಿ ಉಪಕುಲಪತಿ ಪ್ರೊ. ನರಸಿಂಹಮೂರ್ತಿ, ವಿಪ್ರೋ ಕಂಪನಿ ಬೆಂಗಳೂರು ವಲಯ ಮುಖ್ಯಸ್ಥ ಮಧುಸೂದನ್ ಮೂರ್ತಿ ಕಾಲೇಜಿನ ನಿರ್ದೇಶಕಿ ಡಾ.ವತ್ಸಲ ಜಿ.ಮತ್ತಿತರರು ಇದ್ದಾರೆ.

ನಂ. 1 ಕನ್ನಡ ದಿನಪತ್ರಿಕೆ

ಶನಿವಾರ 6 ಫೆಬ್ರವರಿ 2021
6 FEBRUARY 2021



ವಿಜಯವಾಣಿ ಚಿತ್ರ

ಕರ್ನಾಟಕ ಗಾಂಧಿ ಸ್ಮಾರಕ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ 6ನೇ ಯುವಜನ ಸಮ್ಮೇಳನದಲ್ಲಿ ಅಧ್ಯಕ್ಷೆ ಜಯಶ್ರೀ ರಾಜು ಅವರನ್ನು ಗೌರವಿಸಲಾಯಿತು. ಸಾಹಿತಿಗಳಾದ ಡಾ. ಹಂ.ಪ.ನಾಗರಾಜಯ್ಯ, ಕಮಲಾ ಹಂಪನಾ, ಡಾ. ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.




ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಕರ್ನಾಟಕ ಪ್ರತಿಭಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಗಾಂಧಿಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಧ್ಯಾಪಕಿ ಜಯಶ್ರೀರಾಜು ಅವರನ್ನು ಸನ್ಮಾನಿಸಲಾಯಿತು. ವೂಡೆ ಪಿ.ಕೃಷ್ಣ, ಕಮಲಾ ಹಂಪನಾ, ಹಂಪ ನಾಗರಾಜಯ್ಯ , ಇಂದಿರಾ ಕೃಷ್ಣ, ಡಾ.ಪಾನ್ಯಂ ನಟರಾಜ್ ಮತ್ತಿತರರು ಈ ಸಂದರ್ಭದಲ್ಲಿದ್ದರು.

ಈ ಸಂಜೆ

ಶುಕ್ರವಾರ

05-02-2021

ಸಚ್ಚಾರಿತ್ರ್ಯದಿಂದ ಉತ್ತಮ ಸಮಾಜದ ನಿರ್ಮಾಣ



ಬೆಂಗಳೂರು, ಫೆ.5- ಇಂದಿನ ಯುವ ಪೀಳಿಗೆ ಹಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಿದೆ. ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಯುವಕರು ಸಚ್ಚಾರಿತ್ರ್ಯ, ಆತ್ಮಶುದ್ಧಿ ಮತ್ತು ಉತ್ತಮ ಆಲೋಚನೆಗಳನ್ನು ಸದೃಢಗೊಳಿಸಿಕೊಳ್ಳಬೇಕು ಹಾಗೂಉತ್ತಮ ಬದುಕನ್ನು ರೂಪಿಸಿಕೊಂಡರೆ ಸಮಾಜವು ಉನ್ನತಿಯೆಡೆಗೆ ಸಾಗುತ್ತದೆ ಎಂದು ತಮಿಳುನಾಡಿನ ವಿಲ್ಲುಪುರಂನ ರಾಮಕೃಷ್ಣ ಮಿಷನ್‌ನ ಕಾರ್ಯದರ್ಶಿಗಳಾದ ಸ್ವಾಮಿ ಪರಮಸುಖಾನಂದಜೀ ಮಹಾರಾಜ್ ತಿಳಿಸಿದ್ದಾರೆ.

ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ವಿವೇಕಾನಂದ ಅಧ್ಯಯನ ಕೇಂದ್ರವು ರಾಷ್ಟ್ರೀಯ ಯುವ ದಿನಾಚರಣೆಯ ಅಂಗವಾಗಿ ಚಾರಿತ್ರ್ಯ ಮತ್ತು ಯುವ ಶಕ್ತಿ ಎಂಬ ವಿಷಯ ಕುರಿತು ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಕುರಿತು ಅವರು ಮಾತನಾಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರು ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ವಿವೇಕಾನಂದರು ಬಯಸಿದ ಶಿಸ್ತು ಇಂದಿನ ಯುವ ಜನಾಂಗಕ್ಕೆ ಅತ್ಯಂತ ಅವಶ್ಯವಾಗಿದೆ. ವಿವೇಕಾನಂದರ ತತ್ವಗಳು ಇಂದಿಗೂ ಪ್ರಸ್ತುತವಾಗಿದೆ ಎಂದರು.

ಸ್ವಾಮಿ ಪರಮಸುಖಾನಂದಜೀ ಮಹಾರಾಜ್ ಅವರು ವಿವೇಕಾನಂದರ ಹಲವಾರು ತತ್ವಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಅತ್ಯಂತ ಬಡ ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ, ಇಂತಹ ಮಹನೀಯರು ಸಮಾಜಕ್ಕೆ ಅದರಲ್ಲೂ ಯುವ ಜನಾಂಗಕ್ಕೆ ಮಾದರಿಯಾಗುತ್ತಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಾಚಾರ್ಯ ಪ್ರೊ. ಎನ್.ಎಸ್. ಸತೀಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಉದಯವಾಣಿ ಸೋಮವಾರ, ಫೆಬ್ರವರಿ 1, 2021

ರಾಜಕೀಯ ಸ್ವಾರ್ಥಕ್ಕಾಗಿ ಸೇನಾನಿಗಳ ಬಲಿ



ರಾಷ್ಟ್ರಗೌರವ ಸಂರಕ್ಷಣ ಪರಿಷತ್ ಭಾನುವಾರ ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಯೋಗಿ ನಾರಾಯಣೇಂದ್ರ ಇಂಡಾಲಜಿ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಬಾಬು ಕೃಷ್ಣಮೂರ್ತಿ ಅವರು ಮಹನೀಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಬೆಂಗಳೂರು: ರಾಜಕೀಯ ಸ್ವಾರ್ಥಕ್ಕಾಗಿ ಸ್ವಾತಂತ್ರ್ಯ ಸೇನಾನಿಗಳನ್ನೇ ಬಲಿ ಕೊಡುವ ಸ್ಥಿತಿಗೆ ನಾವು ತಲುಪಿದ್ದೇವೆ ಎಂದು ಹಿರಿಯ ಪತ್ರಕರ್ತ ಹಾಗೂ ಯೋಗಿ ನಾರಾಯಣೇಂದ್ರ ಇಂಡಾಲಜಿ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಬಾಬು ಕೃಷ್ಣಮೂರ್ತಿ ಕಳವಳ ವ್ಯಕ್ತಪಡಿಸಿದರು.

ರಾಷ್ಟ್ರಗೌರವ ಸಂರಕ್ಷಣ ಪರಿಷತ್ ಭಾನುವಾರ ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ದೇಶಬಂಧು ಚಿತ್ತರಂಜನ್ ದಾಸ್ ಅವರ 150ನೇ ವರ್ಷಾಚರಣೆ, ವಾಸುದೇವ ಬಲವಂತ ಫಡ್ಕೆ ಅವರ 175ನೇ ವರ್ಷಾಚರಣೆ ಮತ್ತು ಗುರುತೇಗ್ ಬಹದ್ದೂರ್ ಅವರ 400ನೇ ವರ್ಷಾಚರಣೆಯಲ್ಲಿ ಮಾತನಾಡಿ, ದೇಶದಲ್ಲಿ ಶ್ರದ್ಧೆ ಸಂಸ್ಕಾರಗಳನ್ನು ಜನರು ಮರೆಯುತ್ತಿದ್ದಾರೆ ಎಂದರು.

ಮೌಲ್ಯಗಳು ನಶಿಸಿ ಹೋಗುತ್ತಿದ್ದು ಭ್ರಷ್ಟ ರಾಜಕಾರಣ, ಅನಾಚಾರ ಎಂಬ ಋಣಾತ್ಮಕ ಅಂಶಗಳು ಹೆಚ್ಚಾಗುತ್ತಿವೆ. ಸ್ವಾತಂತ್ರ್ಯ ಹೋರಾಟಗಾರರನ್ನೇ ಟೀಕೆ ಮಾಡುವ ಹಂತಕ್ಕೆ ಬೆಳೆದಿದ್ದೇವೆ. ರಾಜಕೀಯ ಸ್ವಾರ್ಥಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹನೀಯರನ್ನೇ ಬಲಿಕೊಡಲಾಗುತ್ತಿದೆ. ಕ್ರಾಂತಿಕಾರಿಗಳು, ಅಹಿಂಸಾವಾದಿಗಳು ಸೇರಿದಂತೆ ಎಲ್ಲರ ಪ್ರಯತ್ನದಿಂದ ದೇಶ ಸ್ವತಂತ್ರವಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಕೆಟ್ಟದಾಗಿ ಮಾತಾನಾಡುವುದು ಸರಿಯಲ್ಲ ಎಂದರು.

ರಾಷ್ಟ್ರಗೌರವ ಸಂರಕ್ಷಣ ಪರಿಷತ್ ಅಧ್ಯಕ್ಷ ಟಿ.ಎನ್.ರಾಮಕೃಷ್ಣ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಸಾವಿರಾರು ಸಂಸ್ಥಾನಗಳಿದ್ದರೂ ಒಗ್ಗಟ್ಟಿರಲಿಲ್ಲ. ಹೀಗಾಗಿ ಬ್ರಿಟಿಷರಿಗೆ ದೇಶದ ಸಂಪತ್ತು ಲೂಟಿ ಮಾಡಲು ಹಾಗೂ ಒಡೆದು ಆಳಲು ಸಾಧ್ಯವಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತ ಅತಿ ಶ್ರೀಮಂತ ದೇಶವಾಗಿತ್ತು. ಮೊಗಲರು, ಬ್ರಿಟಿಷರು ಸೇರಿದಂತೆ ಪರಕೀಯರ ದಾಳಿಯಿಂದ ಸಂಪತ್ತಿನ ಜತೆಗೆ ದೇವಾಲಯ, ಐತಿಹಾಸಿಕ ಕಟ್ಟಡಗಳ ನಾಶವಾಗಿದೆ ಎಂದರು.

ಸ್ವಾತಂತ್ರ್ಯ ಸಂಗ್ರಾಮ, ಸಮಾಜದ ಸಂಘಟನೆಯ ವಿಚಾರದಲ್ಲಿ ಗುರುತೇಗ್ ಬಹದ್ದೂರ್, ವಾಸುದೇವ ಬಲವಂತ ಫಡ್ಕೆ, ದೇಶಬಂಧು ಚಿತ್ತರಂಜನ್ ದಾಸ್ ಅವರು ತಮ್ಮ ಕಾಲಘಟ್ಟದಲ್ಲಿ ಶ್ರೇಷ್ಠ ಸೇವೆಯನ್ನು ಸಲ್ಲಿಸಿದ್ದಾರೆ ಎಂದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಮಾತನಾಡಿದರು.

ಶನಿವಾರ 30 ಜನವರಿ 2021
30 JANUARY 2021



ವಿಜಯವಾಣಿ ಚಿತ್ರ

ಕುವೆಂಪು ಕಲಾನಿಕೇತನ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರಕವಿ ಕುವೆಂಪು ಜಯಂತಿಯಲ್ಲಿ ನಿವೃತ್ತ ಅಡ್ವೋಕೇಟ್ ಜನರಲ್ ಪ್ರೊ. ರವಿವರ್ಮಕುಮಾರ್ ದಂಪತಿಗೆ ಶ್ರೀರಕ್ಷಾ ಮಂತ್ರಮಾಂಗಲ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅನ್ನದಾನೇಶ್ವರನಾಥ ಸ್ವಾಮೀಜಿ, ನಟಿ ಅಭಿನಯ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಕಸಾಪ ಮಾಜಿ ಗೌರವ ಕಾರ್ಯದರ್ಶಿ ವ.ಚ. ಚನ್ನೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ ಇತರರಿದ್ದರು.

ಪ್ರಜಾವಾಣಿ

ಶನಿವಾರ • ಜನವರಿ 30, 2021


ಜಾತಿ–ಮತ ಬದಿಗಿಟ್ಟು ಪ್ರತಿಭೆಗೆ ಸ್ಥಾನ ನೀಡಿ: ಕೆ.ಪಿ.ಪುತ್ತೂರಾಯ

ಪ್ರಜಾವಾಣಿ ವಾರ್ತೆ

ಮಲಹಂಕ: 'ದೇಶ ಅಭಿವೃದ್ಧಿ ಪಥದಲ್ಲಿ ಸಾಗಲು ಜಾತಿ-ಮತ, ವರ್ಣ ಮತ್ತು ಧರ್ಮಗಳನ್ನು ಬದಿಗಿಡಬೇಕು. ವ್ಯಕ್ತಿಯ ಅರ್ಹತೆ ಹಾಗೂ ಪ್ರತಿಭೆಗಳನ್ನು ಗುರುತಿಸಿ ಅರ್ಹ ಹುದ್ದೆಗಳಿಗೆ ಸೂಕ್ತ ವ್ಯಕ್ತಿಗಳನ್ನು ನೇಮಿಸಬೇಕು' ಎಂದು ಶಿಕ್ಷಣತಜ್ಞ ಕೆ.ಪಿ. ಪುತ್ತೂರಾಯ ತಿಳಿಸಿದರು.

ಎಸ್ಸೆಸ್ಸೆಲ್ಸಿಯಲ್ಲಿ ರ್‍ಯಾಂಕ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ದ್ವಿತೀಯ ಪಿಯು ರ್‍ಯಾಂಕ್ ವಿದ್ಯಾರ್ಥಿಗಳಿಗೆ ಇಲ್ಲಿನ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರತಿಭೆಗೆ ಯಾವುದೇ ಜಾತಿ, ಬಡತನ ಅಡ್ಡಿ ಬರುವುದಿಲ್ಲ. ಜೀವನದಲ್ಲಿ ಆಸಕ್ತಿ ಮತ್ತು ಅಭಿರುಚಿಗೆ ಅನುಗುಣವಾಗಿ ದೊಡ್ಡ ಕನಸು ಕಾಣಬೇಕು. ಪ್ರಾಮಾಣಿಕತೆ, ಮಾನವೀಯತೆ, ಕಠಿಣ ಪರಿಶ್ರಮ ಹಾಗೂ ಛಲದ ಗುಣಗಳನ್ನು ಮೈಗೂಡಿಸಿಕೊಂಡರೆ ಯಶಸ್ಸು ಕಟ್ಟಿಟ್ಟಬುತ್ತಿ' ಎಂದರು.



ದ್ವಿತೀಯ ಪಿಯು ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು. ಕೆ.ಪಿ.ಪುತ್ತೂರಾಯ, ಪ್ರೊಡೇ.ಪಿ.ಕೃಷ್ಣ, ಆಡಳಿತ ಸಲಹಾ ಮಂಡಳಿ ಅಧ್ಯಕ್ಷ ಬಿ.ಸಿ.ಲೋಕನಾಥ್, ಪ್ರಾಂಶುಪಾಲ ಪ್ರೊ. ಟಿ.ದೊಡ್ಡೇಗೌಡ ಇದ್ದರು.

ಶಿಕ್ಷಣ ತಜ್ಞ ಪ್ರೊಡೇ. ಪಿ.ಕೃಷ್ಣ, 'ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ 37 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಮೂಲಕ ಅವರ ಪ್ರತಿಭೆಯನ್ನು ಗೌರವಿಸಲಾಗಿದೆ. ಒಳ್ಳೆಯ ಚಿಂತನೆಗಳನ್ನು ಮೈಗೂಡಿಸಿಕೊಂಡರೆ, ವಿದ್ಯಾರ್ಥಿಗಳ ಸಾಧನೆಗೆ ಸಹಕಾರಿ' ಎಂದು ಹೇಳಿದರು.

ಶೇಷಾದ್ರಿಪುರ ಶಿಕ್ಷಣ ದತ್ತಿಯ ಜಂಟಿ ಕಾರ್ಯದರ್ಶಿ ಎಸ್.ಶೇಷ ನಾರಾಯಣ, ಟ್ರಸ್ಟಿ ಅಶೋಕ್ ಭಾಗವಹಿಸಿದ್ದರು.

ನಾಟಕ ರಚನಾ ಶಿಬಿರಕ್ಕೆ ಚಾಲನೆ । ಒತ್ತಾಯದಿಂದ ಸಾಹಿತ್ಯ ರಚನೆ ಅಸಾಧ್ಯ

ಸಂಗೀತ, ನಾಟಕಕ್ಕೆ ಸಾಹಿತ್ಯ ಪೂರಕ



ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ ನಾಟಕ ರಚನಾ ಶಿಬಿರವನ್ನು ನಾಟಕಕಾರ ಬಿ.ಆರ್.ಪೋಲೀಸ್ ಪಾಟೀಲ ಗಿಡಕ್ಕೆ ನೀರುಣಿಸುವ ಮೂಲಕ ಉದ್ಘಾಟಿಸಿದರು.

> ರಂಗಭೂಮಿಯು ಹದಗೆಟ್ಟಿದ್ದು ಪ್ರೇಕ್ಷಕರು ವಿಮುಖರಾಗುತ್ತಿದ್ದಾರೆ. ನಾಟಕ ರಚನೆಗೂ ಮುನ್ನ ಸಹೃದಯ ಪ್ರೇಕ್ಷಕರನ್ನು ಸೃಷ್ಟಿಸಬೇಕಿದೆ. ನಮ್ಮ ನಾಟಕಕ್ಕೆ ಮೊದಲ ಪ್ರೇಕ್ಷಕ ನಾವೇ ಆಗಿರಬೇಕು. ಆಗ ಉತ್ತಮವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ.
>
> ಬಿ.ಆರ್.ಪೋಲೀಸ್ ಪಾಟೀಲ
> । ನಾಟಕಕಾರ

ಸಂ.ಕ.ಸಮಾಚಾರ ಬೆಂಗಳೂರು


ಸಾಹಿತ್ಯ, ನಾಟಕ ರಚನೆ ಯಾಂತ್ರಿಕವಲ್ಲ, ಅಂತಸ್ಫೂರ್ತಿಯಿಂದ ಭಾವ ಹೊರಹೊಮ್ಮಿದಾಗ ಉತ್ತಮ ಸಾಹಿತ್ಯ ರೂಪುಗೊಳ್ಳುತ್ತದೆ ಎಂದು ನಾಟಕಕಾರ ಬಿ.ಆರ್.ಪೋಲೀಸ್ ಪಾಟೀಲ ಅಭಿಪ್ರಾಯಪಟ್ಟರು.

ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ಗಾಂಧಿಭವನದಲ್ಲಿ ಏರ್ಪಡಿಸಿದ್ದ 7 ದಿನಗಳ ನಾಟಕ ರಚನಾ ಶಿಬಿರವನ್ನು ಗಿಡಕ್ಕೆ ನೀರುಣಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಶಿಬಿರ, ಕಮ್ಮಟ, ತರಬೇತಿ ನೀಡಿದರೂ ಒತ್ತಾಯದಿಂದ ಸಾಹಿತ್ಯ ರಚನೆ ಸಾಧ್ಯವಿಲ್ಲ. ಸಾಹಿತ್ಯ ರಚನೆ ಪ್ರಕ್ರಿಯೆ ನಿರಂತರವಾಗಿರಬೇಕು. ಅದರಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡಾಗ ಸರಸ್ವತಿ ನಮಗೆ ಒಲಿಯುತ್ತಾಳೆ. ನಾಟಕದ ವಸ್ತು ವಿಷಯ ಎಲ್ಲರನ್ನೂ ತಲುಪುವಂತಿರಬೇಕು. ನಾಟಕ ನಮ್ಮ ಹೃದಯದಲ್ಲಿ ಕಂಪನ ಮೂಡಿಸುವಂತಿರಬೇಕೆಂದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಸಂಗೀತ, ನಾಟಕಕ್ಕೆ ಸಾಹಿತ್ಯ ಪೂರಕ. ನಾಟಕದ ಜೊತೆ ಸಂಗೀತವನ್ನು ಅಭ್ಯಸಿಸಬೇಕು. ಇದರಿಂದ ರಂಗಭೂಮಿ ಮತ್ತಷ್ಟು ಬೆಳವಣಿಗೆ ಹೊಂದಲು ಸಾಧ್ಯವಾಗುತ್ತದೆ. ನಾಟಕದ ಅನುಭವ ನೀಡುವ ಆನಂದವನ್ನು ಯಾವುದಕ್ಕೂ ಹೋಲಿಸಲು ಸಾಧ್ಯವಿಲ್ಲ. ಮಹಾತ್ಮ ಗಾಂಧೀಜಿ ಬಾಲಕರಾಗಿದ್ದಾಗ ಸತ್ಯಹರಿಶ್ಚಂದ್ರ ನಾಟಕ ಪ್ರಭಾವ ಬೀರಿದ ರೀತಿ ನಾಟಕವು ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ದಾರಿದೀಪವಾಗುತ್ತದೆ ಎಂದು ತಿಳಿಸಿದರು.

ನಾಟಕ ಅಕಾಡೆಮಿ ಸದಸ್ಯ ಎಂ.ಎಸ್.ಗುಣಶೀಲನ್ ಜ.29 ರಿಂದ ಫೆ.4ರವರೆಗೆ ನಡೆಯುವ ನಾಟಕ ರಚನಾ ಶಿಬಿರದ ಕುರಿತು ಮಾಹಿತಿ ನೀಡಿದರು. ಸಾಹಿತಿ ಡಾ.ಬಸವರಾಜ್ ಸಬರದ, ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ನಾಟಕ ಅಕಾಡೆಮಿಯ ಅಧ್ಯಕ್ಷ ಪ್ರೊ.ಆರ್.ಭೀಮಸೇನ, ಸದಸ್ಯೆ ಪ್ರೇಮ ಬಾದಾಮಿ ಮತ್ತಿತರರಿದ್ದರು.


ಸಂಜೆವಾಣಿ
ಬೆಂಗಳೂರು
ಶುಕ್ರವಾರ 29 ಜನವರಿ 2021



ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಇಂಡಿಯಾ ಕೌನ್ಸಿಲ್‌ನ ಸದಸ್ಯ ಡಾ|| ಪ್ರಕಾಶ್ ಪಿ.ಕೃಷ್ಣ ಅವರಿಗೆ 2020ನೇ ಸಾಲಿನ ಬಸವ ಸೇವಾ ಪ್ರಶಸ್ತಿ ನೀಡಿ ಗೌರವಿಸಿದೆ.

ಶುಕ್ರವಾರ, 29-01-2021

ಗೌರವ ಪ್ರಶಸ್ತಿ



ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್‌ನ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಅತ್ಯುತ್ತಮ ಸೇವೆಯನ್ನು ಪರಿಗಣಿಸಿ ಶೇಷಾದ್ರಿಪುರಂ ಎಜುಕೇಷನ್ ಟ್ರಸ್ಟ್‌ನ ವೂಡೆ ಪಿ.ಕೃಷ್ಣ ಅವರಿಗೆ ಗೌರವ ಪ್ರಶಸ್ತಿ ನೀಡಲಾಗಿದೆ.



ಕುವೆಂಪು ಕಲಾ ನಿಕೇತನ ವತಿಯಿಂದ ಏರ್ಪಡಿಸಿದ್ದ ಕುವೆಂಪು ವಿಶ್ವಮಾನವ ಪ್ರಶಸ್ತಿ ಸಮಾರಂಭದಲ್ಲಿ ರಾಷ್ಟ್ರೀಯ ವಾಲಿಬಾಲ್ ಆಟಗಾರ ಗೋಪಾಲ್ ಎಚ್.ಸಿ. ಅವರಿಗೆ ಸಾಹಿತಿ, ಪದ್ಮಶ್ರೀ ಪುರಸ್ಕೃತ ಡಾ. ದೊಡ್ಡರಂಗೇಗೌಡ ಪ್ರಶಸ್ತಿ ನೀಡಿ ಸನ್ಮಾನಿಸಿದರು. ಡಾ. ವೂಡೆ ಪಿ.ಕೃಷ್ಣ, ಆದಿಚುಂಚನಗಿರಿ ರಾಮನಗರ ಶಾಖೆಯ ಶ್ರೀ ಅನ್ನದಾನೇಶ್ವರ ಸ್ವಾಮೀಜಿ, ಸಾಹಿತಿ ಎಲ್.ಎನ್. ಮುಕುಂದರಾಜ್, ಕೆ.ಎಸ್.ರಂಗಪ್ಪ, ಉಡುಪಿ ಕೃಷ್ಣ, ಕುವೆಂಪು ಕಲಾನಿಕೇತನ ಅಧ್ಯಕ್ಷ ಕುವೆಂಪು ಪ್ರಕಾಶ್ ಮತ್ತಿತರರು ಇದ್ದಾರೆ.

ಸಂಜೆವಾಣಿ
ಬೆಂಗಳೂರು ಶುಕ್ರವಾರ 29 ಜನವರಿ 2021



ಕುವೆಂಪು ಕಲಾ ನಿಕೇತನ ವತಿಯಿಂದ ಏರ್ಪಡಿಸಿದ್ದ ಕುವೆಂಪು ವಿಶ್ವಮಾನವ ಪ್ರಶಸ್ತಿ ಸಮಾರಂಭದಲ್ಲಿ ರಾಷ್ಟ್ರೀಯ ವಾಲಿಬಾಲ್ ಆಟಗಾರ ಗೋಪಾಲ್ ಎಚ್.ಸಿ. ಅವರಿಗೆ ಸಾಹಿತಿ, ಪದ್ಮಶ್ರೀ ಪುರಸ್ಕೃತ ಡಾ. ದೊಡ್ಡರಂಗೇಗೌಡ ಪ್ರಶಸ್ತಿ ನೀಡಿ ಸನ್ಮಾನಿಸಿದರು. ಡಾ. ವೂಡೆ ಪಿ.ಕೃಷ್ಣ, ಆದಿಚುಂಚನಗಿರಿ ರಾಮನಗರ ಶಾಖೆಯ ಶ್ರೀ ಅನ್ನದಾನೇಶ್ವರ ಸ್ವಾಮೀಜಿ, ಸಾಹಿತಿ ಎಲ್.ಎನ್. ಮುಕುಂದರಾಜ್, ಕೆ.ಎಸ್.ರಂಗಪ್ಪ, ಉಡುಪಿ ಕೃಷ್ಣ, ಕುವೆಂಪು ಕಲಾನಿಕೇತನ ಅಧ್ಯಕ್ಷ ಕುವೆಂಪು ಪ್ರಕಾಶ್ ಮತ್ತಿತರರು ಇದ್ದಾರೆ.

ಸಂಜೆವಾಣಿ

2 ಬೆಂಗಳೂರು
ಶನಿವಾರ 23 ಜನವರಿ 2021



ಹಿರಿಯ ವರದಿಗಾರ ಹೆಚ್.ಬಿ. ದಿನೇಶ್ ಅವರಿಗೆ ಬೆಂಗಳೂರು ಪ್ರೆಸ್ ಕ್ಲಬ್ ಪ್ರಶಸ್ತಿ ಲಭಿಸಿದ್ದು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ಅವರನ್ನು ಸನ್ಮಾನಿಸಲಾಯಿತು. ಕಾರ್ಯದರ್ಶಿ ಸಂಜಯ್ ಸಿಂಗ್, ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಇದ್ದಾರೆ.

ಈ ಸಂಜೆ

ಶುಕ್ರವಾರ
22 ಜನವರಿ, 2021



ಬೆಂಗಳೂರು ಪ್ರೆಸ್‌ಕ್ಲಬ್ ವಾರ್ಷಿಕ ಪ್ರಶಸ್ತಿ ಪಡೆದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರಾದ ಎಚ್.ಬಿ.ದಿನೇಶ್ ಅವರನ್ನು ಕೇಂದ್ರ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ವೂಡೆ.ಪಿ.ಕೃಷ್ಣ, ಕಾರ್ಯದರ್ಶಿ ಸಂಜಯ್ ಸಿಂಗ್, ಇಂದಿರಾ ಕೃಷ್ಣಪ್ಪ ಮತ್ತಿತರರು ಅಭಿನಂದಿಸಿದರು.


ಶುಕ್ರವಾರ, 22 ಜನವರಿ, 2021



ಬೆಂಗಳೂರು ಪ್ರೆಸ್‌ಕ್ಲಬ್‌ನ ಪ್ರಶಸ್ತಿಗೆ ಪಾತ್ರವಾಗಿರುವ ಎಚ್.ಬಿ. ದಿನೇಶ್ ಅವರನ್ನು ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಸಂಜಯ್ ಸಿಂಗ್ ಹಾಗೂ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಗಾಂಧಿಭವನದಲ್ಲಿ ಸನ್ಮಾನಿಸಿದರು.

ಸೋಮವಾರ, 18 ಜನವರಿ, 2021

ಡಾ.ವೂಡೇ ಪಿ.ಕೃಷ್ಣರಿಗೆ ಉದಯಭಾನು ಗೌರವ



ನಾಡೋಜ ಡಾ.ವೂಡೇ ಪಿ.ಕೃಷ್ಣ ಅವರಿಗೆ ಎಂದು ಸಾಹಿತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಉದಯಭಾನು ಗೌರವ ಸದಸ್ಯತ್ವ ಪ್ರಶಸ್ತಿ ಪ್ರದಾನ ಮಾಡಿದರು.

ಬೆಂಗಳೂರು: ನಾಡಿನ ಅತ್ಯುತ್ತಮ ಪ್ರಾತಿನಿಧಿಕ ಸಂಸ್ಥೆಯಾ ಗಿರುವ ಉದಯಭಾನು ಕಲಾಸಂಘ ಒಬ್ಬ ಅತ್ಯುತ್ತಮ ವ್ಯಕ್ತಿಗೆ ಪ್ರಶಸ್ತಿ ನೀಡಿ ಗೌರವಿಸಿರುವುದು ಸಂಸ್ಥೆಯ ಕೀರ್ತಿ ಹೆಚ್ಚಿಸಿದೆ ಎಂದು ಸಾಹಿತಿ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ತಿಳಿಸಿದರು.

ಉದಯಭಾನು ಕಲಾಸಂಘ ಏರ್ಪಡಿಸಿದ್ದ ಸಮಾರಂಭದಲ್ಲಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಅವರಿಗೆ 'ಉದಯಭಾನು ಗೌರವ ಸದಸ್ಯತ್ವ ಪ್ರಶಸ್ತಿ–2021' ಪ್ರದಾನ ಮಾಡಿ ಮಾತನಾಡಿದರು. ಹೈಕೋರ್ಟ್‌ನ ವಿಶ್ರಾಂತ ನ್ಯಾಯಾಧೀಶ ಡಾ.ಎನ್. ಕುಮಾರ್ ಮಾತನಾಡಿ, ಉತ್ತಮ ನಾಯಕರಿಗೆ ಕಲಾಸಂಘವು ನೀಡುತ್ತಿರುವ ಗೌರವ ಮನ್ನಣೆ ಸಂಘದ ಬೆಳವಣಿಗೆಗೆ ಪೂರಕವಾಗುತ್ತದೆ. ಕಲಾಸಂಘವು ಸಾಂಸ್ಕೃತಿಕವಾಗಿ ಮತ್ತಷ್ಟು ಅಭಿವೃದ್ಧಿ ಹೊಂದಲಿ ಎಂದು ಆಶಿಸಿದರು. ವೂಡೇ ಪಿ.ಕೃಷ್ಣ ಮಾತನಾಡಿ, ನಾನು ಒಂಟಿಯಾಗಿ ಬದುಕಲು ಸಾಧ್ಯವಿಲ್ಲ, ನಾವೆಲ್ಲರೂ ಸಮಾಜದಲ್ಲಿ ಒಟ್ಟಿಗೆ ಬದುಕಬೇಕಿದೆ. ನಾವು ಸಾಮಾನ್ಯ ವ್ಯಕ್ತಿಗಳಾಗಿ ಯಾವುದೇ ಸ್ಥಾನ–ಮಾನವಿಲ್ಲದೆ ರಾಷ್ಟ್ರಕ್ಕೆ ಕಾರ್ಯನಿರ್ವಹಿಸಬೇಕು ಎಂದರು. ಉದಯ ಭಾನು ಕಲಾಸಂಘದ ಶ್ರೀರಾಮೇ ಗೌಡ, ಸಂಸ್ಥಾಪಕ ಕಾರ್ಯದರ್ಶಿ ಎಂ.ನರಸಿಂಹ, ಕಾರ್ಯಾಧ್ಯಕ್ಷ ಡಾ.ಬಿ.ಎಸ್. ಸತ್ಯನಾರಾಯಣ, ಡಾ.ಎಸ್.ಅನಿಲ್ ಕುಮಾರ್, ಸುಗುಣ ಎಸ್.ಚಂದ್ರ ಇದ್ದರು.

ಪ್ರಜಾವಾಣಿ
ಸೋಮವಾರ • ಜನವರಿ 18, 2021

‘ಸಮಂತಾಸ್’ ವಸ್ತ್ರ ಪ್ರದರ್ಶನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತ್ಯಂತ ಮನಮೋಹಕವಾದ ಜವಳಿ ಉತ್ಪನ್ನಗಳ ತಯಾರಿಕೆಯಲ್ಲಿ ಒಡಿಶಾ ರಾಜ್ಯ ಮುಂಚೂಣಿಯಲ್ಲಿದೆ’ ಎಂದು ಉಪ ಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಸಮಂತಾಸ್ ಲಕ್ಸುರಿ ಡಿಸೈನರ್ ಹೌಸ್ ವತಿಯಿಂದ ನಗರದಲ್ಲಿ ಭಾನುವಾರ ಏರ್ಪಡಿಸಿದ್ದ ವಸ್ತ್ರ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಒಡಿಶಾ ಕಳಿಂಗ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಅಚ್ಯುತ ಸಮಂತ, ಸಂಸದ ತೇಜಸ್ವಿ ಸೂರ್ಯ, ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ, ಚಲನಚಿತ್ರ ನಿರ್ದೇಶಕ ಶೇಷಾದ್ರಿ ಭಾಗವಹಿಸಿದ್ದರು.



ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ಅವರು ಪ್ರದರ್ಶನದಲ್ಲಿ ವಸ್ತ್ರಗಳನ್ನು ವೀಕ್ಷಿಸಿದರು. ಸಮಂತಾಸ್ ಸಂಸ್ಥೆಯ ಇತಿ ಸಮಂತ, ಅಪರ್ಣ ಸಮಂತ, ವಿಶ್ವವಾಣಿ ಪತ್ರಿಕೆಯ ಸಂಪಾದಕ ವಿಶ್ವೇಶ್ವರ ಭಟ್ ಹಾಗೂ ಇತರರು ಇದ್ದರು.

ಉದಯವಾಣಿ
ಸೋಮವಾರ, ಜನವರಿ 18, 2021

ಹೆಚ್ಚು ಸ್ವದೇಶಿ ಉತ್ಪನ್ನ ಬಳಸಿ: ಡಿಸಿಎಂ

ಸಮಂತಾಸ್ ಲೋಗೊ, ವೆಬ್‌ಸೈಟ್ ಬಿಡುಗಡೆಗೊಳಿಸಿದ ಅಶ್ವತ್ಥ ನಾರಾಯಣ

ಬೆಂಗಳೂರು: ಸ್ಥಳೀಯರಿಗೆ ಉದ್ಯೋಗಾವಕಾಶಗಳು ಹೆಚ್ಚಾಗಬೇಕಾದರೆ, ಸ್ವದೇಶಿ ಉತ್ಪನ್ನಗಳ ಬಳಕೆ ನಮ್ಮಲ್ಲಿ ಅಧಿಕವಾಗಬೇಕು. ಈ ನಿಟ್ಟಿನಲ್ಲಿ 'ಆತ್ಮನಿರ್ಭರ' ಪರಿಕಲ್ಪನೆ ಪೂರಕವಾಗಿದೆ ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಸಮಂತಾಸ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಲೋಗೊ, ವೆಬ್‌ಸೈಟ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಒಡಿಶಾ ಸಂಸದ ಅಚ್ಯುತ ಸಮಂತ್ ಸಾವಿರಾರು ಬಡ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದು, ಒಡಿಶಾ ಕಸೂತಿ ಕೆಲಸಗಾರರಿಗೆ ಉದ್ಯೋಗ ನೀಡಿದ್ದಾರೆ. ನವದೆಹಲಿ, ಮುಂಬೈ ಹಾಗೂ ಬೆಂಗಳೂರಿನಲ್ಲಿ ಸಮಂತಾಸ್ ಡಿಸೈನರ್ ಹೌಸ್ ಆರಂಭಿಸಿದ್ದು, ಕಸೂತಿ ಕೆಲಸಗಾರರಿಂದ ಅಲ್ಲಿನ ಸಂಸ್ಕೃತಿ, ಕಲೆ ಬಿಂಬಿಸುವ ಸೀರೆ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಸ್ವದೇಶಿ ಉತ್ಪನ್ನ ಆನ್‌ಲೈನ್ ಮೂಲಕ ಪಡೆಯಬಹುದು ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದಂತೆ ಸ್ಥಳೀಯ ವಸ್ತುಗಳಿಗೆ ಪ್ರಾಮುಖ್ಯತೆ ನೀಡಬೇಕು. ಸ್ವದೇಶಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಮೂಲಕ ಬಳಕೆ ಹೆಚ್ಚಾಗುತ್ತದೆ. ಇದರಿಂದ ದೇಶದ ಆರ್ಥಿಕತೆ ಸುಧಾರಿಸಲಿದೆ ಎಂದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ಒಡಿಶಾ ರಾಜ್ಯವು ಆರ್ಥಿಕತೆಯಲ್ಲಿ ಕೊನೆಯಲ್ಲಿದೆ. ಆದರೆ, ಸಂಸ್ಕೃತಿ, ನೃತ್ಯ, ಕಲೆಯಲ್ಲಿ ಮುಂಚೂಣಿಯಲ್ಲಿದೆ. ಸಂಸದ ಅಚ್ಯುತ ಸಮಂತ್ ಅವರು ಅಲ್ಲಿನ ಕಸೂತಿಗಾರರಿಗೆ ಕೆಲಸ ನೀಡಿ ಸ್ವದೇಶಿ ಉತ್ಪನ್ನವನ್ನು ಮಾರಾಟ ಮಾಡುತ್ತಿದ್ದಾರೆ. ಸಾರ್ವಜನಿಕರು ಕೈಮಗ್ಗದಿಂದ ಮಾಡಿದ ಬಟ್ಟೆಗಳನ್ನು ಬಳಕೆ ಮಾಡಬೇಕು. ಆಗ ಉದ್ದಿಮೆಗಳು ಹೆಚ್ಚಾಗಲಿವೆ ಎಂದರು.

ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್, ಸಮಂತಾಸ್ ಸಂಸ್ಥಾಪಕ ಅಚ್ಯುತ ಸಮಂತ್, ನಿರ್ದೇಶಕ ಪಿ. ಶೇಷಾದ್ರಿ, ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ವುಡೇ ಪಿ ಕೃಷ್ಣ ನಟಿ ಮಾನ್ವಿತಾ ಕಾಮತ್, ಪೂಜಿತ ಮೆನನ್ ಸೇರಿ ಮತ್ತಿತರರು ಇದ್ದರು.


ಸಮಂತಾಸ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಭಾಗವಹಿಸಿದ್ದರು.

ನಂ. 1 ಕನ್ನಡ ದಿನಪತ್ರಿಕೆ

VIJAYAVANI BENGALURU
ಸೋಮವಾರ 18 ಜನವರಿ 2021
18 JANUARY 2021

ಸೇವೆ ಎಂಬುದೀಗ ಹೆಸರಿಗಷ್ಟೇ ಸೀಮಿತ


ಮಲ್ಲೇಪುರಂ ಜಿ.ವೆಂಕಟೇಶ ಅಭಿಮತ » ವೂಡೇ ಪಿ. ಕೃಷ್ಣಗೆ ಗೌರವ

ಬೆಂಗಳೂರು: ಸೇವೆ ಎನ್ನುವುದು ಇತ್ತೀಚಿನ ದಿನಗಳಲ್ಲಿ ಹೆಸರಿಗಷ್ಟೇ ಸೀಮಿತವಾಗಿದೆ ಎಂದು ಕರ್ನಾಟಕ ಸಂಸ್ಕೃತಿ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅಭಿಪ್ರಾಯಪಟ್ಟಿದ್ದಾರೆ.

ಉದಯಭಾನು ಕಲಾಸಂಘ ಆಯೋಜಿಸಿದ್ದ 'ಉದಯಭಾನು ಗೌರವ ಸದಸ್ಯತ್ವ ಪುರಸ್ಕಾರ' ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೆಲವರು ಯಾವ್ಯಾವುದೋ ಲಾಭಕ್ಕಾಗಿ 'ಸೇವೆ' ಮಾಡುತ್ತಿದ್ದಾರೆ. ಆದರೆ, ವೂಡೇ ಪಿ. ಕೃಷ್ಣ ಅವರು ಸಾಮಾಜಿಕ, ಶೈಕ್ಷಣಿಕ, ಮಾನವೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅನನ್ಯ ಸೇವೆ ಸಲ್ಲಿಸಿದ್ದಾರೆ. ವಿಶೇಷವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಇವರು ಬಹಳಷ್ಟು ಕೆಲಸ ಮಾಡಿದ್ದಾರೆ. ಪ್ರಮುಖ ಪ್ರಶಸ್ತಿ ಪಡೆದರೆ ಆ ವ್ಯಕ್ತಿಗೆ ಹಾಗೂ ಸಂಸ್ಥೆಯ ಗೌರವ ಮತ್ತಷ್ಟು ಹೆಚ್ಚುತ್ತದೆ. ಆ ಸಾಲಿನಲ್ಲಿ ನಿಲ್ಲುತ್ತಾರೆ ಎಂದು ಹೇಳಿದರು.


ಪ್ರಶಸ್ತಿ ಸ್ವೀಕರಿಸಿದ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ಸಾಮಾನ್ಯ ವ್ಯಕ್ತಿಗಳು ಯಾವುದೇ ಸ್ಥಾನಮಾನವಿಲ್ಲದೆ ರಾಷ್ಟ್ರಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಾನು ಸಂಘ ಜೀವಿಯಾಗಿ ಬದುಕುತ್ತಿದ್ದು, ನನ್ನೊಬ್ಬನಿಂದ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ, ನಾವೆಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡೋಣ ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ರಂಗಪ್ಪ, ಹೈಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಡಾ.ಎನ್. ಕುಮಾರ್, ಕಲಾಸಂಘ ಅಧ್ಯಕ್ಷ ರಾಮೇಗೌಡ ಇತರರಿದ್ದರು.



ಡಾ. ವೂಡೇ ಪಿ. ಕೃಷ್ಣಗೆ ಉದಯಭಾನು ಗೌರವ ಸದಸ್ಯತ್ವ ಪುರಸ್ಕಾರ ಪ್ರದಾನ ಸಂದರ್ಭದಲ್ಲಿ ಹಿರಿಯ ವಿಮರ್ಶಕ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಹೈಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಡಾ. ಎನ್. ಕುಮಾರ್, ರಾಮೇಗೌಡ, ಎಂ. ನರಸಿಂಹ ಇತರರಿದ್ದರು.

ಬಹುಮುಖ ವ್ಯಕ್ತಿತ್ವ, ಸಮಾಜಮುಖಿ ನಾಡೋಜ ಡಾ. ವೂಡೇ ಪಿ. ಕೃಷ್ಣ

ಹಿತಮಿತ ಮೃದುವಚನ, ಸರಳತೆ, ಪ್ರಾಮಾಣಿಕತೆ, ನುಡಿದಂತೆ ನಡೆಯುವ ಸೌಜನ್ಯಯುತವಾದ ಪ್ರವೃತ್ತಿ, ಪವಿತ್ರವಾದ ಶಿಕ್ಷಣ ಕ್ಷೇತ್ರದಲ್ಲಿ ಶಿಸ್ತಿನ ಸಿಪಾಯಿಯಾಗಿ ದಕ್ಷ ಆಡಳಿತಗಾರರಾಗಿ ಪಾರದರ್ಶಕವಾದ ವ್ಯಕ್ತಿತ್ವವನ್ನು ಹೊಂದಿರುವ ಡಾ. ವೂಡೇ ಪಿ. ಕೃಷ್ಣರವರಿಗೆ ಶ್ರೇಷ್ಠ 'ನಾಡೋಜ' ಪ್ರಶಸ್ತಿ ಲಭಿಸಿರುವುದು ಸಾಂಸ್ಕೃತಿಕ ಜನಾಂಗಕ್ಕೆ ಚಿನ್ನದ ಗರಿಯನ್ನು ಮೂಡಿಸಿದೆ.



ಡಾ. ವೂಡೇ ಪಿ. ಕೃಷ್ಣರವರು ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಧ್ಯೇಯವಾಗಿರಿಸಿಕೊಂಡು, ಶಿಕ್ಷಣದ ಜೊತೆ ಜೊತೆಯಲ್ಲಿ ಸಂಸ್ಕಾರ, ಸಂಸ್ಕೃತಿ, ನೈತಿಕ ಮೌಲ್ಯ, ಪರಂಪರೆ ಹಾಗೂ ದೇಶಪ್ರೇಮವನ್ನು ಮೂಡಿಸುವ ಕಾಯಕದಲ್ಲಿ ತೊಡಗಿರುವುದು ವಿಶೇಷ ಸಂಗತಿ. ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾ ಶಾಲೆಯ ವಿದ್ಯಾರ್ಥಿಯಾಗಿ, ಮೆಕ್ಯಾನಿಕಲ್ ಇಂಜಿನೀಯರಿಂಗ್‌ನಲ್ಲಿ ಬಿ.ಇ, ಎಂ.ಎಸ್. ಪದವಿ, ಕಾನೂನಿನಲ್ಲಿ ಎಲ್.ಎಲ್.ಬಿ, ಎಂ.ಎಲ್. ಪದವಿ, ಸಮಾಜ ಶಾಸ್ತ್ರದಲ್ಲಿ ಎಂ.ಎ. ಪದವಿ, ಪತ್ರಿಕೋದ್ಯಮದಲ್ಲಿ ಡಿಪ್ಲೋಮ, ಮ್ಯಾನೇಜ್‌ಮೆಂಟ್‌ನಲ್ಲಿ ಪಿ.ಹೆಚ್.ಡಿ. ಪದವಿಗೆ ಭಾಜನರಾಗಿರುವುದು ಶ್ಲಾಘನೀಯ.

ಬಹುಮುಖ ವ್ಯಕ್ತಿತ್ವ ಹಾಗೂ ಬಹುಮುಖ ಪ್ರತಿಭೆಯನ್ನು ಗಳಿಸಿರುವ ಡಾ. ಕೃಷ್ಣರವರು ಅಲಂಕರಿಸಿರುವ ಸ್ಥಾನಮಾನಗಳು ಹಲವಾರು ವೈಶಿಷ್ಟ್ಯತೆಯಿಂದ ಕೂಡಿದೆ. ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿಗಳಾಗಿ, ನವದೆಹಲಿಯ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷರಾಗಿ, ಬೆಂಗಳೂರು ಕೇಂದ್ರ ವಿಭಾಗದ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಕೋಶಾಧ್ಯಕ್ಷರಾಗಿ, ಭಾರತೀಯ ಇಂಜಿನೀಯರುಗಳ ಸಂಸ್ಥೆ, ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರಾಗಿ, 'ವೂಡೇ ಪ್ರತಿಷ್ಠಾನ'ದ ಸ್ಥಾಪಕ ಧರ್ಮದರ್ಶಿಯಾಗಿ, ಹತ್ತು ಹಲವು ಪ್ರತಿಷ್ಠಿತ ಸಂಸ್ಥೆಗಳಲ್ಲಿ ತ್ರಿಕರಣಪೂರ್ವಕವಾಗಿ ತಮ್ಮ ಅಮೂಲ್ಯ ಸೇವೆಯನ್ನು ನಿರಂತರವಾಗಿ ಸಲ್ಲಿಸುತ್ತಿರುವುದು ಇಂದಿನ ಯುವ ಪೀಳಿಗೆಗೆ ಆದರ್ಶಪ್ರಾಯವಾಗಿ ಮಾದರಿಯಾಗಿದೆ.

ಕೃಷ್ಣರವರು ಕೇವಲ ಒಬ್ಬ ವ್ಯಕ್ತಿ ಮಾತ್ರವಲ್ಲ, ಮಹಾನ್ ಶಕ್ತಿ. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಶಿಕ್ಷಣದ ಮಹಾನ್ ಚಿಂತಕರು. ಕೃಷ್ಣರವರ ಸೇವೆಗೆ ಸಂದ ಗೌರವ, ಪ್ರಶಸ್ತಿಗಳು ಅಪಾರ ಮೌಲ್ಯವುಳ್ಳದ್ದಾಗಿದೆ. ಭಾರತೀಯ ಇಂಜಿನೀಯರುಗಳ ಸಂಸ್ಥೆಯಿಂದ ಶ್ರೇಷ್ಠ ಇಂಜಿನೀಯರ್ ಪ್ರಶಸ್ತಿ, ಇಂಗ್ಲೆಂಡಿನ ಇಂಜಿನೀಯರಿಂಗ್ ಮತ್ತು ಟೆಕ್ನಾಲಜಿ ಸಂಸ್ಥೆಯ ಪ್ರತಿಷ್ಠಿತ ಫೆಲೋ ಗೌರವಕ್ಕೆ ಭಾಜನರಾಗಿದ್ದಾರೆ. ಇಷ್ಟೇ ಅಲ್ಲದೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯಿಂದ ರಾಷ್ಟ್ರಪತಿಗಳ ಚಿನ್ನದ ಪದಕ, ಕರ್ನಾಟಕ ರಾಜ್ಯ ಯುವ ಪ್ರಶಸ್ತಿ, ಬಿ.ಬಿ.ಎಂ.ಪಿಯಿಂದ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಭಾರತೀಯ ವಿದ್ಯಾ ಭವನದಿಂದ ಭಾರತೀಯ ವಿದ್ಯಾ ವಿಶಾರದ ಗೌರವ, ವಿವೇಕಾನಂದ ಕಲಾ ಕೇಂದ್ರದಿಂದ ಸೇವಾಶ್ರೀ ಪ್ರಶಸ್ತಿ, ಡಿ.ವಿ.ಜಿ ಪುರಸ್ಕಾರ, ನ್ಯೂಯಾರ್ಕ್ ಬಸವ ಇಂಟರ್‌ನ್ಯಾಷನಲ್ ವತಿಯಿಂದ ಸೈಟೇಷನ್ ಪ್ರಶಸ್ತಿ, ಆಂಧ್ರ ಗಡಿನಾಡಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕಿರಿಯ ವಯಸ್ಸಿನಲ್ಲಿ ಹಿರಿಯ ಸಾಧನೆ ಮಾಡಿದ ಸಂದರ್ಭದಲ್ಲಿ ೨೦೧೬ರಲ್ಲಿ 'ಕೃಷ್ಣಗಿರಿ' ಗೌರವ ಗ್ರಂಥಾರ್ಪಣೆಯನ್ನು ಅರ್ಪಿಸಲಾಗಿದೆ.

ಹೀಗೆ ಹತ್ತು ಹಲವಾರು ಪ್ರಶಸ್ತಿಗಳಿಗೆ ಪಾತ್ರರಾಗಿರುವ ಡಾ. ವೂಡೇ ಪಿ. ಕೃಷ್ಣರವರಿಗೆ ಮತ್ತೊಂದ ಗರಿ 'ನಾಡೋಜ' ಪ್ರಶಸ್ತಿ ಲಭಿಸಿರುವುದು ಇಡೀ ಜನಪ್ರತಿನಿಧಿಗಳಿಗೆ ಸಂದ ಗೌರವ ಎಂದು ತಿಳಿಸಲು ಹರ್ಷವೆನಿಸುತ್ತದೆ.

ವರದಿ : ಡಾ. ವಿ. ರಾಣಿ ಗೋವಿಂದರಾಜು

ನಾಡೋಜ ಪುರಸ್ಕೃತ ಡಾ. ವೂಡೇ.ಪಿ. ಕೃಷ್ಣರವರಿಗೆ ಗೌರವಾಭಿನಂದನೆ



ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ಬ್ರಹ್ಮ ಸಮಾಜದ ಮುಖಂಡ ಮತ್ತು ಹಿರಿಯ ಗಾಂಧಿವಾದಿ ಡಬ್ಲ್ಯೂ ಹೆಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸವನ್ನು ನಗರದ ಗಾಂಧಿ ಭವನದ ಬಾಪು ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಗಾಂಧೀ ಮತ್ತು ಡಬ್ಲ್ಯೂ ಹೆಚ್. ಹನುಮಂತಪ್ಪ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ಅರಳಿ ಸಸಿಗೆ ನೀರೆರೆವುದರ ಮೂಲಕ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಉದ್ಘಾಟಿಸಿ ಮಾತನಾಡುತ್ತ ಇಂದಿನ ಸಮಾಜಕ್ಕೆ ಆದರ್ಶಪ್ರಾಯರಾದ ವೂಡೇ ಕುಟುಂಬದವರ ನಿಸ್ವಾರ್ಥ ಸೇವಾಮನೋಭಾವ ಶ್ಲಾಘನೀಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಗಾಂಧೀಜಿಯವರ ವೈಜ್ಞಾನಿಕ ಚಿಂತನೆಗಳು ಕುರಿತು ಬೆಂಗಳೂರು ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕರು ಮತ್ತು ವಿಜ್ಞಾನ ಸಾಹಿತಿಗಳಾದ ಸುಮಂಗಲಾ ಎಸ್. ಮುಮ್ಮಿಗಟ್ಟಿ ರವರು ದತ್ತಿ ಉಪನ್ಯಾಸವನ್ನು ನೀಡಿ ಮಾತನಾಡುತ್ತ ಗಾಂಧಿಜಿರವರು ಬೃಹತ್ ಕೈಗಾರಿಕೆಗಳಿಗೆ ಆದ್ಯತೆ ನೀಡದೆ ಗ್ರಾಮೋದ್ಯೋಗಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿ ವೈಜ್ಞಾನಿಕ ಚಿಂತನಾ ಕ್ರಮವನ್ನು ತಮ್ಮ ನಡೆ ನುಡಿಯಲ್ಲಿ ಅಳವಡಿಸಿಕೊಂಡಿದ್ದರು.


ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೇರಿಗೆ ಲೋಕೇಶ್ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಹಿರಿಯ ಶಿಕ್ಷಣ ತಜ್ಞ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌ. ಪ್ರಧಾನ ಕಾರ್ಯದರ್ಶಿ, ಇತ್ತೀಚೆಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಪ್ರತಿಷ್ಠಿತ ನಾಡೋಜ ಪ್ರಶಸ್ತಿ ಪುರಸ್ಕೃತ ಡಾ. ವೂಡೇ.ಪಿ. ಕೃಷ್ಣರವರಿಗೆ ಗೌರವಾಭಿನಂದನೆಯನ್ನು ಸಲ್ಲಿಸಲಾಯಿತು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು, ಗಾಂಧಿ ಶಾಂತಿ ಪ್ರತಿಷ್ಠಾನದ ಖಜಾಂಚಿ ಪ್ರೊ. ಪ್ರತಾಪ್ ಲಿಂಗಯ್ಯ ಸ್ವಾಗತಿಸಿದರು. ಕಾರ್ಯದರ್ಶಿ ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ) ರವರು ಕಾರ್ಯಕ್ರಮ ನಿರೂಪಿಸಿದರು. ವೂಡೇ ಪ್ರತಿಷ್ಠಾನದ ದತ್ತಿ ದಾನಿಗಳ ಪ್ರತಿನಿಧಿ ಡಬ್ಲ್ಯೂ ಹೆಚ್. ಅಶೋಕ್ ಉಪಸ್ಥಿತರಿದ್ದರು.

ಬುಧವಾರ 13 ಜನವರಿ 2021 13 JANUARY 2021
VIJAYAVANI BENGALURU

ಸ್ವಾಮಿ ಹರ್ಷಾನಂದಜೀ ಇನ್ನಿಲ್ಲ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಹಿಂದೂ ಧರ್ಮ, ಸಂಸ್ಕೃತಿಯ 'ನಡೆದಾಡುವ ವಿಶ್ವಕೋಶ' ಎಂದೇ ಪ್ರಸಿದ್ಧರಾಗಿದ್ದ ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷ, ಸ್ವಾಮಿ ಹರ್ಷಾನಂದ (90) ಮಂಗಳವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಹಿಂದೂ ಧರ್ಮ ಕುರಿತ ಜಾಗೃತಿ ಸೇರಿ ಅನೇಕ ಸಮಾಜಮುಖಿ ಕಾರ್ಯದಲ್ಲಿ ತೊಡಗಿದ್ದ ಅವರು, ತಮ್ಮ 67 ವರ್ಷಗಳ ಅಧ್ಯಾತ್ಮ ಜೀವನಕ್ಕೆ ಕೊನೆ ಹಾಡಿದ್ದಾರೆ. ಬೆಂಗಳೂರಿನವರಾದ ಸ್ವಾಮಿ ಹರ್ಷಾನಂದರು, ಬಸವನಗುಡಿಯ ರಾಮಕೃಷ್ಣ ಮಠದ ಅಧ್ಯಕ್ಷರಾಗಿ 31 ವರ್ಷ ಸೇವೆ ಸಲ್ಲಿಸಿದ್ದರು. ಮುಂಜಾನೆಯಿಂದ ಲವಲವಿಕೆಯಿಂದಿದ್ದ ಅವರು, ಮಧ್ಯಾಹ್ನ 1.10ಕ್ಕೆ ಹೃದಯಾಘಾತಕ್ಕೀಡಾದರು.



● ವಿವರ ಪುಟ 8

ಇಂದು ಮಧ್ಯಾಹ್ನ ಅಂತ್ಯಕ್ರಿಯೆ

ಬುಧವಾರ ಬೆಳಗ್ಗೆಯಿಂದ ಮಧ್ಯಾಹ್ನ 12.30ರವರೆಗೆ ರಾಮಕೃಷ್ಣ ಮಠದ ವಿದ್ಯಾರ್ಥಿ ಭವನದಲ್ಲಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ 3 ಗಂಟೆಗೆ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಶಿಷ್ಯರು ಮತ್ತು ಅನುಯಾಯಿಗಳ ಸಮ್ಮುಖದಲ್ಲಿ ಅಂತ್ಯಕ್ರಿಯೆ ನಡೆಸಲಾಗುತ್ತದೆ. ಪ್ರಧಾನಿ ನರೇಂದ ಮೋದಿ ಸಹಿತ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸೇವೆಗೆ ಮೀಸಲಾದ ಬದುಕು

...ಪುಟ-8...

[illegible] ಬಂದವರು ಸ್ವಾಮಿ ಪುರುಷೋತ್ತಮಾನಂದಜೀ. ಹಿಂದೂಧರ್ಮದ ಕುರಿತು ವಿಶ್ವಕೋಶವನ್ನೇ ರಚಿಸಿದ [illegible] ಉಣಬಡಿಸಿದವರು. ಅವರ ಬಹುಮುಖ ವ್ಯಕ್ತಿತ್ವ, ಕಾರ್ಯದ ಅವಲೋಕನ [illegible]

ಸೇವೆಗೆ ಮೀಸಲಾದ ಬದುಕು

ಪ್ರವಚನಪಟು, ಪ್ರಭಾವಿ ಲೇಖಕ ಹಿಂದೂ ಧರ್ಮದ ವಿಶ್ವಕೋಶದ ಕೊಡುಗೆ ನೀಡಿದ ಯತಿ

[illegible]

ಪ್ರವಚನ ಪಟು

[illegible]

ಸಂಸ್ಕಾರಕ್ಕೆ ಆದ್ಯತೆ

[illegible] ರಾಮಕೃಷ್ಣ [illegible] ಯುವಕ [illegible] ಅದ್ವೈತ [illegible]

ಸ್ವಾಮಿ ಹರ್ಷಾನಂದಜೀ 1930-2021

ನುಡಿ ನಮನ

ಭಗವದ್ಗೀತೆಯ ಬಗ್ಗೆ ಯಳ್ಳಿ ಅಂಕಣ

[illegible]



ರಾಮಕೃಷ್ಣ ಮಠಕ್ಕೆ ಆಗಮಿಸಿ ಪಾರ್ಥಿವ ಶರೀರದ ದರ್ಶನ ಪಡೆದ ಆರೋಗ್ಯ ಸಚಿವ ಡಾ. ಕೆ. ಸುಧಾಕರ್

ಹಿಂದೂಧರ್ಮ ಕುರಿತ ವಿಶ್ವಕೋಶ

[illegible]

ಸ್ವಾಮಿ ವಿವೇಕಾನಂದರನ್ನು ನೆನೆದರು

ಮಂಗಳವಾರ ಬೆಳಗ್ಗೆಯಿಂದ ಉಲ್ಲಸಿತರಾಗಿದ್ದ ಸ್ವಾಮಿ [illegible], ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮ [illegible]. ಮಧ್ಯಾಹ್ನ 12.30ಕ್ಕೆ ಭೋಜನ ಸೇವಿಸಿ ನಂತರ [illegible] ವೇಳೆ ಹೃದಯಾಘಾತವಾಗಿ ಕೊನೆಯುಸಿರೆಳೆದರು.

ಆಧ್ಯಾತ್ಮಿಕ ಕ್ಷೇತ್ರದ ಧ್ರುವನಕ್ಷತ್ರ



[illegible] ಆಧ್ಯಾತ್ಮಿಕ [illegible] ಅಘಾತವೇ ಸರಿ.

1963-64ರಲ್ಲಿ ಮೈಸೂರು ರಾಮಕೃಷ್ಣ [illegible] ಸ್ವಾಮೀಜಿಯವರು [illegible] ಮಹಾನ್ ಆಧ್ಯಾತ್ಮಿಕ [illegible] ಅಂದಿನ ಶ್ರೀ ರಾಮಕೃಷ್ಣ [illegible] ಭಗವಾನ್ ಶ್ರೀರಾಮಕೃಷ್ಣರ [illegible] ಸ್ವಾಮೀಜಿಯವರು [illegible] ಅಂದಿನ ದಿನಗಳಲ್ಲಿ [illegible] ಶ್ರಮಿಸಿದರು ಎಂಬುದನ್ನು [illegible]

[illegible]

ಸ್ವಾಮೀಜಿಯವರು ಮಹಾನ್ [illegible] ವಿದ್ವಾಂಸರು. [illegible]

[illegible]

(ಲೇಖಕರು ಶಾವಗದ ಶ್ರೀ ರಾಮಕೃಷ್ಣ ಸೇವಾಶ್ರಮದ ಅಧ್ಯಕ್ಷರು)

ಅನನ್ಯ ವಿದ್ವತ್ತಿನ ಅಪೂರ್ವ ಸಂತ...

ಸ್ವಾಮಿ ವೀರೇಶಾನಂದ ಸರಸ್ವತೀ

[illegible]

[illegible] "We have nationalized our roads, banks, transport system and so many things, but we have not yet nationalized [illegible]

[illegible] ರಾಮಕೃಷ್ಣ ವಿವೇಕಾನಂದ [illegible] ತುಮಕೂರು ವಿಶ್ವವಿದ್ಯಾಲಯದಲ್ಲಿ [illegible] ವಿವೇಕಾನಂದರ 150ನೇ [illegible]

[illegible] ರಾಮಕೃಷ್ಣ-ವಿವೇಕಾನಂದ ಆಶ್ರಮ [illegible]

([illegible] ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರು)

ಬಿ. ಶೃಂಗೇಶ್ವರ ಅವರ ಸರ್ವಾಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆದ 11ನೇ ವರ್ಷದ ಕನ್ನಡ ಸಾಹಿತ್ಯ-ಸಂಸ್ಕೃತಿ ಸಮಾವೇಶ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ಬೆಂಗಳೂರು) ಮತ್ತು ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ (ಸಿದ್ಧನಹಳ್ಳಿ) 27-12-2020ರಂದು ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಹಿರಿಯ ಸಾಹಿತಿ, ಕಾರ್ಮಿಕ ಮುಖಂಡ ಹಾಗೂ ಸಾಂಸ್ಕೃತಿಕ ಪರಿಚಾರಕ ಬಿ. ಶೃಂಗೇಶ್ವರ ಅವರ ಸರ್ವಾಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ 11ನೇ ವರ್ಷದ ಕನ್ನಡ ಸಾಹಿತ್ಯ-ಸಂಸ್ಕೃತಿ ಸಮಾವೇಶ ಬೆಳಗ್ಗೆ 9.30ರಿಂದ ಸಂಜೆ 6.30ರ ವರೆಗೆ ಅತ್ಯಂತ ಯಶಸ್ವಿಯಾಗಿ ನಡೆಯಿತು. ನೂರಾರು ಸಾಹಿತ್ಯಾಭಿಮಾನಿಗಳು ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಂಡು ಶಿಸ್ತಿನಿಂದ ಭಾಗವಹಿಸಿದ್ದರು. ದಿ॥ ಜಯಲಕ್ಷ್ಮಮ್ಮ ಚಿಕ್ಕಸಿದ್ದಯ್ಯ ದ್ವಾರದ ಮೂಲಕ ಸಮಾವೇಶದ ಸರ್ವಾಧ್ಯಕ್ಷರನ್ನು ನಾಡೋಜ ಪಾಟೀಲ ಪುಟ್ಟಪ್ಪ ವೇದಿಕೆಗೆ ಬರಮಾಡಿ ಕೊಳ್ಳಲಾಯಿತು. ಸಾಹಿತಿ ಶಶಿಕಾಂತ ರಾವ್ ಧ್ವಜಾರೋಹಣ ನೆರವೇರಿಸಿದರು. ವಿಶ್ರಾಂತ ತಹಸಿಲ್ದಾರ್ ಹಾಗೂ ಹಿರಿಯ ಸಾಹಿತಿ ಕೆ.ಎಂ. ರೇವಣ್ಣ ಪುಸ್ತಕ ಮಳಿಗೆಗೆ ಚಾಲನೆ ನೀಡಿದರು. ಹಿರಿಯ ಜನಪದ ಗಾಯಕಿ ಸಾಕಮ್ಮ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು.

ಬೆಳಗ್ಗೆ 10.30ಕ್ಕೆ ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಉದ್ಘಾಟನಾ ಸಮಾರಂಭ ಕು. ಕವನ ಕೋಗಿಲೆ ಮತ್ತು ತಂಡದವರು ನಾಡಗೀತೆ ಹಾಡುವುದರೊಂದಿಗೆ ಆರಂಭವಾಯಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಉದ್ಘಾಟಿಸಿದರು. ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಾಯಣ್ಣ ಮುಖ್ಯ ಅತಿಥಿಯಾಗಿದ್ದರು. ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ. ತಿಮ್ಮಯ್ಯ ಅವರು ಸಮಾವೇಶದ ಸರ್ವಾಧ್ಯಕ್ಷ ಬಿ. ಶೃಂಗೇಶ್ವರ ರಚಿಸಿರುವ "ಬಿಂದು" ಹನಿಗವನಗಳ ಸಂಕಲನವನ್ನು ಲೋಕಾರ್ಪಣೆಗೊಳಿಸಿದರು. ಜಯಶ್ರೀ ನಿರೂಪಿಸಿ, ಕು.ಜೆ.ಸಿ. ಪೂರ್ಣಿಮ ನಿರ್ವಹಿಸಿದ ಉದ್ಘಾಟನಾ ಸಮಾರಂಭದಲ್ಲಿ ರಾಮನಗರ ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷ ಮೇ. ಚ. ಕೋಟಪ್ಪ ಮತ್ತು ಬಿ.ವಿ. ಹಂಸಕುಮಾರಿ ವಿಶೇಷ ಆಹ್ವಾನಿತರಾಗಿದ್ದರು. ಹಿರಿಯ ಸಾಹಿತಿ ಡಾ. ಕೆ. ರಮಾನಂದ ಅವರು ಉತ್ತಮ ಕಾದಂಬರಿಗಾಗಿ ಇರಿಸಿರುವ ದತ್ತಿ ಪ್ರಶಸ್ತಿಯನ್ನು "ಬಾಂಧವ್ಯ" ಕಾದಂಬರಿಯನ್ನು ರಚಿಸಿರುವ ಮಾಧುರಿ ದೇಶಪಾಂಡೆ ಅವರಿಗೆ ಪ್ರದಾನ ಮಾಡಿ ಗೌರವಿಸಲಾಯಿತು.

ಡಾ. ಕೆ. ರಮಾನಂದ ಮಾತನಾಡಿ "ಒಬ್ಬ ಗುಣವಂತ ಇನ್ನೊಬ್ಬ ಗುಣವಂತನನ್ನು ಮೆಚ್ಚುವುದು ಅಪರೂಪ ಎನ್ನುವ ಸಂದರ್ಭದಲ್ಲಿ ಸ್ವತಃ ಶ್ರೇಷ್ಠ ಸಾಹಿತಿ, ಸಂಘಟಕರಾಗಿರುವ ಸಿಸಿರಾ ಇತರ ಸಾಹಿತಿಗಳನ್ನು ಕರೆದು ಗೌರವಿಸಿ ನಮಗೆಲ್ಲಾ ಮಾದರಿ ಹಾಕಿಕೊಟ್ಟಿದ್ದಾರೆ" ಎಂದು ಹೇಳಿದರು.



ನಾಡೋಜ ಡಾ.ವೂಡೇ ಪಿ.ಕೃಷ್ಣ, ಬಿ.ಶೃಂಗೇಶ್ವರ ಮತ್ತು ಟಿ.ಎಸ್.ನಾಗಾಭರಣ ಅವರನ್ನು ಅಭಿನಂದಿಸಲಾಯ್ತು. ಪಾನ್ಯಂ ನಟರಾಜ್, ಎಂ.ತಿಮ್ಮಯ್ಯ, ಇಂದಿರಾ ಕೃಷ್ಣಪ್ಪ, ಡಾ.ಸಿಸಿರಾ ಮತ್ತಿತರರಿದ್ದಾರೆ.

ಗೋಷ್ಠಿ-1 : ಸಮಕಾಲೀನ ಸಾಂಸ್ಕೃತಿಕ ಸಂದರ್ಭಗಳು

ಡಾ. ವಾಣಿಶ್ರೀರಾವ್ ನಿರೂಪಿಸಿ, ಕು.ಎಸ್. ಪವಿತ್ರ ನಿರ್ವಹಿಸಿದ ಮೊದಲನೇ ಗೋಷ್ಠಿಯಲ್ಲಿ ಬೆಂಗಳೂರು ವಕೀಲರ ಸಾಹಿತ್ಯ ಕೂಟದ ಅಧ್ಯಕ್ಷ ನಂಜಪ್ಪ ಕಾಳೇಗೌಡ ಆಶಯ ನುಡಿಗಳನ್ನಾಡಿದರು. "ಗಾಂಧೀಜಿ ಅವರ ಚಿಂತನೆಗಳು: ಪ್ರಸ್ತುತ ಸಮಾಜ" ಕುರಿತು ಪ್ರಬಂಧ ಮಂಡಿಸಿದ ಕನ್ನಡ ಉಪನ್ಯಾಸಕ ಡಾ. ಬಿ.ಎಸ್. ಅಶೋಕ್‌ಕುಮಾರ್ "ಜಗತ್ತಿಗೆ ಬೇಕಾದದ್ದು ಯುದ್ಧವಲ್ಲ, ನೆಮ್ಮದಿ ಶಾಂತಿಯ ಬದುಕು, ಸತ್ಯ ಮತ್ತು ಅಹಿಂಸೆಗಳ ಮೂಲಕ ಶತ್ರುಗಳನ್ನೂ ಗೆಲ್ಲಬಹುದು ಎಂಬುದನ್ನು ಗಾಂಧೀಜಿ ತೋರಿಸಿಕೊಟ್ಟರು. ಯಾವ ಅಧಿಕಾರ ಸ್ಥಾನದಲ್ಲೂ ಇರದಿದ್ದ ಗಾಂಧೀಜಿ ಅವರ ಪ್ರತಿಮೆಗಳು, ಸ್ಮಾರಕಗಳು ಜಗತ್ತಿನ ಅನೇಕ ದೇಶಗಳಲ್ಲಿವೆ. ಉಡಲು ಎರಡನೇ ಸೀರೆ ಇಲ್ಲದಿದ್ದ ಮಹಿಳೆಯೋರ್ವರನ್ನು ನೋಡಿದ ಗಾಂಧೀಜಿ ತಾವೂ ಅರೆ ಬೆತ್ತಲೆಯಾಗಿ ತಮ್ಮ ಬದುಕಿನ ಕೊನೆಯವರೆಗೂ ಹಾಗೇ ಇದ್ದರು. ನಡೆ-ನುಡಿಗಳನ್ನು ಒಂದಾಗಿಸಿಕೊಂಡಿದ್ದ ಅವರು ಪ್ರಾರ್ಥಿಸುವ ತುಟಿಗಳಿಗಿಂತ ಸೇವೆ ಮಾಡುವ ಕೈಗಳು ಶ್ರೇಷ್ಠ, ಬಹಿರಂಗ ಶುದ್ಧಿಯಷ್ಟೇ ಅಲ್ಲ, ಅಂತ ರಂಗ ಶುದ್ಧಿಗೂ ಪ್ರಾಧಾನ್ಯ ನೀಡಬೇಕು ಎಂದು ಬೋಧಿಸುತ್ತಿದ್ದರು. ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದ ಅವರು 1924ರಲ್ಲೇ ಕರ್ನಾಟಕ ಏಕೀಕರಣಕ್ಕೆ ತಮ್ಮ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದರು" ಎಂದು ಹೇಳಿದರು.

"ಸಾಹಿತಿ ಬಿ. ಶೃಂಗೇಶ್ವರ ಅವರ ಬದುಕು ಬರಹ" ಕುರಿತು ಪ್ರಬಂಧ ವಾಚಿಸಿದ ಖ್ಯಾತ ಕಾದಂಬರಿಗಾರ್ತಿ ಡಾ. ಎಸ್.ಜಿ. ಮಾಲತಿಶೆಟ್ಟಿ "ನನ್ನ ಚಿಕ್ಕಮಗಳೂರು ಜಿಲ್ಲೆಯ ಕೂಡ್ಲೂರು ಗ್ರಾಮದವರಾದ ಶೃಂಗೇಶ್ವರ ಪ್ರೌಢಶಾಲೆವರೆಗಿನ ವಿದ್ಯಾಭ್ಯಾಸವನ್ನು ಹುಟ್ಟೂರು ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಮಾಡಿ, ಮೈಸೂರಿನಲ್ಲಿ ಕಾಲೇಜ್ ವ್ಯಾಸಂಗ ಪೂರೈಸಿ, ಆಮ್ಕೊ ಕಾರ್ಖಾನೆಯಲ್ಲಿ ಉದ್ಯೋಗ ಲಭಿಸಿದುದರಿಂದ ಬೆಂಗಳೂರಿಗೆ ಬರುತ್ತಾರೆ. ಉಪಾಧ್ಯಾಯಿನಿ ಲಲಿತಮ್ಮ ಅವರೊಡನೆ ವಿವಾಹ. ಮಗ, ಮಗಳು, ಮೊಮ್ಮಕ್ಕಳೊಡನೆ ನೆಮ್ಮದಿಯ ಜೀವನ ಮಾಡುತ್ತಿರುವ ಇವರು ಸಾಹಿತ್ಯದ ಎಲ್ಲಾ ಪ್ರಾಕಾರಗಳಲ್ಲೂ ಕೈಯಾಡಿಸಿ ಸೈ ಎನಿಸಿಕೊಂಡಿದ್ದಾರೆ. ಸಂದೇಶ ತುಂಬಿದ ಹನಿಗವನಗಳನ್ನು ರಚಿಸುವುದರಲ್ಲಿ ನಿಸ್ಸೀಮರೆನಿಸಿಕೊಂಡಿದ್ದಾರೆ. ನೂರಾರು ಕವಿಗೋಷ್ಠಿಗಳಲ್ಲಿ ಉತ್ತಮೋತ್ತಮ ಕವನಗಳನ್ನು ವಾಚಿಸಿದ್ದಾರೆ. ಕಾಡು ಕುಸುಮ, ನಾವು ನೂರು ಕೋಟಿ, ಸುಳ್ಳೇ ನಮ್ಮ ಮನೆದೇವ್ರು-ಇವು ಇವರ ಜನಪ್ರಿಯ ಕೃತಿಗಳು. ಅನೇಕ ಅಭಿನಂದನಾಗ್ರಂಥಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಆಕಾಶವಾಣಿಯಲ್ಲಿ ವಿಚಾರಪೂರ್ಣ ಪ್ರಬಂಧ ಮಂಡಿಸಿದ್ದಾರೆ. ಹವ್ಯಾಸಿ ರಂಗಭೂಮಿ ನಟರೂ ಆಗಿದ್ದಾರೆ. ಏಚ್ಚಮ ನಾಯಕ ಇತ್ಯಾದಿ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಕಸ್ತೂರಿ ಟಿ.ವಿ.ಯಲ್ಲಿ ಹನಿಹನಿ ಹಾಸ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ ಮೆರೆದಿದ್ದಾರೆ. ಉತ್ತಮ ನಿರೂಪಕರು, ಉತ್ತಮ ಸಂಘಟಕರೂ ಆಗಿದ್ದಾರೆ, ನಗರಜಿಲ್ಲಾ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಯಾಗಿ ದೊಡ್ಡ ಹೆಸರು ಮಾಡಿದ್ದಾರೆ. ಪರಸ್ಪರ ಸ್ನೇಹ ಬಳಗ ಸಂಸ್ಥಾಪಿಸಿ ನೂರಾರು ಉದಯೋನ್ಮುಖ ಕಲಾವಿದರನ್ನು, ಲೇಖಕರನ್ನು ಬೆಳಕಿಗೆ ತಂದಿದ್ದಾರೆ. ಇವರ ನಿರಂತರ ನಿಷ್ಠಾವಂತ ಕನ್ನಡ ಸೇವೆಗೆ ಅನೇಕ ಪ್ರಶಸ್ತಿಗಳು, ಸನ್ಮಾನಗಳು ಸಂದಿವೆ" ಎಂದು ಹೇಳಿದರು.

"ವಚನ ಸಾಹಿತ್ಯ: ಮಹಿಳೆ" ಕುರಿತು ಪ್ರಬಂಧ ವಾಚಿಸಿದ ಹಿರಿಯ ಲೇಖಕಿ, ಗ್ರಂಥ ಪಾಲಕಿ ಡಾ. ಬಿ. ಇಂದಿರಾದೇವಿ "12ನೇ ಶತಮಾನದಲ್ಲಿ ಬಸವಾದಿ ಶರಣರಿಂದ ಆರಂಭವಾದ ವಚನ ಸಾಹಿತ್ಯ ಇಂದು ಸಮೃದ್ಧವಾಗಿ ಬೆಳೆದಿದೆ. ಬಸವಣ್ಣ, ಅಲ್ಲಮ ಪ್ರಭು ಮತ್ತಿತರ ಶರಣರ ಪ್ರೋತ್ಸಾಹದಿಂದಾಗಿ ಅಕ್ಕಮಹಾದೇವಿ, ಅಕ್ಕನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಸತ್ಯಕ್ಕ, ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಹಾದೇವಿ, ಗೊಗ್ಗವ್ವೆ, ಮುಕ್ತಾಯಕ್ಕ ಮೊದಲಾದ ಅನೇಕ ಮಹಿಳೆಯರು ವಚನಕಾರ್ತಿಯರಾಗಿ ಬೆಳಕು ಕಂಡರು, ಸಾಮಾನ್ಯ ಮಹಿಳೆಯರಾಗಿದ್ದವರು ಅಸಾಮಾನ್ಯರೆನಿಸಿಕೊಂಡರು. ಅಕ್ಕ ಮಹಾದೇವಿ ತನ್ನ ಶ್ರೇಷ್ಠ ರಚನೆಗಳಿಂದಾಗಿ ಕನ್ನಡದ ಪ್ರಪ್ರಥಮ ಕವಯತ್ರಿ ಎನಿಸಿಕೊಂಡರು. ಬಸವಾದಿಶರಣರನ್ನು ಆದರ್ಶವಾಗಿರಿಸಿಕೊಂಡು ಇಂದು ಅನೇಕ ಮಹನೀಯರು ಮಹಿಳೆಯರನ್ನು ಸಾಹಿತ್ಯ ಹಾಗೂ ಇತರ ಕ್ಷೇತ್ರಗಳಲ್ಲಿ ಪ್ರವರ್ಧಮಾನಕ್ಕೆ ಬರಲು ಪ್ರೋತ್ಸಾಹಿಸುತ್ತಿದ್ದಾರೆ" ಎಂದು ಹೇಳಿದರು.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ, ಅಕ್ಷರ ಪಿಸಿರಿ ಮಾಸ ಪತ್ರಿಕೆಯ ಪ್ರಧಾನ ಸಂಪಾದಕಿ ಭಾಗ್ಯಲಕ್ಷ್ಮಿ ಮಗ್ಗೆ "ಬುದ್ಧ-ಬಸವ-ಗಾಂಧೀಜಿ ಅವರ ತತ್ತ್ವಗಳನ್ನು ಅಳವಡಿಸಿಕೊಂಡು ನಡೆದರೆ ಸಮಾಜ ಪರಿಶುದ್ಧವಾಗುತ್ತದೆ. ಬುದ್ಧ-ಬಸವ-ಗಾಂಧಿಯವರ ಹೆಸರಿನಲ್ಲಿ ಸಾಂಸ್ಕೃತಿಕ ಟ್ರಸ್ಟ್ ಸ್ಥಾಪಿಸಿ, ಅತ್ಯುತ್ತಮ, ಸೃಜನಶೀಲ ಕಾರ್ಯಕ್ರಮಗಳನ್ನು ನಡೆಸುತ್ತಿರುವ ವಾಮನಾಕಾರದ ತ್ರಿವಿಕ್ರಮ" ಎಂದು ಸಿಸಿರಾ ಅವರನ್ನು ಬಣ್ಣಿಸಿದರು. ಗೋಷ್ಠಿಯಲ್ಲಿ ಉತ್ತಮವಾದ ಪ್ರಬಂಧಗಳನ್ನು ಮಂಡಿಸಿದ ಡಾ. ಬಿ.ಎಸ್. ಅಶೋಕ್‌ಕುಮಾರ್, ಡಾ. ಎಸ್.ಜಿ. ಮಾಲತಿಶೆಟ್ಟಿ ಮತ್ತು ಡಾ. ಬಿ. ಇಂದಿರಾದೇವಿ ಅವರನ್ನು ಶ್ಲಾಘಿಸಿದರು. "ನಾನು ಬ್ಯಾಂಕ್ ಉದ್ಯೋಗದಿಂದ ನಿವೃತ್ತಳಾದ ನಂತರ ಬಿ. ಶೃಂಗೇಶ್ವರ ಅವರ ಪರಿಚಯವಾಯಿತು. ಅವರು ಮನೆಕಟ್ಟುವಾಗ, ಮಹಡಿಯ ಮೇಲಿಂದ ಬಿದ್ದು ಎರಡೂ ಕಾಲುಗಳನ್ನು ಮುರಿದುಕೊಂಡಿದ್ದರು, ಅಪಾರ ಮಾನಸಿಕ ಶಕ್ತಿಯಿಂದಾಗಿ ಶೀಘ್ರ ಚೇತರಿಸಿಕೊಂಡು ಪೂರ್ಣಾವಧಿಯ ಸಾಹಿತ್ಯ ಪರಿಚಾರಕರಾಗಿದ್ದಾರೆ. ಸಾಹಿತ್ಯದ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ" ಎಂದು ಹೇಳಿದರು.

2ನೇ ಪುಟಕ್ಕೆ

ಬಿ. ಶೃಂಗೇಶ್ವರ ಅವರ ಸರ್ವಾಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆದ

1ನೇ ಪುಟದಿಂದ

ಕವಿಗೋಷ್ಠಿ ಮತ್ತು ದತ್ತಿ ಬಹುಮಾನ ವಿತರಣೆ

ಭೋಜನ ವಿರಾಮದ ನಂತರ ನಡೆದ ಎರಡನೇ ಗೋಷ್ಠಿಯಲ್ಲಿ ಲೇಖಕರಾದ ಲಲಿತಾ ಕೆ. ಹೊಸ ಪ್ಯಾಟಿ (ಕೃತಿ: ಗುರು ಚೇತನ, ಪ್ರಾಕಾರ: ಜೀವನ ಚರಿತ್ರೆ), ಶಕುಂತಲಾ ನಾ. ದಾಳೇರ (ಮೌನರಾಗ: ಕವನ ಸಂಕಲನ), ಪದ್ಮಾವತಿ ಚಂದ್ರು (ಮಾನಸ ಸಿರಿ: ಚುಟುಕು ಸಂಕಲನ), ಜಿ. ಜಯಶಂಕರ ಪ್ರಕಾಶ್ (ನಲಿಯುವ ಹೆಜ್ಜೆಗಳು: ಪ್ರವಾಸ ಕಥನ) ಮತ್ತು ಕೆ.ಎನ್. ಅನಂತ (ಋಣ ಭಾರ: ಕಥಾ ಸಂಕಲನ) ಅವರಿಗೆ "ಸಾಹಿತಿ ಶ್ರೀ ರಾಂ.ಕೆ. ಹನುಮಂತಯ್ಯ-ಸಮಾಜ ಸೇವಕ ದಿ॥ ಹೆಬ್ಬಗೋಡಿ ಗೋಪಾಲ್ ದತ್ತಿ"ಗಳ ಆಶ್ರಯದಲ್ಲಿ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾದ ಹಾಗೂ ಕನ್ನಡದಲ್ಲಿ ಶೇ. 100 ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ. ಸಾಹಿತಿ ಶ್ರೀಮತಿ ಗುಣಸಾಗರಿ ನಾಗರಾಜ್ ದತ್ತಿ ಮತ್ತು ವರಶ್ರೀ ದತ್ತಿಗಳ ಆಶ್ರಯದಲ್ಲಿ ನಗದು ಬಹುಮಾನಗಳನ್ನು ನೀಡಿ ಪುರಸ್ಕರಿಸಲಾಯಿತು. ವೈಚಾರಿಕ ಸಾಹಿತಿ ಡಾ. ಸಮತಾ ದೇಶಮಾನೆ ಅವರಿಗೆ 2019ರ ಸಾಲಿನ "ಸಾಹಿತ್ಯ-ಸಂಸ್ಕೃತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೊಪ್ಪರಂ ಅನ್ನಪೂರ್ಣ, ಪ್ರೊ. ಎ. ಶ್ರೀಲತಾ ಮತ್ತಿತರ 12 ಕವಿಗಳು ಕವಿಗೋಷ್ಠಿಯಲ್ಲಿ ಭಾಗವಹಿಸಿ ಸ್ವರಚಿತ ಕವನಗಳನ್ನು ವಾಚಿಸಿದರು.

ಎಂ.ಕೆ. ಲತಾಮಣಿ ನಿರೂಪಿಸಿ ಕು.ಬಿ.ವಿ. ಶೈಲಜಾ ನಿರ್ವಹಿಸಿದ ಈ ಗೋಷ್ಠಿಯಲ್ಲಿ ಸ್ವಾಗತ ಭಾಷಣ ಮಾಡಿದ ಟ್ರಸ್ಟ್‌ನ ಅಧ್ಯಕ್ಷ ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ) ದತ್ತಿದಾನಿಗಳ ಉದಾರತೆಯಿಂದಾಗಿಯೇ ಪ್ರತಿವರ್ಷ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆಯೆಂದು ತಿಳಿಸಿದರು. "ಅತ್ಯಾವರ" ಚಲನಚಿತ್ರದ ನಿರ್ದೇಶಕ ಚಂದ್ರಶೇಖರ ಬಂಡಿಯಪ್ಪ ವಿಶೇಷ ಆಹ್ವಾನಿತರಾಗಿದ್ದರು.

ದತ್ತಿ ಪುಸ್ತಕ ಬಹುಮಾನ ವಿತರಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ನಿಕಟ ಪೂರ್ವ ಅಧ್ಯಕ್ಷರಾದ ಡಾ॥ ವಸುಂಧರಾ ಭೂಪತಿ ಇನ್ನೆರಡು ದಿನಗಳಲ್ಲಿ ಜಗದ ಕವಿಯುಗದ ಕವಿ ಕುವೆಂಪು ಅವರ 116ನೇ ಜನ್ಮದಿನ ಎಂಬುದನ್ನು ಸಭೆಗೆ ನೆನಪಿಸಿ "ಕನ್ನಡ ಸಾಹಿತ್ಯ ಲೋಕದಲ್ಲಿ ಹೊಸ ಮನ್ವಂತರವನ್ನೇ ನಿರ್ಮಿಸಿದ ಕುವೆಂಪು ಸಾಮಾನ್ಯರನ್ನು ಶ್ರೀ ಸಾಮಾನ್ಯರು, ರೈತನನ್ನು ನೇಗಿಲ ಯೋಗಿ ಮತ್ತು ಗೃಹಿಣಿಯರನ್ನು ಗೃಹ ತಪಸ್ವಿನಿ ಎಂದು ಗೌರವಿಸಿದ ದಾರ್ಶನಿಕ ಕವಿ. ಅವರ ತತ್ವಗಳನ್ನು ಅಳವಡಿಸಿಕೊಳ್ಳಿ" ಎಂದು ಕರೆ ನೀಡಿದರು. ಕೊರೋನಾ ಬಗೆಗೆ ಸ್ವರಚಿತ ಕವನ ವಾಚಿಸಿದರು.


ತಾವೊಬ್ಬರೇ ಬೆಳೆಯದೆ ಅನೇಕರನ್ನು ಬೆಳೆಸಿರುವ ಸಿಸಿರಾ ಅವರನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ ದತ್ತಿದಾನಿ ಗುಣಸಾಗರಿ ನಾಗರಾಜ್ "ನಾನು ಈಗಾಗಲೇ 60,000/- ರೂಗಳ ದತ್ತಿ ಇರಿಸಿದ್ದೇನೆ. ಟ್ರಸ್ಟ್‌ನ ನಿರಂತರ ಕಾರ್ಯಕ್ರಮಗಳನ್ನು ಮೆಚ್ಚಿ ಇನ್ನೂ 60,000/0 ರೂಗಳನ್ನು ನೀಡುತ್ತಿದ್ದೇನೆ" ಎಂದರಲ್ಲದೆ, ಆ ಸಂಬಂಧ ಚೆಕ್ ಅನ್ನು ಸಿಸಿರಾ ಅವರಿಗೆ ಹಸ್ತಾಂತರಿಸಿದರು.

ಅಧ್ಯಕ್ಷತೆ ವಹಿಸಿದ್ದ ಮತ್ತೋರ್ವ ದತ್ತಿದಾನಿ, ಹಿರಿಯ ಸಾಹಿತಿ ರಾಂ.ಕೆ.ಹನುಮಂತಯ್ಯ "ಮೂರ್ತಿ ಚಿಕ್ಕದಾದರೂ ದೊಡ್ಡ ದೊಡ್ಡ ಸಾಧನೆ ಮಾಡಿರುವ ಸಿಸಿರಾ ಅವರಿಂದ ಶಿಸ್ತು ಮತ್ತು ಕಾರ್ಯ ನಿರ್ವಹಣೆಯಲ್ಲಿ ಅಚ್ಚುಕಟ್ಟುತನ ಇವುಗಳನ್ನು ಕಲಿಯಬೇಕು. ಸಾಹಿತಿಯಾಗಿ, ಸಾಹಿತ್ಯ ಪರಿಚಾರಕರಾಗಿ ಅದ್ಭುತ ಕೆಲಸ ಮಾಡುತ್ತಿರುವ ಬಿ.ಶೃಂಗೇಶ್ವರ ಅವರನ್ನು ಸಮಾವೇಶದ ಅಧ್ಯಕ್ಷರನ್ನಾಗಿ ಮಾಡಿರುವುದು ಅತ್ಯಂತ ಸೂಕ್ತ. ನಾಡೋಜ ಡಾ.ಪೂಡೇ ಪಿ.ಕೃಷ್ಣ ಅಂತಹ ಮಹನೀಯರಿರುವುದರಿಂದಲೇ ಕನ್ನಡದ ಕೆಲಸಗಳು. ಸರಾಗವಾಗಿ ನಡೆಯುತ್ತಿವೆ. ಕನ್ನಡಿಗರು ಅಲ್ಪಸಂಖ್ಯಾತರಾಗಿರುವ ದಂಡು ಪ್ರದೇಶಕ್ಕೆ ಇಂತಹ ದಿಗ್ಗಜರನ್ನೆಲ್ಲಾ ಆಗಿಂದಾಗ ಆಹ್ವಾನಿಸಿ ನಾನೂ ಕನ್ನಡದ ಕೆಲಸಗಳನ್ನು ಮಾಡುತ್ತಿದ್ದೇನೆ" ಎಂದು ತಿಳಿಸಿದರು.

ಸಮಾರೋಪ ಸಮಾರಂಭ

ಸಂಜೆ ನಡೆದ ಸಮಾರೋಪ ಸಮಾರಂಭವನ್ನು ಕು. ಕೆ.ಜಿ.ಹೇಮಾವತಿ ನಿರ್ವಹಿಸಿದರು. ಪ್ರೊ. ಪ್ರತಿಮಾ ನಾಗರಾಜ್ ನಿರೂಪಿಸಿದರು. ಹಿರಿಯ ಸಮಾಜ ಸೇವಕಿ ಹಾಗೂ ಶಿವಾಜಿ ನಗರ ಕ್ಷೇತ್ರದ ಕ.ಸಾ.ಪ.ಅಧ್ಯಕ್ಷೆ ಸವಿತಾ ರಾಮು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 12 ಜನರಿಗೆ "ಸಮಾಜ ಸೇವಕ ಮಾಗಡಿ ಶ್ರೀ ಪಾನ್ಯಂ ನಟರಾಜ್ ಮತ್ತು ದೊಡ್ಡಬಳ್ಳಾಪುರದ ಶ್ರೀಮತಿ ಎಸ್.ರೇಣುಕ ನಾಗಪ್ರಿಯ ದತ್ತಿ" ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಸಮಾರೋಪ ನುಡಿಗಳನ್ನಾಡಿದ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹಾಗೂ ಪ್ರಸಿದ್ಧ ವಾಗ್ಮಿ ಡಾ.ಸಿ.ಸೋಮಶೇಖರ "ಮುಪ್ಪು, ಸಾವು, ರೋಗ-ರುಜಿನಗಳಿಗೆ ಪರಿಹಾರ ಕಂಡುಕೊಳ್ಳಲು ಹೋರಾಡಿದ ಬುದ್ಧ, ದಯೆಯೇ ಧರ್ಮದ ಮೂಲವಯ್ಯ ಎಂದು ಸಾರಿದ ಬಸವಣ್ಣ ಮತ್ತು ಸತ್ಯ ಅಹಿಂಸೆಗಳ ಮೂಲಕ ಭಾರತದ ದಾಸ್ಯ ವಿಮೋಚನೆಗೊಳಿಸಿದ ಗಾಂಧೀಜಿ – ಈ ಮೂವರ ಹೆಸರಿನಲ್ಲಿ ಒಂದು ಟ್ರಸ್ಟ್, ಸ್ಥಾಪಿಸಿ, ಅವರ ಬೋಧನೆಗಳನ್ನು ಬಿತ್ತರಿಸುತ್ತಿರುವ ಸಿಸಿರಾ ಅವರನ್ನು ಅಭಿನಂದಿಸಿದರು "ಪಾಲಿಗೆ ಬಂದ



ಪ್ರೊ. ಆರ್.ವಿ.ಶಶಿಕಲಾ ಅವರ "ಅಂತರ್ಯ" ಕವನ ಸಂಕಲನ ಲೋಕಾರ್ಪಣೆ. ಸಿಸಿರಾ, ಪ್ರೊ. ಎಂ.ನೀಲಯ್ಯ, ಡಾ. ಸಿ.ಸೋಮಶೇಖರ, ಬಿ.ಶೃಂಗೇಶ್ವರ, ಡಾ. ಪೂಡೇ ಪಿ.ಕೃಷ್ಣ, ಪಾನ್ಯಂ ನಟರಾಜ್ ಮತ್ತು ಇಂದಿರಾ ಕೃಷ್ಣಪ್ಪ ಇದ್ದಾರೆ.

ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುವವನೇ ನಿಜವಾದ ಸಾಧಕ. ಸದ್ದು ಗದ್ದಲವಿಲ್ಲದೆ ಸೇವೆ ಮಾಡುತ್ತಿರುವ ಅಂತಹ 12 ಜನ ಸಾಧಕರನ್ನು ಸನ್ಮಾನಿಸಿ ನಿಮ್ಮ ಟ್ರಸ್ಟ್ ತನ್ನ ಗೌರವ ಹೆಚ್ಚಿಸಿಕೊಂಡಿದೆ. ಜ್ಯೋತಿಯೇ ಆಗು ಜಗಕೆಲ್ಲಾ ಎಂದು ಜನಪದದ ತಾಯಿಯೊಬ್ಬಳು ತನ್ನ ಮಗನಿಗೆ ಬೋಧಿಸಿದಂತೆ, ನನ್ನ ಅನಕ್ಷರಸ್ತ ತಾಯಿ ನನಗೆ ಉತ್ತಮ ಸಂಸ್ಕಾರ ನೀಡಿ ಬೆಳೆಸಿದ್ದಾಳೆ. ಆಕೆಯ ಹಿತವಚನಗಳನ್ನು ಪಾಲಿಸುತ್ತಾ ಹಾಗೂ ಮಾಸ್ತಿಯವರು ಹೇಳಿದ ಅಧಿಕಾರ ಹಾವಾಡಿಗನ ಬುಟ್ಟಿಯ ಹಾವಿನಂತಿರಬೇಕು ಎಂಬ ಆಣಿಮುತ್ತುಗಳನ್ನು ಅಳವಡಿಸಿಕೊಂಡು ಅಧಿಕಾರ ನಿರ್ವಹಿಸಿದ್ದೇನೆ. ಕೆ.ಎ.ಎಸ್., ಐ.ಎ.ಎಸ್. ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಎಲ್ಲಾ ಹುದ್ದೆಗಳಲ್ಲೂ ಕನ್ನಡಕ್ಕೆ ಅಗ್ರ ಪ್ರಾಶಸ್ತ್ಯ ನೀಡಿದ್ದೇನೆ. ಈಗ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ನನ್ನ ಮೇಲೆ ವಿಶ್ವಾಸವಿರಿಸಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾದಿ ನೀಡಿದ್ದಾರೆ. ಸವಾಲಿನ ಜವಾಬ್ದಾರಿಯನ್ನು ನಿಮ್ಮೆಲ್ಲರ ಹಾರೈಕೆಯಿಂದ ಉತ್ತಮವಾಗಿ ನಿರ್ವಹಿಸುತ್ತೇನೆ" ಎಂದು ಘೋಷಿಸಿದರು.

ಇದೇ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ವಿಶ್ರಾಂತ ಉಪನಿರ್ದೇಶಕ ಎಂ.ನೀಲಯ್ಯ, ಪ್ರೊ. ಆರ್.ವಿ.ಶಶಿಕಲಾ ಅವರ "ಅಂತರ್ಯ" ಕವನ ಸಂಕಲನವನ್ನು ಲೋಕಾರ್ಪಣೆಗೊಳಿಸಿದರು.

ಸಮಾವೇಶದ ಸರ್ವಾಧ್ಯಕ್ಷ ಬಿ.ಶೃಂಗೇಶ್ವರ ಮಾತನಾಡಿ, "ಡಾ.ಸಿ.ಸೋಮಶೇಖರರ ತಲಸ್ಪರ್ಶಿ ಮಾತುಗಳ ಸವಿ ಭೋಜನದ ಮುಂದೆ ನನ್ನ ಮಾತುಗಳು ಸಪ್ಪೆ ಎನಿಸುತ್ತದೆ" ಎಂದರಲ್ಲದೆ "ಕೊರೋನಾದಿಂದಾಗಿ ಎಳೆಂಟು ತಿಂಗಳುಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳೇ ಇರಲಿಲ್ಲ. ಸಿಸಿರಾ ಅವರು ಧೈರ್ಯ ಮಾಡಿ ಒಂದು ಅಭೂತಪೂರ್ವ ಕಾರ್ಯಕ್ರಮ ಏರ್ಪಡಿಸಿದ್ದಾರೆ. ಅವರು ಅಭಿನಂದನಾರ್ಹರು" ಎಂದು ಹೇಳಿದರು. ಸಮಾವೇಶದಲ್ಲಿ ಲೋಕಾರ್ಪಣೆಗೊಂಡ ತಮ್ಮ 'ಬಿಂದು' ಕವನ ಸಂಕಲನದ ಕೆಲವು ಸ್ವಾರಸ್ಯಕರ ಚುಟುಕುಗಳನ್ನು ವಾಚಿಸಿದರು.

ಅಧ್ಯಕ್ಷತೆ ವಹಿಸಿದ್ದ ದತ್ತಿ ದಾನಿ, ಮಾಗಡಿಯ ಹಿರಿಯ ಸಮಾಜ ಸೇವಕ ಕರ್ನಾಟಕ ಪ್ರತಿಭಾ ಕೇಂದ್ರದ ಅಧ್ಯಕ್ಷ ಪಾನ್ಯಂ ನಟರಾಜ್ "20 ವರ್ಷಗಳ ಹಿಂದೆ ಚನ್ನಪಟ್ಟಣ ಬಳಿಯ ಗ್ರಾಮವೊಂದರಲ್ಲಿ ಸಮಾನ ಮನಸ್ಕರೊಡಗೂಡಿ ಈ ಟ್ರಸ್ಟ್ ಸಂಸ್ಥಾಪಿಸಿದ ಸಿಸಿರಾ 11 ವರ್ಷಗಳಿಂದ ಸಾಹಿತ್ಯ ಸಂಸ್ಕೃತಿ ಸಮಾವೇಶಗಳನ್ನು ಏರ್ಪಡಿಸಿ ನೂರಾರು ಜನರಿಗೆ ವೇದಿಕೆ ಕಟ್ಟಿಕೊಡುತ್ತಿದ್ದು, ನಾಡಿನ ಸಾಹಿತ್ಯ-ಸಂಸ್ಕೃತಿ ಕ್ಷೇತ್ರದಲ್ಲಿ ಒಂದು ಹೊಸ ಮನ್ವಂತರವನ್ನೇ ಸೃಷ್ಟಿಸುತ್ತಿದ್ದಾರೆ" ಎಂದು ಪ್ರಶಂಸಿಸಿದರು.

ಕನ್ನಡ ಕಾರ್ಯಕರ್ತರಾದ ನಾ.ಶ್ರೀಧರ್, ಫಾಲನೇತ್ರ, ಮೊಹಮದ್ ಮುನಾಫ್, ಹನುಮಂತರಾಯ ಮತ್ತಿತರರು ಹಾಗೂ ಟ್ರಸ್ಟ್‌ನ ಪದಾಧಿಕಾರಿಗಳಾದ ಸಿ.ಹೇಮಾವತಿ. ಮರಿಮಲ್ಲಯ್ಯ, ಪುಟ್ಟರಾಜು ಮೊದಲಾದವರು ಉಪಸ್ಥಿತರಿದ್ದರು.

ವೈಜ್ಞಾನಿಕ ಸಂಶೋಧನೆಗಳು ಬಡ ರೈತರು, ಕೂಲಿ ಕಾರ್ಮಿಕರಿಗೆ ಒಳಿತನ್ನುಂಟು ಮಾಡಬೇಕೆಂಬುದೇ ಗಾಂಧೀಜಿ ಆಶಯವಾಗಿತ್ತು.

–ಡಬ್ಲ್ಯೂ.ಎಚ್.ಹನುಮಂತಪ್ಪ ಸ್ಮಾರಕ ದತ್ತಿ ಕಾರ್ಯಕ್ರಮದಲ್ಲಿ ಸುಮಂಗಲಾ ಎಸ್.ಮುಮ್ಮಿಗಟ್ಟಿ



ಗಾಂಧಿ ಶಾಂತಿ ಪ್ರತಿಷ್ಠಾನ, ಬೆಂಗಳೂರು ಕೇಂದ್ರ ಹಾಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಬೆಂಗಳೂರು – ಇವುಗಳ ಸಂಯುಕ್ತ ಆಶ್ರಯದಲ್ಲಿ ಡಿಸೆಂಬರ್ 24ರ ಸಂಜೆ ಗಾಂಧೀ ಭವನದ ಬಾಪು ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ವಿಜ್ಞಾನ ಸಾಹಿತಿ, ಆಕಾಶವಾಣಿಯ ಕಾರ್ಯ ನಿರ್ವಾಹಕರಾದ ಸುಮಂಗಲಾ ಎಸ್. ಮುಮ್ಮಿಗಟ್ಟಿ ಅವರು "ಬ್ರಹ್ಮ ಸಮಾಜದ ಮುಖಂಡರು ಹಾಗೂ ಗಾಂಧಿವಾದಿ ಡಬ್ಲ್ಯೂ.ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ನೀಡಿದರು. ಗಾಂಧಿ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ.ಎಸ್.ರಾಮ ಲಿಂಗೇಶ್ವರ (ಸಿಸಿರಾ)ನಿರೂಪಣೆ ಮಾಡಿದರು. "ಡಿಸೆಂಬರ್ 24 ಮಹಾನ್ ಗಾಂಧಿವಾದಿ ಡಬ್ಲ್ಯೂ.ಎಚ್. ಹನುಮಂತಪ್ಪನವರ ಜನ್ಮದಿನ. 35 ವರ್ಷಗಳಿಂದಲೂ ಇದೇ ದಿನ ಅವರ ಹೆಸರಿನಲ್ಲಿ ಉತ್ತಮ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ" ಎಂದು ಹೇಳಿದರು. ವಿದ್ಯಾ ಅಮಿತ್ ಅವರು "ಇದು ಮಣ್ಣು ಪ್ರದೇಶ ಪಾವನ ಪರಂಪರೆಯ ಗಂಗೆ ಹರಿಯುವಳಿಲ್ಲಿ", "ಸಾವಿರ ಬಗೆಯಲಿ ಸಾಗುತಿದೆ ಸ್ವಾತಂತ್ರ್ಯದ ಲಾಸ್ಯ" ಮತ್ತು "ರಘುಪತಿ ರಾಘವ ರಾಜಾರಾಮ್" – ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪ್ರೊ. ಪ್ರತಾಪ್. ಲಿಂಗಯ್ಯ ಸ್ವಾಗತಿಸಿದರು. ಗಾಂಧೀಜಿ ಮತ್ತು ಡಬ್ಲ್ಯೂ.ಎಚ್. ಹನುಮಂತಪ್ಪ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ, ಅರಳಿ ಸಸಿಗೆ ನೀರುಣಿಸಿ ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ . ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರು "ಪ್ರಮುಖ ವಿಜ್ಞಾನ ಸಾಹಿತಿ ಸುಮಂಗಲಾ ಮುಮ್ಮಿಗಟ್ಟಿ ಮಯೂರ ಪತ್ರಿಕೆಯಲ್ಲಿ ಇತ್ತೀಚೆಗೆ ಬರುತ್ತಿರುವ [illegible] ವೈಜ್ಞಾನಿಕ [illegible] ಕುರಿತು ವೈಚಾರಿಕ ಲೇಖನ ಬರೆದಿದ್ದರು. ಅದನ್ನು ಓದಿ ಇಂದಿನ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲು ಅವರೇ ಸೂಕ್ತವ್ಯಕ್ತಿ ಎಂದು ತೀರ್ಮಾನಿಸಿದೆವು" ಎಂದರಲ್ಲದೆ, "ಉದಾರ ಚರಿತರು ಈಗ ಕಡಿಮೆಯಾಗುತ್ತಿದ್ದರೂ, ವಿಶ್ವವೇ ತಮ್ಮ ಕುಟುಂಬ ಎಂದು ಭಾವಿಸಿ ಅತ್ಯಂತ ಉದಾರಚರಿತರಾಗಿ ನಡೆದುಕೊಳ್ಳುತ್ತಿರುವ ಪೂಡೇ ಕುಟುಂಬದವರನ್ನು" ಮುಕ್ತ ಕಂಠದಿಂದ ಪ್ರಶಂಸಿಸಿದರು. ಗಾಂಧೀಜಿ ಸೇರಿದಂತೆ ಎಲ್ಲಾ ಮಹಾತ್ಮರೂ "ಎಲ್ಲರ ಏಳಿಗೆಯೇ ನನ್ನ ಏಳಿಗೆ" – ಈ ಮಾತುಗಳನ್ನು ಅರಿತು ನಡೆಯಬೇಕು ಎಂದು ಕಿವಿಮಾತು ಹೇಳಿದರು.

ಡಬ್ಲ್ಯೂ.ಎಚ್.ಹನುಮಂತಪ್ಪ ಅವರನ್ನು ಕುರಿತು ಮಾತನಾಡಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಗೌ.ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರು "1857ರ ನಂತರ ಲಕ್ಷಾಂತರ ಸ್ವಾತಂತ್ರ್ಯ ಯೋಧರು ಭಾರತದಲ್ಲಿ ಹುಟ್ಟಿದರು. ಇಂತಹ ಯೋಧರಲ್ಲಿ ಒಬ್ಬರಾದ ಹನುಮಂತಪ್ಪನವರು ಬಾಲ್ಯದಿಂದಲೇ ರಾಜಾರಾಮ ಮೋಹನರಾಯರ ತತ್ವಗಳಿಗೆ ಮಾರು ಹೋಗಿ ಬ್ರಹ್ಮ ಸಮಾಜದ ಸದಸ್ಯರಾಗುತ್ತಾರೆ. ಅವರ ಬಗೆಗೆ ಕನ್ನಡದಲ್ಲಿ ಪುಸ್ತಕ ರಚಿಸುತ್ತಾರೆ. ಕಲ್ಕತ್ತಾದಲ್ಲಿ ಅಮೃತ ಶಿಲೆಯ ರಾಜಾರಾಮ ಮೋಹನರಾಯರ ಪ್ರತಿಮೆ ಮಾಡಿಸಿ ಅದನ್ನು ಬೆಂಗಳೂರಿನಲ್ಲಿ ಪ್ರತಿಷ್ಠಾಪಿಸುತ್ತಾರೆ. ಇಂದಿಗೂ ಪೂಡೇ ಕುಟುಂಬದವರೆಲ್ಲರೂ ರಾಜಾ ರಾಮ ಮೋಹನರಾಯರ ಜನ್ಮದಿನದಂದು ಪ್ರತಿಮೆ ಬಳಿ ಹೋಗಿ ಪುಷ್ಪ ನಮನ ಸಲ್ಲಿಸುತ್ತಾರೆ" ಎಂದರಲ್ಲದೆ, ಮೈಸೂರು ಚಲೋ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಹನುಮಂತಪ್ಪನವರು ನೂರಾರು ಬಡವಿದ್ಯಾರ್ಥಿಗಳಿಗೆ ಸಹಾಯ ಮಾಡಿ ಅವರ ಬದುಕು ರೂಪಿಸಿದರು. ಬೆಂಗಳೂರು ಪುರಸಭೆಯ ಸದಸ್ಯರಾಗಿ, ನಂತರ ಅಧ್ಯಕ್ಷರಾಗಿ ಆಧುನಿಕ ಬೆಂಗಳೂರು ನಿರ್ಮಾಣಕ್ಕೆ ಬಹಳ ಹಿಂದೆಯೇ ನಾಂದಿ ಹಾಡಿಹೋಗಿದ್ದಾರೆ ಎಂದು ಹೇಳಿದರು.

ಇದೇ ಸಮಾರಂಭದಲ್ಲಿ ಇತ್ತೀಚೆಗೆ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಗೌರವಕ್ಕೆ ಭಾಜನರಾದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರು, ಶಿಕ್ಷಣ ತಜ್ಞರು. ಹಾಗೂ ಡಬ್ಲ್ಯೂ.ಎಚ್.ಹನುಮಂತಪ್ಪನವರ ಮೊಮ್ಮಗ ಡಾ.ಪೂಡೇ ಪಿ.ಕೃಷ್ಣ ಅವರನ್ನು ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಅಮರ ಬಾಪು ಚಿಂತನ ಪತ್ರಿಕಾ ಬಳಗದ ವತಿಯಿಂದ ಗೌರವಿಸಲಾಯಿತು. ಗೌರವಾ ಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ.ಪೂಡೇ ಪಿ.ಕೃಷ್ಣ "ನಮ್ಮ ತಾತನವರ ವಿಚಾರಗಳೇ ನನ್ನ ಸಮಾಜಸೇವಾ ಚಟುವಟಿಕೆಗಳಿಗೆ ಪ್ರೇರಣೆ. ನಾನು ಹಣದ ಹಿಂದೆ ಹೋಗಿಲ್ಲ. ನಿಸ್ವಾರ್ಥ ಸೇವೆಯಲ್ಲಿ ಶಕ್ತಿ ಇದೆ. ನನ್ನ ಕೊನೆಯುಸಿರುವವರೆಗೂ ಸಮಾಜ ಸೇವೆ ಮಾಡುವ ಶಕ್ತಿ ಲಭಿಸಲಿ" ಎಂದರಲ್ಲದೆ: ತಮಗೆ ಲಭಿಸಿರುವ ನಾಡೋಜ ಗೌರವ ತಮ್ಮ ಕುಟುಂಬದ ಎಲ್ಲರಿಗೆ ಹಾಗೂ ವಿವಿಧ ಸಂಸ್ಥೆಗಳಲ್ಲಿ ಸನ್ಮೊಡನೆ ಸಹಕರಿಸುತ್ತಿರುವ ಎಲ್ಲರಿಗೂ ಸೇರಿದ್ದು ಎಂದು ಹೇಳಿದರು.

ಪಿ.ಪಿ.ಟಿ.ಮೂಲಕ ಉಪನ್ಯಾಸ ನೀಡಿದ ಸುಮಂಗಲ ಎಸ್.ಮುಮ್ಮಿಗಟ್ಟಿ ಅವರು "ಬಹುಮುಖ ವ್ಯಕ್ತಿತ್ವದ ಗಾಂಧೀಜಿ ಅವರಿಗೆ ವಿಜ್ಞಾನ ನಿಂತ ನೀರಲ್ಲ ಎಂಬ ಅರಿವಿತ್ತು. ಚರಕವನ್ನು ಸುಧಾರಿಸಿದ ವಿಜ್ಞಾನಿಗೆ ಒಂದು ಲಕ್ಷ ರೂ.ಗಳ ಬಹುಮಾನವನ್ನು 1930ರಷ್ಟು ಹಿಂದೆಯೇ ಘೋಷಿಸಿದ್ದರು. ಪಾಲಿಷ್ ಮಾಡದ ಹಾಗೂ ಮಾಡಿದ ಅಕ್ಕಿ–ಇವುಗಳಲ್ಲಿನ ಪೋಷಕಾಂಶದ ಬಗೆಗೆ ತಿಳಿಸಿ ಎಂದು ವಿಜ್ಞಾನಿಗಳಲ್ಲಿ ಮನವಿ ಮಾಡಿಕೊಂಡಿದ್ದರು. ದುಡಿಯುವ ಕೈಗಳಿಗೆ ಕೆಲಸ ಇರಬೇಕು, ಸಂಪತ್ತು ಎಲ್ಲರದ್ದು, ಹಂಚಿಕೆಯಾಗಬೇಕು ಎನ್ನುತ್ತಿದ್ದರು. ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ಗೆ ಭೇಟಿ ನೀಡಿದ್ದಾಗ ಅಲ್ಲಿನ ವಿಜ್ಞಾನಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ನಿಮ್ಮ ಸಂಶೋಧನೆಗಳು ಬಡ ಕೂಲಿ ಕಾರ್ಮಿಕರ, ರೈತರ ಬಾಳನ್ನು ಹಸನು ಮಾಡಿದರೆ ಅಂತಹ ಸಂಶೋಧನೆಗಳು ಸಾರ್ಥಕ ಎಂದು ಹೇಳಿದ್ದರು. ಗಾಂಧೀಜಿ ಅಂತಹ ವ್ಯಕ್ತಿ ಈ ಭೂಮಿಯಲ್ಲಿ ನಡೆದಾಡಿದ್ದರು ಎಂದರೆ ಅಚ್ಚರಿಯಾಗುತ್ತದೆ ಎಂದು ಐನ್‌ಸ್ಟೀನ್ ಹೇಳಿದ್ದರು. ಯಾವುದೇ ವಿಷಯದ ಬಗೆಗೆ ಮಕ್ಕಳಿಗಿರುವ ಸ್ವಚ್ಛ ಕುತೂಹಲ ಹೊಂದಿದ್ದ ಗಾಂಧೀಜಿ ಅವರಿಗೆ ಖಗೋಳ ವಿಜ್ಞಾನದ ಬಗೆಗೂ ಆಸಕ್ತಿ ಇತ್ತು. ಅಣ್ವಸ್ತ್ರ ನಾಶದ ದುಷ್ಪರಿಣಾಮದ ಬಗೆಗೆ ಅಂದೇ ಎಚ್ಚರಿಸಿದ್ದ ಅವರು ಮನುಷ್ಯತ್ವವಿಲ್ಲದ ವಿಜ್ಞಾನ ಮನುಕುಲಕ್ಕೆ ಮಾರಕ ಎಂದು ಭಾವಿಸಿದ್ದರು" ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಹಾಗೂ ಅಮರ ಬಾಪು ಚಿಂತನ ಪತ್ರಿಕೆ ಪ್ರಧಾನ ಸಂಪಾದಕ ಜೇರಿಗೆ ಲೋಕೇಶ್ ಚಿಕ್ಕ ವಯಸ್ಸಿನಿಂದಲೇ ರಾಜಾರಾಮ್ ಮೋಹನ ರಾಯರ ತತ್ವಗಳನ್ನು ಮೈಗೂಡಿಸಿ ಕೊಂಡಿದ್ದ ಡಬ್ಲ್ಯೂ.ಹೆಚ್.ಹನುಮಂತಪ್ಪನವರ ಸೇವಾ ಕಾರ್ಯಗಳನ್ನು ಸ್ಮರಿಸಿಕೊಂಡರು. ಅದ್ಭುತ ಉಪನ್ಯಾಸ ನೀಡಿದ ಸುಮಂಗಲಾ ಮುಮ್ಮಿಗಟ್ಟಿ ಅವರನ್ನು ಶ್ಲಾಘಿಸಿದರು. "ಗುಡಿ ಕೈಗಾರಿಕೆಗಳಿಗೆ ಪ್ರಾಶಸ್ತ್ಯ ನೀಡಿದ ಗಾಂಧೀಜೀ ಅವರ ಮಾತುಗಳನ್ನು ಧಿಕ್ಕರಿಸಿ ನಾವು ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದೇವೆ" ಎಂದು ಹೇಳಿದರು.



ನಾಡೋಜ ಡಾ. ಪೂಡೇ ಪಿ.ಕೃಷ್ಣ ಅವರಿಗೆ ಗೌರವಾರ್ಪಣೆ. ಸುಮಂಗಲಾ ಎಸ್.ಮುಮ್ಮಿಗಟ್ಟಿ, ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಜೇರಿಗೆ ಲೋಕೇಶ್, ಡಾ. ಸಿಸಿರಾ, ಸುಮಾ ಚಂದ್ರಶೇಖರ್, ಡಬ್ಲ್ಯೂ.ಡಿ.ಅಶೋಕ್, ಇಂದಿರಾ ಕೃಷ್ಣಪ್ಪ ಇದ್ದಾರೆ.

ದತ್ತಿದಾನಿಗಳಾದ ಪೂಡೇ ಪ್ರತಿಷ್ಠಾನದ ಪ್ರತಿನಿಧಿ ಡಬ್ಲ್ಯೂ.ಎಚ್.ದೇವಕುಮಾರ್ ಅವರು ಉಪಸ್ಥಿತರಿದ್ದ ಕಾರ್ಯಕ್ರಮ ಡಬ್ಲ್ಯೂ.ಡಿ.ಅಶೋಕ್ ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯ ವಾಯಿತು.

ಕನ್ನಡಪ್ರಭ ಮಂಡ್ಯ ಶನಿವಾರ 9.1.2021

ನಾವು ಅನುಭವಿಸುವ ಭೋಗಗಳೂ ಕ್ಷಣಿಕ!

ಶಾಸಕ ಎಂ.ಶ್ರೀನಿವಾಸ್ ಮೌನ ಯೋಗಿ, ಸಾಧಕ | ಕಂಚಿನ ಪ್ರತಿಮೆ ಅನಾವರಣಗೊಳಿಸಿದ ನಿರ್ಮಲಾನಂದನಾಥ ಸ್ವಾಮೀಜಿ

• **ಕನ್ನಡಪ್ರಭ ವಾರ್ತೆ ಮಂಡ್ಯ**

ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಕಟ್ಟಿಕೊಡುವ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿರುವ ಶಾಸಕ ಎಂ.ಶ್ರೀನಿವಾಸ್ ಒಬ್ಬ ಮೌನ ಸಾಧಕ, ಮೌನ ಯೋಗಿ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಬಣ್ಣಿಸಿದರು.

ತಾಲೂಕಿನ ಹನಕೆರೆ ಗ್ರಾಮದಲ್ಲಿ ಎಂ.ಶ್ರೀನಿವಾಸ್ ಪ್ರತಿಷ್ಠಾನದಿಂದ ಶಾಸಕ ಎಂ.ಶ್ರೀನಿವಾಸ್ ಎದೆಮಟ್ಟದ ಕಂಚಿನ ಪ್ರತಿಮೆ ಅನಾವರಣ, ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆಯ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಬದುಕು ಎನ್ನುವುದು ನಶ್ವರ. ನಾವು ಅನುಭವಿಸುವ ಭೋಗಗಳೂ ಕ್ಷಣಿಕ. ಯಾವ ವ್ಯಕ್ತಿ ತನ್ನ ಬದುಕನ್ನು ಮುನ್ನಡೆಸುವುದರ ಜೊತೆಯಲ್ಲೇ ಬೇರೆಯವರ ಬದುಕಿಗೂ ತನ್ನ ಸೇವೆಯನ್ನು ಮೀಸಲಿಟ್ಟು ನೊಂದವರ ಕಣ್ಣೀರು ಒರೆಸುವ, ಕೊಟ್ಟಂತಹ ಜ್ಞಾನವನ್ನು ಎಲ್ಲರಿಗೂ ಪಸರಿಸುವಂತಹದ್ದು, ನಾಲ್ಕು ಜನರಿಗೆ ಸಮಾನವಾದ ಸಾಂತ್ವನದ ನುಡಿಗಳನ್ನು ಹೇಳುವ ರೀತಿ ಯಾರು ಬದುಕುವರೋ ಅವರ ಬದುಕು ಸಾರ್ಥಕ ಎಂದು ನುಡಿದರು.

ಮಾತು ಬೆಳ್ಳಿ, ಮೌನ ಬಂಗಾರ ಎನ್ನುವ ಮಾತಿಗೆ ಎಂ.ಶ್ರೀನಿವಾಸ್ ಅನ್ವರ್ಥವಾಗಿದ್ದಾರೆ. ಮಾತುಗಳು ಸಾಧ್ಯವಾದಷ್ಟು ಕಡಿಮೆ ಇದ್ದರೆ ಚೆನ್ನ. ನಾವು ಅರ್ಥವಾಗುವ ಕಡೆ ಮಾತುಗಳ ಅವಶ್ಯಕತೆ ಇರುವುದಿಲ್ಲ, ನಾವು ಅರ್ಥವಾಗದಿರುವ ಕಡೆ ಎಷ್ಟು ಮಾತನಾಡಿದರೂ ಪ್ರಯೋಜನವಾಗುವುದಿಲ್ಲ ಎಂದರು.





ಮಂಡ್ಯ ತಾಲೂಕಿನ ಹನಕೆರೆ ಗ್ರಾಮದ ವಿವೇಕ ವಿದ್ಯಾಸಂಸ್ಥೆಯಲ್ಲಿ ಸ್ಥಾಪಿಸಿರುವ ಎಂ.ಶ್ರೀನಿವಾಸ್ ಅವರ ಎದೆಮಟ್ಟದ ಕಂಚಿನ ಪ್ರತಿಮೆಯನ್ನು ಆದಿ ಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅನಾವರಣ ಮಾಡಿದರು (ಎಡಚಿತ್ರ), ಸಮಾರಂಭದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ವ್ಯಕ್ತಿತ್ವವನ್ನು ಹಾಳುಮಾಡುವಂತಹ ಪಬ್, ಬಾರ್‌ಗಳು ತಲೆಎತ್ತುತ್ತಿರುವ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ವ್ಯಕ್ತಿತ್ವವನ್ನು ಕಟ್ಟಿಕೊಡುವ ಶಿಕ್ಷಣ ಸಂಸ್ಥೆಗಳ ನಿರ್ಮಾಣ ಮಾಡಿರುವುದು. ಉಚಿತ ವಸತಿ ನಿಲಯ ಸ್ಥಾಪನೆಯೊಂದಿಗೆ ಅವರ ಬದುಕನ್ನು ಸಾರ್ಥಕಪಡಿಸಿಕೊಂಡಿದ್ದಾರೆ ಎಂದು ನುಡಿದರು. ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಉಪಯೋಗವಾಗುವ ವಸ್ತುವನ್ನು ಎಷ್ಟು ಬಾರಿ ಉಪಯೋಗಿಸಿದರೂ ತೊಂದರೆ ಇಲ್ಲ. ಅದರಿಂದ ವ್ಯಕ್ತಿತ್ವ ಗಟ್ಟಿಕೊಳ್ಳುತ್ತಾ ಹೋಗುತ್ತದೆ. ವ್ಯಕ್ತಿತ್ವದ ಬೆಳವಣಿಗೆಯಿಂದ ಸಮಾಜದಲ್ಲಿ ಘನತೆ- ಗೌರವಗಳು ಹೆಚ್ಚುತ್ತವೆ. ಈ ಲೋಕಕೆ ಆಗಂತುಕನಾಗಿ ಬಂದು ಅತಿಥಿಯಾಗಿ ಉಳಿದು ಸ್ನೇಹಿತನಂತೆ ಹೋಗಬೇಕು. ಅದೇ ರೀತಿ ಎಂ.ಶ್ರೀನಿವಾಸ್ ರಾಜಕೀಯ ಅಧಿಕಾರದ ಜೊತೆಯಲ್ಲೇ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ, ಸಾಮಾಜಿಕ ಸೇವಾ ಕಾರ್ಯಗಳನ್ನು ನೆರವೇರಿಸುವುದರೊಂದಿಗೆ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಪ್ರತಿಷ್ಠೆಗೆ, ಲಾಭಕ್ಕಾಗಿ ಅನೇಕ ಮಂದಿ ರಾಜಕಾರಣಿಗಳು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಆದರೆ, ಶಿಕ್ಷಣವನ್ನು ಸೇವೆಯ ರೂಪದಲ್ಲಿ ಗ್ರಾಮೀಣ ಮಕ್ಕಳಿಗೆ ನೀಡುತ್ತಿರುವ ಎಂ.ಶ್ರೀನಿವಾಸ್ ಒಬ್ಬ ಗಾಂಧಿ ಮನಸ್ಕರು ಎಂದು ಬಣ್ಣಿಸಿದರು.

ಗಾಂಧೀಜಿ ಅವರು ದಾಸ್ಯದಿಂದ ದೂರ ಮಾಡುವುದೇ ನಿಜವಾದ ವಿದ್ಯೆ ಎಂದು ಹೇಳಿದ್ದರು. ಸ್ವಾತಂತ್ರ್ಯ ಚಳವಳಿಗೆ ವಿದ್ಯಾರ್ಥಿಗಳು ಧುಮುಕಿದ ವೇಳೆ ನೀವೆಲ್ಲರೂ ವಿದ್ಯಾಭ್ಯಾಸ ಮುಗಿಸಿ ಹೋರಾಟಕ್ಕಿಳಿಯುವಂತೆ ಕರೆ ನೀಡಿ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿದ್ದರು. ಅದೇ ಮಾದರಿಯಲ್ಲಿ ಎಂ.ಶ್ರೀನಿವಾಸ್ ಗ್ರಾಮೀಣ ಮಕ್ಕಳಿಗೆ ನಿಸ್ವಾರ್ಥವಾಗಿ ಶಿಕ್ಷಣ ನೀಡುತ್ತಿದ್ದಾರೆ. ಜ್ಞಾನ ದಾಸೋಹದೊಂದಿಗೆ ಸಮಾಜಕ್ಕೆ ಸತ್ಪ್ರಜೆಗಳನ್ನು ಕೊಡುಗೆಯಾಗಿ ನೀಡುತ್ತಿದ್ದಾರೆ ಎಂದರು.

ದೇಶದ ಅನೇಕ ಸಮಸ್ಯೆಗಳಿಗೆ ಶಿಕ್ಷಣವೊಂದೇ ಮೂಲಭೂತ ಪರಿಹಾರ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು. ಅವರ ಮಾತಿಗೆ ಅನುಗುಣವಾಗಿ ಎಂ.ಶ್ರೀನಿವಾಸ್ ನಡೆದು ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಶಿಕ್ಷಣದ ಶಕ್ತಿಯಾಗಿ ನಿಂತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ನಗರಸಭೆ ಅಧ್ಯಕ್ಷ ಎಚ್.ಎಸ್.ಮಂಜು, ಮಂಡ್ಯ ವಿವಿ ಕುಲಪತಿ ಡಾ.ಸಿ.ಪುಟ್ಟರಾಜು, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ಎಂ.ಶ್ರೀನಿವಾಸ್ ಪ್ರತಿಷ್ಠಾನದ ಅಧ್ಯಕ ಡಿ.ಶಿವರಾಜು, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ, ಜಿಪಂ ಸದಸ್ಯ ಎಚ್.ಎನ್.ಯೋಗೇಶ್, ಜೆಡಿಎಸ್ ಜಿಲ್ಲಾ ಕಾರ್ಯಾಧ್ಯಕ್ಷ, ತಗ್ಗಹಳ್ಳಿ ವೆಂಕಟೇಶ್, ನಟ ವಿಶಾಲ್ ರಘು, ಎಚ್.ಬಿ.ನಾಗಪ್ಪ, ಕೆ.ಎಸ್.ಶಿವರುದ್ರಪ್ಪ ಇದ್ದರು.

ಉದಯವಾಣಿ | ಮಂಡ್ಯ | ಶನಿವಾರ, ಜನವರಿ 9, 2021

ಕಂಚಿನ ಪ್ರತಿಮೆ ಅನಾವರಣದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ

ಶಾಸಕ ಎಂ.ಶ್ರೀನಿವಾಸ್ ಮೌನ ಸಾಧಕರು: ಸ್ವಾಮೀಜಿ

ಮಂಡ್ಯ: ಶಾಸಕ ಎಂ.ಶ್ರೀನಿವಾಸ್ ಮೌನ ಸಾಧಕರಾಗಿದ್ದಾರೆ. ಪ್ರತಿಯೊಬ್ಬರೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಾಗ ಬದುಕು ಸಾರ್ಥಕಗೊಳ್ಳಲಿದೆ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷಶ್ರೀನಿರ್ಮಲಾನಂದನಾಥಸ್ವಾಮೀಜಿ ಹೇಳಿದರು.

ಎಂ.ಶ್ರೀನಿವಾಸ್ ಪ್ರತಿಮೆ ನಿರ್ಮಾಣ ಸಮಿತಿ ವತಿಯಿಂದ ತಾಲೂಕಿನ ಹನಕೆರೆ ಗ್ರಾಮದ ಎಂ.ಶ್ರೀನಿವಾಸ್ ಸಮೂಹ ಶಿಕ್ಷಣ ಸಂಸ್ಥೆ ಆವರಣದಲ್ಲಿ ಎಂ.ಶ್ರೀನಿವಾಸ್-70 ಅಭಿನಂದನೆ ಹಾಗೂ ಎಂ.ಶ್ರೀನಿವಾಸ್ ಅವರ ಎದೆಮಟ್ಟದ ಕಂಚಿನ ಪ್ರತಿಮೆ ಅನಾವರಣ ಮಾಡಿ ಮಾತನಾಡಿದರು.

ನಾಲ್ವಡಿ ಕೆಲಸದ ಮೂಲಕ ಜೀವಂತ: ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜನಪರ ಕೆಲಸ ಮಾಡಿ ಹೋಗಿದ್ದಾರೆ. ಅವರು ಇಲ್ಲದಿದ್ದರೂ ಮಾಡಿದ ಕೆಲಸದಿಂದ ಜೀವಂತರಾಗಿದ್ದಾರೆ. ಅದೇ ರೀತಿ ಶಾಸಕ ಎಂ.ಶ್ರೀನಿವಾಸ್ ಜೀವನ ನಡೆಸುತ್ತಿದ್ದಾರೆ. ಮಾತು ಕಡಿಮೆಯಾಡಿ ಸಾಧನೆ ಹೆಚ್ಚು ಮಾಡುತ್ತಿದ್ದಾರೆಂದರು.

ವ್ಯಕ್ತಿತ್ವ ಬೆಳೆಸುವ ಕಟ್ಟಡಗಳು ಹೆಚ್ಚಾಗಲಿ: ವ್ಯಕ್ತಿತ್ವ ಬೆಳೆಸುವಂಥ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಎಷ್ಟೋ ಮಂದಿ ಸಾಕಷ್ಟು ಹಣವಿದ್ದರೂ ಬಾರ್, ಪಬ್‌ನಂಥ ದೊಡ್ಡ ದೊಡ್ಡ ಕಟ್ಟಡ ಕಟ್ಟುತ್ತಿದ್ದಾರೆ. ಇದರಿಂದ ಮನುಷ್ಯನ ಜೀವನವೇ ಹಾಳಾಗಲಿದೆ. ಇಂಥ ಕಟ್ಟಡಗಳಿಗಿಂತ ಮನುಷ್ಯನ ವ್ಯಕ್ತಿತ್ವ ರೂಪಿಸುವ ಶಿಕ್ಷಣ ಸಂಸ್ಥೆಗಳ ಕಟ್ಟಡಗಳು ನಿರ್ಮಾಣವಾಗಬೇಕು ಎಂದರು.

ಬದುಕು ಸಾರ್ಥಕ: ಶಾಸಕ ಎಂ.ಶ್ರೀನಿವಾಸ್ ಅವರ ಬದುಕು ಸಾರ್ಥಕವಾಗಿದೆ. ಸಾಕಷ್ಟು ಅಭಿಮಾನಿಗಳನ್ನು ಸಂಪಾದಿಸಿದ್ದಾರೆ. ಮತ್ತಷ್ಟು ಅವರಿಗೆ ಆರೋಗ್ಯ ದೊರೆತು ಬಹಳಷ್ಟು ಕಾಲ ಜನರ ಸೇವೆ ಮಾಡುವಂತಾಗಲಿದೆ ಎಂದರು.

ಮುಂಚೂಣಿ ನಾಯಕ: ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ, ಶಾಸಕ ಎಂ.ಶ್ರೀನಿವಾಸ್ ಅವರು ರೈತ ಚಳವಳಿಯ ಹೋರಾಟದಿಂದ ಬಂದವರು. ಮಂಡ್ಯದಲ್ಲಿ ರೈತ ಚಳವಳಿ ಹಾಗೂ ಕಾವೇರಿ ಚಳವಳಿಗಳು ಮೂರು ರತ್ನಗಳನ್ನು ಕೊಡುಗೆಯಾಗಿ ನೀಡಿದೆ. ಅದರಲ್ಲಿ ಎಂ.ಶ್ರೀನಿವಾಸ್ ಒಬ್ಬರು. 70ರ ದಶಕದಲ್ಲಿ ನಡೆದ ರೈತಚಳವಳಿಯಲ್ಲಿ ಮುಂಚೂಣಿ ನಾಯಕತ್ವ ವಹಿಸಿದ್ದರು ಎಂದರು. ಈ ಮುನ್ನ ಹನಕೆರೆ ರೈಲ್ವೆ ಗೇಟ್‌ನಿಂದ ವಿವೇಕ ವಿದ್ಯಾಸಂಸ್ಥೆವರೆಗೆ ಜಾನಪದ ಕಲಾತಂಡಗಳೊಂದಿಗೆ ಸ್ವಾಮೀಜಿ, ಗಣ್ಯರನ್ನು ವೇದಿಕೆಗೆ ಕರೆತರಲಾಯಿತು. ವಿವಿಧ ಕ್ಷೇತ್ರದ ಸಾಧಕರು, ಶಾಸಕ ಎಂ.ಶ್ರೀನಿವಾಸ್ ಅವರನ್ನು ಅಭಿನಂದಿಸಲಾಯಿತು. ವಿಶ್ವಮಾನವ ಕ್ಷೇತ್ರದ ಶ್ರೀ ಪುರುಷೋತ್ತಮಾನಂದನಾಥಸ್ವಾಮೀಜಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜಾ ಡಾ.ವೂಡೇ ಪಿ.ಕೃಷ್ಣ ಮಂಡ್ಯ ವಿವಿ ಕುಲಪತಿ ಡಾ.ಸಿ.ಪುಟ್ಟರಾಜು, ನಗರಸಭೆ ಅಧ್ಯಕ್ಷ ಎಚ್.ಎಸ್.ಮಂಜು, ಹನಕೆರೆ ಎಂ.ಶ್ರೀನಿ ವಾಸ್ ಪ್ರತಿಷ್ಠಾನದ ಅಧ್ಯಕ್ಷ ಡಿ.ಶಿವರಾಜು, ಸಂಚಾಲಕ ಪ್ರೊ.ಜಯಪ್ರಕಾಶ ಗೌಡ, ಉಪ ಸಂಚಾಲಕ ಎಚ್.ಬಿ.ನಾಗಪ್ಪ ಖಜಾಂಚಿ ಜೆ.ಎನ್.ಶಿವರುದ್ರಪ್ಪ, ಜಿಪಂ ಸದಸ್ಯ ಯೋಗೇಶ್, ಜಿಪಂ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ಇದ್ದರು.



ಶಾಸಕ ಎಂ.ಶ್ರೀನಿವಾಸ್ ಅವರ ಪ್ರತಿಮೆ ಅನಾವರಣದಲ್ಲಿ ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥಸ್ವಾಮೀಜಿ, ಶಾಸಕ ಎಂ.ಶ್ರೀನಿವಾಸ್ ಮತ್ತಿತರರಿದ್ದರು.

ವಿದ್ಯೆಯಿಂದ ದಾಸ್ಯತನ ಹೋಗಲಾಡಿಸಲು ಸಾಧ್ಯ ಎಂಬುದನ್ನು ಮನಗಂಡಿರುವ ಶಾಸಕರು, ಗ್ರಾಮೀಣ ಮಕ್ಕಳಿಗೆ ಶಿಕ್ಷಣಕ್ಕೆ ಆದ್ಯತೆ ನೀಡಿದ್ದಾರೆ.

• ನಾಡೋಜ ವೂಡೇ ಪಿ.ಕೃಷ್ಣ, ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರು

ಮಂಡ್ಯವನ್ನು ಉತ್ತಮ ಶೈಕ್ಷಣಿಕ ಕ್ಷೇತ್ರವಾಗಿ ರಾಜ್ಯದಲ್ಲಿಯೇ ಮಾದರಿ ಮಂಡ್ಯ ವಿವಿ ಮಾಡಲು ಮುಂದಾಗಿದ್ದೇನೆ. ಅದಕ್ಕೆ ಜಿಲ್ಲೆಯ ಎಲ್ಲರ ಸಹಕಾರ ಅಗತ್ಯ.

• ಡಾ.ಪುಟ್ಟರಾಜು, ಕುಲಪತಿ, ವಿವಿ. ಮಂಡ್ಯ

ತನ್ನ ಅಭಿವೃದ್ಧಿ ಕೆಲಸ ಮೆಚ್ಚಿ ಅಭಿಮಾನಿಗಳು ಇಷ್ಟೊಂದು ಪ್ರೀತಿ ತೋರಿಸುತ್ತಿರುವುದು ಸಂತಸ ತಂದಿದೆ. ಈ ಅಭಿಮಾನಕ್ಕೆ ಚಿರಋಣಿಯಾಗಿರುತ್ತೇನೆ.

• ಎಂ.ಶ್ರೀನಿವಾಸ್, ಶಾಸಕರು

ಪ್ರಜಾವಾಣಿ ಶನಿವಾರ • ಜನವರಿ 9, 2021

ಎಂ.ಶ್ರೀನಿವಾಸ್ ಪುತ್ಥಳಿ ಅನಾವರಣ: ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಅಭಿಮತ

ಜ್ಞಾನಾರ್ಜನೆಯೇ ಜೀವನದ ಗುರಿಯಾಗಲಿ

ಪ್ರಜಾವಾಣಿ ವಾರ್ತೆ



ಎಂ.ಶ್ರೀನಿವಾಸ್ ಪುತ್ಥಳಿ ಅನಾವರಣ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸಲಾಯಿತು

ಮಂಡ್ಯ: 'ದೇಶದ ಎಲ್ಲಾ ಸಮಸ್ಯೆಗಳಿಗೂ ಶಿಕ್ಷಣವೇ ಪರಿಹಾರ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಹೀಗಾಗಿ ಜ್ಞಾನ ಪಡೆಯುವುದೇ ಜೀವನದ ಗುರಿಯಾಗಬೇಕು' ಎಂದು ರಾಜ್ಯ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಹೇಳಿದರು.

ಎಂ.ಶ್ರೀನಿವಾಸ್ ಪ್ರತಿಮೆ ನಿರ್ಮಾಣ ಸಮಿತಿ ವತಿಯಿಂದ ತಾಲ್ಲೂಕಿನ ಹನಕೆರೆ ಗ್ರಾಮದ ವಿವೇಕಾ ವಿದ್ಯಾಸಂಸ್ಥೆ ಆವರಣದಲ್ಲಿ ಶುಕ್ರವಾರ ನಡೆದ ಶಾಸಕ ಎಂ.ಶ್ರೀನಿವಾಸ್ ಪುತ್ಥಳಿ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು.

'ಗ್ರಾಮೀಣ ಭಾಗದಲ್ಲಿ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ರಾಜಕೀಯ ನಾಯಕರು ತಮ್ಮ ಕ್ಷೇತ್ರಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಿರ್ಮಾಣ ಮಾಡಬೇಕು. ಆ ನಿಟ್ಟಿನಲ್ಲಿ ಶಾಸಕ ಎಂ.ಶ್ರೀನಿವಾಸ್ ಅವರು ತಮ್ಮ ಹುಟ್ಟೂರಿನಲ್ಲಿ ಶಿಕ್ಷಣ ಸಂಸ್ಥೆ ಕಟ್ಟಿ ಮಕ್ಕಳಿಗೆ ವಿದ್ಯಾದಾನ ಮಾಡುತ್ತಿರುವುದು ಶ್ರೇಷ್ಠ ಸೇವೆಯಾಗಿದೆ' ಎಂದರು.

'ಮಹಾತ್ಮ ಗಾಂಧಿ ಅವರು ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಯುವಜನರಿಗೆ ಚಳವಳಿಯಲ್ಲಿ ಪಾಲ್ಗೊಳ್ಳುವಂತೆ ಕರೆ ಕೊಟ್ಟಿದ್ದರು. ಆದರೆ, ಶಿಕ್ಷಣ ಪೂರ್ಣಗೊಳಿಸಿದ ನಂತರ ಹೋರಾಟದಲ್ಲಿ, ಸಮಾಜ ಸೇವೆಯಲ್ಲಿ ತೊಡಗಿಕೊಳ್ಳುವಂತೆ ಕಿವಿಮಾತು ಹೇಳಿದ್ದರು. ಗ್ರಾಮೀಣಾಭಿವೃದ್ಧಿಗೆ ಶಿಕ್ಷಣವೊಂದೇ ಪ್ರಮುಖ ಅಸ್ತ್ರ ಎಂದು ಗಾಂಧೀಜಿ ನಂಬಿದ್ದರು' ಎಂದರು.

ಮಂಡ್ಯ ವಿವಿ ಕುಲಪತಿ ಡಾ.ಸಿ. ಪುಟ್ಟರಾಜು ಮಾತನಾಡಿ 'ಗುರುವಿನ ಕರುಣೆ ಇದ್ದರೆ ಎಂಥವರೂ ಶ್ರೇಷ್ಠ ಸ್ಥಾನಕ್ಕೆ ಏರಬಲ್ಲರು. ಹಳ್ಳಿಯಲ್ಲಿ, ರೈತನ ಮಗನಾಗಿ ಹುಟ್ಟಿದ ನಾನು ಇಂದು ಕುಲಪತಿ ಹುದ್ದೆಗೇರಲು ಆದಿ ಚುಂಚನಗಿರಿ ಮಠದ ಸ್ವಾಮೀಜಿ ಕಾರಣರಾಗಿದ್ದಾರೆ. ಜಿಲ್ಲೆಯ ನಾಯಕರ ಸಹಕಾರದೊಂದಿಗೆ ಮಂಡ್ಯ ವಿಶ್ವವಿದ್ಯಾಲಯವನ್ನು ಮಾದರಿ ಸಂಸ್ಥೆಯಾಗಿ ರೂಪಿಸುವ ಗುರಿ ಹೊಂದಿದ್ದೇನೆ' ಎಂದರು.

ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ 'ಚಳವಳಿ, ಹೋರಾಟಗಳು ಅಸಂಖ್ಯಾತ ನಾಯಕರನ್ನು ಸೃಷ್ಟಿ ಮಾಡಿವೆ. ಮಂಡ್ಯದಲ್ಲಿ ನಡೆದ ರೈತ ಹೋರಾಟಗಳು ಎಸ್.ಡಿ.ಜಯರಾಂ, ಕೆ.ಎಸ್.ಪುಟ್ಟಣ್ಣಯ್ಯ ಹಾಗೂ ಎಂ.ಶ್ರೀನಿವಾಸ್ ಎಂಬ ಮೂರು ಅನರ್ಘ್ಯ ರತ್ನಗಳನ್ನು ಸೃಷ್ಟಿಸಿವೆ' ಎಂದರು.

ಶಾಸಕ ಎಂ.ಶ್ರೀನಿವಾಸ್ ಅವರನ್ನು ಅಭಿನಂದಿಸಲಾಯಿತು. ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಪುರುಷೋತ್ತಮಾನಂದನಾಥ ಸ್ವಾಮೀಜಿ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಸಾಹಿತಿ ರಾಗೌ, ನಗರಸಭೆ ಅಧ್ಯಕ್ಷ ಎಚ್.ಎಸ್.ಮಂಜು, ಜಿ.ಪಂ ಸದಸ್ಯ ಎಚ್.ಎಸ್.ಯೋಗೇಶ್ ಇದ್ದರು.

ಈ ಸಂಜೆ

ಗುರುವಾರ, 07 ಜನವರಿ, 2021

ರಾಷ್ಟ್ರೀಯ ಶಿಕ್ಷಣ ನೀತಿ ಸ್ವಾಗತಾರ್ಹ



ಬೆಂಗಳೂರು, ಜ.7- ಆತ್ಮ ನಿರ್ಭರ ಭಾರತ್, ಕೌಶಲ್ಯ ಅಭಿವೃದ್ಧಿ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗ ತರುವ ಮೂಲಕ ಕೇಂದ್ರ ಸರ್ಕಾರ ಮಹಾತ್ಮಗಾಂಧೀಜಿಯವರ ಸ್ವಾವಲಂಬಿ ಭಾರತ ನಿರ್ಮಾಣಕ್ಕೆ ಮುಂದಾಗಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದು ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ ನಿರ್ದೇಶಕ ಡಾ.ಎಸ್.ಸಿ.ಶರ್ಮಾ ಅಭಿಪ್ರಾಯಪಟ್ಟರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಯುವ ಸಬಲೀಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಡಾ.ಕೆ.ನಾಗಪ್ಪ ಆಳ್ವ ಮತ್ತು ಕಲ್ಯಾಣಿ ನಾಗಪ್ಪ ಆಳ್ವ ದತ್ತಿ ವತಿಯಿಂದ ನಡೆದ ಇಂದಿನ ಜಾಗತಿಕ ಸ್ಥಿತಿಗಳಿಗೆ ಗಾಂಧಿಯವರ ತತ್ವಸಿದ್ಧಾಂತಗಳ ಪ್ರಸ್ತುತತೆ ಉಪನ್ಯಾಸದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಹಾತ್ಮ ಗಾಂಧಿಯವರು ರಾಜಕೀಯ ತತ್ವಜ್ಞಾನಿಯಾಗಿದ್ದರು. ಆರ್ಥಿಕ ತಂತ್ರಜ್ಞಾನಿಯಾಗಿದ್ದರು. ಮಹಿಳೆಯರ ಸಬಲೀಕರಣದ ಬಗ್ಗೆ ಕನಸು ಕಂಡಿದ್ದರು. ಸ್ವರಾಜ್ಯ ನಿರ್ಮಾಣದ ಬಗ್ಗೆ ಕನಸು ಕಂಡಿದ್ದರು. ಅಂತಹ ಮಹಾನ್ ವ್ಯಕ್ತಿಯನ್ನು ನೆಲ್ಸನ್ ಮಂಡೇಲಾ, ಮಾರ್ಟಿನ್ ಲೂಥರ್‌ಕಿಂಗ್, ದಲೈಲಾಮಾ ಅಂತಹವರು ಗಾಂಧಿ ತತ್ವಕ್ಕೆ ಆಕರ್ಷಿತರಾಗಿದ್ದರು. ಆದರೆ, ದಿನಕಳೆದಂತೆ ದೇಶದಲ್ಲಿ ಪ್ರಾದೇಶಿಕ ಅಸಮತೋಲನೆ ಹೆಚ್ಚಾಗುತ್ತಿದೆ. ಈ ಅಸಮತೋಲನ ಹೋಗಬೇಕಾದರೆ ಗಾಂಧೀಜಿಯವರ ತತ್ವಗಳು ಪಾಲನೆಯಿಂದ ಮಾತ್ರ ಸಾಧ್ಯ ಎಂದು ಶರ್ಮಾ ಹೇಳಿದರು.

ಮೌಲ್ಯಗಳು ಕುಸಿಯುತ್ತಿರುವ ಈ ಕಾಲದಲ್ಲಿ ಇಂದಿನ ಯುವ ಸಮೂಹ ಗಾಂಧೀಜಿಯವರ ಆತ್ಮಚರಿತ್ರೆ ಓದಿದರೆ ಗಾಂಧಿಯವರ ಧ್ಯೇಯೋದ್ದೇಶಗಳು ಅರ್ಥವಾಗುತ್ತವೆ. ಎಲ್ಲರೂ ಗಾಂಧಿಯವರ ಪುಸ್ತಕಗಳನ್ನು ಓದುವಂತೆ ಅವರು ಸಲಹೆ ನೀಡಿದರು. ಇತ್ತೀಚೆಗೆ ಗ್ಲೋಬಲ್ ವಿಲಾಜ್ ಕಾನ್ಸೆಪ್ಟ್ ಬಂದಿದೆ. ಹಿಂದೆಯೇ ಗಾಂಧೀಜಿಯವರು ಈ ಕನಸು ಕಂಡಿದ್ದರು. ಈಗಿರುವ ಗ್ಲೋಬಲ್ ವಿಲಾಜ್ ಕಾನ್ಸೆಪ್ಟ್ ಏನೆಂದರೆ ಬಹುರಾಷ್ಟ್ರೀಯ ಕಂಪೆನಿಗಳು ರೈತರು ಬೆಳೆದ ಧವಸ, ಧಾನ್ಯ ಕೊಂಡು ಮಾರಾಟ ಮಾಡುವ ಮೂಲಕ ತಮ್ಮ ಸಂಸ್ಥೆಗಳ ಷೇರುಗಳನ್ನು ಹೆಚ್ಚು ಮಾಡಿಕೊಳ್ಳುತ್ತಿವೆ. ಇದರಿಂದ ಅಸಮತೋಲನ ಹೆಚ್ಚಾಗುತ್ತಿದೆ. ಪ್ರಸ್ತುತ ಪ್ರಾದೇಶಿಕ ಅಸಮತೋಲನ ಹೇಗಿದೆ ಎಂದರೆ ಉತ್ತರ ಕರ್ನಾಟಕ ಭಾಗದ ಯುವ ಸಮುದಾಯ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗದಂತಾಗಿದೆ. ಇದು ನಿವಾರಣೆಯಾಗಬೇಕಾದರೆ ಗಾಂಧೀಜಿಯವರ ಶಾಂತಿ, ಸ್ವಾತಂತ್ರ್ಯ ನ್ಯಾಯತತ್ವಗಳಿಂದ ಮಾತ್ರ ಸಾಧ್ಯ ಎಂದು ಅವರು ಹೇಳಿದರು.

ನ್ಯಾಷನಲ್ ಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಒಬ್ಬ ವಿದ್ಯಾರ್ಥಿ ನ್ಯಾಯಾಲಯದಲ್ಲಿ ವಾದ ಮಾಡಲಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಸ್ಥಿತಿ ಹೋಗಬೇಕು. ಯಾವುದೇ ವಿಷಯದ ಬಗ್ಗೆ ವ್ಯಾಸಂಗ ಮಾಡಿದ ವ್ಯಕ್ತಿಗೆ ಆ ವಿಷಯದಲ್ಲಿ ಅಪಾರ ಕೌಶಲ್ಯ ಇರಬೇಕು. ಅಂತಹ ಕೌಶಲ್ಯ ಸೃಷ್ಟಿ ಮಾಡುವ ಸಲುವಾಗಿಯೇ ಕೇಂದ್ರ ಸರ್ಕಾರ ಆತ್ಮ ನಿರ್ಭರ ಭಾರತ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆ ಘೋಷಣೆ ಮಾಡಿದೆ. ಕೇಂದ್ರ ಸರ್ಕಾರ ಸದ್ಯದಲ್ಲೇ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರಲು ಉದ್ದೇಶಿಸಿದೆ. ಇದರಿಂದ ಪ್ರಾದೇಶಿಕ ಅಸಮತೋಲನೆ ನಿವಾರಣೆಯಾಗುವ ಸಾಧ್ಯತೆ ಇದೆ ಎಂದರು.

ದತ್ತಿ ಸಂಸ್ಥಾಪಕರದ ಮೋಹನ್ ದೇವ್ ಆಳ್ವ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ಡಾ.ವೂಡೆ ಪಿ.ಕೃಷ್ಣ, ಯುವ ಸಬಲೀ ಕರಣ ಇಲಾಖೆ ಜಂಟಿ ಕಾರ್ಯದರ್ಶಿ ಡಾ.ಗಣನಾಥಶೆಟ್ಟಿ ಎಕ್ಕಾರ್, ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಪೂರ್ಣಿಮಾ ಜೋಗಿ ಮತ್ತಿತರ ಗಣ್ಯರು ಹಾಜರಿದ್ದರು.


ಸಂಯುಕ್ತ ಕರ್ನಾಟಕ ಸೋಮವಾರ, 18 ಜನವರಿ, 2021

ವಸ್ತ್ರೋದ್ಯಮದಲ್ಲಿ ಸಾಂಪ್ರದಾಯಿಕ ಕಲೆ

ಸಂ.ಕ.ಸಮಾಚಾರ, ಬೆಂಗಳೂರು

ಕರ್ನಾಟಕ ಹಾಗೂ ಒಡಿಶಾ ರಾಜ್ಯಗಳ ಸಂಪ್ರದಾಯ ಮತ್ತು ಸಂಸ್ಕೃತಿಗಳು ಒಂದೇ ರೀತಿಯಲ್ಲಿದ್ದು, ಒರಿಸ್ಸಾದ ಸಾಂಪ್ರದಾಯಿಕ ಕಲೆಯನ್ನೊಳಗೊಂಡ ಸಮಂತಾಸ್ ಲಕ್ಸುರಿಸ್ ವಸ್ತ್ರೋದ್ಯಮ ಬೆಂಗಳೂರಿನಲ್ಲಿ ಆರಂಭವಾಗುತ್ತಿರುವುದು ಸಂತೋಷದ ಸಂಗತಿ ಎಂದು ಉಪಮುಖ್ಯಮಂತ್ರಿ ಡಾ. ಅಶ್ವತ್ಥ ನಾರಾಯಣ್ ಹೇಳಿದರು. ಸಮಂತಾಸ್ ಲಕ್ಸುರಿಸ್ ವಸ್ತ್ರೋದ್ಯಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಯಾವ ರೀತಿಯಲ್ಲೂ ಗಡಿ ಹಂಚಿಕೊಳ್ಳದ ಕರ್ನಾಟಕ ಮತ್ತು ಒಡಿಶಾ ರಾಜ್ಯಗಳ ಭ್ರಾತೃತ್ವ ಸಂಸ್ಕೃತಿ, ಕಲೆಗಳ ಮೂಲಕ ಬೆಸೆಯಲ್ಪಟ್ಟಿದೆ ಎಂದರು.

ಸಮಂತಾಸ್ ಬ್ರಾಂಡ್‌ನ ವೆಬ್‌ಸೈಟ್ ಬಿಡುಗಡೆಗೊಳಿಸಿ ಮಾತನಾಡಿದ ಸಂಸದ ತೇಜಸ್ವಿ ಸೂರ್ಯ, ಕಲೆ, ಸಾಹಿತ್ಯ, ಅಭಿರುಚಿಗಳ ನಾಡಾದ ಕರ್ನಾಟಕದಲ್ಲಿ ಸಮಂತಾ ಬಿಡುಗಡೆಯಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇದಕ್ಕೆ ಪೂರಕವಾಗಿ ಬಿಡುಗಡೆಯ ಸಮಯದಲ್ಲಿ ಸಿನಿಮಾ, ಕಲೆ, ಪತ್ರಿಕೋದ್ಯಮ ಹೀಗೆ ಹಲವು ರಂಗಗಳ ವೃತ್ತಿಪರರು ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿರುವುದು ಶ್ಲಾಘನೀಯ ಎಂದರು.



ಒಡಿಶಾ ಸಾಂಪ್ರದಾಯಿಕ ಉಡುಪುಗಳ ವಸ್ತ್ರೋದ್ಯಮವನ್ನು ಉಪಮುಖ್ಯಮಂತ್ರಿ ಡಾ.ಸಿ.ಅಶ್ವತ್ಥ ನಾರಾಯಣ್ ಉದ್ಘಾಟಿಸಿದರು. ಪತ್ರಕರ್ತ ವಿಶ್ವೇಶ್ವರ ಭಟ್, ನಿರ್ದೇಶಕ ಪಿ.ಶೇಷಾದ್ರಿ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.

ಕಳಿಂಗ ಯೂನಿವರ್ಸಿಟಿಯ ಸಂಸ್ಥಾಪಕರಾದ ಡಾ.ಅಚ್ಯುತಾ ಸಮಂತ ಅವರ ಸೋದರಿ ಚಿತ್ರ ನಿರ್ಮಾಪಕಿ, ವಸ್ತ್ರ ವಿನ್ಯಾಸಕಿ ಡಾ. ಇತಿರಾಣಿ ಸಮಂತಾ ಮಾತನಾಡಿ, ಒಡಿಶಾದ ಮೊದಲ ಲಕ್ಸುರಿಯಸ್ ಡಿಸೈನರ್ ಸಂಸ್ಥೆಯಾಗಿರುವ ಸಮಂತಾ ಒಡಿಶಾದ ಪ್ರಾಚೀನ ಕಲೆಗಳನ್ನು ವಸ್ತ್ರೋದ್ಯಮದ ಮೂಲಕ ಮಾರುಕಟ್ಟೆಗೆ ಪರಿಚಯಿಸುತ್ತಿದೆ. 30 ಸಾವಿರಕ್ಕೂ ಹೆಚ್ಚು ಬುಡಕಟ್ಟು ನಿವಾಸಿ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಒದಗಿಸುತ್ತಿರುವ ಕಳಿಂಗ ವಿಶ್ವವಿದ್ಯಾಲಯ ಈಗ ಸಾಂಪ್ರದಾಯಿಕ ಕಲೆಗಳ ಪುನರುತ್ಥಾನದ ಮೂಲಕ ವಸ್ತ್ರೋದ್ಯಮಕ್ಕೆ ಕಾಲಿಡುತ್ತಿದ್ದು, ಪ್ರಧಾನಮಂತ್ರಿಯವರ ವೋಕಲ್ ಫಾರ್ ಲೋಕಲ್ ಕರೆಗೆ ಸ್ಪಂದಿಸಿ ಈ ಉದ್ಯಮವನ್ನು ಸ್ಥಾಪಿಸಿರುವುದಾಗಿ ವಿವರಿಸಿದರು.

ಕಾರ್ಯಕ್ರಮದಲ್ಲಿ ಚಿತ್ರ ನಿರ್ದೇಶಕ ಪಿ. ಶೇಷಾದ್ರಿ, ಪತ್ರಕರ್ತ ವಿಶ್ವೇಶ್ವರ್ ಭಟ್, ನಟಿ ಮೃದುಲಾ ಭಟ್ ಹಾಗೂ ಪೂಜಿತಾ ಮೆನನ್, ಕಳಿಂಗ ವಿವಿ ಸಂಸ್ಥಾಪಕ ಅಚ್ಯುತಾ ಸಮಂತಾ, ಶಿಕ್ಷಣತಜ್ಞ ವೂಡೇಪಿ ಕೃಷ್ಣ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.

ವಿಶಿಷ್ಟ ಬಗೆಯ ಕನ್ನಡ ಪಾಕ್ಷಿಕ

ಡಾ. ವೂಡೇ ಪಿ. ಕೃಷ್ಣ
ನಂ.39 ... 8ನೇ ಕ್ರಾಸ್, 13ನೇ ಮೈನ್,
...
ಬೆಂಗಳೂರು-560 080.

Published on 10th & 25th & Posted on 12th & 27th of every month at Bengaluru, PSO, BG - 560 026.

ನಮ್ಮ ರಾಜ್ಯಪ್ರಗತಿ

Namma Rajya Pragathi

ಬೆಲೆ ರೂ. 10-00 | ಸಂಪುಟ - 9 | ಏಪ್ರಿಲ್ 10, 2021 | ಸಂಚಿಕೆ - 08 | ಪುಟ 8

ಜಗದಕವಿ - ಯುಗದ ಕವಿ ಕುವೆಂಪು ಅವರ ದರ್ಶನವೇ ನನಗೆ ಸ್ಫೂರ್ತಿಯಾಯಿತು - ಗುಣಸಾಗರಿ ನಾಗರಾಜ್

"ಯಾವುದೇ ವಿಷಯದಲ್ಲಾದರೂ ಸಾಧನೆ ಮಾಡಿಯೇ ತೀರುತ್ತೇನೆ ಎಂಬ ಆತ್ಮವಿಶ್ವಾಸವನ್ನು ಮಹಿಳೆಯರು ಬೆಳೆಸಿಕೊಂಡರೆ, ಮೀಸಲಾತಿಗಾಗಿ ಒತ್ತಾಯಿಸುವ ಪ್ರಮೇಯವೇ ಬರುವುದಿಲ್ಲ. ಅಂತಹ ಆತ್ಮವಿಶ್ವಾಸವನ್ನು ಪ್ರತಿ ತಾಯಿಯೂ ತನ್ನ ಮಕ್ಕಳಲ್ಲಿ ಬೆಳೆಸುತ್ತಾಳೆ. ನನ್ನ ತಾಯಿಯಿಂದ ಉತ್ತಮ ಸಂಸ್ಕಾರ ಪಡೆದ ನಾನು ಶಾಲಾ ದಿನಗಳಿಂದಲೇ ವಾಚಕರವಾಣಿ ವಿಭಾಗಕ್ಕೆ ಪತ್ರಗಳನ್ನು ಬರೆಯುತ್ತಿದ್ದೆ. ಮೈಸೂರಿನಲ್ಲಿ ನನ್ನ ಅಜ್ಜಿಯ ಮನೆಯ ಸಮೀಪದಲ್ಲಿಯೇ ರಸಋಷಿ ಕುವೆಂಪು ಅವರ ಮನೆ. ಪ್ರತಿ ದಿನ ಅವರನ್ನು ನೋಡುತ್ತಿದ್ದ ನಾನು ಅವರ ಸ್ಫೂರ್ತಿಯಿಂದಲೇ ಸಾಹಿತಿಯಾದೆ. ನನ್ನ ಊರಿನವರೇ ಆದ ಪ್ರೊ. ಜಿ.ವೆಂಕಟಸುಬ್ಬಯ್ಯ, ನನ್ನ ಪಕ್ಕದವರೇ ಆದ ನಾಗತಿಹಳ್ಳಿ ಚಂದ್ರಶೇಖರ್ ಮತ್ತಿತರರ ಸಲಹೆ, ಸಹಕಾರಗಳಿಂದ ಸಾಹಿತಿಯಾಗಿ ಅಲ್ಪ ಸ್ವಲ್ಪ ಬೆಳೆದಿದ್ದೇನೆ. ಮಹಿಳೆಯರ ಸಾಧನೆ ಕಡಿಮೆ ಏನಿಲ್ಲ ಎನ್ನುವುದಕ್ಕೆ ಸಾಕ್ಷಿ ಎಂಬಂತೆ ಈಗ ಅಮೆರಿಕಾದ ಉಪಾಧ್ಯಕ್ಷೆಯಾಗಿರುವ ಕಮಲಾ ಹ್ಯಾರಿಸ್, ದೊಡ್ಡ ಉದ್ಯಮಿಯಾಗಿರುವ ಕಿರಣ್ ಮುಜುಂದಾರ್, ಮೌಂಟ್ ಎವರೆಸ್ಟ್ ಶಿಖರ ಏರಿದ ಅರುಣಿಮಾ, ನೂರಾರು ಅಸಹಾಯಕ ಮಹಿಳೆಯರಿಗೆ ಆಶ್ರಯದಾತರಾಗಿರುವ ಎಸ್.ಜಿ.ಸುಶೀಲಮ್ಮ, ಹಿರಿಯ ಪತ್ರಕರ್ತೆ ಹೆಚ್.ಜಿ.ಶೋಭಾ ಮೊದಲಾದವರು ಇದ್ದಾರೆ" ಎಂದು ಹೇಳಿದ ಹಿರಿಯ ಸಾಹಿತಿ ಗುಣಸಾಗರಿ ನಾಗರಾಜ್ "ಪುರುಷ-ಮಹಿಳೆ ಇಬ್ಬರೂ ಕೈ ಜೋಡಿಸಿ ನಡೆದರೆ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ನಾನು ಬದಲು ನಾವು ಎನ್ನೋಣ ಎಂದು ಮನವಿ ಮಾಡಿದರು.

ಮಹಿಳಾ ದಿನಾಚರಣೆ ಅಂಗವಾಗಿ ಸಿದ್ಧನಹಳ್ಳಿಯ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣದಲ್ಲಿ 25-3-2021ರಂದು ಏರ್ಪಡಿಸಿದ್ದ ಮಹಿಳಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ 45 ಸಾಹಿತ್ಯ ಕೃತಿಗಳ ಕರ್ತೃ ಗುಣಸಾಗರಿ ನಾಗರಾಜ್ ಮಾತನಾಡಿದರು. ಸಮ್ಮೇಳನದಲ್ಲಿ ಅವರ ಮೂರು ಕೃತಿಗಳನ್ನು (ಮಕ್ಕಳ ಸ್ಕೂಲ್ ಮನೇಲಿ- ಕಾದಂಬರಿ, ಅರಿವಿನೊಳಗೊಂದು ಅಲೆ- ಕಾದಂಬರಿ ಮತ್ತು ಸಾಹಿತ್ಯ ಸಂವೇದನೆ- ಲೇಖನಗಳ ಸಂಕಲನ) ಕನ್ನಡ ಪುಸ್ತಕ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷರಾದ ಡಾ. ವಸುಂಧರಾಭೂಪತಿ ಲೋಕಾರ್ಪಣೆಗೊಳಿಸಿದರು.



ಡಾ. ಗೀತಾರಾಮಾನುಜಂ ಅವರಿಂದ ಉದ್ಘಾಟನೆ. ಗುಣಸಾಗರಿ ನಾಗರಾಜ್, ಡಾ. ವೂಡೇ ಪಿ. ಕೃಷ್ಣ, ಇಂದಿರಾ ಕೃಷ್ಣಪ್ಪ, ಎಂ. ತಿಮ್ಮಯ್ಯ, ಡಾ. ಸಿಸಿರಾ ಮತ್ತಿತರರಿದ್ದಾರೆ

ಡಾ.ಎಸ್.ಪೂರ್ಣಿಮಾ ನಿರೂಪಿಸಿದ ಕಾರ್ಯಕ್ರಮ ವಿನೋದ ಮತ್ತು ತಂಡದ ನಾಡಗೀತೆ ಗಾಯನದಿಂದ ಆರಂಭವಾಯಿತು. ಪ್ರಾಸ್ತಾವಿಕ ನುಡಿಗಳನ್ನಾಡಿದ ಟ್ರಸ್ಟ್‌ನ ಅಧ್ಯಕ್ಷ ಡಾ. ಸಿಸಿರಾ 1998ರಲ್ಲಿ ಚನ್ನಪಟ್ಟಣದಲ್ಲಿ ಆರಂಭವಾದ ಟ್ರಸ್ಟ್ ಮಕ್ಕಳಲ್ಲಿ ಸಾಹಿತ್ಯಾಭಿರುಚಿ ಬೆಳೆಸುವ ನಿಟ್ಟಿನಲ್ಲಿ ಇದುವರೆಗೆ ನಡೆದುಬಂದ ಹಾದಿಯನ್ನು ವಿವರಿಸಿದರು.

ಸಮ್ಮೇಳನ ಉದ್ಘಾಟಿಸಿದ ಹಿರಿಯ ಲೇಖಕಿ, ಶಿಕ್ಷಣ-ತಜ್ಞೆ ಡಾ. ಗೀತಾ ರಾಮಾನುಜಂ "ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಮಾತಿಗೆ ಸಾಕ್ಷಿಯಂತಿರುವ ಸಿಸಿರಾ ಅಭಿನಂದನಾರ್ಹರು. ನಾನೇನೇನೂ ಮಾಡಿಲ್ಲ ಎಂಬ ಮನೋಭಾವನೆಯೊಂದಿಗೆ 34 ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸುತ್ತಿರುವ ನಾಡೋಜ ಡಾ.ವೂಡೇ ಪಿ.ಕೃಷ್ಣ ಅಂತಹವರ ಮಾರ್ಗದರ್ಶನ ಸಿಸಿರಾ ಅವರಿಗೆ ದೊರಕಿರುವುದು ಸಾಹಿತ್ಯ ಚಟುವಟಿಕೆಗಳಿಗೆ ಪೂರಕವಾಗಿವೆ.' ಎಂದರಲ್ಲದೆ, ಬುದ್ಧ, ಬಸವ, ರಾಜಾರಾಮ್ ಮೋಹನರಾಯ್, ಗಾಂಧೀಜಿ ಅವರ ತತ್ವಗಳನ್ನು ರೂಡಿಸಿಕೊಳ್ಳಿ ಎಂದು ಸಭಿಕರಿಗೆ ಕರೆ ನೀಡಿದರು.

ಪ್ರಗತಿ ಪರ ಚಿಂತಕಿ, ಸೃಜನಾತ್ಮಕ ಲೇಖಕಿ ಇಂದಿರಾ ಕೃಷ್ಣಪ್ಪ ಅವರಿಗೆ ಲೋಹಿಯಾ ಪ್ರಶಸ್ತಿ ಪ್ರದಾನ ಮಾಡಿದ ನಾಡೋಜ ಡಾ.ವೂಡೇ ಪಿ.ಕೃಷ್ಣ ಅವರು "ನಮ್ಮ ಕಾಲೇಜುಗಳ 23000 ವಿದ್ಯಾರ್ಥಿಗಳಲ್ಲಿ ಶೇ. 65 ಹೆಣ್ಣು ಮಕ್ಕಳು. ಅಧ್ಯಾಪಕ ವರ್ಗದಲ್ಲಿ ಹೆಚ್ಚಿನವರು ಮಹಿಳೆಯರು. 1955ರಲ್ಲೇ ಆಚಾರ್ಯ ರಾಮಮನೋಹರ ಲೋಹಿಯಾ ಅವರು ಲೋಕಸಭೆಯಲ್ಲಿ ಎಲ್ಲಿಯವರೆಗೆ ಭಾರತೀಯ ಹೆಣ್ಣು ಮಕ್ಕಳು ಶೌಚಕ್ಕಾಗಿ ಹೊರಗಡೆ ಹೋಗುತ್ತಾರೆಯೋ ಅಲ್ಲಿಯವರೆಗೆ ಸ್ವಾತಂತ್ರ್ಯ ಬಂದುದಕ್ಕೆ ಅರ್ಥವಿಲ್ಲ ಎಂದು ಕ್ರಾಂತಿಕಾರಕ ಭಾಷಣ ಮಾಡಿದ್ದರು. ಅಂತಹವರ ಹೆಸರಿನಲ್ಲಿ ಹಿರಿಯ ಚಿಂತಕಿ, ಲೇಖಕಿ, ಮಹಾತ್ಮ ಗಾಂಧಿ ತತ್ವಾನುಯಾಯಿ ಇಂದಿರಾ ಕೃಷ್ಣಪ್ಪ ಅವರಿಗೆ ಪ್ರಶಸ್ತಿ ಕೊಡುತ್ತಿರುವುದು ಅತ್ಯಂತ ಸೂಕ್ತವಾಗಿದೆ" ಎಂದು ಹೇಳಿದರು.


ಡಾ॥ ವಸುಂಧರಾ ಭೂಪತಿ "ಬುದ್ಧ, ಬಸವ, ಗಾಂಧಿ ಬಗೆಗೆ ಮಾತನಾಡಿದರೆ ಸಾಲದು. ಅವರಂತೆ ಬದುಕಬೇಕು" ಎಂದರಲ್ಲದೆ, ಶೇ. 100ರಷ್ಟು ಮಹಿಳಾ ಪರವಾಗಿರುವ ಮಹಾರಾಷ್ಟ್ರದ ಆನಂದವಾಡಿ ಗ್ರಾಮದ ಬಗೆಗೆ ಮಾಹಿತಿ ನೀಡಿದರು. "ಅಲ್ಲಿನ 635 ಮನೆಗಳ ಮುಂಭಾಗದಲ್ಲಿ ಮಹಿಳೆಯರ ಹೆಸರಿನ ಫಲಕಗಳೇ ಇವೆ. ಆಸ್ತಿ ಪತ್ರಗಳೆಲ್ಲಾ ಮಹಿಳೆಯರ ಹೆಸರಿನಲ್ಲೇ ಇವೆ. ವರದಕ್ಷಿಣೆ ಕೊಡುವುದೂ ಇಲ್ಲ, ತೆಗೆದುಕೊಳ್ಳುವುದೂ ಇಲ್ಲ ಎಂಬ ದೊಡ್ಡ ಫಲಕವನ್ನು ಗ್ರಾಮದ ಕೇಂದ್ರ ಭಾಗದಲ್ಲಿ ಅಳವಡಿಸಲಾಗಿದೆ. ಗ್ರಾಮ ಪಂಚಾಯಿತಿಯಲ್ಲಿ 6 ಸ್ಥಾನಗಳಿದ್ದು ಇದುವರೆಗೆ ಒಮ್ಮೆಯೂ ಚುನಾವಣೆ ನಡೆಯದೆ ಅವಿರೋಧ ಆಯ್ಕೆಯೇ ಆಗಿದೆ. ಗ್ರಾಮದ ಎಲ್ಲರೂ ದೇಹದಾನ ಮಾಡುವುದಾಗಿ ಘೋಷಿಸಿಕೊಂಡಿದ್ದಾರೆ" ಎಂದರು (ಈ ಸಂದರ್ಭದಲ್ಲೇ ಇಂದಿರಾ ಕೃಷ್ಣಪ್ಪನವರು ಡಾ.ವೂಡೇ ಪಿ.ಕೃಷ್ಣ ಅವರ ಮನೆಯ ಮುಂಬಾಗದಲ್ಲಿ ಪತ್ನಿಯ ಹೆಸರೇ ಮೇಲಿರುವಂತೆ ಫಲಕ ಹಾಕಿದ್ದಾರೆ ಎಂಬುದನ್ನು ತಿಳಿಸಿದರು)

ಮುಖ್ಯ ಅತಿಥಿಯಾಗಿದ್ದ ಸಾಹಿತ್ಯ-ಸಂಸ್ಕೃತಿ ಪೋಷಕ ಎಂ.ತಿಮ್ಮಯ್ಯ "ಇಡೀ ಸಮಾಜದ ಮುನ್ನಡೆಗೆ ಮಹಿಳೆಯರೇ. ಕಾರಣ. ನನಗೆ ಸಂಸ್ಕಾರ ನೀಡಿರುವ ನನ್ನ ತಾಯಿಯ ಭಾವಚಿತ್ರಕ್ಕೆ ನಮಿಸಿಯೇ ನನ್ನ ದೈನಂದಿನ ಕೆಲಸಗಳನ್ನು ಆರಂಭಿಸುತ್ತೇನೆ" ಎಂದು ಹೇಳಿದರು.

ಸಿದ್ಧನಹಳ್ಳಿಯ ಸಿದ್ದೇಗೌಡ-ಪದ್ಮಾವತಿ (ದತ್ತಿದಾನಿ: ಎಸ್.ಸಿದ್ಧರಾಜು)ದತ್ತಿ ಆಶ್ರಯದಲ್ಲಿ ಲೋಹಿಯಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜಿ.ಆರ್.ಶಿಕ್ಷಣ ಸಂಸ್ಥೆ ದತ್ತಿಯ ಆಶ್ರಯದಲ್ಲಿ ದ್ವಿತೀಯ ಪಿ.ಯು.ಸಿ.ಯಲ್ಲಿ ಶೇ.98 ಅಂಕ ಗಳಿಸಿದ ವೈಗೌರಿ, ಸಂಗೀತ ಕಲಾವಿದೆ ಕು. ಪಿ.ಎಸ್.ವೈಷ್ಣವಿ ಮತ್ತು ನೃತ್ಯಪಟು, ರಂಗಭೂಮಿ ಕಲಾವಿದೆ ಕು.ಆರ್.ಎಸ್.ಭವ್ಯಾ ಅವರನ್ನು ಪುರಸ್ಕರಿಸಲಾಯಿತು. ಎಂ.ಇ.ಎಸ್.ಶಿಕ್ಷಣ ಕೇಂದ್ರದಲ್ಲಿ ಕನ್ನಡ ಅಧ್ಯಾಪಕಿಯಾಗಿದ್ದ ದಿ॥ ಜಿ.ಎಸ್.ಲತಾ ಅವರ

2ನೇ ಪುಟಕ್ಕೆ

ಬಸವ ಜಯಂತಿ ವಿಶೇಷ ಸಂಚಿಕೆ : ಪ್ರಶ್ನಾವಳಿ



ಮೇ 25ರ ಪತ್ರಿಕೆಯ ಸಂಚಿಕೆ "ಬಸವ ಜಯಂತಿ ವಿಶೇಷ ಸಂಚಿಕೆಯಾಗಿ ಹೊರ ಬರಲಿದ್ದು, ಈ ಸಂಚಿಕೆಗಾಗಿ ನಮ್ಮ ಓದುಗರಿಗಾಗಿ ಈ ಕೆಳಕಂಡ ಪ್ರಶ್ನಾವಳಿಯನ್ನು ರೂಪಿಸಲಾಗಿದೆ. ಪ್ರಶ್ನಾವಳಿಯಲ್ಲಿ ಭಾಗವಹಿಸುವವರು ಯಾವುದೇ ಶುಲ್ಕ ಕೊಡಬೇಕಾಗಿಲ್ಲ, ಯಾವುದೇ ಬಹುಮಾನವೂ ಇಲ್ಲ. ನಮ್ಮ ಓದುಗರ ಸಾಮಾನ್ಯ ಜ್ಞಾನ ವೃದ್ಧಿಗಾಗಿ ಈ ಸ್ಪರ್ಧೆ ಏರ್ಪಡಿಸಲಾಗಿದೆ.

ಪ್ರಶ್ನೆಗಳು :

1. ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣ ಎಂಬುದು ಪುಂಡರ ಗೋಷ್ಠಿ – ಈ ಸಾಲುಗಳಿರುವ ವಚನವನ್ನು ರಚಿಸಿದವರು ಯಾರು?
2. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಈಗಿನ ಅಧ್ಯಕ್ಷರು ಯಾರು?
3. ಕರುಣೆ, ಸ್ಮರಣೆ ಮಾನವನ ಎರಡು ಕಣ್ಣುಗಳು – ಗಾದೆಯ ಈ ಮಾತಿಗೆ ಪೂರಕವಾದ ಬಸವಣ್ಣನ ವಚನ ಯಾವುದು?
4. ಬಸವ ಜಯಂತಿಯ ದಿನದಂದೇ ಅಧಿಕಾರ ವಹಿಸಿಕೊಂಡ ಕರ್ನಾಟಕದ ಮುಖ್ಯಮಂತ್ರಿ ಯಾರು?
5. "ಮಹಾ ಶರಣ ಮಡಿವಾಳ ಮಾಚಿದೇವ" – ಶೀರ್ಷಿಕೆಯ ಮಹಾನ್ ಐತಿಹಾಸಿಕ ಕಾದಂಬರಿಯ ಕರ್ತೃ ಯಾರು?
6. ಪ್ರಸ್ತುತ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿರುವ ವಿಶ್ರಾಂತ ಐ.ಎ.ಎಸ್. ಅಧಿಕಾರಿ ಡಾ.ಸಿ.ಸೋಮಶೇಖರ ಅವರ ಯಾವ ಪ್ರೌಢ ಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಪಿ.ಎಚ್.ಡಿ. ಪ್ರದಾನ ಮಾಡಿದೆ?
7. ಕನಕರಗದವರಲ್ಲಿ ಪುಷ್ಪವ ನೊಲ್ಲೆಯಯ್ಯಾ ನೀನು – ಅಕ್ಕನ ಈ ಪ್ರಸಿದ್ಧ ವಚನವನ್ನು ಯಾವ ಐತಿಹಾಸಿಕ ಚಲನ ಚಿತ್ರದಲ್ಲಿ ಅಳವಡಿಸಿಕೊಳ್ಳಲಾಗಿದೆ ?
8. ವಚನ ಧರ್ಮಸಾರ – ಈ ವಿಚಾರ ಪೂರ್ಣ ಗ್ರಂಥದ ಕರ್ತೃ ಯಾರು ?
9. ರಾಮನಾಥ – ಈ ಅಂಕಿತದಲ್ಲಿ ವಚನಗಳನ್ನು ರಚಿಸಿದವರು ಯಾರು ?
10. ಬಸವ ಜಯಂತಿಗೆ ರಜಾ ಘೋಷಣೆ ಯಾರ ಅಧಿಕಾರಾವಧಿಯಲ್ಲಿ ಆಯಿತು ?

ಮೇಲ್ಕಂಡ ಪ್ರಶ್ನೆಗಳಿಗೆ ಉತ್ತರಗಳನ್ನು 5-5-2021ರೊಳಗಾಗಿ ನಿಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ ಕಳುಹಿಸಿ

-ಸಂಪಾದಕ

ಸಾಮಾನ್ಯ ಜನರ, ಬಡವರ, ಹಿಂದುಳಿದವರ, ಅಲ್ಪಸಂಖ್ಯಾತರ ಹಿತವನ್ನು ಕಾಪಾಡುವುದು ಯಾವುದೇ ನಾಗರೀಕ ಸರ್ಕಾರದ ಪ್ರಥಮ ಕರ್ತವ್ಯವಾಗಿರುತ್ತದೆ. -ಇಂದಿರಾಗಾಂಧಿ

ಜಗದಕವಿ – ಯುಗದ ಕವಿ ಕುವೆಂಪು

1ನೇ ಪುಟದಿಂದ



ಡಾ|| ಸುಹಾಸಿನಿ ಕಿಶೋರ್ ಅವರಿಗೆ ಪ್ರಶಸ್ತಿ ಪ್ರದಾನ

ಹೆಸರಿನ ವೇದಿಕೆಯಲ್ಲಿ ನಡೆದ ಸಮ್ಮೇಳನದ ಉದ್ಘಾಟನಾ ಸಮಾರಂಭ ಟಿ.ಆರ್.ಬಾಲಾಜಿ ಅವರ ವಂದನಾರ್ಪಣೆಯಿಂದ ಮುಕ್ತಾಯವಾಯಿತು.

ಸಮಾರೋಪ ಸಮಾರಂಭ

ಕು.ವಿದ್ಯಾ ಬೆಟ್ಟಕೋಟೆ ನಿರೂಪಿಸಿದ ಸಮಾರೋಪ ಸಮಾರಂಭದ ಕಾರ್ಯಕ್ರಮ ಗುರುದೇವಿ ಧರಣಿ ಅವರ ವಚನ ಗಾಯನದೊಂದಿಗೆ ಆರಂಭವಾಯಿತು. ಸಮಾರಂಭದ ವಿಚಾರಗೋಷ್ಠಿಯಲ್ಲಿ ಡಾ.ಪೂರ್ಣಿಮಾ ಜೋಗಿ "ಆಧುನಿಕ ಜಗತ್ತು –ಮಹಿಳೆ" ಕುರಿತು ಪ್ರಬಂಧ ಮಂಡಿಸಿದರು. ಸಮ್ಮೇಳನಾಧ್ಯಕ್ಷೆ ಗುಣಸಾಗರಿ ನಾಗರಾಜ್‌ರ ಬದುಕು – ಬರಹ ಕುರಿತು ಪ್ರಬಂಧ ಮಂಡಿಸಿದ ಜಯಶ್ರೀ ರಾಜು "ಮಾನವೀಯ ಮೌಲ್ಯಗಳ ಗುಣಸಾಗರ ಎನಿಸಿಕೊಂಡಿರುವ ಗುಣಸಾಗರಿ ನಾಗರಾಜ್ ಬಾಲ್ಯದಿಂದಲೇ ಉತ್ತಮ ಓದುಗರು. ಅವರ ಈ ಗುಣವೇ ಅವರನ್ನು ಉತ್ತಮ ಲೇಖಕಿಯನ್ನಾಗಿ ಮಾಡಿದೆ. ಅಂತಃಕರಣ ಇವರ ಕೃತಿಗಳಲ್ಲಿರುವಂತೆ ನಡವಳಿಕೆಯಲ್ಲೂ ಇದೆ. ಗುಣಸಾಗರಿಯ ಸಾಧನೆಯ ಹಿಂದೆ ಅವರ ಪತಿ ನಾಗರಾಜ್ ಅವರ ಕೊಡುಗೆಯೂ ಇದೆ" ಎಂದು ಹೇಳಿದರು.

ಕವಿಗೋಷ್ಠಿಯಲ್ಲಿ ಶಾಂತಲಾ ಸುರೇಶ್, ಡಾ. ಸುಜಾತ ಲಕ್ಷ್ಮೀಪುರ, ಪ್ರೊ.ಆರ್.ವಿ.ಶಶಿಕಲಾ, ಇಂದಿರಾ ಶರಣ್, ಕಸ್ತೂರಿ ಡಿ.ಪತ್ತಾರ್. ಕು.ರಚನಾ ಚಂದ್ರಶೇಖರ್, ಸಾಕಮ್ಮ ಮತ್ತಿತರರು ಭಾಗವಹಿಸಿದ್ದರು. ಆರ್ಕಿಡ್ ವಿದ್ಯಾ ಸಂಸ್ಥೆಗಳ ಸಂಸ್ಥಾಪಕ ಕಾರ್ಯದರ್ಶಿ ಪುಷ್ಪಲತಾ ಮುಖ್ಯ ಅತಿಥಿಯಾಗಿದ್ದರು.

ಎರಡೂ ಗೋಷ್ಠಿಗಳ ಅಧ್ಯಕ್ಷತೆ ವಹಿಸಿದ್ದ ಹಿರಿಯ ಕವಯತ್ರಿ, ಗ್ರಂಥಪಾಲಕಿ ಡಾ. ಬಿ.ಇಂದಿರಾ ದೇವಿ "ಎರಡೂ ಗೋಷ್ಠಿಗಳು ಯಶಸ್ವಿಯಾಗಿ ನಡೆದಿವೆ. ಪೂರ್ಣಿಮಾ ಜೋಗಿ ಮತ್ತು ಜಯಶ್ರೀ ರಾಜು ಇಬ್ಬರೂ ಉತ್ತಮ ಪ್ರಬಂಧಗಳನ್ನು ಮಂಡಿಸಿದ್ದಾರೆ. ಸಮ್ಮೇಳನಾಧ್ಯಕ್ಷರಾಗಿರುವ ಗುಣಸಾಗರಿ ನಾಗರಾಜ್ ಸಮರ್ಥ ಸಾಹಿತಿಯಾಗಿರುವಂತೆ, ಸ್ನೇಹಜೀವಿಯೂ ಆಗಿದ್ದಾರೆ" ಎಂದು ಹೇಳಿದರು.

ಸಮಾರೋಪ ಭಾಷಣ ಮಾಡಿದ ಅಕ್ಕನ ಉಡುತಡಿ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಹಿರಿಯ ಲೇಖಕಿ ಹಾಗೂ ಮಾಜಿ ಸಚಿವೆ ಡಾ. ಲೀಲಾದೇವಿ ಆರ್.ಪ್ರಸಾದ್ ಸಾಧ್ಯವಾದರೆ ಟ್ರಸ್ಟ್‌ನ ಹೆಸರಿನಲ್ಲಿ ಬುದ್ಧ, ಬಸವ, ಗಾಂಧಿ ಜೊತೆಗೆ ಅಂಬೇಡ್ಕರ್‌ರ ಹೆಸರನ್ನು ಸೇರಿಸಿಕೊಳ್ಳಿ ಎಂದು ಮನವಿ ಮಾಡಿದರು. ಗುಣಸಾಗರಿ ನಾಗರಾಜ್ ಅವರಂತಹ ಪ್ರಬುದ್ಧ ಸಾಹಿತಿಯನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿರುವುದು ಅತ್ಯಂತ ಸೂಕ್ತ. 21ನೇ ಶತಮಾನದ ಕಾಲುಭಾಗ ಮುಗಿಯುತ್ತಾ ಬಂದರೂ ಮಹಿಳೆಯರ ಅನೇಕ ಸಮಸ್ಯೆಗಳು ಹಾಗೆಯೇ ಇವೆ. ತನ್ನ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಮಹಿಳೆ ತನ್ನ ಮನೆಯ ಗೌರವಕ್ಕಾಗಿ ಬಹಿರಂಗ ಪಡಿಸುತ್ತಿಲ್ಲ. ಆರ್ಥಿಕ ಸಬಲತೆ ಇಲ್ಲದೆ, ಯಾವ ಮಹಿಳೆಯೂ ಉದ್ಧಾರವಾಗೊಲ್ಲ" ಎಂದರಲ್ಲದೆ, ಹಸಿದ ಹೊಟ್ಟೆಗಳಿಗೆ ಅನ್ನ ಕೊಡುವ ಶಕ್ತಿ ಮಹಿಳೆಯರಿಗೆ ಲಭಿಸಲಿ ಎಂದು ಹಾರೈಸಿದರು.

ಕನ್ನಡ ಅಧ್ಯಾಪಕಿ ದಿ|| ಶ್ರೀಲತಾ ಅವರ ಸ್ಮರಣಾರ್ಥ ದತ್ತಿ ಮತ್ತು ಕೆ.ಎಂ.ರೇವಣ್ಣ ಅವರ ಸಾಂಸ್ಕೃತಿಕ ಸೇವಾ ದತ್ತಿಗಳ ಆಶ್ರಯದಲ್ಲಿ ರಂಗಮ್ಮ ಹೊದೇಕಲ್ (ಸಾಹಿತ್ಯ), ಡಾ|| ಸುಹಾಸಿನಿ ಕಿಶೋರ್ (ವೈದ್ಯಕೀಯ), ಸಿ.ವಿ.ಮಂಗಳ (ಗೃಹಿಣಿ) – ಮತ್ತಿತರರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡಿದ ಸುಮಂಗಲಿ ಸೇವಾಶ್ರಮದ ಎಸ್.ಜಿ.ಸುಶೀಲಮ್ಮ ಅವರು "ಗೌರಿಬಿದನೂರು ತಾಲ್ಲೂಕಿನ ಒಂದು ಹಳ್ಳಿಯ ಅಸಹಾಯಕ ಹೆಣ್ಣು ಮಕ್ಕಳಿಗೆ ಹಪ್ಪಳ, ಸಂಡಿಗೆ ವಿಷಯದಲ್ಲಿ ತರಬೇತಿ ನೀಡಿದೆವು. ಈಗ ಅವರೆಲ್ಲಾ ಸ್ವಾವಲಂಬಿಗಳಾಗಿದ್ದು, ಸಂತೃಪ್ತಿಯ ಜೀವನ ಸಾಗಿಸುತ್ತಿದ್ದಾರೆ. ಈ ಮಹಿಳೆಯರ ಜೊತೆ ಅವರ ಮನೆಯವರೂ ಕೈಜೋಡಿಸಿದರು" ಎಂದರಲ್ಲದೆ, ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಗುಣಸಾಗರಿ ಅವರ ಸಾಧನೆಯನ್ನು ಶ್ಲಾಘಿಸಿದರು. ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎಂಬ ಮಾತು ಗುಣಸಾಗರಿ ಮತ್ತು ನಾಗರಾಜ್ ದಂಪತಿಗಳಿಗೆ ಅನ್ವಯಿಸುತ್ತದೆ ಎಂದರು.

ಹಿರಿಯ ನ್ಯಾಯವಾದಿ ನಂಜಪ್ಪ ಕಾಳೇಗೌಡ, ವಿಶ್ರಾಂತ ತಹಸೀಲ್ದಾರ್, ಹಿರಿಯ ಸಾಹಿತಿ ಕೆ.ಎಂ.ರೇವಣ್ಣ, ಟ್ರಸ್ಟ್‌ನ ಕಾರ್ಯದರ್ಶಿ ಸಿ.ಹೇಮಾವತಿ, ಮಂತಣಿ ಪತ್ರಿಕೆಯ ಸಂಪಾದಕಿ ಸುನಂದ ರು.ಬಸಪ್ಪ, ಕರ್ನಾಟಕ ಪ್ರತಿಭಾ ಕೇಂದ್ರದ ಅಧ್ಯಕ್ಷ ಪಾನ್ಯಂ ನಟರಾಜ್, ಕನ್ನಡಪರ ಹೋರಾಟಗಾರರಾದ ಹನುಮಂತರಾಯ, ಎನ್.ವೇಣುಗೋಪಾಲ್ ಮತ್ತು ಸಿ.ಪುಟ್ಟರಾಜು, ಬೆಂಗಳೂರು ಸಿಟಿ ಸಹಕಾರಿ ಬ್ಯಾಂಕ್‌ನ ನಿರ್ದೇಶಕ ಕೆ.ಕೃಷ್ಣಪ್ಪ, ಹಿರಿಯ ಸಾಹಿತಿ, ಸಂಘಟಕ ಸಿದ್ದಲಿಂಗಯ್ಯ ಬನ್ನಂಗಾಡಿ ಮತ್ತಿತರರು ಉಪಸ್ಥಿತರಿದ್ದರು.

"ಮೊಳೆ ಮುಕ್ತ ಮರಗಳು" ಆಂದೋಲನ : ಚಿ|| ರುತ್ವಿಕ್ ರುಜುಲ್‌ಗೆ ಪ್ರಶಸ್ತಿ




"ಕೊರೋನ" ಹಾವಳಿಯ ನಡುವೆಯೂ ಯಲಹಂಕ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ನಡೆದ "ಮೊಳೆಮುಕ್ತ ಮರಗಳು" ಅಭಿಯಾನದಲ್ಲಿ ನಿರಂತರವಾಗಿ ಭಾಗವಹಿಸಿದ ಶಾಲಾ ವಿದ್ಯಾರ್ಥಿ ರುತ್ವಿಕ್ ರುಜುಲ್‌ನ ಧೈರ್ಯ, ಪರಿಸರ ಕಾಳಜಿಗಳನ್ನು ಗುರ್ತಿಸಿ, 21.3.2021ರಂದು ನಡೆದ ಅಂತಾರಾಷ್ಟ್ರೀಯ ಅರಣ್ಯ ದಿನಾಚರಣೆ ಕಾರ್ಯಕ್ರಮದಲ್ಲಿ "ಬೆಂಗಳೂರಿನ ಧೈರ್ಯವಂತ ಬಾಲಕ" (BRAVE BOY OF BENGALURU) ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಿ.ಬಿ.ಎಂ.ಪಿ. ಆಯುಕ್ತ ಮಂಜುನಾಥ ಪ್ರಸಾದ್, ಎಡಿಜಿಪಿ ಭಾಸ್ಕರರಾವ್, ಎ.ಸಿ.ಪಿ.ನಜ್ಮಾ ಫರೂಕ್, ಸಿ.ಇ.ಎನ್. ಇನ್‌ಸ್ಪೆಕ್ಟರ್ ರಾಜೇಶ್ವರ್, ಮಲ್ಲೇಶ್ವರ ಕ.ಸಾ.ಪ.ಅಧ್ಯಕ್ಷ ಗಣೇಶ್‌ರಾವ್ ಕೇಸರ್‌ಕರ್ ಮತ್ತಿತರರು ಉಪಸ್ಥಿತರಿದ್ದರು. "ಪತ್ರಿಕೆ"ಯ ಅಭಿಮಾನಿ ಓದುಗರಾದ ಕಾವ್ಯ ಅವರ ಪುತ್ರ ರುತ್ವಿಕ್ ರುಜುಲ್‌ಗೆ ಹಾರ್ದಿಕ ಅಭಿನಂದನೆಗಳು.

ಅಮ್ಮ ಪರಿಸರವಾದಿ

ಜಗತ್ತಿನಲ್ಲಿ ಅಮ್ಮನೇ ಪ್ರಪ್ರಥಮ ಪರಿಸರವಾದಿ
ಪ್ರತಿ ಮನೆ–ಮನೆಗೂ ಮಹಿಳೆಯೇ ಪರಿಸರವಾದಿ

ಅಮ್ಮನಿಗೆ ಯಾರೂ ಕೊಡಬೇಕಾಗಿಲ್ಲ ಯಾವುದೇ ಗಾದಿ
ಅಮ್ಮನಿಗೆ ಅರಿವಿದೆ, ಅಮ್ಮನದೇ ಸರಿಯಾದ ಹಾದಿ
ಇಂದು ಮಹಿಳೆಯರು ತಲುಪುವರು ತುಟ್ಟ–ತುದಿ
ಅದಕೆ ಬೇಕಾಗಿಲ್ಲ ಯಾವುದೇ ತೇದಿ
ಜಗದಲಿಹುದು ಅತ್ಯಂತ ಪವಿತ್ರ ನದಿ
ನದಿಗೆ ಇಹುದು ಎಲ್ಲಾ ಕಡೆ ಆದಿ
ಮಹಿಳೆಗೆ ಗೌರವ, ತುಳಿದರೆ ಸಪ್ತಪದಿ
ಇನ್ನೂ ಮಹತ್ತರ ಗೌರವ, ಪತಿ ಇದ್ದರೆ ಆಕೆಯ ಬದಿ
ಆದಿಮಾನವನಾದ ಇಂದು ಆದರ್ಶ ಮಾನವ
ಇಂದು ಜಗತ್ತನು ಮೂಡಿಸಬೇಕಾಗಿದೆ ನವ–ನವ
ಆಗುವುದು ಇಂದು ಸ್ವಚ್ಛ ಜಗತ್ತು
ಆಗಿರುವುದಿಲ್ಲ ಯಾವುದೇ ಆಪತ್ತು
ಇದುವೆ ಜಗದ ನೈಜ ಸಂಪತ್ತು
ಇದನಾರೂ ಏನೂ ಮಾಡಬೇಕಿಲ್ಲ ಅತ್ತು–ಅತ್ತು
ಕೊಳ್ಳುವ ವಸ್ತುಗಳಲಿ ಇರಲಿ ಮಿತ
ಪೋಲು ಮಾಡುವುದಕೂ ಖಚಿತವಾಗಲಿ ಮಿತ
ಅತಿಶೀಘ್ರದಿ ನೋಡುವೆವು ಸ್ವಚ್ಛಭಾರತ
ಕಸವ ಮಾಡುವುದಕೂ ಇರಲಿ
ಹಿತ–ಮಿತ



–ಕೆ.ವಿ.ಲಕ್ಷ್ಮಣಮೂರ್ತಿ
ಮೊ: 87623 23985

ಗಾಂಧಿ ಶಾಂತಿ ಪ್ರತಿಷ್ಠಾನದ ಪದಾಧಿಕಾರಿಗಳ ಆಯ್ಕೆ



ಜೀರಿಗೆ ಲೋಕೇಶ್

ಬೆಂಗಳೂರು ಗಾಂಧೀ ಶಾಂತಿ ಪ್ರತಿಷ್ಠಾನವು 2020–2023ರ ವರೆಗಿನ 3 ವರ್ಷದ ಅವಧಿಗೆ ಅಧ್ಯಕ್ಷರಾಗಿ ಹಿರಿಯ ಗಾಂಧಿ ಚಿಂತಕ ಜೀರಿಗೆ ಲೋಕೇಶ್, ಗೌರವ ಉಪಾಧ್ಯಕ್ಷರಾಗಿ ಪ್ರೊ|| ಮಲ್ಲೇಪುರಂ ಜಿ.ವೆಂಕಟೇಶ, ಗೌರವ ಕಾರ್ಯದರ್ಶಿಗಳಾಗಿ ಡಾ. ಸತ್ಯಮಂಗಲ ಮಹಾದೇವ್, ಗೌರವ ಖಜಾಂಚಿಗಳಾಗಿ ಡಾ. ರಾಮಲಿಂಗೇಶ್ವರ ಎಸ್. (ಸಿಸಿರಾ) ಇವರುಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ನಾಡೋಜ ಡಾ.ವೂಡೇ ಪಿ.ಕೃಷ್ಣ, ಪ್ರೊ. ಚಂದ್ರಿಕಾ ಪುರಾಣಿಕ್ ಇವರು ಕಾರ್ಯಕಾರಿ ಸಮಿತಿ ಸದಸ್ಯರಾಗಿರುತ್ತಾರೆ.



ಡಾ.ರಾಮಲಿಂಗೇಶ್ವರ (ಸಿಸಿರಾ)

"ಮಕ್ಕಳಲ್ಲಿ ದೇಶಾಭಿಮಾನ ಮೂಡಿಸಬೇಕಿದೆ"



ಡಾ. ವೂಡೇ ಪಿ.ಕೃಷ್ಣ

ರಂಗಸಮಾಜ (ರಿ) ಸಾಂಸ್ಕೃತಿಕ ಸಂಸ್ಥೆ ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಸಹಯೋಗದೊಂದಿಗೆ ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಎನ್.ಎಸ್.ರಾವ್ ವಿರಚಿತ "ರಣದುಂದುಬಿ" ನಾಟಕ ಪ್ರದರ್ಶನ ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದ ನಾಡೋಜ ಡಾ. ವೂಡೇ ಪಿ.ಕೃಷ್ಣ "ಇಂದಿನ ಮಕ್ಕಳು ಮತ್ತು ಯುವ ಜನರಲ್ಲಿ ಸಾಹಿತ್ಯ ಸಂಗೀತ ಕಲೆಗಳನ್ನು ಪಠ್ಯದ ಜೊತೆಗೆ ಪರಿಚಯಿಸುವ ಮೂಲಕ ಕನ್ನಡದಲ್ಲಿನ ಮಹತ್ವವನ್ನು ಸಾರಬೇಕಾದ ಅವಶ್ಯಕತೆ ಇದೆ. ರಣದುಂದುಬಿ ನಾಟಕ ರಾಷ್ಟ್ರಾಭಿಮಾನ ಮತ್ತು ಸ್ವಾತಂತ್ರ್ಯದ ಹಿನ್ನೆಲೆಯುಳ್ಳ ನಾಟಕ. ಇಂತಹ ನಾಟಕಗಳನ್ನು ಪದೇ ಪದೇ ಪ್ರಸ್ತುತ ಪಡಿಸಿ ಯುವಜನತೆಯಲ್ಲಿ ಮತ್ತು ಮಕ್ಕಳಲ್ಲಿ ದೇಶಾಭಿಮಾನ ಮೂಡಿಸುವಂತಹ ಕೆಲಸ ಆಗಬೇಕಾಗಿದೆ ಎಂದು ಸಲಹೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಆರ್.ವಿ.ಮಂಜುನಾಥ್ ಹಾಗೂ ಸಾಹಿತಿ ಡಾ.ರಾಮಲಿಂಗೇಶ್ವರ (ಸಿಸಿರಾ)ಮತ್ತು ರಂಗಭೂಮಿ ಕಲಾವಿದೆ ಎ.ಎಸ್.ಆರತಿ ಸುರೇಶ್ ಮತ್ತು ಡಾ. ಹೆಚ್.ಕಾವ್ಯಶ್ರೀ ಮತ್ತು ಡಾ. ಬಿ.ಎಸ್.ಅಶೋಕ್‌ಕುಮಾರ್ ಭಾಗವಹಿಸಿ ಎಸ್.ತಿಲಕ್‌ರಾಜ್ ನಿರ್ದೇಶನದ ನಾಟಕಕ್ಕೆ ಶುಭಾಶಯ ಕೋರಿದರು.

ಧರ್ಮ ಪ್ರಚಾರಕ ಪಯೋನಿಧಿ ಡಾ. ಗುರುರಾಜ ಪೋಶೆಟ್ಟಿಹಳ್ಳಿ



ನ್ಯಾಯಾಮೃತಂ ಕಲ್ಚರಲ್ ಹೆರಿಟೇಜ್ ಮತ್ತು ಎಜುಕೇಷನಲ್ ಫೌಂಡೇಷನ್ ಏರ್ಪಡಿಸಿದ್ದ ಶ್ರೀ ವ್ಯಾಸರಾಯ ಗುರು ಸಾರ್ವಭೌಮರ 482ನೇ ಆರಾಧನಾ ಮಹೋತ್ಸವದಲ್ಲಿ ಸಂಸ್ಕೃತಿ ಚಿಂತಕ – ಅಂಕಣಕಾರ ಡಾ.ಗುರುರಾಜ ಪೋಶೆಟ್ಟಿಹಳ್ಳಿ ಅವರಿಗೆ "ಧರ್ಮ ಪ್ರಚಾರಕ ಪಯೋನಿಧಿ", ವಿದ್ವಾನ್ ಬಿ.ಆರ್.ಶ್ರೀನಿಧಿ ಅವರಿಗೆ "ಸಂಗೀತ ಪ್ರಸನ್ನ" ಮತ್ತು ವಿದ್ವಾಂಸ ಪ್ರಭಂಜನ ಭರದ್ವಾಜ್ ಅವರಿಗೆ"ವಿದ್ಯಾನಿಧಿ" – ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.